ಪ್ರವಚನಸಂಪುಟ

೫

ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ
ಮೈಸೂರು

K. R. [illegible] Seshagiri,
Ed.
Swarvachana sampuṭa

ಸ್ವರವಚನ ಸಂಪುಟ: ಐದು

ನೀಲಗ್ರೀವನ ಸ್ವರವಚನಗಳು

ಶ್ರೀ ಶಿವರಾತ್ರೀಶ್ವರ ಧಾರ್ಮಿಕದತ್ತಿ ಪ್ರಕಟಣೆ

ಸ್ವರವಚನಸಾಹಿತ್ಯಮಾಲೆ

ಸ್ವರವಚನ ಸಂಪುಟ : ಐದು

ನೀಲಗ್ರೀವನ ಸ್ವರವಚನಗಳು

ಸಂಪಾದಕರು
ಕೆ. ಆರ್. ಶೇಷಗಿರಿ

ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ
ಮೈಸೂರು

SWARAVACHANA SAMPUTA – 5, NEELAGREEVANA SWARAVACHANAGALU : Songs of NEELAGREEVA : Edited by K. R. Seshagiri, Retd. Research Assistant, Kuvempu Institute of Kannada Studies, University of Mysore, Mysore. Published by J.S.S. Granthamale, Mysore-570 004. First Edition 1995; Pp. xxvi + 186. Price : Rs. 50-00.

ಮೊದಲನೆಯ ಮುದ್ರಣ : ೧೯೯೫

ಬೆಲೆ :
ರೂ. 50–00

ಮುದ್ರಕರು :
ಜಿ. ಎಚ್. ಕೃಷ್ಣಮೂರ್ತಿ : ಮೈಸೂರು ಪ್ರಿಂಟಿಂಗ್ ಪ್ರೆಸ್
೧೨೧೦, ಕಾಂತರಾಜ ಅರಸು ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು ೫೭೦ ೦೦೪

ಪರಿವಿಡಿ



ಶುಭ ಹಾರೈಕೆ

ವೀರಶೈವ ಧಾರ್ಮಿಕಪೀಠಗಳ, ವಿಶ್ವವಿದ್ಯಾಲಯಗಳ ಮತ್ತು ವಿದ್ವಾಂಸರುಗಳ ಒಂದು ಶತಮಾನದ ದುಡಿಮೆಯಿಂದಾಗಿ 'ವಚನಸಾಹಿತ್ಯ'ದ ಸಂಶೋಧನೆ–ಪ್ರಕಟನೆ ಒಂದು ಹಂತಕ್ಕೆ ಒಂದು ನಿಂತಿದೆ ಎನ್ನಬಹುದು. ಇದೀಗ ಇಷ್ಟೇ ವಿಪುಲವಾಗಿರುವ, ಇದಕ್ಕಿಂತ ಹೆಚ್ಚು ಜನಪ್ರಿಯವಾಗಿರುವ ''ಸ್ವರವಚನಸಾಹಿತ್ಯ''ದ ಸಂಶೋಧನೆ–ಪ್ರಕಟನೆ ವ್ಯಾಪಕ ವಾಗಿ, ವ್ಯವಸ್ಥಿತವಾಗಿ ನಡೆಯಬೇಕಾಗಿರುವುದು ಅಗತ್ಯವಾಗಿದೆ. ಡಾ. ಫ. ಗು. ಹಳಕಟ್ಟಿ ಯವರು ಮೊದಲುಮಾಡಿ ಅನೇಕ ಜನ ವಿದ್ವಾಂಸರು ಈ ಸಾಹಿತ್ಯವನ್ನು ಆಗಾಗ ಪ್ರಕಟಿಸುತ್ತ ಬಂದರೂ ಅದು ಬೆಳಕು ಕಂಡುದು ಕಡಮೆ. ಹೀಗಾಗಿ ಪ್ರಾಚೀನ ಹಸ್ತ-ಪ್ರತಿಗಳಲ್ಲಿ, ಜನರ ಬಾಯಿಯಲ್ಲಿ ಬದುಕಿಬಂದ ಈ ಪ್ರಕಾರವನ್ನು ಒಮ್ಮೆ ಇಡಿಯಾಗಿ ಪ್ರಕಟಿಸಬೇಕಾಗಿದೆ. ಹಾಗೆ ಪ್ರಕಟವಾದರೆ ನಮ್ಮ ಹಾಡುಗಬ್ಬಪರಂಪರೆಗೆ ಇರುವ ಪ್ರಾಚೀನತೆಯನ್ನೂ ನಿರಂತರತೆಯನ್ನೂ ಎತ್ತಿ ತೋರಿಸಿದಂತಾಗುತ್ತದೆ. ಜೊತೆಗೆ ವೀರಶೈವಕ್ಕೆ ತನ್ನದೇ ಆದ ಹಾಡುಗಬ್ಬಪರಂಪರೆಯೊಂದು ಇರುವುದನ್ನು ಸ್ಪಷ್ಟಪಡಿಸಿ ದಂತಾಗುತ್ತದೆ. ಈ ಘನವಾದ ಉದ್ದೇಶವನ್ನು ಕಣ್ಣುಮುಂದಿಟ್ಟುಕೊಂಡು ಪ್ರಸ್ತುತ ಯೋಜನೆಯನ್ನು ಶ್ರೀ ಶಿವರಾತ್ರೀಶ್ವರ ಧಾರ್ಮಿಕದತ್ತಿಯಿಂದ ಕೈಗೆತ್ತಿಕೊಂಡಿದೆ. ಈಗಾಗಲೆ ಡಾ. ಎಲ್. ಬಸವರಾಜು ಅವರು ಸಂಪಾದಿಸಿದ 'ಶಿವದಾಸಗೀತಾಂಜಲಿ' ಯನ್ನು ಜೆ.ಎಸ್.ಎಸ್. ಗ್ರಂಥಮಾಲೆಯಿಂದ ಪ್ರಕಟಿಸುವ ಮೂಲಕ ಈ ಸಾಹಿತ್ಯದ ಮಹತ್ವವನ್ನು ಪ್ರಥಮಬಾರಿಗೆ ಬೆಳಕಿಗೆ ತಂದುದಲ್ಲದೆ ಅದರ ಮುಂದುವರಿಕೆಯೆಂಬಂತೆ ಈ ಯೋಜನೆಯನ್ನು ಹಮ್ಮಿಕೊಂಡಿದೆ.

ಇಂಥ ಒಂದು ವ್ಯಾಪಕ ಯೋಜನೆಯ ಅನುಷ್ಠಾನಕ್ಕೆ ವಿದ್ವಾಂಸರ ನೆರವು ಅಗತ್ಯ. ಕರ್ನಾಟಕದ ಬೇರೆ ಬೇರೆ ಭಾಗಗಳ ವಿದ್ವಾಂಸರು ಈ ಕಾರ್ಯದಲ್ಲಿ ಸಹಕರಿಸಲು ಮುಂದೆ ಬಂದಿರುವುದು ಒಂದು ಶುಭಯೋಗ. ಇವರೆಲ್ಲರ ನೆರವಿನಿಂದ ಸ್ವರವಚನಸಾಹಿತ್ಯವನ್ನು ಮೊದಲು ಬಿಡಿಯಾದ ಸಂಪುಟಗಳ ರೂಪದಲ್ಲಿ ಪ್ರಕಟಿಸುವುದು ಎಂದು ಯೋಜಿಸ ಲಾಗಿದೆ. ಈ ಯೋಜನೆಯು ಫಲಪ್ರದವಾಗುವ ರೀತಿಯಲ್ಲಿ ಎಲ್ಲ ಸ್ವರವಚನಗಳು ಹಸ್ತಪ್ರತಿಗಳಿಂದ, ಜನಪದರ ಕಂಠಸ್ಥಲಗಳಿಂದ, ಸ್ಮೃತಿಪಟಲಗಳಿಂದ ಸೆರೆ ಬಿಡಿಸಿಕೊಂಡು ಬೆಳಕಿಗೆ ಬಂದ ಬಳಿಕ ಶ್ರೀ ಶಿವರಾತ್ರೀಶ್ವರ ಧಾರ್ಮಿಕದತ್ತಿಯು ಪ್ರಕಟಿಸಿದ ಹಾಗೂ ಅನ್ಯರು ಪ್ರಕಟಿಸಿದ ಎಲ್ಲ ಸಂಪತ್ತನ್ನು ಕ್ರೋಢೀಕರಿಸಿ, ವ್ಯವಸ್ಥಿತವಾಗಿ ವರ್ಗೀಕರಿಸಿ, ಅದನ್ನು ''ಸಮಗ್ರ ಸ್ವರವಚನಸಾಹಿತ್ಯ ಪ್ರಕಟನ ಯೋಜನೆ'' ಹೆಸರಿನಿಂದ ಸಂಪುಟ ಶ್ರೇಣಿಯಲ್ಲಿ ಹೊರತರಲು ಸಂಕಲ್ಪಿಸಲಾಗಿದೆ.

ಈ ಸಂಕಲ್ಪವು ಈಡೇರುವಂತಾಗಲೆಂದು ಆಶಿಸುತ್ತ, ಇದರಲ್ಲಿ ನೆರವಾದ ಎಲ್ಲರಿಗೂ ಸಕಲಶ್ರೇಯಸ್ಸನ್ನು ಹಾರೈಸುತ್ತೇವೆ.

ಮಾಸಶಿವರಾತ್ರಿ
ಆಗಸ್ಟ ೨೪, ೧೯೯೩

ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮಿಗಳು

ಪ್ರಕಾಶಕರ ನುಡಿ

ಸುತ್ತೂರುಜಗದ್ಗುರು ಶ್ರೀ ಶಿವರಾತ್ರೀಶ್ವರ ವೀರಸಿಂಹಾಸನಮಠ—ನಮ್ಮ ನಾಡಿನ ಒಂದು ಪ್ರಸಿದ್ಧ ಧಾರ್ಮಿಕ ಪೀಠ. ಧರ್ಮವನ್ನು ಶರಣಸಿದ್ಧಾಂತದ ವ್ಯಾಪಕ ಅರ್ಥದಲ್ಲಿ ಪರಿಭಾವಿಸಿದ ಈ ಪೀಠವು 'ದಾಸೋಹ' ಪದವನ್ನು ಕಾಲಕ್ಕೆ ತಕ್ಕಂತೆ ಪ್ರಸ್ತುತ ಗೊಳಿಸುತ್ತ ಬಂದಿದೆ. ಈ ಪ್ರಯೋಗದ ಒಂದು ಅಂಗ 'ಸಾಹಿತ್ಯದಾಸೋಹ.' ಅದರ ಫಲವೇ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ. ಈ ಗ್ರಂಥಮಾಲೆಯಲ್ಲಿ 'ಶಿವದಾಸಗೀತಾಂಜಲಿ'ಯನ್ನು ಪ್ರಕಾಶನಗೊಳಿಸುವ ಮೂಲಕ ಶರಣರ 'ಸ್ವರವಚನ ಸಾಹಿತ್ಯ' ಪ್ರಕಟನೆಯು ಇತಿಹಾಸದಲ್ಲಿ ಶ್ರೀಮಠವು, ಡಾ. ಫ. ಗು. ಹಳಕಟ್ಟಿಯವರ ಬಳಿಕ ಇನ್ನೊಂದು ಹೊಸಘಟ್ಟವನ್ನೇ ತೆರೆಯಿತು. ಧರ್ಮದಾಸೋಹದ ಜೊತೆಗೆ ಈ ಸಾಹಿತ್ಯದಾಸೋಹದ ಕಾರ್ಯವೂ ಕೂಡ ನಿರಂತರವಾಗಿ ಮುಂದುವರಿಯಬೇಕೆಂಬ ಸದುದ್ದೇಶದಿಂದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿರಾಜೇಂದ್ರ ಮಹಾ ಸ್ವಾಮಿಗಳವರು 'ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ'ಯನ್ನು ಸಂಸ್ಥಾಪಿಸಿದರು. ಈ ದತ್ತಿಯ ಆಶ್ರಯದಲ್ಲಿ ಸಾಹಿತ್ಯದಾಸೋಹದ ಅಂಗವಾಗಿ ಈಗಾಗಲೇ ಹಲವಾರು ವಿಚಾರ ಸಂಕಿರಣಗಳನ್ನೂ ಸಮ್ಮೇಳನಗಳನ್ನೂ ನೆರವೇರಿಸುತ್ತಾ ಬಂದಿರುತ್ತದೆ. ಉತ್ತಮೋತ್ತಮ ಗ್ರಂಥಗಳನ್ನು ಪ್ರಕಟಿಸಲಾಗುತ್ತಿದೆ. ಈ ಗ್ರಂಥಮಾಲೆಯಿಂದ ಆರಂಭಿಸಿದ ಸ್ವರವಚನ ಸಾಹಿತ್ಯ ಪ್ರಕಟನೆಯು ಮುಂದುವರಿಕೆಯೆಂಬಂತೆ 'ಮುಪ್ಪಿನಷಡಕ್ಷರಿಗಳ ಕೈವಲ್ಯಪದ' ಸಂಪುಟವನ್ನು ಪ್ರಕಟಿಸಿದೆ. ಈಗ ಈ ಪ್ರಯತ್ನಕ್ಕೆ ಪೂರ್ಣಸ್ವರೂಪವನ್ನು ಕೊಡುವ ಉದ್ದೇಶದಿಂದ ಬೃಹತ್‌ಪ್ರಮಾಣದ 'ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನ ಯೋಜನೆ' ಯನ್ನು ಕೈಗೆತ್ತಿಕೊಂಡಿದೆ.

ವೀರಶೈವಸಾಹಿತ್ಯದ ಮಹತ್ವದ ಪ್ರಕಾರವಾದ ವಚನಸಾಹಿತ್ಯ ಈವರೆಗೆ ಬಹು ಮಟ್ಟಿಗೆ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಿದೆ. ವಚನಗಳ ಸಾಹಿತ್ಯಿಕ, ಸಾಮಾಜಿಕ, ಸೈದ್ಧಾಂತಿಕ ಪ್ರಭಾವಗಳಿಗೆ ಮಾರುಹೋದ ವಿದ್ವಾಂಸರು, ಶರಣರ ಇನ್ನೊಂದು ಮಹತ್ವದ ಪ್ರಕಾರವಾದ ''ಸ್ವರವಚನಸಾಹಿತ್ಯ''ದ ಪ್ರಕಟಣೆಯ ಕಡೆಗೆ ಅಷ್ಟಾಗಿ ಗಮನ ಹರಿಸಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ಮಹೋದ್ದೇಶದಿಂದ ಪ್ರಸ್ತುತ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ತಮ್ಮ ಅನುಭಾವದ ವಾಚನಪಾತಳಿಗಾಗಿ 'ವಚನ'ಗಳನ್ನು ಬರೆದ ಶರಣರು, ಶ್ರವಣ-ಪಾತಳಿಗಾಗಿ 'ಸ್ವರವಚನ'ಗಳನ್ನು ಬರೆದರು. ಹನ್ನೆರಡನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೆ ನೂರಾರು ಜನ ಶಿವಶರಣರು, ಶಿವಕವಿಗಳು ಸೃಷ್ಟಿಸಿದ ಈ ಸಾಹಿತ್ಯ ಲಿಖಿತ ಮತ್ತು ಮೌಖಿಕ ಪರಂಪರೆಯಲ್ಲಿ ಸಾಗಿಬಂದಿದೆ. ಈ ಸಾಹಿತ್ಯವನ್ನು ಸಮಗ್ರವಾಗಿ ಪ್ರಕಟಿಸಲಿರುವ ಪ್ರಸ್ತುತಯೋಜನೆಯಲ್ಲಿ ನಾವು ಎರಡು ಹಂತಗಳನ್ನು ಕಲ್ಪಿಸಿಕೊಂಡಿದ್ದೇವೆ.

ಅಪ್ರಕಟಿತ ರೂಪದಲ್ಲಿರುವ ಲಿಖಿತ ಮತ್ತು ಮೌಖಿಕ ಪರಂಪರೆಯ ಎಲ್ಲ ಸ್ವರವಚನಗಳನ್ನು ಪ್ರಕಟಿಸುವ ಉದ್ದೇಶ ನಮ್ಮ ಕಣ್ಣಮುಂದಿದೆ. ಇಲ್ಲಿ ಪ್ರಾಚೀನ ಸ್ವರವಚನ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸುವುದು; ಹಸ್ತಪ್ರತಿಗಳಲ್ಲಿ ಬಿಡಿಬಿಡಿಯಾಗಿ ಸಿಗುವ ಸ್ವರವಚನಗಳನ್ನು ಸಂಗ್ರಹಿಸಿ ಸಂಪುಟರೂಪದಲ್ಲಿ ಪ್ರಕಟಿಸುವುದು; ಬೇರೆ ಬೇರೆ ಪ್ರದೇಶಗಳಲ್ಲಿ ಮೌಖಿಕಪರಂಪರೆಯಲ್ಲಿ ಸಿಗುವ ಸ್ವರವಚನಗಳನ್ನು ಧ್ವನಿಮುದ್ರಣ ಮಾಡಿಕೊಂಡು ಸಂಪುಟರೂಪದಲ್ಲಿ ಪ್ರಕಟಿಸುವುದು—ಇದು ಮೊದಲ ಹಂತದ ಪ್ರಕಟನ ಕಾರ್ಯ.

ಹೀಗೆ ಎಲ್ಲ ಮೂಲಗಳಿಂದ ಸಂಗ್ರಹಿಸಿ ನಾವು ಪ್ರಕಟಿಸಿದ ಮತ್ತು ಈಗಾಗಲೇ ಅನ್ಯ ಸಂಸ್ಥೆಗಳು ಪ್ರಕಟಿಸಿದ ಎಲ್ಲ ಸ್ವರವಚನಗಳ ರಾಶಿಯನ್ನು ಒಂದು ಶಿಸ್ತಿಗೆ ಅಳವಡಿಸಿ, ಹದಿನೈದು ಸಂಪುಟಗಳಲ್ಲಿ ಏಕಕಾಲಕ್ಕೆ ಪ್ರಕಟಿಸುವುದು ಎರಡನೆಯ ಹಂತದ ಕಾರ್ಯವಾಗಿದೆ. ಈ ಹಂತದ ಒಟ್ಟು ಯೋಜನೆ ಹೀಗಿದೆ:

ಮೊದಲನೆಯದು ಬಸವೇಶ್ವರರು ಮೊದಲಾದ ಹನ್ನೆರಡನೆಯ ಶತಮಾನದ ಶರಣರ ಬಿಡಿ ಸ್ವರವಚನಸಂಪುಟ. ಎರಡನೆಯದು ನಿಜಗುಣಶಿವಯೋಗಿ, ಸಪ್ತಕಾವ್ಯದ ಗುರುಬಸವ, ಸರ್ಪಭೂಷಣಶಿವಯೋಗಿ, ಮುಪ್ಪಿನಷಡಕ್ಷರಿ, ಬಾಲಲೀಲಾಮಹಾಂತ ಶಿವಯೋಗಿ, ಮೈಲಾರಬಸವಲಿಂಗಶರಣರು ಇತ್ಯಾದಿ ಪ್ರಸಿದ್ಧ ಸ್ವರವಚನಕಾರರ ಸಂಪುಟ. ಮೂರು, ನಾಲ್ಕು ಮತ್ತು ಐದು—ಗುರುಬಸವಾರ್ಯ, ಕರಸ್ಥಲದ ನಾಗಿದೇವ, ಮೊಗ್ಗೆಯ ಮಾಯಿದೇವ, ಕೆಸ್ತೂರದೇವ, ಕವಿಲಿಂಗ, ವರತೆಯ ಸೋಮಣ್ಣ, ಸೋದೆ ಸದಾಶಿವರಾಯ, ದೊಡ್ಡಷಡಕ್ಷರಿಸ್ವಾಮಿ, ಜಿಗುನಿಮರುಳದೇವ, ಬೆಂಗಳೂರು ಮುದ್ವೀರ ಸ್ವಾಮಿ, ಕಾರುಗಹಳ್ಳಿ ಶಾಂತಯ್ಯ, ಶಂಕರದೇವ, ನಿಷ್ಕಲರು, ಮರಿಶಾಂತಬಸವ, ಸೋಮನಕಟ್ಟೆ ಕರಿಬಸವೇಶ್ವರ, ಗುರುಗುಂಡಬಸವ—ಇತ್ಯಾದಿ ಅಪ್ರಸಿದ್ಧ ಸ್ವರವಚನಕಾರರ ಸಂಪುಟಗಳು. ಆರು, ಏಳು, ಎಂಟು, ಒಂಭತ್ತು ಮತ್ತು ಹತ್ತು—ಹಸ್ತಪ್ರತಿಗಳಲ್ಲಿ ಸಿಗುವ ಬಿಡಿ ಸ್ವರವಚನ ಸಂಪುಟಗಳು. ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು ಮತ್ತು ಹದಿನೈದು—ಬೇರೆ ಬೇರೆ ಪ್ರದೇಶಗಳಲ್ಲಿ ಮೌಖಿಕ ಪರಂಪರೆಯಲ್ಲಿ ಸಿಗುವ ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗಶರಣರು, ನೀರಲಕೇರಿಸ್ವಾಮಿಗಳು, ರಾಂಪುರದ ಬಕ್ಕಪ್ಪ ಮೊದಲಾದವರ ಸಂಪುಟಗಳು.

ಈ ಯೋಜನೆ ಶ್ರೀಮಠದ ಸಾಹಿತ್ಯಿಕ ಸಾಧನೆಗಳಲ್ಲಿ ಒಂದು ಮೈಲಿಗಲ್ಲು. ಇದು ಪೂರ್ಣಗೊಂಡರೆ ನಮ್ಮ ಅವಜ್ಞೆಯಲ್ಲಿ ಮುಳುಗಿಹೋಗಿರುವ ಹೊಸ ಸಾಹಿತ್ಯಪ್ರಕಾರವೊಂದು ಸಮಗ್ರರೂಪದಲ್ಲಿ ಬೆಳಕಿಗೆ ಬರುತ್ತದೆ. ಹಾಗೆ ನೋಡಿದರೆ ಬಹುಸಂಖ್ಯೆ ಜನರ ಮೇಲೆ ಮೋಡಿಹಾಕಿದ, ಅವರ ವ್ಯಕ್ತಿತ್ವವನ್ನು ತೀಡುತ್ತ ಬಂದ ಸಾಹಿತ್ಯ ಸಮುದಾಯದಲ್ಲಿಯೇ ಹಾಡುಗಬ್ಬಪ್ರಕಾರ ಗಣ್ಯವಾದುದು. ಕನ್ನಡಸಾಹಿತ್ಯದ ಮೊದಲ ಘಟ್ಟದ ರಚನೆಗಳಾಗಿರುವ ಈ ದೇಶೀಯ 'ಹಾಡುಗಬ್ಬ'ಗಳನ್ನು ಓದುಗಬ್ಬವಾದ ಚಂಪೂ ಮೊದಲಾದುವು ಮೂಲೆಗೆ ತಳ್ಳಿದವು. ಮುಂದೆ ಹನ್ನೆರಡನೆಯ ಶತಮಾನದಲ್ಲಿ ದೇಶೀ ನೆಲೆಗಳಿಂದ ಬಂದ ಶರಣರು ದೇಶೀಪರಂಪರೆಯನ್ನು ಮತ್ತೆ ಸ್ಥಾಪಿಸುವ ಮೂಲಕ, ಮೂಲೆಗುಂಪಾಗಿದ್ದ 'ಹಾಡುಗಬ್ಬ' ಪರಂಪರೆಯನ್ನು ಹರಿಗಡಿದು, ಅದಕ್ಕೆ ಲಿಖಿತ

ಸಾಹಿತ್ಯದಲ್ಲಿ ನ್ಯಾಯವಾದ ಸ್ಥಾನವನ್ನು ಒದಗಿಸಿಕೊಟ್ಟರು. ಇದರಿಂದಾಗಿ ಜೇಡರ ದಾಸಿಮಯ್ಯ, ಬಸವಣ್ಣ, ಮಹಾದೇವಿಯಕ್ಕ ಮೊದಲಾದ ಶರಣರು ರಚಿಸಿದ 'ಹಾಡುಗಬ್ಬ' ಪ್ರಕಾರ 'ಸ್ವರವಚನ'ವೆಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆಯಿತು. ಬಳಿಕ ನಿಜಗುಣ ಶಿವಯೋಗಿಗಳಲ್ಲದೆ ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಸಪ್ತಕಾವ್ಯದ ಗುರುಬಸವ, ಮೊಗ್ಗೆಯ ಮಾಯಿದೇವ, ಕರಸ್ಥಲದ ನಾಗಿದೇವ ಮೊದಲಾದ ವೀರಶೈವ ಅನುಭಾವಿಗಳು 'ಸ್ವರವಚನ'ಪ್ರಕಾರದಲ್ಲಿ ಕೃತಿಮಾಡಿದರು. ಪ್ರೌಢದೇವರಾಯನ ತರುವಾಯ ನೂರು ವರ್ಷ ಗತಿಸುವಲ್ಲಿ ಪಟ್ಟಕ್ಕೆ ಬಂದ ಕೃಷ್ಣದೇವರಾಯನ ಪರಿಸರದ ಪುರಂದರದಾಸ, ಕನಕದಾಸ ಮೊದಲಾದವರೆಲ್ಲ ಈ ಹಾಡುಗಬ್ಬಪ್ರಕಾರವನ್ನು ಹರಿಸರ್ವೋತ್ತಮ ನೆಲೆಯಲ್ಲಿ ದುಡಿಸಿ, 'ಕೀರ್ತನೆ' ಹೆಸರಿನಲ್ಲಿ ಪ್ರಸಿದ್ಧಿ ಪಡಿಸಿದರು. ಈ ದಾಸಸಂಪ್ರದಾಯದ ಎರಡನೆಯ ಘಟ್ಟದಲ್ಲಿ ಪ್ರಸನ್ನವೆಂಕಟದಾಸ, ವಿಜಯದಾಸ, ಮಹಿಪತಿದಾಸ ಮೊದಲಾದವರು ಹುಟ್ಟಿ 'ಕೀರ್ತನೆ'ಪ್ರಕಾರವನ್ನು ವಿಪುಲ ಪ್ರಮಾಣದಲ್ಲಿ ಬೆಳೆಸಿದರು. ರತ್ನಾಕರವರ್ಣಿ ಮೊದಲಾದ ಜೈನಕವಿಗಳು 'ಹಾಡು'ಗಳನ್ನು ಬರೆದರು. ಜೈನರ ಹಾಡು, ದಾಸರ ಕೀರ್ತನೆಯ ಜೊತೆಜೊತೆಗೇ ಕೆಸ್ತೂರದೇವ, ಜಿಗುನಿಮರುಳದೇವ, ಸರ್ಪಭೂಷಣಶಿವಯೋಗಿ, ಮುಪ್ಪಿನ ಷಡಕ್ಷರಿ, ಮೈಲಾರ ಬಸವಲಿಂಗಶರಣರು, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗಶರಣರು ಮೊದಲಾದ ವೀರಶೈವ ಅನುಭಾವಿಗಳು 'ಸ್ವರವಚನ' ಪರಂಪರೆಯನ್ನು ಮುಂದುವರಿಸಿದರು. ಈ ಎಲ್ಲ ರಚನೆಗಳನ್ನು ಒಂದೂ ಬಿಡದಂತೆ ಸಂಗ್ರಹಿಸಿ ಪ್ರಕಟಿಸಿದರೆ 'ಕೀರ್ತನಸಾಹಿತ್ಯ'ದ ಮಗ್ಗುಲಲ್ಲಿ 'ಸ್ವರವಚನಸಾಹಿತ್ಯ'ವೆಂಬ ಇನ್ನೊಂದು ಪ್ರಕಾರ ಎದ್ದು ಕಾಣುತ್ತದೆ. 'ಹರಿಸರ್ವೋತ್ತಮ' ಹಾಡುಗಬ್ಬಸಂಪತ್ತಿನ ಜೊತೆ 'ಶಿವಸರ್ವೋತ್ತಮ' ಹಾಡುಗಬ್ಬಸಂಪತ್ತೂ ತೆರೆದುಕೊಳ್ಳುತ್ತದೆ.

ಪ್ರಾಚೀನಕಾಲದಿಂದಲೂ ಕರ್ನಾಟಕದಲ್ಲಿ ಓದುಗಬ್ಬ ಮತ್ತು ಹಾಡುಗಬ್ಬ ಎಂಬ ಎರಡು ಸಾಹಿತ್ಯಪ್ರಕಾರಗಳು ಬೆಳೆದುಬಂದಿವೆ. ಇವುಗಳಲ್ಲಿ ಒಂದು ವಾಚನಪಾತಳಿಯದು, ಸಾಹಿತ್ಯಗುಣ ಪ್ರಧಾನವಾದುದು. ಇನ್ನೊಂದು ಶ್ರವಣಪಾತಳಿಯದು, ಸಂಗೀತಗುಣ ಪ್ರಧಾನವಾದುದು. ಆದರೆ ಇಂಗ್ಲೀಷರ ಸಂಪರ್ಕದಿಂದಾಗಿ ಸಾಕ್ಷರತೆ ಬೆಳೆದು, ನಮ್ಮಲ್ಲಿ ಓದುಗಬ್ಬದೊಂದಿಗೆ ಹಾಡುಗಬ್ಬವನ್ನೂ ವಾಚನಪಾತಳಿಯಲ್ಲಿಟ್ಟು ಅಭ್ಯಾಸ ಮಾಡುವ ತಪ್ಪುಕ್ರಮ ವರ್ಧಿಸುತ್ತ ನಡೆಯಿತು. ಆಗ ಈ ಸ್ವರವಚನಗಳನ್ನು ಧ್ವನಿಮಾಧ್ಯಮದಲ್ಲಿ ಕೇಳಿ ಸಂಗೀತದ ನೆಲೆಯಲ್ಲಿ ವಿಮರ್ಶಿಸದೆ, ಅಕ್ಷರಮಾಧ್ಯಮದಲ್ಲಿ ಓದಿ ಸಾಹಿತ್ಯದ ನೆಲೆಯಲ್ಲಿ ವಿಮರ್ಶಿಸುವ ತಪ್ಪುಪದ್ಧತಿ ನಮ್ಮಲ್ಲಿ ಬೆಳೆಯಿತು. ಇದರಿಂದಾಗಿ ಅವು ಸಾಹಿತ್ಯಿಕ ಗುಣವಿದೂರ ರಚನೆಗಳೆಂಬ ಟೀಕೆಗೆ ಗುರಿಯಾದವು. ನಿಜಸ್ಥಿತಿಯೆಂದರೆ ಈ ಸಾಹಿತ್ಯವನ್ನು ಕಿವಿಯಿಂದಲೇ ಕೇಳಿ ವಿಮರ್ಶಿಸುವ ಹೊಸ ವಿಮರ್ಶಾ ಮಾನದಂಡಗಳು ಇಂದು ಬೆಳೆದುಬರಬೇಕಾಗಿದೆ.

ಎರಡನೆಯದಾಗಿ ನಾವು ಮಾಡಬೇಕಾಗಿರುವ ಇನ್ನೊಂದು ಕಾರ್ಯವೆಂದರೆ, ಈ ಸಾಹಿತ್ಯದ ಪ್ರಸಾರ. ಧ್ವನಿಮಾಧ್ಯಮದ ಸಾಹಿತ್ಯವಾಗಿರುವ ಇದನ್ನು ಸಂಗೀತದ ಮೂಲಕ ಪ್ರಕಟಿಸುವ ವ್ಯವಸ್ಥೆ ಮಾಡುವುದು ಅವಶ್ಯವಿದೆ; ಅಂದರೆ ಸಂಗೀತಕಲಾವಿದ

ರಿಂದ ಪ್ರಚುರಪಡಿಸುವ, ಧ್ವನಿಸುರುಳಿಗಳನ್ನು ಸಿದ್ಧಪಡಿಸುವ ಮೊದಲಾದ ಚಟುವಟಿಕೆಗಳು ಬೆಳೆದು ಬರಬೇಕಾಗಿದೆ.

ಹೀಗೆ ಸಮಗ್ರವಾಗಿ ಪ್ರಕಟಿಸುವುದು, ಹೊಸಬಗೆಯ ಮಾನದಂಡದಿಂದ ವಿಮರ್ಶಿಸುವುದು, ಸಂಗೀತಮಾಧ್ಯಮದಲ್ಲಿ ಪ್ರಸಾರಗೊಳಿಸುವುದು—ಈ ಮೂರೂ ಹಂತಗಳಲ್ಲಿ ಕೆಲಸ ನಡೆದರೆ ಮಾತ್ರ 'ಸ್ವರವಚನ'ಗಳಿಗೆ ಸರಿಯಾದ ನ್ಯಾಯ ಒದಗುತ್ತದೆ. ಈ ಬಗೆಯ ನ್ಯಾಯವನ್ನು ಒದಗಿಸಿಕೊಡುವ ಮೊದಲನೆಯ ಹಂತವಾಗಿ "ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಶ್ರೀಮಠ ಕೈಗೊಂಡಿದೆ.

ಈ "ಸ್ವರವಚನ ಸಾಹಿತ್ಯ ಪ್ರಕಟನ ಯೋಜನೆ"ಗೆ ಪ್ರೋತ್ಸಾಹವನ್ನು ನೀಡಿ, ಸ್ವರವಚನ ಸಾಹಿತ್ಯ ಸಂಪುಟಗಳು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಾಶನಗೊಳ್ಳಲು ಆಶೀರ್ವದಿಸಿದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಪ್ರಣಾಮಗಳನ್ನು ಸಲ್ಲಿಸುತ್ತೇವೆ.

ತತ್ತ್ವಕ್ಕೆ ತತ್ತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ "ಸ್ವರವಚನಸಾಹಿತ್ಯ" ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜಕಲ್ಯಾಣವನ್ನೂ ಪ್ರತಿಪಾದಿಸುವ ಮಹತ್ವವನ್ನು ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಜನತೆಗೆ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಇಂತಹದೊಂದು ಅತ್ಯಮೂಲ್ಯವಾದ ಯೋಜನೆಯನ್ನು ರೂಪಿಸಿ ಮಾರ್ಗದರ್ಶನ ಮಾಡಿದವರು ನಮ್ಮ ನಾಡಿನ ಹೆಸರಾಂತ ಹಿರಿಯ ಸಂಶೋಧಕರೂ ಪ್ರಾಧ್ಯಾಪಕರೂ ಆದ ಡಾ. ಎಂ. ಎಂ. ಕಲಬುರ್ಗಿ ಅವರು. ಪ್ರಾರಂಭದಲ್ಲಿ ಸುಪ್ರಸಿದ್ಧ ಸಾಹಿತಿಗಳಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ನಿರ್ದೇಶನದಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಯೋಜಿಸಲಾಗಿತ್ತು. ಆದರೆ ಈಗ ಡಾ. ಎಂ. ಎಂ. ಕಲಬುರ್ಗಿಯವರ ನಿರ್ದೇಶನದಲ್ಲಿ ಈ ಸಂಪುಟಗಳು ಹೊರಬರುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಸಂಸ್ಥೆಯಲ್ಲಿನ ಹಸ್ತಪ್ರತಿಗಳನ್ನು ಬಳಸಿಕೊಳ್ಳಲು ಅವಕಾಶವನ್ನಿತ್ತು ಸಹಕರಿಸಿದ್ದಾರೆ. ಈ ಯೋಜನೆಯ ಅಂಗವಾಗಿ 'ಸ್ವರವಚನ ಸಂಪುಟ–ಐದು' : 'ನೀಲಗ್ರೀವನ ಸ್ವರವಚನಗಳು' ಇದನ್ನು ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ನಿವೃತ್ತ ಸಂಶೋಧನ ಸಹಾಯಕರಾದ ಶ್ರೀ ಕೆ. ಆರ್. ಶೇಷಗಿರಿ ಅವರು ಸಂಪಾದಿಸಿ ಸಿದ್ಧಪಡಿಸಿಕೊಟ್ಟಿದ್ದಾರೆ. ಮೈಸೂರು ಪ್ರಿಂಟಿಂಗ್ ಪ್ರೆಸ್ಸಿನ ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಧನ್ಯವಾದಗಳು.

ಈ ಕೃತಿಯನ್ನು ಸಹೃದಯರು ಸ್ವಾಗತಿಸುವರೆಂದು ನಂಬಿದ್ದೇವೆ.

ಪ್ರಕಾಶಕರು

ಪೀಠಿಕೆ

ಕನ್ನಡ ಸಾಹಿತ್ಯದಲ್ಲಿ ಶಿವಶರಣರ ಆಂದೋಲನ ಒಂದು ವಿನೂತನ ಯುಗ. ಈ ಅವಧಿಯಲ್ಲಿ ವಚನಗಳಂತೆ ಹುಟ್ಟಿರುವ ಸ್ವರವಚನಗಳು ನೆಲದ ಮರೆಯ ನಿಧಾನದಂತೆ ಅಪ್ರಕಟಿತ ಸ್ಥಿತಿಯಲ್ಲಿ ಉಳಿದುಕೊಂಡಿವೆ. ಶರಣರು ವಚನಗಳನ್ನು ರಚಿಸುವ ಹಾಗೂ ರಾಗಬದ್ಧವಾಗಿ ಹಾಡುವ ಸಾಮರ್ಥ್ಯವನ್ನು ಹೊಂದಿದ್ದರು. ವಚನಗಳಿಗೆ ರಾಗ ತಾಳ ಸ್ವರಗಳನ್ನು ನಮೂದಿಸುವ ಶಕ್ತಿಯು ಅವರಲ್ಲಿದ್ದಿತು. ಬಸವಣ್ಣನವರಿಗಿಂತ ಹಿಂದೆಯೇ ಅಂತಹ ರಚನಕಾರರಿದ್ದರೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. 'ಹನ್ನೆರಡನೇ ಶತಮಾನಕ್ಕಿಂತ ಹಿಂದೆಯೂ ಹಲವರು ಶಿವದಾಸರು ಹಾಡುಗಳನ್ನು ಬರೆದಿರುವುದಕ್ಕೆ ನಮಗೆ ಆಧಾರಗಳಿದ್ದರೂ ಅವರ ಹಾಡುಗಳು ಸಿಕ್ಕಿಲ್ಲ. ಆದರೆ ಹನ್ನೆರಡನೇ ಶತಮಾನದ ಬಸವನೂ ಅವನ ಸಂಗಡಿಗರೂ ಸಮಕಾಲೀನರೂ ಆದ ಶರಣರು ರಚಿಸಿದ ಹಾಡುಗಳು ನಮಗೆ ಹೇರಳವಾಗಿ ದೊರೆಯುವುವು.'[1] ಈ ರೀತಿಯ ವಚನಗಳಲ್ಲಿ ಕೆಲವು ಗ್ರಂಥಸ್ಥವಾಗಿಯೋ ಸಂಕಲನಗಳಾಗಿಯೋ ಮತ್ತೆ ಹಲವು ಸ್ವತಂತ್ರ ಕೃತಿಗಳಾಗಿಯೋ ಹೊರಬಂದಿವೆ.

ಜಕ್ಕಣ್ಣನ ಏಕೋತ್ತರ ಶತಸ್ಥಲ, ಕಂಬಾಳ ಶಾಂತಮಲ್ಲೇಶನ ಗಣವಚನ ರತ್ನಾವಳೀ, ಶಿವಲಿಂಗದೇವನ ಶಿವಯೋಗ ಪ್ರದೀಪಿಕೆ ಮೊದಲಾದ ಗ್ರಂಥಗಳು ಶಿವಶರಣರ ವಚನಗಳಿಗೆ ಆಯ್ದ ಸಂಗ್ರಹವಾಗಿವೆ. ಕರಸ್ಥಲನಾಗಿದೇವನ ಹಾಡುಗಳು, ಜಿಗುನಿಮರುಳ ದೇವರ ಸ್ವರವಚನಗಳು, ಕಡಕೋಳ ಮಡಿವಾಳೇಶ್ವರರ ಸ್ವರ ವಚನಗಳು, ಗುರು ಬಸವಾರ್ಯರ ಸ್ವರವಚನಗಳು, ಗಂಗೇಶಾಂಕಿತ ವಚನಗಳು, ಇಮ್ಮಡಿ ಮುರಿಗಾಗುರು ಸಿದ್ಧನ ಕೈವಲ್ಯಸೋಪಾನ ನಾಮೈಕೋತ್ತರ ಶತಸ್ಥಲ ಇನ್ನೂ ಅನೇಕ ಸ್ವತಂತ್ರ ಕೃತಿಗಳು ಲಭ್ಯವಾಗಿವೆ.

ಪ್ರಸ್ತುತ ಕೃತಿಯಾದ 'ನೀಲಗ್ರೀವನ ವಚನಗಳು' ಒಂದು ಸ್ವತಂತ್ರವಾದ ಗ್ರಂಥ. ಕವಿಯ ಹೆಸರು ನೀಲಗ್ರೀವ, ದೇವನೀಲಗ್ರೀವ, ಗುರುನೀಲಗ್ರೀವಗಳೆಂದು ಕೃತಿಯಲ್ಲಿ ಬೇರೆಬೇರೆಯಾಗಿ ಕಂಡುಬಂದರೂ ಇವೆಲ್ಲವೂ ಒಬ್ಬನ ಪರ್ಯಾಯನಾಮಗಳೆಂದೇ ಹೇಳಬಹುದಾಗಿದೆ. ಗ್ರಂಥದಲ್ಲಿ ಕವಿಯ ಕಾಲವಿಚಾರವಿಲ್ಲ. ಈತನ ಕೃತಿಯ ಶೈಲಿಯನ್ನು ಗಮನಿಸಿದಾಗ ಸು. ೧೬೦೦ರಿಂದ ೧೭೦೦ರೊಳಗಿದ್ದಿರಬಹುದೆಂದು ಊಹಿಸಬಹುದು.

ನೀಲಗ್ರೀವನು ತನ್ನ ಕೃತಿಯ ಅನೇಕ ಕಡೆಗಳಲ್ಲಿ ಬಿಸಿಗಣ್ಣ ಬನ್ನೂರ ಭವ ನೀಲಕಂಠೇಶ್ವರಾ (೧–೪–೩), ಬನ್ನೂರ ನೀಲಕಂಠೇಶ (೧–೬–೩), ಒಾದು ಬಿನ್ನಹ ಬನ್ನೂರ ವರನೀಲಕಂಠೇಶ್ವರಾ (೧–೧೩–೧) ರಸಿಗದೆ ಬನ್ನೂರ ಚೆನ್ನನಾ ಚೆನ್ನಯಾ ([illegible]–೨೧–೩) ಎಂಬಂದಾಗಿ ಬನ್ನೂರ ನೀಲಕಂಠೇಶ್ವರನನ್ನು ಸ್ಮರಿಸಿದ್ದಾನೆ. ಈ

1 ಡಾ. ಎಲ್. ಬಸವರಾಜು, 'ಶಿವದಾಸ ಗೀತಾಂಜಲಿ' (1990) ಪು. 99.

'ಬನ್ನೂರು' ಎಂಬ ಗ್ರಾಮ ಮೈಸೂರು ಜಿಲ್ಲೆಯಲ್ಲಿ ಕಂಡುಬಂದರೂ ಅಲ್ಲಿ ನೀಲಕಂಠೇಶ್ವರ ದೇವಾಲಯವಿಲ್ಲ.[2] ಹಾಗಾಗಿ ಕವಿಯ ಸ್ಥಳ ಇಲ್ಲಿನ ಬನ್ನೂರು ಆಗಿರದೆ ನೀಲಕಂಠೇಶ್ವರ ದೇಗುಲವಿರುವ ಬಿಜಾಪುರ ಜಿಲ್ಲೆಯ ಅಥಣಿ ತಾಲ್ಲೂಕಿನ ಬನ್ನೂರು ಆಗಿರಬಹುದು.

ನೀಲಗ್ರೀವನು ತನ್ನ ಕೃತಿಯನ್ನು 'ವಚನ'ವೆಂದು ಕರೆದಿದ್ದರೂ ವಚನಗಳಿಗೆ ರಾಗಗಳನ್ನು ಗುರುತಿಸಿರುವುದರಿಂದ ಸ್ವರವಚನಗಳೆಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಈ ಕೃತಿಯಲ್ಲಿ ನಾಲ್ಕು ಪದ್ಧತಿಗಳೆಂದು ವಿಭಾಗ ಮಾಡಿದ್ದಾನೆ. ಪದ್ಧತಿ ೧ನ್ನು ಶೃಂಗಾರ ನಾಂದ್ಯಪದ ಎಂದೂ ಪದ್ಧತಿ ೨ನ್ನು ನೀತಿಸಾರ ಎಂದೂ ಪದ್ಧತಿ ೩ನ್ನು ವೈರಾಗ್ಯ ಮಾರ್ಗದ ವಚನ ಎಂದೂ ಪದ್ಧತಿ ೪ನ್ನು ಗುರು ನೀಲಗ್ರೀವನ ವಚನ ಎಂದೂ ಹೇಳಿಕೊಂಡಿದ್ದಾನೆ. ಕೃತಿಯ ನಾಲ್ಕು ಪದ್ಧತಿಗಳಲ್ಲಿ ಅಂದರೆ ೧ರಲ್ಲಿ ೧೮, ೨ರಲ್ಲಿ ೩೭, ೩ರಲ್ಲಿ ೧೬೩ ಮತ್ತು ೪ರಲ್ಲಿ ೮೧ ಸ್ವರವಚನಗಳಿವೆ. ಅವುಗಳ ಒಟ್ಟು ಸಂಖ್ಯೆ ೨೯೯. ೪ನೆಯ ಪದ್ಧತಿಯಲ್ಲಿರುವ ೮ನೆಯ ವಚನ ಅದೇ ಪದ್ಧತಿಯ ೨೬ನೆಯ ವಚನವನ್ನು ಹೋಲುವುದರಿಂದ ಹಾಡುಗಳ ಸಂಖ್ಯೆ ೨೯೮ ಆಗುತ್ತದೆ.

ತನ್ನ ಕೃತಿಯಲ್ಲಿ ನೀಲಗ್ರೀವನು ಸಂಸ್ಕೃತ ವ್ಯಾಕರಣಕರ್ತೃವಾದ ನಾಗವರ್ಮ, ಅಮರಕೋಶದ ಅಮರಸಿಂಹ, ಧನಂಜಯ, ಮಂಗಿರಾಜರನ್ನು ಸ್ಮರಿಸಿದ್ದಾನೆ (೨-೨೦-೧), ಕನ್ನಡ ವಚನಸಾಹಿತ್ಯದ ಪ್ರಭುದೇವ, ಬಸವಣ್ಣ, ಚೆನ್ನಬಸವ, ಸಿದ್ಧರಾಮ, ಹಡಪದಪ್ಪಣ್ಣ, ಮರುಳ ಶಂಕರದೇವ, ಮಡಿವಾಳ ಮಾಚಯ್ಯರೇ ಮೊದಲಾದವರನ್ನು ಹೆಸರಿಸಿದ್ದಾನೆ. ಆದರೆ ಚೆನ್ನಬಸವಣ್ಣನನ್ನು ಕೃತಿಯ ೨ ಮತ್ತು ೩ನೆಯ ಪ್ರಕರಣಗಳಲ್ಲಿ ವಿಶೇಷವಾಗಿ ಸ್ತುತಿಸಿದ್ದಾನೆ.

ಮಾಯಾತೀತನು ಗುರುಚೆನ್ನಬಸವಸಂಪ್ರದಾಯದೊಳಿರು ಜೀವನೇ (೨-೮-೩), ಹಲವು ಮಾತೆಯ ಅಣವ ಮಾಯಾ ಕಾರ್ಮಿಕ! ಮಲಹರ ಗುರುಚೆನ್ನಬಸವೇಶನಾ (೨-೧೮-೩), ಪಂದ್ಗುರು ಚೆನ್ನಬಸವಯ್ಯ (೩-೨-೩), ನೀಲಗ್ರೀವ ಲಿಂಗಕೆ ಎನ್ನ ಮಂದುವೆಯ ಸಡಗರಿಸಿದ ಮಹಾಗುರು ಚೆನ್ನಬಸವಾ (೩-೫೬-೩) ತಂದೆ ನೀನೆ ರಕ್ಷಿಪೆ ಚೆನ್ನಬಸವ (೩-೧೪೯-೩) ಇನ್ನೂ ಹಲವಾರು ಕಡೆಗಳಲ್ಲಿ ಉಲ್ಲೇಖಿಸಿದ್ದಾನೆ.

ನೀಲಗ್ರೀವನ ಸ್ವರವಚನಗಳು ಅನೇಕ ರಾಗಗಳನ್ನೊಳಗೊಂಡಿವೆ. ಕಲ್ಯಾಣಿ, ಶಂಕರಾಭರಣ, ಭೈರವಿ, ಕಾಂಬೋದಿ, ಘಂಟರಾಗ, ಆಹರಿ, ಆಹರಿಪಂತು, ದೇಶಿ, ಮಲಹರಿ, ಮೋಚಬಹುಳಿ, ಪಾಹಡಿ, ಮಧುಮಾಧವಿ, ವೊಡ್ಡಿ ಧನ್ನಾಸಿ, ಸೌರಾಷ್ಟ್ರವೇ ಮೊದಲಾದ ರಾಗಗಳು ಹಾಡುಗಳಿಗೆ ನಮೂದಿತವಾಗಿವೆ. ತಮ್ಮಿಚ್ಛೆ ರಾಗದ ಒಂದು ಬೊಲ್ಲಿ ವಚನವಿದೆ (೩-೧೧೬-೧), ಅಲ್ಲದೆ ಕೆಲವು ಬೆಡಗಿನ ವಚನಗಳೂ (೩-೧೨, ೧೩, ೧೫, ೪೫) ಇವೆ. ಇನ್ನು ಈ ಕೃತಿಯ ನಾಲ್ಕು ಪದ್ಧತಿಗಳಲ್ಲಿರುವ ವಸ್ತುವಿಶೇಷವನ್ನು ಗಮನಿಸಬಹುದು.

ಪದ್ಧತಿ ೧ : ಕೃತಿಯಾರಂಭದಲ್ಲಿ ಉಮಾಕಾಂತನಾದ ಶಿವನನ್ನು ಕವಿಯು ಸ್ಮರಿಸಿದ ಬಳಿಕ, ಶರಣಸತಿ ಲಿಂಗಪತಿ, ಇವರ ನಲ್ಲ ನಲ್ಲೆಯರ ಶೃಂಗಾರ ವಿಷಯಗಳನ್ನೊಳಗೊಂಡ

2 ಆದರೆ ಇಲ್ಲಿ ಕೋಸಲೇಶ್ವರ, ಹನುಮಂತೇಶ್ವರ, ಜನ್ಮಾಂಜನೇಯ ಮತ್ತು ಸರೋವರಾಂಜನೇಯ ಎಂಬ ನಾಲ್ಕು ದೇವಾಲಯಗಳಿವೆ—ಕನ್ನಡ ವಿಶ್ವಕೋಶ, ಸಂ. ೧೧, ಪು. ೮೪೪.

೧೮ ಹಾಡುಗಳು ರಚಿತವಾಗಿವೆ. ಇವುಗಳಲ್ಲಿ ಇನಿಯನ ಅಗಲಿಕೆಯಿಂದಾದ ವಿರಹ, ಕೋಪ, ದುಃಖ, ಭಯಗಳು ಕಾಣಿಸಿಕೊಳ್ಳುತ್ತವೆ. ಇನಿಯನು ಎದುರಿಗೆ ಬಂದಾಗ,

ಮೊಗ ಕಮಲ ತಿರುಹಿ ಮೇಲುದನೊಯ್ಯನೋಸರಿಸಿ
ಮಗುಳಿ ಶಿರವಾಗಿ ನೆಲನನಂಗುಟದಲ್ಲಿ
ವಿಂಗೆ ಬರೆದು ಪುರ್ವಿನಿಂ ಔರ್ವ ಕಟಾಕ್ಷಗಳ
ಬಗೆ ತರಳವೆರದು ಸ್ವೇದಾಂಬುವನಿ ಸೂಸುವರು (೧-೩-೨)

ತನ್ನ ಉನ್ಮತ್ತ ಇನಿಯನನ್ನು ಕಂಡು ಇನಿಯಳು ವರ್ತಿಸುವ ಬಗೆಯನ್ನು ಚಿತ್ರವತ್ತಾಗಿ ರಚಿಸಿದ್ದಾನೆ;

ಮಾನನಿಧಿಯೇ ಬಾರೆ ಮನದನ್ನ ಮತಿಸಾರ
ಏನು ಕಾರಣ ಎನ್ನ ಎದೆಗೆಡಿಸುವ ರನ್ನಾ (೧-೭ ಪಲ್ಲವಿ)

ಇಷ್ಟು ಅಂಗಲಾಚಿದರೂ ಇನಿಯನು ಬಾರದಿದ್ದಾಗ

ನಟನೆಯ ನಾನರಿಯೆನೆ ? ನನಗೇಕಿನ್ನೂ
ಕುಟಿಲವೆ ಕೂರ್ತು ತೋರುವರೆ ದೇವಾ

ಎಂದು ಕಡೆನುಡಿಯುತ್ತಾಳೆ. ಪುರುಷವಿರಹದ ಚಿತ್ರ ಹೀಗಿದೆ :

ಮಾತ ಮನ್ನಿಸಬಾರದೆ ? ಮಾನಿನಿ ಇನಿ
ವಾತಿನೊಳತಿ ಶಾರದೆ ನಿನ್ನ ಪ್ರೀತಿಯ
ಪ್ರೀತಿಯಿಂದ್ವೈತರೆ ಪಿರಿದಳಲಿಸುವರೆ (೧-೯ ಪಲ್ಲ)

...ನೀಲಾಳಕಿಯೆ ಇತ್ತಾ ನಿನ್ನೋಪಗದೆ ಚಿತ್ತಾ
ಮೇಲರಿಯದಲೊಂದ ಮೆಚ್ಚಿದ ಗುಣದಿ ನೊಂದಾ
ಲೋಲ ಬಂದನು ಪಾಲಿಸಿ ಪಂಥವ ಬಿಟ್ಟು
ಸೋಲವಾಗಿರು ಲಾಲಿಸೆ ಎಂದಿನ ಹಾಗೆ
ನೀಲಗ್ರೀವನ ರತಿ ನಿಜವನರಿದು ಸತಿ (೧-೯-೩)

ಅದೇ ರೀತಿ ನಲ್ಲಳ ವಿರಹ ಉತ್ಕಟವಾದಾಗ

ಏನು ಜನ್ಮದ ಪಾಪಿಯೊ ಎನಗೊಮ್ಮೆ ಹಾ
ಗಾ ಸುದತಿರೋಲಗದೆ ಪ್ರೀಯನಗಲೆ
ಲೇಸ ನೆನೆಯೆ ನಿದ್ರೆಯಿಲ್ಲ ಕನಸು ಇಲ್ಲ
ವಾ ಸುಗುಣನ ಕೂಟವೆನಗೆಂತುಟವ್ಮಾ (೧-೧೧-೨)

ಎಂದು ಅಳಲುವುದು ಒಂದು ರೀತಿಯದಾದರೆ, ಅವಳ ಸಿಟ್ಟು ಇನ್ನೊಂದು ಬಗೆಯದು ;

ನಗೆ ನುಡಿಯಿಂದ ನಂಬಿಸಿ ನಾರೀ ಮಣಿಯಾ
ಸುಗುಣ ರನ್ನನೆ ಹಿಂಗಿಹುದೇನು ಮಣಿಯಾ
ಹಗಲೆ ಬಿದ್ದಳು ಇರುಳೆ ಕಂಡಾ ಕುಣಿಯಾ (೧-೧ಳ ಪಲ್ಲ)

...ಮುಂಗೈಯ್ಯ ಕಂಕಣಕೆ ಮುಕುರ ತಾ ಬೇಕೆ (೧-೧೭ ಪಲ್ಲ)

ಹೀಗೆ ಶರಣಸತಿ ಲಿಂಗಪತಿಗಳ ಸರಸ ಸಲ್ಲಾಪಗಳು ಸಾಗುತ್ತವೆ.

ಪದ್ಧತಿ ೨: ಇದರಲ್ಲಿ ಬರುವ ಶೃಂಗಾರ ನೀತಿಸಾರವು ೩೭ ಸ್ವರವಚನಗಳಿಂದ ಕೂಡಿದೆ. ಆರಂಭದ ಪದ್ಯಗಳು ಅಮೃತಮಂಥನ ಕಾಲದಲ್ಲಿ ಹುಟ್ಟಿದ ವಿಷವನ್ನು ಶಿವನು ಕುಡಿದು ಗರಳಧರ, ನೀಲಗ್ರೀವ, ನೀಲಕಂಠನೆನಿಸಿಕೊಂಡ ಅಂಶಗಳನ್ನು ತಿಳಿಸುತ್ತವೆ. ಈ ಪ್ರಕರಣದಲ್ಲಿ ನೀತಿಯನ್ನು ಬೋಧಿಸುವುದೇ ಕವಿಯ ಮುಖ್ಯ ಗುರಿ.

ಮನದೊಳಗತಿ ಮಚ್ಚರವನೆಣಿಸಿಯೆ ಬಿಚ್ಚಿ ಮಾತ ಜೀವಾ
ಇನಿರಸದಂತುಸುರುವ ತುಚ್ಛಜನ ನೆಚ್ಚ ಬೇಡ ಜೀವಾ (೨-೩ ಪಲ್ಲ)

ದುಷ್ಟರ ಸಂಗದಿಂದ ದೂರವಿರಬೇಕು, ಇಲ್ಲದಿದ್ದರೆ ತಮ್ಮ ಕೆಲಸವಾಗುವವರೆಗೆ ಸ್ನೇಹದಿಂದಿದ್ದು, ಅನಂತರ ಕೈಕೊಡುವವರೇ ಹೆಚ್ಚು.

ಘನತರ ಕುಂಭದೊಳಗೆ ವಿಷಮುಖ ಸುಧೆಯಂತೆ ಜೀವಾ
ನೆನೆದ ಕಾರ್ಯವ ಗೆದ್ದು ನೆಚಿ ಮುನಿವರ ಹೊಂದಬೇಡ ಜೀವಾ
...ಹಲವು ಬಗೆಯ ಹುಸಿ ಹಸರ ನೂತನ ನುಡಿಯಿಂದ ಜೀವಾ
ನೆಲೆಯ ತಿಳಿದು ನೇಮಿಸಿದ ಬಹು ಬಯಕೆ ಕೈಸಾರೆ ಜೀವಾ
ಗೆಲವನಡರಿ ಗೇಹ ಮುಚಿವ ದುರ್ಜನ ಸ್ನೇಹ ಬೇಡ ಜೀವಾ (೨-೩-೧,೨)

ಸಜ್ಜನರ ಸಹವಾಸವನ್ನು ಬೆಳಸಬೇಕು. ಆದರಿಂದ ಇಬ್ಬರಿಗೂ ಕ್ಷೇಮವೆಂದು ಈ ಪದ್ಯಗಳು ಸಾರುತ್ತವೆ. ಕೇವಲ ಬಾಯಿಮಾತುಗಳಿಂದ ಭವಬಂಧನ ಹರಿಯುವುದಿಲ್ಲ. ನುಡಿದಂತೆ ನಡೆದರೆ ಮಾತ್ರ ಭವವಳಿವುದು. ವಿಷಯೇಂದ್ರಿಯಗಳ ಚಿಂತೆಯಲ್ಲಿ ಮುಳುಗಿರುವವನಿಗೆ ಪರಮಗತಿ ಪ್ರಾಪ್ತಿಯಾಗುತ್ತದೆನ್ನುವುದು ಸುಳ್ಳು. ಹೆಣ್ಣು ಹೊನ್ನು ಮಣ್ಣುಗಳು ನಮ್ಮದೆಂದುಕೊಳ್ಳುವುದೂ ತಪ್ಪಾಗುತ್ತದೆ. ಅವುಗಳಿಂದ ಶಾಶ್ವತ ಸುಖವನ್ನೆಂದಿಗೂ ಪಡೆಯಲಾರೆವು. ಆದುದರಿಂದ,

ಮಾರಾರಿಯರಿಷಡುವರ್ಗವಳಿದು ಕ್ಷೀರ ವಾರುಧಿಯಹುದು ಜೀವನೇ
ಕಾಯವಳಿದು ಕರಣಾದಿ ಗುಣಗಳೊಂದುಪಾಯದಿಂ ಪರಮನೊಳು
ಲೀಯಮಾಡಿಯೆ ಲಿಂಗಜಂಗಮವನು ಗುರುದಾಯಕನಿಂ ತಿಳಿದು
ಸಾಯಸಗೊಳದೆ ಸಾಧಿಸು ಮೇಲುಲೋಕದಿ ರಾಯನೆಂದೆನಿಸುತಿಹ
ಮಾಯಾಜಿತನು ಗುರು ಚೆನ್ನಬಸವ ಸಂಪ್ರದಾಯದೊಳಿರು ಜೀವನೇ
(೨-೮-೨, ೩)

ಹಲವು ಮಾತೇನು ಆಣವ ಮಾಯಾ ಕಾರ್ಮಿಕ
ಮಲಹರ ಗುರು ಚೆನ್ನಬಸವೇಶನಾ
ಒಲುಮೆಯ ಕರಕಂಜದಿಂದು[ದಿ]ಸಿದ ಮಹಾ
ಬಲುಗೆಯ್ಯಾ ವೀರರವರು... (೨-೧೮-೩)

ದಾನಧರ್ಮಗಳ ಬಗೆಗೆ ಕವಿಯು ತನ್ನ ಅಭಿಪ್ರಾಯವನ್ನು ಸೊಗಸಾಗಿ ಮನಮುಟ್ಟುವಂತೆ ಅಭಿವ್ಯಕ್ತಪಡಿಸುತ್ತಾನೆ ;

ಕೊಡಲರಿಯರು ಕೊಡದಿರೆ ಇಲ್ಲವೆನ್ನರು
ಬಿಡದೆಡೆಯಾಡಿಸುತಿಹ ರಾಸಿದೋಚಿ
ಕಡೆಯಲ್ಲಿ ಕಡುಪಿನಿಂ ಕೊಸಚಿ ಕೋಪಿಸಿ ಹೋಗು
ನಡೆಯಿಲ್ಲವೆಂದು ನಾಚಿಸಿ ನಾಚದೇಕೆ (೨-೨೨-೧)

ಮೊದಲಿಸುವರು ಮುನ್ನಿತ್ತಮುನ್ನಿತ್ತುದಾ ಎಂದು
ಸಾಧಿಸುವರು ಸೇವೆಗೈಪರಾ ಮೇಲೆ (೨-೨೨-೨)

ಮಲತ್ರಯಗಳನ್ನು ಗೆದ್ದವನು ಮುಕ್ತಿಯತ್ತ ಧಾವಿಸುತ್ತಾನೆ. ಸಂಸಾರದಲ್ಲಿರುವವರಿಗೆ ಮುಕ್ತಿ ಬಹಳ ದೂರ. ಆದಕ್ಕಾಗಿ ಕವಿಯು—

ಸಾಕು ಸಾಕಾದನಿಬರಿಗೆ ಸಂಸಾರ
ಬೇಕಾದವರಿಗೆ ಬೇಕಾಗಿಹುದೆಂತೋ (೨-೨೭ ಪಲ್ಲ)

ಎಂದು ಅಭಿಪ್ರಾಯಪಡುತ್ತಾನೆ. ಸಂಸಾರದ ಮಾರ್ಗದಲ್ಲಿ ಮುಕ್ತಿ ಗಳಿಸುವುದು ಬಹು ಕಷ್ಟ. ವಿರಕ್ತರಿಗೆ ಇರುವಷ್ಟು ಅನುಕೂಲ ಸಂಸಾರಸ್ಥರಿಗೆ ಇರುವುದಿಲ್ಲವಾದರೂ ವಿರಕ್ತರು ಅನುಸರಿಸುವ ಶಿಸ್ತು, ನಿಯಮ ಪಾಲನೆ, ಧ್ಯಾನ, ತಪಸ್ಸು, ಆಚಾರಗಳು ಹೊರಗಣ್ಣಿಗೆ ಸುಲಭದಂತೆ ಕಂಡುಬರುತ್ತವೆ.

ಮನಸೆಲ್ಲವನು ನೋಯಿಸುತಿಹ ಸತಿ ಸುತ
ರನುಕೂಲವಿಲ್ಲದವರಿಗೆ ನೋವಹುದೋ
ಬಿಡದನುದಿನ ಕಾಂತೆ ಕನಕ ಭೂಮಿಯು ತನ್ನ
ಒಡವೆಯೆಂದವರಿಗೊಮ್ಮಿಗೆಯುಳಲಹುದೊ
ಸಡಗರವಹುದೊ ಸಂಪದವ ನೀಲಗ್ರೀವ
ನಡಿಗೆ ಒಪ್ಪಿಸಿದವರಿಗೆ ಮಹಾಸಂಸಾರ (೨-೨೭-೨, ೩)

ಶಿವನ ಅಡಿದಾವರೆಯಲ್ಲಿ ಸಮಸ್ತವನ್ನು ಒಪ್ಪಿಸಿ ಹರನ ಧ್ಯಾನದಲ್ಲಿರುವವರಿಗೆ ಸಂಸಾರ, ಮಹಾಸಂಸಾರವಾಗುತ್ತದೆ. ಇಲ್ಲವಾದರೆ ಅದೇ ಮಹಾ ನರಕವಾಗುತ್ತದೆ, ಅದಕ್ಕಾಗಿಯೇ ಕವಿಯು ಈ ದೇಹವು ಅಂತಃಪುರವೊ, ಯಮಪುರವೊ ಎಂದು ಸಂಶಯಪಡುತ್ತಾನೆ. ಏಕೆಂದರೆ,

ಜನನ ಮರಣ ರೋಗ ರುಜೆ ಸಿರಿ ದಾರಿದ್ರ್ಯ
ಘನ ಸುಖ ದುಃಖ ತಾಗುವರೆ ಬ್ರಹ್ಮ

ಮನಸಂದು ರಚಿಸಿದ ಗುಡಿಯಿದೊ ಕಾಯವೋ
ನೆನಹಿಡೆ ಮಣಿಹೆ ಮಂದಿರವೊ ದೇವಾ (೨-೩೩-೨)

ಆದುದರಿಂದಲೆ ಕವಿ—'ಎನಗಾರು ಇಲ್ಲ ಎಳವೆಯಿಂದಲೆಯ ನೀನಲ್ಲದೆ' ಎಂದು ಹುಯ್ಯಲಿಡುತ್ತಾನೆ. ಅಂತೆಯೇ—

ಲೋಕವಱಿಯದ ಹಾಗೆ ಲೋಭದಿಂದೆನ್ನ ಬಿಂಗೆ
ನೀ ಕಡೆಯು ಬಚ್ಚಿಟ್ಟ ನಿಜವಪರ ಗಂಟ್ಟು
ನಾ ಕಾಬದೊಂದು ಪದ ನನಗೆ ಪಾಲಿಸಿದೆ ಸದಾ
ಏ ಕರುಣವೋ ದೇವಾ ಎಲೆ ನೀಲಗ್ರೀವಾ (೨-೩೭-೩)

ಹರನ ಕರುಣೆಯ ಬಗ್ಗೆ ಅಪಾರ ಮೆಚ್ಚುಗೆ, ವಿಶ್ವಾಸ, ಭಕ್ತಿ ಇವುಗಳನ್ನು ವ್ಯಕ್ತಪಡಿಸುತ್ತಾನೆ.

ಪದ್ಧತಿ ೩ : ಇದು ''ವೈರಾಗ್ಯಮಾರ್ಗದ ವಚನ''ವಾಗಿದೆ. ಇದರಲ್ಲಿ ೧೬೩ ಸ್ವರ ವಚನಗಳಿದ್ದು ವಿಸ್ತಾರವಾಗಿದೆ. ಶೀರ್ಷಿಕೆಯೇ ತಿಳಿಸುವಂತೆ ವೈರಾಗ್ಯವನ್ನು ಕುರಿತದ್ದೇ. ಐಶ್ವರ್ಯ, ಸವಲತ್ತು, ಸಂಪತ್ತುಗಳು ಎಷ್ಟೇ ಅಧಿಕವಾಗಿದ್ದರೂ ಶಿವಕರುಣೆಯಿಲ್ಲದಿದ್ದರೆ ಅವು ತೃಣಸಮಾನವಾಗುತ್ತವೆ. ಕೈಗೆ ಬಂದ ತುತ್ತು ಬಾಯಿಗಿಲ್ಲವಾಗುತ್ತದೆ. ಆದರೆ ನಮ್ಮ ಮನಸ್ಸು ಮಾತ್ರ ಶಿವನಲ್ಲಿ ನೆಲಸಿದ್ದರೆ ಬಂದ ಕಷ್ಟಗಳು ಪರಿಹಾರವಾಗುತ್ತವೆ. ಭಕ್ತಿಯೊಡನೆ ವೈರಾಗ್ಯವೂ ಸೇರಿದ್ದರೆ ಮಾತ್ರ ಅಂತಹವರ ಜೀವನ ಗುರಿಯತ್ತ ಸಾಗಲು ಸುಗಮವಾಗುತ್ತದೆ.

ನಂಬಿದೆನೆರಡಿಲ್ಲದೆ ನಿಮ್ಮ ಪಾದವಾ
ಕುಂಭಿನಿಗೇಕೊ ದೇವಾ
ಎಂಬ ಶ್ರುತಿಯನೆರ್ದೆಗೊಂಡು ಸಾರಿದೆ ತ್ರಿ
ಯಂಬಕನವತಾರನೇ (೩-೧ ಪಲ್ಲವಿ)

ಎಂದು ಸ್ತುತಿಸುವ ಕವಿಯು, ಹಲವು ಭವದ ಬಲೆಯಲ್ಲಿ ಬಿದ್ದ ತನ್ನನ್ನು ಮುಕ್ತಿಯತ್ತ ದಾರಿಯನ್ನು ತೋರಿಸು ಎಂದು ಶಿವನಲ್ಲಿ ಪ್ರಾರ್ಥಿಸುತ್ತಾನೆ. ಈ ಜೀವವು ಒಂದೇ ಜನ್ಮವನ್ನು ಹೊತ್ತು ಬಂದ ಜೀವವಲ್ಲ. ಅನೇಕ ಲಕ್ಷ ಯೋನಿಗಳಲ್ಲಿ ಸಂಚರಿಸಿ ಬಂದುದಾಗಿದ್ದು ಪ್ರಸ್ತುತ ಭವದಲ್ಲಿ ಮುಕ್ತಿಯನ್ನು ಗಳಿಸುವುದೇ ಮುಖ್ಯ ಗುರಿಯಾಗಿದೆ. ಅರಿಷಡ್ವರ್ಗ, ಮಲತ್ರಯಂಗಳನ್ನು ಪ್ರಥಮವಾಗಿ ಜಯಿಸಬೇಕಷ್ಟೆ? ಅದು ಕೈಗೂಡಬೇಕಾದರೆ ಗುರುವಿನ ಮಾರ್ಗದರ್ಶನ ಬೇಕಾಗುತ್ತದೆ,

ಗುರುವಿನಿದಿರದಿಪದಿರಿದಿರಿಡುವತಿ ಮದ ಬೇಡ ಜೀವಾ
ಗುರು ಪರತರ ದಿವ್ಯವರ ಜ್ಯೋತಿಯೆಂದ ನೀನಱಿದು ಜೀವಾ
(೩-೫ ಪಲ್ಲ)

ಗುರುವು ಸಾಕ್ಷಾತ್ ಪರಬ್ರಹ್ಮನೇ ಮಾತ್ರವಲ್ಲ ಅವನು ಸದಾಶಿವ.

ಪರಮ ಪಂಚಾಕ್ಷರಿ ಎನುತಿಹ ಶ್ರುತಿಯಾಗಿ
ಪರಿಯನರಿದು ಕೂಡೆ ಜೀವಾ
ಗುರುವಿನೆಡೆಯು ಗರುವಿಕೆ ಗರ್ವವಿರುತಿರೆ
ಉರುವ ನರಕ ಕೇಳು ಜೀವಾ (೩-೫-೧)

ಮನುಜನಾದವನು ಸಹಾ ಈಶ್ವರನ ಧ್ಯಾನದಲ್ಲಿ ನಿರತನಾಗಿದ್ದರೆ ಒಳ್ಳೆಯದು. ಆದರೆ ಅವಜ್ಞೆಯಿಂದ ಮರೆತನಾದರೆ ಮಾರಿ ಬೆನ್ನತ್ತದೆ ಇರದು.

ಮನುಜರಿಗದೆ ಮಾರಿ ಮರವೆಯೊಂದಲ್ಲದೆ
ಮನವಾರೆ ಮಾರಿ ಬೇರುಂಟೆ (೩-೧೯ ಪಲ್ಲ)
ಮತಿಮರೆದೊಡನಿಹ ಮಾನವರಿಗೆ ಇನ್ನು
ಪ್ರತಿಯಾಗಿ ಮಾರಿ ಬೇರುಂಟೆ (೩-೧೯-೧)

ಮಾನವನಿಗೆ ಇರಬಾರದ ಒಂದು ಗುಣ ಅಹಂಕಾರ ; ಆದರೆ ಅದಿಲ್ಲದಿರುವವರು ಬಹಳ ಅಪರೂಪ. ಆ ಗುಣವಿರುವುದರಿಂದಲೇ ನಾನು ಬಲ್ಲವ, ನನಗೆ ಎಲ್ಲವೂ ತಿಳಿದಿದೆ ಎಂದು ಜಂಬ ಪಡುವುದು ಸಹಜವಾಗುತ್ತದೆ, ಅಂತಹವರನ್ನು ಕಂಡು ನೀಲಗ್ರೀವನು ಹೀಗೆ ನುಡಿದಿದ್ದಾನೆ ;

ಬಲ್ಲವರು ಎಂಬುದರಿದೇಕಹಂಕರಿಸುವರು
ಬಲ್ಲವರದಾರು ಬಲ್ಲಿರೆ ಹೇಳರೇ (೩-೨೩ ಪಲ್ಲ)
ಹಲವು ಶಾಸ್ತ್ರದ ಹವಣನರಿದವರು ಬಲ್ಲವರೆ
ಹಲವು ಶಾಸ್ತ್ರವನರಿಯದವರರಿಯರೆ
ಹಲವು ವಾಗ್ಜಾಲಿಕರು ಹಾಗವರು ಬಲ್ಲರೆ
ಹಲವು ವಾಗ್ಜಾಲವಿಲ್ಲದರರಿಯರೆ ೧

ನಿಜಕ್ಕೂ ಅಲ್ಲ ಅಲ್ಲ ; ಹಾಗಾದರೆ ಬಲ್ಲವರಾರು ಎಂಬ ಪ್ರಶ್ನೆಗೆ ಉತ್ತರ—

ನೀಲಗ್ರೀವನ ನಿಜವನರಿದವರೆ ಬಲ್ಲವರು
ನೀಲಗ್ರೀವನ ನಿಜವನರಿಯದವರು
ನೀಲಗ್ರೀವನೆ ಬಲ್ಲನವರರಿಯರೆಂದು
ನೀಲಗ್ರೀವನೆ ಬಲ್ಲಬಲ್ಲವರನು ೩

ನೀಲಗ್ರೀವನೆ ಸರ್ವಕ್ಕೊಡೆಯ ಸರ್ವಕ್ಕಾಧಾರ ಎಂದ ಮೇಲೆ ಮಾನವ ಚಿಂತೆಯನ್ನು ದೂರವಿಡಬೇಕಷ್ಟೆ ?

ನೀನಿರೆ ಎನ್ನ ಮಾನಸಕೆ ಯೋಚನೆ ಏಕೆ
ನೀನಿರೆ ದೇವ ತನಗೆ ಚಿಂತೆ ಬೇಕೆ (೩-೨೪ ಪಲ್ಲ)

ಭಕ್ತನಾದವನು ಪಂಚಾಕ್ಷರೀಮಂತ್ರವನ್ನು ಅನನ್ಯವಾಗಿ ಭಜಿಸಬೇಕು. ಗುರುವಿನ ಎದುರು ಗರ್ವದಿಂದ ನಡೆದುಕೊಂಡರೆ ನರಕವೇ ಪ್ರಾಪ್ತಿ.

ನುಡಿಯಬಾರದು ತನಗೆ ಪಾಪ ತೊಡರುವ ಮಾತ
ನುಡಿಯಬಹುದು ತನ್ನ ಪಾಪಹರವ
ನುಡಿಯ ಸಾಧಿಸಿ ನೀಲಗ್ರೀವನಂಘ್ರಿಯ ಬೇಗ
ಒಡನೆ ಸಾರುವದೊಂದೆ ಸಹಜವಾತ್ಮ (೩-೩೮-೩)

ಇದಕ್ಕೇ ಮಾತು ಬೆಳ್ಳಿ, ಮೌನ ಬಂಗಾರವೆಂಬ ನಾಣ್ಣುಡಿ ಹುಟ್ಟಿರಬೇಕು. ಹಾಗಾದರೆ ಯಾರೊಡನೆ ಮಾತನಾಡಬೇಕು ? ಅಜ್ಞಾನಿಗಳೊಡನೆ ಖಂಡಿತ ಕೂಡದೆಂದು ಕವಿಯು ತಿಳಿಸಿದ್ದಾನೆ.

ನಿನ್ನ ಅಱಿದವರೊಳು ಮಾತನಾಡು
ನಿನ್ನ ಮಱೆದರೊಳಗಿಹುದೇನು ಪಾಡು
ನಿನ್ನ ನೀನಱಿದು ನೀಲಗ್ರೀವಾ ನೋಡು
ನಿನ್ನ ಮೂರ್ತಿಗೆ ಎನ್ನ ಹೃದಯ ತಾ ಬೀಡು (೩-೩೯-೩)

ತನ್ನ ತಾನರಿದಡೆ ಅದೇ ಗುರು, ಹರ ಎನ್ನುವುದನ್ನು

ತನ್ನ ಮಱೆಯೆ ತಾನೆ ಕಾವ ಆತ್ಮ
ತನ್ನನಱಿದರೆ ತಾನೆ ಮಹಾದೇವ (೩-೪೧ ಪಲ್ಲ)

ಎಂಬ ಉಕ್ತಿಯಿಂದ ಶ್ರುತಪಡಿಸಿದ್ದಾನೆ.

ಸಂಸಾರವನ್ನು ಲೌಕಿಕದತ್ತ ಒಯ್ಯದೆ ಪಾರಮಾರ್ಥಿಕದತ್ತ ಕರೆದೊಯ್ದರೆ ಮುಕ್ತಿ ಸಾಧನೆಗೆ ದಾರಿಯಾಗುತ್ತದೆ. ಸಂಸಾರದಲ್ಲಿದ್ದರೂ ನೀರಿನಲ್ಲಿರುವ ತಾವರೆಯಂತೆ ಅಂಟಿಯೂ ಅಂಟದಂತೆ ಇರಬೇಕು.

ಪರಮ ಸಂಜ್ಞಾನ ಶಾಂತಿಯೆ ತಂದೆ ತಾಯಿ ಸಹೋ
ದರರೆ ನಿನಗೆ ಸೈರಣೆ ಸಮತೆಗಳು
ಪರಸತಿ ನಿನ್ನ ಚಿತ್ತವೆ ತಾನೆಯಾಗಿದೆ (೩-೫೫-೧)
ಪಿರಿದಹ ಸುಗುಣವೆಲ್ಲವು ಸಂಗುಣಾತ್ಮಾ

ಜ್ಞಾನ ಶಾಂತಿಗಳೇ ತಂದೆ ತಾಯಿ, ಸೈರಣೆ ಸಮತೆಗಳೇ ಸಹೋದರರು, ಸುಚಿತ್ತ ಸತಿ ಹೀಗೆ ಬಾಳಬೇಕು. ಇದು ಸಂಸಾರದಲ್ಲಿನ ಒಂದು ಮುಖ. ಸಂಸಾರವೆನ್ನುವುದರಲ್ಲಿ ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವಿರುತ್ತದೆ.

ಬೆಟ್ಟದನಿತು ದುಃಖಗಳನುಂಡು ಜೀವರು
ಬೊಟ್ಟನನಿತು ಸುಖದೋಱಿ ಮೆಱೆವರು (೩-೮೮-೩)

ಅನುಕೂಲವಿಲ್ಲದವಳ ಜೊತೆಯಲ್ಲಿ ಬಾಳುವುದರಿಂದಾಗುವ ಅನಾನುಕೂಲಗಳು ಹೀಗಿರುತ್ತವೆ:

ಅನುಕೂಲವಿಲ್ಲದಂಗನೆಯೊಳು ಬಾಳುವ
ಮನುಜಗೇತಕೆ ಬೇಱೆ ವ್ಯಾಧಿಗಳಾತ್ಮಾ
ಹಿತವಾದ ಮಾತನಾಡಿದರೆ ಅದನಱಿಯದೆ
ಖತಿಗೊಂಡು ಮುನಿದು ಮತ್ಸರಿಸುತ ಕೂಡೆ
ಪತಿಯಿದಿರಿಗೆ ಕೆಟ್ಟುತ್ತರಗಳ ಕೊಡುವ
ಸತಿಯಿಂದ ಬಿಟ್ಟ ಮೃತ್ಯುಗಳುಂಟೆಯಾತ್ಮಾ (೩-೯೨-ಪಲ್ಲ ೧)

ಆದರೆ ಸತಿಯು ಪತಿಯೊಡನೆ ಸಹಬಾಳ್ವೆ ಮಾಡಿದರೆ ಅಂದರೆ ಪತಿಯ ಹಿತವೇ ತನ್ನ ಹಿತವೆಂದು ತಿಳಿದಾಗ ಆ ಸತಿ ಮೋಕ್ಷಾಂಗನೆಯೆನಿಸುತ್ತಾಳೆ—

ಪತಿಯು ದೇಹವೆ ತನ್ನ ದೇಹವಾ ಸುಖದುಃಖ
ಪತಿಯಿಂದ ಬರಲು ತನ್ನವೆಯೆಂದು ತಿಳಿದು
ಪತಿಯೆ ತನಗೆ ನೀಲಗ್ರೀವನೆಂದಱಿದಿಹ
ಸತಿಯೆ ಸಾಕ್ಷಾತ ಮೋಕ್ಷಾಂಗನೆಯಾತ್ಮಾ. (೩–೯೨–೩)

ಶರಣನಾದವನಿಗೆ ಗುರು ಲಿಂಗ ಜಂಗಮರು ಎಷ್ಟು ಆವಶ್ಯಕ ಎಂಬುದನ್ನು ಈ ಪದ್ಯದಲ್ಲಿ ಕವಿಯು ಗುರುತಿಸಿದ್ದಾನೆ.

ತನುವಡಗುವನಕ ಗುರುವಾಜ್ಞೆಯಿಡಿದಿರಬೇಕು
ಮನವಡಗುವನಕ ಲಿಂಗದ ಪೂಜೆ ಬೇಕು
ಧನವಡಗುವನಕ ಜಂಗಮಕೆ ಸವೆಯಲು ಬೇಕು
ಘನವಮುಟ್ಟಿ ಹೀಗೆ ಹೊಱಗೆಱಿಯದಣ್ಣಾ (೩–೬೭–೨)

ಯಾವ ಹೊತ್ತಿನಲ್ಲೂ ಶಿವಧ್ಯಾನವನ್ನು ಬಿಡಬಾರದು. ಆಮಿಷವನ್ನು ಬಿಟ್ಟವನಿಗೆ ಶಿವದರ್ಶನ ಬಹಳ ಸುಲಭ. ಶಿವನನ್ನು ಕುರಿತು ನೀನೆ ಗತಿ, ನೀನೆ ಮತಿ ಎಂದು ದೀನನಾಗಿ ಹುಯ್ಯಲಿಡುತ್ತಿದ್ದರೂ ಆತನಲ್ಲಿ 'ಏನೂ ಯಾಚಿಸುವುದಿಲ್ಲ' ಎಂಬ ಆಶಾ ರಾಹಿತ್ಯ ಭಾವವಿದೆ. ಹೀಗಾಗಿ

'ನಾನೇನ ಬೇಡುವನಲ್ಲ ದೇವಾ
ನೀನೇನ ಎನಗೆ ಕೊಡುವನಲ್ಲಾ'

ಎಂದು ಹೇಳಿದರೂ

'ನೆಲೆಗೊಳಿಸೆನ್ನ ಮನವ ನಿಮ್ಮಂಘ್ರಿಯೊಳು
......ವರರುದ್ರ ಪದಗಳೆಲ್ಲವನು ಇತ್ತವನನ್ನ
ಹರಿವ ಮನವ ನಿಮ್ಮ ಪದದೊಳಿಟ್ಟರೆ ಸಾಕು (೩–೧೫೮ ಪಲ್ಲ, ೧)

ಎಂದು ಮನೋನಿರತ ಶಕ್ತಿಯನ್ನು ಕೃಪೆಮಾಡೆಂದು ಪ್ರಾರ್ಥಿಸುತ್ತಾನೆ.

ಒಡಲಿಗೆ ಮನೆಗೆ ಚಿಂತಿಸುವ ಚಿಂತೆಯು ವಾತ ಒದವಿತಲ್ಲಾ ..
ಬಿಡದಹಂಕಾರ ಮೂಲೋರೋಗ ಮುಂದೆಡೆಗೊಂಡಿತಲ್ಲಾ...

ನಿಲ್ಲದಾಶಾಪಾಶವೆಂಬುದೊಂದತಿಸಾರವಾದುದಲ್ಲಾ
ತಲ್ಲಣಿಸುವ ತಾಪತ್ರಯ ಉಷ್ಣಜ್ವರವೂ ಹಾಕಾದವಲ್ಲಾ
ಒಡಲುಗೊಂಡಾಶಾಪಾಶವು ತೊಲಗಿದ ಮೇಲೆ
ಬಿಡದತಿಸಾರ ಬಿಟ್ಟಿತು ಮಹಾದೇವಾ—
ಮೂಲಹಂಕಾರ ಮುನ್ನಳಿದು ನೀನಳಿದಾಗ
ತೇಲಿತು ಮೂಲವ್ಯಾಧಿಯು ಮುದುಗೆಟ್ಟು (೩—೧೦೩, ೧೦೪)

ಹೀಗೆ ದುರ್ಗುಣಗಳೆಂಬ ರೋಗಗಳಿಂದ ಮುಕ್ತನಾಗಲು ಯಾಚಿಸುತ್ತಾನೆ.

ಶರಣರಿಗೆ ಗುರು ಲಿಂಗ ಜಂಗಮರು ಎಷ್ಟು ಮುಖ್ಯರೋ ಪಂಚಾಕ್ಷರೀಮಂತ್ರವು ಅಷ್ಟೇ ಪವಿತ್ರ.

ಎನ್ನ ಮನಸಿಗೇನೂ ಬಾರದು ಬೇಱೊಂದು
ನಿನ್ನ ನಾಮಾಕ್ಷರವೈದಾಱಿಲ್ಲ ದೇವಾ (೩–೧೦೮ ಪಲ್ಲ)

ತನ್ನ ಮನಸ್ಸು ಇತರ ಕಡೆಗೆ ಹರಿಯದಂತೆ ಸ್ಥಿಮಿತದಲ್ಲಿಡುವ ಸಾಧನವೇ ಈ ಮಂತ್ರ. ಈ ಮಂತ್ರೋಚ್ಚಾರಣೆಯಿಂದ ಮನಸಿಜಾರಿಯ ಪುಣ್ಯಪಾದವನ್ನು ಪಡೆಯುವುದರಲ್ಲಿ ಸಂಶಯವಿಲ್ಲವೆಂಬುದು ಕವಿಯ ದೃಢನಂಬಿಕೆಯಾಗಿದೆ.

ಪದ್ಧತಿ ೪: ಕೃತಿಯಲ್ಲಿನ ಕೊನೆಯ ಪದ್ಧತಿಯಾಗಿದ್ದು ಇಲ್ಲಿ ಬರುವ ವಚನಗಳು ಸ್ವಲ್ಪ ಪ್ರೌಢವಾಗಿದ್ದೂ ೮೧ ಸ್ವರವಚನಗಳನ್ನೊಳಗೊಂಡಿದೆ. ಮನುಷ್ಯನು ಈ ಲೋಕದಲ್ಲಿ ಹುಟ್ಟುವುದು ಸಹಜ, ಸಾಮಾನ್ಯ; ಆದರೆ ಈ ನರದೇಹದಿಂದಲೆ ಮುಕ್ತಿ ಪಡೆಯುವುದೂ ಸಾಧ್ಯ. ಅದಕ್ಕಾಗಿ ಕವಿಯು ಹೀಗೆ ಪರಿತಾಪ ಪಡುತ್ತಾನೆ:

ಅಯ್ಯೋ ಈ ನಾಡಿಗೆ ಅಱಿಯದೆಱಗಿ ಬಂದೆ
ಕಯ್ಯ ಬಿಡದೆ ಕಡೆಮಾಡೆನ್ನ ತಂದೆ
ಒಂದೂರಿಗೊಂಬತ್ತು ಬಾಗಿಲಾಗಿವೆ ನೋಡೆ
ಒಂದರ ಹಾದಿ ಒಂದಕೆ ಕಾಣದೆ
ಬಂದು ಹೋಗುವ ನರನು ಬೋಧಿಸುವರಾರು
ಮಂದಿಯ ಕಾಟ ಮಾಣಿಸುವ ಜೂಟಾ (೪–೩ಪಲ್ಲ, ೧)

ಎಂಬುದಾಗಿ ದೇಹದ ರಚನೆ ಹಾಗೂ ಅದರಿಂದಾಗುವ ಹಾನಿಗಳನ್ನು ಪರಿಹರಿಸಲು ಹರನನ್ನು ಪ್ರಾರ್ಥಿಸುತ್ತಾನೆ.

ಒಡಲೆಂಬ ಹುತ್ತಿನೊಳಡಗಿಕೊಂಡಿಹ ಸರ್ಪ
ಕಡೆಗೆನ್ನವಿಡಿದು ಮೂವಿಧಿಗಾಣಿಸಿ
ಅಡಸಿ ರುಜಿನದ ಕಡಲೊಳಿಹನ ಕಯ್ಯ
ಪಿಡಿದೆತ್ತು ಬೇಗ ಗುರುನೀಲಗ್ರೀವಾ (೪–೫–೩)

ಈ ಶರೀರ ಶಾಶ್ವತವಲ್ಲ. ಇದರಲ್ಲಿ ಸಿಗುವ ಸುಖ ಬಹು ಅಲ್ಪ. ಅಲ್ಪಸುಖಕ್ಕೆ ಅತಿ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಇದನ್ನು ನಂಬಬಾರದೆಂದು

ಹೇಳುತ್ತಾ ಹರನನ್ನು ಕುರಿತು ತನ್ನನ್ನು ಈ ಭವಸಾಗರದಿಂದ ಮೇಲೆತ್ತಲು ಮೊರೆಯಿಡುತ್ತಾನೆ; ಆದರೆ ಸ್ವಪ್ರಯತ್ನವೂ ಮುಖ್ಯ. ಮನಸ್ಸನ್ನು ಆತ್ಮೋದ್ಧಾರದ ಕಡೆ ಗೊಯ್ಯಬೇಕು. ಆತ್ಮ ಮತ್ತು ಪರಮಾತ್ಮಗಳ ಸಂಯೋಗದಿಂದ ಆನಂದೋತ್ಪತ್ತಿಯಾಗುತ್ತದೆ. ಬರೀ ಸುಖಲೋಲುಪ್ತತೆಯಲ್ಲಿ ಕಾಲ ಸವೆಸದೆ ಸಿದ್ಧಿಯ ಕಡೆಗೆ ಮನಗೊಡಬೇಕು.

ಕ್ಷಣಭಂಗುರದ ಬಾಳಿನ ದೇಹವೆಂಬುದ
ನೆನೆಸದೆ ಹಲಜನ್ಮಕೆ ಬಿದ್ದು ಹೋಹ
ಘನವನಳಿಸಿ ಘಮ್ಮನೆ ಮಹಾ ಮೋಕ್ಷವ
ತ್ರಿಣೆಯ ಪಾಲಿಸು ಬೇಗ ಗುರುನೀಲಗ್ರೀವಾ (೪-೨೬-೩)

ತನ್ನನ್ನು ಭವದ ತಟಾಕದಿಂದ ಮೇಲೆತ್ತಿ ದಡಕ್ಕೆ ಸೇರಿಸುವಂತೆ ಹರನನ್ನು ಪ್ರಾರ್ಥಿಸುತ್ತಾ ಭವಿಗಳಿಗೆ ಕಿವಿಮಾತೊಂದನ್ನು ಹೇಳುತ್ತಾನೆ;

ಹಾಲುಳ್ಳ ದಿನದಿ ಹಬ್ಬವ ಮಾಡದೆ
ಆಲಸ್ಯವನು ಮಾಡಲಮೃತ ವಿಷವಣ್ಣಾ (೪–೨೮ ಪಲ್ಲ)

ಹೊತ್ತು ಹೋಕ ಮಾಡಬೇಡ ಸತ್ತು ಹುಟ್ಟುವ ಕರ್ಮದ ಬೀಡ
ಒತ್ತಿ ಮುಚ್ಚಿದು ಒಳಗ ತಿಳಿಯೆ ನಿತ್ಯ ನಿರ್ಮಳು ತೋಱುವ
ವಸ್ತು ಸದ್ಗುರು ನೀಲಗ್ರೀವನ ಭಕ್ತಿವಿಡಿದು ಭಜಿಸಿ ಬಿಡದೆ
ಮುಕ್ತಿಪಥವು ದೊರೆವುದೀಗ ಸತ್ಯವಿದಕೊ ಸಾರಿದೆ (೪–೩೧–೩)

ಮನಸ್ಸನ್ನು ಒಂದೆಡೆ ನೆಲಸಿರಬೇಕಾದರೆ ಧ್ಯಾನ, ಭಕ್ತಿ, ಮನುಷ್ಯನಿಗೆ ಅತ್ಯವಶ್ಯಕ. ಭಕ್ತಿಯನ್ನು ಬಿಟ್ಟವನು ಮುಕ್ತಿಯನ್ನು ಪಡೆಯಲು ಅರ್ಹನಾಗುವುದಿಲ್ಲ. ಅರಿಷಡ್ವರ್ಗ, ಮಲತ್ರಯ, ಮಾಯೆಗಳನ್ನು ಸುಲಭವಾಗಿ ಭಕ್ತಿಯಿಂದ ಗೆದ್ದ ಬಳಿಕ, ಉಂಬುವ ಉಡುವ ಚಿಂತೆ ಬಿಟ್ಟುಹೋಗುತ್ತದೆ. ಕೊಂಬುವ ಕೊಡುವ ಕಷ್ಟವು ಕಡೆಯಾಗುತ್ತದೆ. ಮನಕ್ಕೆ ಆವರಿಸಿದ ಕಪಟಕರ್ಮವು ಮಾಯವಾಗುತ್ತದೆ. ಈಶ್ವರನ ಹಂಬಲದಿಂದ ಎಲ್ಲವೂ ಮರೆತುಹೋಗುತ್ತದೆ. ಭಕ್ತಿಯಿಂದಲೇ ಶಿವನಿಗೆ ಶರಣಾಗುವ ಭವಿ ಹೀಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ.

ಹಲವು ಜನ್ಮದಲ್ಲಿ ಬಂದು ನೊಂದೆನಯ್ಯ ಇದ
ಹೊಲಬುದಪ್ಪಿಸಿ ಹೋಗಲಾಡಿಸಯ್ಯ
ಒಲಿದು ಕೈವಿಡಿದೊಡಗೂಡಯ್ಯ ಎನ್ನ
ಸಲಹಿಕೋ ಗುರುನೀಲಗ್ರೀವಯ್ಯಾ (೪–೫೪–೩)

ಕವಿಗೆ ಸ್ತ್ರೀಯರ ಬಗೆಗೆ ಉದಾತ್ತಭಾವನೆ ಇದೆ. ಆಕೆಯ ನಾನಾ ರೂಪವನ್ನು ವರ್ಣಿಸುವ ಚಾಣಾಕ್ಷೆಯನ್ನು ಗಮನಿಸಬೇಕು. ಅಲ್ಲದೆ ಅವನು ನೀಡುವ ವಿವರವೂ ತರ್ಕಬದ್ಧವಾಗಿಯೇ ಇದೆ. ಹೆಣ್ಣು ಯಾವ ಯಾವ ರೂಪ ಧರಿಸಿಯಾಳು ಎಂಬುದನ್ನು ಅರ್ಥ ಮಾಡಿಕೊಂಡರೆ ಎಂಥವರಿಗಾದರೂ ಆವಳ ಬಗ್ಗೆ ಪೂಜ್ಯಭಾವನೆ ಬಾರದಿರದು.

ತಾಯ ಕಂಡೆನು ಎನ್ನ ಪೊರೆವಾ ಉ
ಪಾಯದಿಂದೆನ್ನ ತನ್ನೊಳಗಿಟ್ಟು ನೆರೆವಾ
ತಂದೆಗೆ ವಧುವಾಗಿ ಬಂದು ಸಲೆ
ಸಂದು ಮಗನಿಗೆ ಮಾನಿನಿಯಾಗಿ ನಿಂದು
ಮುಂದೆ ಮೋಕ್ಷವನೀವರೆಂದು ಸಲೆ
ಸಂದು ಜನನಿಯಾಗಿ ಸಲಹುವಳಿಂದು (೪–೪೭ ಪಲ್ಲ, ೧)

ತನ್ನ ಸ್ವರವಚನಗಳಲ್ಲಿ ವಚನಸಾಹಿತ್ಯವನ್ನು ಕೀರ್ತಿಶಿಖರಕ್ಕೇರಿಸಿದ ಬಸವೇಶ್ವರರನ್ನು ಸ್ಮರಿಸುವುದನ್ನು ಮರೆತಿಲ್ಲ.

ಬಸವ ಬಸವನೆಂಬ ಹೆಸರಿನ ಬರಿಸೆಲೆಯಲ್ಲ ಕಾಣಿರೋ ನಾನಾ
ವಿಸಂಕ ವಿಸಂಕಲಿಲ್ಲ ಎರಡಕೆ ವಿಂಗೆ ಕರ್ತೃ ಬಸವ ಕಾಣಿರೋ
ಬಸವನನರಿದು ಭಜಿಸೆ ಬಂಧನವಿಲ್ಲ ಕಾಣಿರೋ ನಮ್ಮ
ಬಸವ ದೂರದಲಿಲ್ಲ ನಿಮ್ಮೊಳು ಗುಟ್ಟೆಂದು ತಿಳಿದು ನೋಡಿರೋ
ಬಸವನ ಖಂಡನ ಖಂಡಿತನೆಂದೆನಬೇಡ ಕಾಣಿರೋ ಘನ
ಬಸವನೆ ಗುರುನೀಲಗ್ರೀವನೆಂಬುದ ನೀವು ಕಂಡು ಬಾಳಿರೋ
(೪–೫೫ ಪಲ್ಲ, ೩)

ಶರಣನಾದವನು ಹರಪೂಜೆಯನ್ನು ಪ್ರತಿನಿತ್ಯವೂ ಮಾಡಬೇಕು. ಅದು ಆತನಿಗೇ ಶ್ರೇಯಸ್ಕರ ಹಾಗೂ ನೆಮ್ಮದಿ ತಂದುಕೊಡುತ್ತದೆ.

ಹರನ ಪೂಜೆಯನ್ನು ಮಾಡಿರಣ್ಣಾ ಕಷ್ಟ
ದುರಿತ ಕಾಲನ ಬೇಕಾದರಣ್ಣಾ— (೪–೬೬ ಪಲ್ಲ)

ಆದರೆ ಕವಿಯು ಇನ್ನೂ ಮುಂದುವರೆದು ತನ್ನ ದೇಹವೇ ದೇವಾಲಯವಾದುದರಿಂದ ಎಲ್ಲೆಲ್ಲಿಯೋ ದೇವರನ್ನು ಹುಡುಕುತ್ತಾ ಹೋಗುವುದು ಮೂರ್ಖತನವೆಂದೂ ಸ್ಪಷ್ಟ ಪಡಿಸಿದ್ದಾನೆ.

ದೇವಾಲಯದೊಳಗಿಹ ದೇವನನರಿಯದ
ಗಾವಿಲ ನರರ ಕರ್ಮವ ನೋಡುವ ದೇವಾ
ತನುವೆಂಬುದೊಂದು ದೇಗುಲದೊಳಗಿರುತಿಹ
ಮನವೆಂಬ ಲಿಂಗವ ಮಚ್ಚಿ ಮನ್ನಿಸದೆ
ಕಾತರದಿಂದ ಕರೆಯಲುಂಟೆಂದೆಂಬಾ
ಮನುಜರ ಮರುಳುತನವನು ನೋಡು ದೇವಾ (೪–೬೭ ಪಲ್ಲ, ೧)

ಆದುದರಿಂದ

ಜಂಗಮವೆ ಇಷ್ಟಲಿಂಗ ಕಾಣಿರೋ
ಜಂಗಮವೆ ಪ್ರಾಣಲಿಂಗ ಕಾಣಿರೋ

ಜಂಗಮವೆ ಮಹಾಲಿಂಗ ಕಾಣಿರೋ ಮಿಕ್ಕ
ಜಂಗುಳಿದೈವದ ಸಂಗ ಭಂಗ ಕಾಣಿರೋ (೪–೭೫ ಪಲ್ಲ)

ಎಂದು ಜಂಗಮದ ಮಹತ್ವವನ್ನು ತಿಳಿಸುತ್ತಾನೆ.

ಹೀಗೆ ನೀಲಗ್ರೀವ ಕವಿಯು ತನ್ನ ೨೯೮ ಸ್ವರವಚನಗಳಲ್ಲಿ ಭಕ್ತಿ, ಧರ್ಮ, ನೀತಿ, ಸಂಸಾರ, ವೈರಾಗ್ಯ, ಗುರು, ಲಿಂಗ, ಜಂಗಮ, ಕಾಯಕ ಇನ್ನೂ ಅನೇಕ ವಿಷಯಗಳನ್ನು ವಿವರಿಸುತ್ತಾನೆ. ಒಂದು ಕಡೆ ದೇಹವೇ ದೇಗುಲವೆನ್ನುತ್ತಾನೆ. ಇನ್ನೊಂದು ಸಾರಿ ಗುರು ಲಿಂಗ ಜಂಗಮರಿಗಿಂತ ಬೇರೆ ದೈವವಿಲ್ಲವೆನ್ನುತ್ತಾನೆ. ಸಂಸಾರದಲ್ಲಿ ಎಷ್ಟು ಅನಿಷ್ಟ ಗಳಿವೆ, ಆದರಿಂದ ಹೇಗೆ ಹಾಳಾಗುತ್ತಾರೆ ಎಂಬುದನ್ನು ತಿಳಿಸುತ್ತಾನೆ. ಒಟ್ಟಿನಲ್ಲಿ ಈ ಲೋಕದಲ್ಲಿ ಜನಿಸಿದ ಜೀವಿಯು ಮುಕ್ತಿಯನ್ನು ಪಡೆವ ನಾನಾ ಮಾರ್ಗಗಳನ್ನು ವಿವರಿಸಿದ್ದಾನೆ.

ಈ ಕೃತಿಯ ಪದ್ಧತಿ ೩ರ ೧೩೭ನೆಯ ಸ್ವರವಚನದಲ್ಲಿ ಈಶ್ವರನನ್ನು ವರ್ಣಿಸುವುದರ ಮೂಲಕ ಅನೇಕ ದೃಷ್ಟಾಂತಗಳು ಉಲ್ಲೇಖವಾಗಿವೆ. ಈ ವಚನದಲ್ಲಿ ಬರುವ ಪದಪ್ರಯೋಗಗಳೇ ಪೂರ್ವಕಥೆಗಳ ಸೂಚನೆಗಳಂತಿವೆ.—ಪಂಚವದನ, ತ್ರಿನೇತ್ರ, ದಶ ಭುಜ, ಶಿರಮಾಲೆ, ಶಿರದ ಗಂಗೆ, ಕರದೊಳು ತಲೆಯೋಡು, ತ್ರಿಶೂಲಧಟ, ಮೇಲೆ ಶ್ರುವದೆ, ಪೊದ್ದಿಹ ಪುಲಿ ಚರ್ಮ, ಪುಷ್ಪಾಯುಧ, ಫಲುಗುಣ, ಕರ್ಣ, ಭರತೇಶ... ಹೀಗೆಯೇ ೧-೨೬-೧, ೩-೧೩೧-ಪಲ್ಲ—ಇತ್ಯಾದಿ.

ಗ್ರಂಥದ ನಾಲ್ಕು ಪದ್ಧತಿಗಳಲ್ಲಿ ವಿವರವಾಗಿಯೇ ವೀರಶೈವತತ್ತ್ವವನ್ನು ಲೀಲಾಜಾಲವಾಗಿ ದೃಷ್ಟಾಂತಗಳ, ಲೋಕೋಕ್ತಿಗಳ ಮೂಲಕ ಸಂದರ್ಭಾನುಸಾರ ಮನ ಮುಟ್ಟುವಂತೆ ವಿವರಿಸಿರುವುದನ್ನು ಮನಗಾಣಬಹುದು.

—ಹಗಲೇ ಬಿದ್ದಳು ಇರುಳೆ ಕಂಡ ಕುಣಿಯಾ
(ಹೋಲಿಸಿ : ಇರುಳು ಕಂಡ ಬಾವಿಗೆ ಹಗಲು ಬಿದ್ದಂತೆ—ಎಂಬ ಗಾದೆಯಂತೆ)
—ಮುಂಗೈಯ ಕಂಕಣಕೆ ಮುಕುರ ತಾ ಬೇಕೆ
(ಅಂಗೈಯ್ಯ ಹುಣ್ಣಿಗೆ ಕನ್ನಡಿ ಬೇಕೆ)
—ಕಂಡ ಮಾತನಾಡುವದೆ ಕಷ್ಟ ಕಂಡ ಹಾಗಾಡುತಿಹೆ ನರರಿಗೆಂತೋ
(ಕಂಡದ್ದನ್ನು ಕಂಡ ಹಾಗೆ ಹೇಳಿದ್ರೆ ಕೆಂಡದಂತಹ ಕೋಪ)
—ಬೆಟ್ಟದನಿತು ದುಃಖಗಳನುಂಡು ಜೀವರು
ಬೊಟ್ಟಿನನಿತು ಸುಖದೋಟಿ ಮೆಟಿವರು
(ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ)
—ಇಂದಿಗೆ ನಾಳಿಗೆಂದು ಇರದೆ ನೀ
ಸಂದೇಹಿಸುವದ ಬಿಟ್ಟು
ಬಂದುದನ್ನನುಭವಿಸಂತ ಬಾರದುದ ಬಗೆ
ಇರದು ಬಯಸದಿಹುದು
(ಇಂದು ನಾಳೆಗೆ ಎಂದು ತಂದು ಕೂಡಿಡಬೇಡ—ಎಂಬ ಸರ್ವಜ್ಞನ ವಚನ)

—ಮೇಲೇನು, ಹಾಲುಂಡು ಮೇಲುಂಬುದೆ
(ಹಾಲುಂಡು ಮೇಲುಂಬರೆ)—ಇತ್ಯಾದಿ.

ಛಂದಸ್ಸು : ಈ ಗ್ರಂಥದಲ್ಲಿರುವ ಹಾಡುಗಳು ಅಥವಾ ಸ್ವರವಚನಗಳು ವಿವಿಧ ರೀತಿಯ ರಾಗಗಳನ್ನು ಹೊಂದಿರುವುದನ್ನು ಗಮನಿಸಬಹುದಾಗಿದೆ. ಇವಕ್ಕೂ ಒಂದು ವಿಶಿಷ್ಟವಾದ ಛಂದಸ್ಸಿದೆ ಎಂಬುದನ್ನು ವಿವರವಾಗಿ ಡಾ. ಎಲ್. ಬಸವರಾಜು ಅವರು ಸಮರ್ಥವಾಗಿ ಸಂಪಾದಿಸಿರುವ 'ಶಿವದಾಸ ಗೀತಾಂಜಲಿ'ಯಲ್ಲಿನ ಅನುಬಂಧದ 'ರಾಗ ಲಕ್ಷಣಗಳು' ಎಂಬ ಶೀರ್ಷಿಕೆಯ ಭಾಗವನ್ನು ಅವಲೋಕಿಸಬಹುದು. ಗ್ರಂಥದಲ್ಲಿರುವ ಬಹಳಷ್ಟು ಹಾಡುಗಳು ಪಲ್ಲವಿ ೨ ಪಂಕ್ತಿಗಳು ಅನಂತರ ೪ ಪಾದಗಳ ೩ ಪದಗಳು ನಿಯತವಾಗಿ ಬರುತ್ತವೆ; ಅಂದರೆ ಒಟ್ಟು ೧೪ ಪಂಕ್ತಿಗಳಾಗುತ್ತವೆ. ಇದು ಇಂಗ್ಲೀಷಿನ ಸಾನೆಟ್ಟಿನಂತೆ ಅಂದರೆ ಅಷ್ಟಷಟ್ಪದಿ ಎಂದು ಗುರುತಿಸಬಹುದು. ಇಂತಹ ಹಾಡುಗಳು ಬಸವಣ್ಣನಿಗಿಂತ ಹಿಂದೆಯೇ ಪ್ರಚಲಿತವಾಗಿದ್ದುದರಿಂದ ಇದು ಪ್ರಾಚೀನ ಪ್ರಯೋಗವೆಂದು ಮನದಟ್ಟಾಗುತ್ತದೆ. ಮುಂದೆ ದಾಸಸಾಹಿತ್ಯದಲ್ಲಿನ ಕೀರ್ತನೆಗಳು ಹೀಗೆಯೇ ರೂಪಗೊಂಡು ಹೊರಬಂದಿವೆ.

* * *

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಯೋಜನೆಗಾಗಿ ಸಿದ್ಧಪಡಿಸಿದ ಈ ಸಂಪಾದಿತ ಕೃತಿಗೆ ಮೂಲ ಆಕರ—ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, (ಮೈಸೂರು) ಹಸ್ತಪ್ರತಿ ವಿಭಾಗದಲ್ಲಿರುವ ನೀಲಗ್ರೀವನ ವಚನಗಳು ಎಂಬ ಕೆ. ೫೮೪ನೆಯ ನಂಬರಿನ ಏಕೈಕ ಹಸ್ತಪ್ರತಿ. ಇದರಲ್ಲಿ ೧–೬೪ ಪತ್ರಗಳಿವೆ. ಪ್ರತಿ ಪತ್ರದ ಒಂದು ಪಾರ್ಶ್ವದಲ್ಲಿ ೯–೧೦ ಪಂಕ್ತಿಗಳೂ ಪ್ರತಿ ಪಂಕ್ತಿಯಲ್ಲಿ ಸರಾಸರಿ ೬೪ ಅಕ್ಷರಗಳೂ ಇವೆ. ಉದ್ದ ೧೩.೮, ಅಗಲ ೧.೮ ಅಂಗುಲಗಳು. ಗ್ರಂಥದಲ್ಲಿ ಅಕ್ಷರಗಳು ಸುಂದರವಾಗಿವೆ. ಗ್ರಂಥಾರಂಭದ ಮೊದಲು 'ಶಿಕಾರೀಪುರದ ತಾಲ್ಲೂಕು ಸಾಲೂರಿನಲ್ಲಿರುವ ರು. ರಾ. ಬಂಗಾರಿಗೌಡರಿಂದ ಉಚಿತವಾಗಿ ಬಂದ ನೀಲಗ್ರೀವ ಸ್ಮರಣೆಯ ಶೃಂಗಾರನಾಂದ್ಯ' ಕಾಗದದಲ್ಲಿ ಬರೆದು ಓಲೆಗರಿಯ ಒಂದು ಪಕ್ಕದಲ್ಲಿ ಅಂಟಿಸಲಾಗಿದೆ. ಈ ವಿಶಿಷ್ಟ ಹಸ್ತಪ್ರತಿಯನ್ನು ಮೇಲ್ಕಂಡ ಯೋಜನೆಗಾಗಿ ಬಳಸಿಕೊಳ್ಳಲು ಅನುಮತಿಯನ್ನು ನೀಡಿದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಿಗೂ ಉಪನಿರ್ದೇಶಕರಿಗೂ ಅನಂತ ಕೃತಜ್ಞತೆಗಳು.

ಈ ಗ್ರಂಥ ಏಕೈಕ ಹಸ್ತಪ್ರತಿಯನ್ನಾಧರಿಸಿ ಪರಿಷ್ಕರಿಸಿದುದಾಗಿದೆ. ಮೇಲಾಗಿ ಸಂಗೀತದಲ್ಲಿ ಪ್ರಚಾರವಾಗುತ್ತಾ ಬಂದ ಕಾರಣ ಪಾಠಾಂತರ ಪ್ರಮಾಣ ಹೆಚ್ಚಿದಂತಿದೆ; ಪ್ರಸ್ತುತ ದೊರಕಿರುವ ಹಸ್ತಪ್ರತಿಯಲ್ಲಿ ಕಂಡೂ ಕಾಣದಂತೆ ನುಸುಳಿಕೊಂಡು ಸೇರ್ಪಡೆಯಾಗಿದೆ. ಹೀಗಾಗಿ ಇದರ ಪರಿಷ್ಕರಣ ತುಂಬಾ ಜಟಿಲ. ಕೆಲವು ವಚನಗಳು ಕವಿ ನೀಡಿರುವ ಶೀರ್ಷಿಕೆಯ ಅಡಿಯಲ್ಲಿ ಬರುವ ವಸ್ತುವಿಗೆ ಭಿನ್ನವಾಗಿವೆ. ಕೃತಿಯ ನಾಲ್ಕು ಭಾಗಗಳಲ್ಲಿ ಒಮ್ಮೆ ಪ್ರಕರಣವೆಂದೂ ಮತ್ತೊಮ್ಮೆ ಪದ್ಧತಿಯೆಂದೂ ವಿಭಿನ್ನವಾಗಿ ಕರೆದಿದ್ದಾನೆ; ಆದರೆ ಇಲ್ಲಿ ಎಲ್ಲಾ ಭಾಗಗಳನ್ನು 'ಪದ್ಧತಿ'ಯೆಂದೇ ಕರೆಯಲಾಗಿದೆ.

'ಮೂ' ಎಂಬ ಚಿಹ್ನೆಯು ಈಗ ಬಳಸಿಕೊಂಡಿರುವ ಏಕೈಕ ಮೂಲ ಹಸ್ತಪ್ರತಿಯನ್ನು ಸೂಚಿಸುತ್ತದೆ.

'ನೀಲಗ್ರೀವನ ವಚನಗಳು' ಎಂಬ ಅಪ್ರಕಟಿತ ಕೃತಿಯನ್ನು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ (ರಿ) ಜೆ. ಎಸ್. ಎಸ್. ಮಹಾವಿದ್ಯಾಪೀಠ ಮೈಸೂರು—ವತಿಯಿಂದ ಪ್ರಕಟಿಸುವ ಯೋಜನೆಯಲ್ಲಿ ನನಗೆ ಸಂಪಾದಿಸಲು ಅವಕಾಶವಿತ್ತು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟಗೊಳ್ಳಲು ಆಶೀರ್ವದಿಸಿದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರೀ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಮರ್ಪಿಸುತ್ತೇನೆ. ಈ ಕೆಲಸವನ್ನು ಸುಗಮವಾಗಿ ನಿರ್ವಹಿಸಿಕೊಡಲು ಕಾರಣಕರ್ತರಾಗಿದ್ದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರನ್ನು ಸ್ಮರಿಸುತ್ತೇನೆ. ಡಾ. ಎಂ. ಎಂ. ಕಲಬುರ್ಗಿಯವರು ಧಾರವಾಡದಿಂದ ಇಲ್ಲಿಗೆ ಆಗಾಗ್ಗೆ ಬಂದು ಪ್ರೋತ್ಸಾಹ ನೀಡಿದ್ದಾರೆ. ಶ್ರೀ ಜಿ. ಎಚ್. ಕೃಷ್ಣಮೂರ್ತಿಯವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಅವರಿಗೆ ನನ್ನ ಅನಂತ ವಂದನೆಗಳು.

ಮೈಸೂರು
೧೮-೬-೧೯೭೫

ಕೆ. ಆರ್. ಶೇಷಗಿರಿ

ನೀಲಗ್ರೀವನ ವಚನಗಳು

ಪದ್ಧತಿ: ಒಂದು

೧[ಶೃಂಗಾರ ಪದ]೧

೧

ವಾರ್ಧಕ ॥

ಶ್ರೀಕಾಂತನೇ ಬಾಣವಾಕುಸತಿವರ ತಾನು
ಲೋಕದೊಳಗುದಿಸಿ ತೋಱುವ ವೇದವಾಜಿರತಿ
ಯಾಕಾಂತನಂಗನೆಂದಖಿಳ ಶಾಸ್ತ್ರಗಳೊದಱಲೇಕವರ ತಾಳ್ದಿ ಬೇಱೆ
ಸ್ವೀಕರಿಸಿ ಹರಿಯುವತಿ ಶ್ರುತಿ ಶುನಿಗಳಸ್ಕರ
ನಾಕವಱಿಯಲು ಇಂದು ಮನಸಿಜನಯೆಂದುವಂ
ಗೀಕರಿಸಿ ಮೆಱೆವ ನೀಲಗ್ರೀವನುಮೆಯ ಮನೋಕಾಂತ ಸಲಹುಗೆಮ್ಮ ೧

೨

ರಾಗ : ದೇಶಿ

ಏನೆನ್ನಬಹುದಂಬುಜಮುಖಿಯೆನ್ನ ಪ್ರಿಯದಿರವಾ
ತಾನೆನಗೆ ಒಲಿದು ತರಳೆಯನೊರ್ವಳಿದಿರಿಡುವದೇನೆನ್ನಬಹುದು ॥ ಪಲ್ಲ ॥

ಒಲಿದಂತೆ ಹೃದಯವನು ವನಜಾಕ್ಷಿಯೆನಗವನು
ಸಲೆ ಲೇಸಿನಿಂದ ಸತ್ಕಲೆಯನಿರದೆ ನೆಲೆ
ಗೊಳಿಸಿ ವಿರಹವಂಕುರದೋಱಿಯಾತ್ಮೇಶ
ಗೆಲಹಿಸಿ ಪಾಲಿಟ್ಟ ಪುಳಿಯ ಕೈವಿಡಿದಿಹುದಾ ೧

ಮನದ ತಮವಱಿಯರೆಂಬುದು ಮಾನಿವೆಂಗಳಿಗೆ
ಇನಿತು ಪುಸಿಯಲ್ಲ ಎನ್ನೋಪನಿಂದಾ
ಎನಗಱಿಹಿತೀಗ ಎನ್ನಯ...
...ತದಿರುವ ನೀಲಕಂಠೇಶನೊಡನೆ...ಲೇ
ಸಿನಿರವೆಂಬ ಇನಿಗೋಲ...ಮಾಡಿದ ಪರಿಯಾ ೨

---

೧ 'ಶ್ರೀ ಗುರುಬಸವಲಿಂಗಾಯ ನಮಃ ॥ ಶ್ರೀ ಗುರು ನೀಲಗ್ರೀವಾಯ ನಮಃ ॥ ನಿರ್ವಿಘ್ನಮಸ್ತು' ನೀಲಗ್ರೀವನ ಸ್ಮರಣೆಯೂ ಶೃಂಗಾರನಾಂದ್ಯ ಷಟ್ಪದಿ (ಮೂಲ)

೩

ರಾಗ : ದೇಸಿ

ತರಳಾಕ್ಷಿಯರು ಎಂದು ತರುಣಿ ನೀ ತಿಳಿಯುವರ
ಪರಿಯನರುಹುವೆ ಪಾರವಾರ ಗಂಭೀರೆ ॥ ಪಲ್ಲ ॥

ಇನಿಯನಗಲಿರೆ ತಾಪವನಿತರ್ಗೊಳು ಪ್ರಿಯನಾ
ನನನೀಕ್ಷಿಸಲತಿ [1][ಪ್ರೀ][1]ತ್ಯದಿಂದಾ
ತನುಲತಿಭಯ ತೋರ್ಪಿಸನುಮಾನಿಸದಲವನ
ಮನದೊಳತಿ ಕನಲ್ವ ಮಾನದ ಸಂಚಲಾಕ್ಷಿಯರು ೧

ಮೊಗಕಮಲ ತಿರುಹಿ ಮೇಲುದನೊಯ್ಯನೋಸರಿಸಿ
ಮಗುಳಿ ಶಿರವಾಗಿ ನೆಲನನುಂಗುಟದಲ್ಲಿ
ಮಿಗೆ ಬರೆದು ಪೂರ್ವಿನಿಂ ಔರ್ವಕಟಾಕ್ಷಗಳ
ಬಗೆ ತರಳವೆರದು ಸ್ವೇದಾಂಬುವನಿ ಸೂಸುವರೂ ೨

ಈ ತೆರದಿ ಮುಗುದೆ ಮಧ್ಯೆಯರುಗಳ ಭಾವಧನು
ದಾತರ್ಗಿದು ಮೇಲೆ ಮತ್ತವರ ತರಳಾ
ನೇತ್ರೆಯರು ಎಂದು ನೇಮದಲಿ ಚೆನ್ನ ಪ್ರಾಣ
ನಾಥ ನೀಲಗ್ರೀವ ನೆಲೆ ಎಂದ ಯುವತಿಯರಾ ೩

೪

ರಾಗ : ಶಂಕರಾಭರಣ

ತರಳಾಕ್ಷಿ ಪೇಳಲೇನಾ ತಳುಹಿದೆನ್ನಿನಿಯನಾ
ಬರವ ಪಾರುವೆನೆಂತಾ ಬಾರನೆ ಕಾಂತಾ ॥ ಪಲ್ಲ ॥

ಕರೆಯಲವನು ನೀರೆ ಕಾತರಿಸಿದಳೆಂ
ದುಸಿರ್ಗೆ ಇಂತು ಬೇಗೆಯನಾಂತು
ಕರಗುವೆದೆಯಾಶ್ರಯ ಕರಿಕೊಂಡ ಬೆಳಲ್ಗಾಯಾ
ಪರಿಯಲಾಗಿರುವದ ಫಲವನಿತಾ ೧

ತರಣಿಯುದಯವೀಗೆ ತವೆ ಬೆಂದುತ್ಪಲವಾಗೆ
ದರಹಸಿತವನಾಂತುದಯವೆ ಬಿತ್ತು
ಇರುವನಲ್ಲ ಹೀಗೆ ಯುವತಿ ಬೆರೆವ ಬಗೆ
ಮೊರವಹಿಭೂಷಣನ ಮೋಹವನೇನಾ ೨

---

[1] ಹಿಂ (ಮೂ)

ಕುಸುಮಾಯುಧಾರಿಯೆಂದು ಕುಜುಹುವಡೆಯಂಲಂದು
ವಶವಾದ ಒಲವಿಂತು ಒಯ್ಯನೆ ಸಂತು
ಬಿಸಿಗಣ್ಣ ಒಸ್ನೂರ ಭವನೀಲಕಂಠೇಶ್ವರಾ
ಬೆಸುಗೆಯಾಗಿಹ ಪ್ರಾಣ ಬಿಂಕವ ಮಾಣಾ ೩

೫

ರಾಗ : ಕಲ್ಯಾಣ

ನಾನಾಡಲೇನು ನೀನು ಮಾಡಿದ ಮಾಟ
ವಾನೋಪ ಮಾತಿನಲಾನೂ ॥ ಪಲ್ಲ ॥

ಕನ್ನೆಪ್ರಾಯದೊಳೇಂ ಕರೆದು ರಸಿಕ ರನ್ನಾ
ಮನ್ನಿಸಿ ಮೋಹದಿ ಕೂಡಿ ಮನವ ನೋಡಿ
ಉನ್ನತ ನಂಬುಗೆಗೊಟ್ಟು ಛಿನ್ನ
ಭಿನ್ನವಾದ ಜೋಕೆ ಛಿದ್ರಗಳೇಕೆ ೧

ಗಾಳಿವೆಟ್ಟದು ಹೋಗಿ ಗರುವೆಯೊಳನುವಾಗಿ
ಸೀಳಿದ ನಖ ಹೊಯ್ಸಿ ಸೂಸುವ ಸುಯಿಲಾ
ಧಾಳಿದಗೂಡಿ ಒಗೆ ಧೈರ್ಯವಳಿದು ಹೀಗೆ
ಏಳಿಲಯೆಂನ್ನೊಡನಿಂತು ಎಂದಿಂದ ಬಂತು ೨

ಮಚ್ಚಿದ ಮಾನಿನಿ ಎಂದುಮೇಕು ನಿನಗೆ ಇಂದು
ಉಚ್ಚಿತವಲ್ಲವೊ ಪ್ರಿಯಾ ಉರದೆಡೆಯು
ಬೆಚ್ಚಂತೆ ಕೂಡಿರು ಇನ್ನು ಭೇದವಿಲ್ಲದೆ ನೀನು
ನಚ್ಚಿದ ಸತಿಯ ಲೇಸಾ ನೀಲಕಂಠೇಶಾ ೩

೬

ರಾಗ : ಶಂಕರಾಭರಣ

ವಶವಾದ ಇನಿಯನು ವಾಸಿದೋಱುವದೇನು
ಕುಶಲ ಕೋವಿದೆಯೆನ್ನಾ ಕೂಡ ಮೋಹನ್ನಾ ॥ ಪಲ್ಲ ॥

ಮನಸಿಜನೆಸುಗೆಯು ಮೊಳೆದೋಱುವ ವೇಳೆಯು
ತನುವಿನೋಪನು ಹೊಂದಿ ತಾವರೆಗಂಧಿ
ಇನಿವಾತಿನಿಂದಲೆನ್ನಾ ಇರದೆ ನೆರೆವ ರನ್ನಾ
ಮೊನೆದೋಱುವದು ಬಾಲೆ ಮಾತಿನ ಪಾಲೇ ೧

ಪುದುಗಿ ಎನ್ನೊಳು ಪ್ರಾಣಪುಸಿಯ ಮೇಕಿಲಿ ಜಾಣಾ
ಇದಿರುದೋಱುವದೇನು ಇಂದಿನ ತಾನು
ಸದರಗಂಡನೊ ಎನ್ನ ಸವಿಗೆಯಿನಿತೆ ತನ್ನ
ಹೃದಯು ಬಲ್ಲುದಕೇಕೆ ಹವಿನ್ಮಾಗಬೇಕೆ ೨

ತನ್ನವಳಾದ ಪ್ರೀಯೆಂದು...ಳ ಬುದ್ಧಿಯನಿಂದು
ಎನ್ನೊಳು ತೋಱಲದೇಕೆ ಏಣಾಕ್ಷಿ ಸಾಕೆ
ಬನ್ನೂರ ನೀಲಕಂಠೇಶ ಬಯುಸಿಯಿಹಳ ಲೇಸಾ
ಮನ್ನಿಸೆಂದು ನೀ ನೀ ವೇಳೆ ಮಾನಿನಿ ಹೇಳೆ ೩

೭

ರಾಗ: ಕಲ್ಯಾಣಿ

ಮಾನನಿಧಿಯೆ ಬಾರ ಮನದನ್ನ ಮತಿಸಾರ
ಏನು ಕಾರಣ ಎನ್ನ ಎದೆಗೆಡಿಸುವ ರನ್ನಾ ॥ ಪಲ್ಲ ॥

ಮಾದುಹೋದುದೊ ಮಹಾ ಮನದಕ್ಕಱಿನ ನೇಹಾ
ಬೀದಿವರಿದು ಚಿತ್ತ ಬಿಡದಲಸಿತೊ ಇತ್ತೋ ೧

ರತಿಸಮಯದ ಲೋಪ ರಾಜನಾಗಿರೆ ಶಾಪ
ವತಿರೇಕವರಿವಾಗ ಓರೆಯಾದೆನೆ ಈಗ ೨

ಗಿಳಿಯಲೀಯಳೆ ನೀಲಗ್ರೀವನೊಲಿದ ಮೇಲಾ
ತುಳುಹುವವನೆ ಕೂಡೆ ತಾ ಬಂದನದೆ ನೋಡೆ ೩

೮

ರಾಗ : ಮಾಳವಶ್ರೀ

ಸಾರೀಸರಸಲ್ಲಾ ಸಾರದೆ ಹಾಗೆ
ಮೇರೆಯಾಗಿರುಮೇಕುದೋಱದೆ ದೇವಾ ॥ ಪಲ್ಲ ॥

ವಾಗಿದ ಮನವತ್ತ ಮನದಲಸಿಕೆಯಿತ್ತ
ನೀಗಿದೆ ನಿಜವ ನಿನಗಿದೆ ದೇವಾ
ಬಾಗಿ ಶಿರವ ಬಳಿಕ ಸತಿ ನೆರೆ ಪ್ರಾಣ
ಹೋಗಿದೆ ಹೊಲಬ ನಾನಱದೆ ದೇವಾ ೧

ನೋಡಿದಡಿದಿರಾಗುವದೊಂದು ನೋಟಗ
ಳೋಡುವವಳೆಡೆಗೊಡನೆ ದೇವಾ
ಗೀಡು(?)ವಡೊಂದಡಿಯನು ನಿನ್ನಯ ಮೊಗ
ಬಾಡುವದೊಂದು ನೀ ಬಳಲಿದೆ ದೇವಾ ೨

ಬಿಚ್ಚಿದೆ ಬೀದಿವೆಣ್ಣಿನ ಕೂಡೆ ಎನ್ನಯ
ಮೆಚ್ಚಿದ ಮಾನದೊಬ್ಬುಳಿಯಾ ದೇವಾ
ರಚ್ಚೆಮಾಡುವ ಮಹಾರಾಜನಹುದು ಎಂದಂ
ನಿಚ್ಚಯಿಸಿದೆ ನೀನು ತೊಲಗು ದೇವಾ ೩

ಗಟ್ಟಿಸಿತು ಗರುವಿಕೆ ಗಾಟಿಕಾಱನೆ ಏಕೆ
ತಟ್ಟು ಮಿಟುಕದ ತೂಳುವೆನು ದೇವಾ
ನಟನೆಯ ನಾನಱಿಯೆನೆ ನನಗೇಕಿನ್ನೂ
ಕುಟಿಲವೆ ಕೂರ್ತು ತೋಱುವರೆ ದೇವಾ ೪

ಭೀತಿಯನಳಿದು ಬಿಸಜಮುಖಿಯಳಿಗೆ ಮ
ಹಾತಿಶಯದ ನಂಬುಗೆಯ ದೇವಾ
ಪ್ರೀತಿಯಿಂದೊಲಿದಿತ್ತು ಓರಿದು ನೀಲಗ್ರೀವಾ
ನಾ ತರುಣಿಯನವಗವಿಸೆ ದೇವಾ ೫

೬

ರಾಗ : ಭೈರವಿ

ಮಾತ ಮನ್ನಿಸಬಾರದೆ ಮಾನಿನಿ ಇನಿ
ವಾತಿನೊಳತಿ ಶಾರದೆ ನಿನ್ನ ಪ್ರಿಯಶಾ
ಪ್ರೀತಿಯಿಂದ್ಯೆತರೆ ಓರಿದಳಲಿಸುವರೇ ॥ ಪಲ್ಲ ॥

ತನುವಿಗಂಗಜ ಕೂಡೆ ತಾವರೆಬಾಣವ ಹೂಡೆ
ಮನದನ್ನನಿಗೆ ತಾಪ ಮಾಣದಿರ ಕೋಪ
ಜನರೊಳುಸುರಲಮ್ಮದೆ ವಿರಹದಿಂದಾ
ಇನಿಯ ಬಾರಲು ನೆಮ್ಮದೆ ಕುಮುದನೇತ್ರೆ
ಮುನಿದಿರುವುದು ಸಲ್ಲ ಮೂಕತೆಗವನಿಲ್ಲಾ ೧

ಸರಸಿಜಮುಖಿಯೆನ್ನಾ ಸಾರಿ ರಸಿಕರನ್ನಾ
ದರಹಸಿತದಲುಱ್ ದಾರಿದೆಗದ ಬೇಱ್
ಕರುಣವಾವುದೆ ಕಾದಲೆ ಕಾತರದೋಱ್
ತಿರುಗಿ ತೀರದೆ ಮೂದಲೆ ಎನ್ನಯ ಪುಣ್ಯ
ದೊರೆತನವವನಿಗೆ ದೊರೆದು ಬಂದರೆ ಮಿಗೆ ೨

ನೀಲಾಳಕಿಯೆ ಇತ್ತಾ ನಿನ್ನೋಪಗದೆ ಚಿತ್ತಾ
ಮೇಲಱಿಯದಲೊಂದ ಮೆಱೆದ ಗುಣದಿ ನೊಂದ
ಲೋಲಬಂದನು ಪಾ[1][ಲಿ][1]ಪಂದವ ಬಿಟ್ಟು
ಸೋಲವಾಗಿರು ಲಾಲಿಸೆ ಎಂದಿನ ಹಾಗೆ
ನೀಲಗ್ರೀವನ ರತಿ ನಿಜವನಱಿದು ಸತಿ ೩

೧೦

ರಾಗ : ಶಂಕರಾಭರಣ

ಮಱೆಯಲ್ಲ ಮಾನಿನಿ ಎಱೆಯ ತಾಳಳೊ ಏಳೋ
ಬಱಿದೆ ನುಡಿಯೆ ಭೂಪತಾಪಾ ॥ ಪಲ್ಲ ॥

ಹಂಬಲಿಸುವಳು ಹಾ ಎಂಬಳು ವಿಟನೆ ಬಾ
ಎಂಬಳು ವೃಷದುಂಬುವಳು
ನಂಬಳು ಉಪಚಾರಗೊಂಬಳುವೆಣ್ಣು ತೋ
ಱೆಂಬಳಂ ನಿನ್ನ ತನ್ನೆಡೆಯಾ ೧

ಸೂಡದ ಕುಸುಮ ಮಾತಾಡದ ಮುಕುರ ತಾ
ನೋಡದ ವೀಣೆಯೊಂದಿನಿಸಾ
ಕೂಡದ ಗಿಳಿಯಿನಿವಾಡದ ಕಿವಿಯೊ
ಲೀಡಾಡದವಳ ಇರವನಿತ್ತು ೨

ಭಾರಿಯು ಮುಡಿಯು ಮಾಧುರಿಯು ನುಡಿಯುಂ ವಿ
ಸ್ತಾರಿಯುರತಿಯುಲಪ್ರತಿಯಾ
ನಾರಿಯುನವ ಹೊಂತಕಾಱಿ ಚೆನ್ನನ ಚಿತ್ತ
ಸೂರಿಯ ನೆರೆ ನೀಲಗ್ರೀವಾ ೩

1 ಲಿಸಿ (ಮೂ)

೧೧

ರಾಗ : ಶಂಕರಾಭರಣ

ವನಿತೆಯರಿಂದೆಮ್ಮ ವಲ್ಲಭನೊಳು ಯೋಗ
ಕನಸಿನೊಳಾದುದೆಂಬವರೆ ಪುಣ್ಯಯುರಮ್ಮಾ ॥ ಪಲ್ಲ ॥

ಕಾಮಿನೀ ಎನ್ನ ವಿಯೋಗದಿ ಬೇಗಾ
ಸೀಮೆಯಾಗದೆ ತನುವಿನ ಸಿರಿ ಮನಸು
ನೇಮದಿಂದುಜಿ ನೆಲೆಗೊಂಡು ನಿದ್ರೆಯೊಳೊಂದ
ಲಾ ಮಹಾ ಕನಸಾಹದವರ್ಗೆ ಸುಕೃತವಮ್ಮಾ ೧

ಏಸು ಜನ್ಮದ ಪಾಪಿಯೊ ಎನಗೊಮ್ಮೆ ಹಾ
ಗಾ ಸುದತಿರೋಲಗದೆ ಪ್ರಿಯುನಗಲೆ
ಲೇಸ ನೆನೆಯು ನಿದ್ರೆಯಿಲ್ಲ ಕನಸು ಇಲ್ಲ
ವಾ ಸುಗುಣನ ಕೂಟವೆನಗೆಂತುಟವಮ್ಮಾ ೨

ಕಡು ತವಕದಿ ಎನ್ನ ಕಾಂತ ನೀಲಗ್ರೀವಾ
ನೊಡವೆರದರೆ ಪರವಶ ಮೂರ್ಛೆಯಾಗಾ
ಸಡಗರಿಪುದು ಸಂತಸದಿಂದಲಲ್ಲದೆ
ಪಡೆದದಿಲ್ಲಾನು ವಿಯೋಗ ನಿದ್ರೆಯನಮ್ಮಾ ೩

೧೨

ರಾಗ : ಕಾಂಬೋದಿ

ಮಾತದರಿದು ನೋಡೆ ಮಂದಗಮನಯಾಕೆಯು
ಪೋತುವೊಟ್ಟಜೆಯಾಂತು ತನ್ನ ಪ್ರಿಯ ಬಂದರಾಡುವಾ ॥ ಪಲ್ಲ ॥

ಇವಕೊ ಚಂಪಕ ಕರ್ಣ ಪೂರ್ಣ ನಿನ್ನ ಸ್ತೋತ್ರಮಂ
ಯುವತಿ ಶೋಭೆಮಾಡು ಎಂದಡದನಾಗಳೆ
ಶ್ರವಣಪೂರಯಿಂದು ನಿನ್ನ ಲೇಸಿನಾಕೆಯಾ
ರವದ ಮುಂದೆ ಕಾಂತಯಿವಕೆ ಇಂಬೆ ಎಂಬಳಾ ೧

ಮೊದಲೆ ನಿನ್ನ ವಾರ್ತೆಯೆಂಬ ಸ್ತೋತ್ರಪೂರವಾ
ಸುದತಿಯುರುಗಳಿಂದ ಕಳುಹಿ ಮತ್ತಿವೇತಕೆ
ಚದುರೆ ನಿನ್ನ ಮುಚ್ಚುವೆಣ್ಣೆಗೀವನು ಬೇಗದಿ
ಮುದದಿ ನೀನೆ ಕರ್ಣೋತ್ತಂಸ ಮಾಡು ಎಂಬಳಾ ೨

ಎರವದೇಕೆ ನಿನಗೆ ಎನಗೆ ದೇಹ ನೋಡಲೂ
ಎರಡು ಜೀವವೊಂದು ಎಂದಡಹುದದೋಪನೇ
ಉರದಿ ಕದಪಿ ನಡೆಯರೆ ಜೀವಧರಕ್ಷತಗಳಾ
ಒರಿದು ನಿಟ್ಟಿಸಲೆನ್ನಾ ಚಿತ್ತ ನೋವುದೆಂಬಳಾ ೩

ಏಕಪ್ರಾಣವಲ್ಲದಿರಲು ನಿನ್ನ ನಡತೆಯ
ಜೋಕೆಯೊದ ಮಱಿಯನನ್ನ ಮನಸು ಕಾಬುದೆ
ಏಕಪ್ರಾಣಹುದು ನಿನಗೆ ಎನಗೆ ಕಾಯವೆ
ಸಾಕಿವೆರಡು ಬೇಱ ಹೊಂದಬೇಡವೆಂಬಳಾ ೪

ಖಂಡಿತ ಭರ್ತಾರಿಕೆಯ ನುಡಿಗೆ ಕರಗಿ ಮನದೊಳು
ಮಂಡೆಗೈಯ್ಯ ನೀಲಗ್ರೀವ ಮಾನನಿಧಿಯನೂ
ಮುಂಡಾಡಿ ಮುದ್ದಿಸಿ ಮನಸ ತಿಳುಹಿ ನೆರದನಾಕೆಯ
ಕೊಂಡಾಡಬಹುದೆ ಸಯಿಪ ಸಖಿಯೆ ಸಾಲದೇ ೫

೧೩

ರಾಗ: ಕಾನಡ

ಕನ್ನಡ ಜಾಣೆಯೊಳೇಕೆ ಕಪಟನಾಗಿಹ ಜೋಕೆ
ನನ್ನಾಣೆಯಿದತಿರೇಕೊ ನಾಗರಿಕಾ ॥ ಪಲ್ಲ ॥

ಸಮಯವಲ್ಲದೆ ಬೇಗ ಸಾರಿದೊ ಒಲಿದೊಲಾಗ
ರಮಣಿ ನೀ ಬಾಹಗಾ ರಾಜವೋಡಿ
ಕಮಲಮುಖಿಯೊಳುಱ ಕಾಲು ಮೊದಲು ತೋಱ
ಅಮಮ ಕಾಣಳೆ ಹೇಳು ಆಯಿತೇಳು ೧

ಹಲವು ಪರಿಯ ಮಹಾ ಹಾಗಾವಲಿಂದಾಹ (?)
ಸಲೆ ಕಾರ್ಯವನೆ ಕೊಂಡೆ ಸಾಸ ಕಂಡೆ
ಒಲುಮೆಯೆಂಬ ಕನಸಾ ಒಂದಿನ ತೋಱಿಸಿ ಮನಸಾ
ಅಲಸಲೇನದಬಲೊ ಆಡಲೊಲ್ಲೋ ೨

ಒಂದು ಬಿನ್ನಹ ಬನ್ನೂರ ವರನೀಲಕಂಠೇಶ್ವರಾ
ಬಿಂದದೊಳು ಬಹುರೂಪ ಬೇಡ ಪಾಪ
ಇಂದು ನಿನ್ನಳವ ಲೇಸಾ ಇರದೆ ಮನ್ನಿಸೋ ಈಶನಾ
ಹೊಂದಿಸಲೇಸು ವಿಚಾರ ಹೊಂತಕಾರಾ ೩

೧೪

ರಾಗ : ಭೈರವಿ

ಸಗೆ ನುಡಿಯಿಂದ ನಂಬಿಸಿ ನಾರೀಮಣಿಯಾ
ಸುಗುಣರನ್ನನೆ ಹಿಂಗಿಹುದೇನು ಮಣಿಯಾ
ಹಗಲೇ ಬಿದ್ದಳು ಇರುಳೆ ಕಂಡಾ ಕುಣಿಯಾ ॥ ಪಲ್ಲ ॥
ಮುಚ್ಚುಮರೆಯೆ ಮುನ್ನಾ ಮುಂದುವರಿದು ನಿನ್ನಾ
ಮೆಚ್ಚಿಮಾನಿನಿ ಮಹಾಮನಸಂದು ಪ್ರೀಯಾ
ಹೆಚ್ಚಿ ಹಾರೈಸಲವಳ ಬಲುಗಯ್ಯಾ
ನಚ್ಚಿದ ಎಮ್ಮ ಕೋಣನು ಆದುದಯ್ಯಾ ೧

ಜನರಾಡುವುದ ಕೇಡಾ ಜಾಣಗೆಡಿಸಬೇಡಾ
ವನಿತೆ ಓಪನ ಲೇಸಿನಾಸೆಯಿಂದಾಕೆ
ತನಗೆ ತಾನುಬ್ಬುತಿಹಳೀಗದು ಸಾಕೆ
ಮುನಿವರೆಡೆಯು ಮುಗ್ಗಿದಂತಾಗಬೇಕೆ ೨

ಗಾಡಿವಿಡಿದು ಇಂದು ಗರುವೆಯೆಡೆಗೆ ಬಂದು
ಕೂಡೆ ನೆರದೆ ನೀಲಗ್ರೀವಾ ಈ[ಗ]ಲಾಗಾ
ನೋಡಿದವರಿಗೆರಡಿಲ್ಲವಿಂದೀಗಾ
ಆಡಿದವರ ಬಾಯ ಹೊಯಿದಂತೆ ಬೇಗಾ ೩

೧೫

ರಾಗ : ಘಂಟಾರಾಗ

ಏಕೋ ಎನ್ನೊಡನೆಲ್ಲಾ ಏಕೆ ಹೊಟೆಗಳು ನಲ್ಲಾ
ಸಾಕು ಸಂತೋಷ ನಿನ್ನಾಟ ಈ ಮಾಟಾ ॥ ಪಲ್ಲ ॥

ಮಾತುಗಾಣದು ಮಹಾಪುಂಡ ನಿನಗೆ ಕಂಡ
ಮಾತನಾಡಿದರೆ ತಾ ಕೋಪವು ಮಹಾ
ನೂತನ ನುಡಿ ಹಿಂಚುಮುಂಚು ಹದಿಚದಿರ
ನಾ ತರಹರಿಸಲಿನ್ನೆಂತಾ ಏಕಾಂತಾ ೧

ಕುಶಲವಾದುದು ಹಾಗೆ ಕೂಡೆ ನಿನ್ನನುವಿ[ಂ]ಗೆ
ವಶವಾದ ವನಿತೆಯು ನಡೆ ಎನ್ನೊಡೆಯಾ
ಮುಸುಕಂ ಮರೆಯು ಮಹಾ ಕಂಡೆ ನ್ನಾನೆಡೆಗೊಂಡೆ
ರಸಿಕ ನಾನಂಸುರಲಾ ತೋಟಿಯಿಪಾಟೀ ೨

ಇಂತು ಎನ್ನನು ವಿನಾಚಿ ಈಗ ಮೊಗವಾ ತೋಚಿ
ನಿಂತು ನುಡಿದಿದಾವ ಒಲುಮೆಯೊ ಬಲುಮೆಯೊ
ಹೊಂತಕಾಚಿನೆ ನೀಲಗ್ರೀವಾ ಹೊಯ್ಕಿ
ಪಂಥಬೇಡೆನ್ನೊಡನಾಡು ಮಾತಾಡು ೩

೧೩

ರಾಗ: ಭೈರವಿ

ಹಂಗಿಗಚಿದು ಇತ್ತ ಬಾರೆ ಈ ಮೇರೆ
ಇಂಗಿತದಭಿಪ್ರಾಯ ಈಗಲಚಿದೆ ಪ್ರೀಯ
ಮುಂಗೈಯ ಕಂಕಣಕೆ ಮುಕುರ ತಾ ಬೇಕೆ ॥ ಪಲ್ಲ ॥

ತೊಲಗಿ ಎನ್ನನು ನೋಡೆ ತೋಯಜಾಕ್ಷಿಯ ಕೂಡೆ
ಒಲುಮೆಯಾಗಿರುತಿಹ ವಶಾತಾ ನೀಸಾತಾ (?)
ಗೆಲುವದಾಗಿತ್ತು ಮಹಾ ಗೇರುಬೀಜದೊಲಿದಿಹ
ಹೊಲಬುಗಾಣೆ ಓಪಾ ಹೋ ಎನ್ನ ಪಾಪಾ ೧

ನುಡಿಯ ಲಾಲಿಸೆಯೊಮ್ಮೆ ನೂರು ಸಾರಿಗೆ ಹೆಮ್ಮೆ
ಬಿಡದೆ ನಿನ್ನನು ಇನ್ನು ಬಿಂಕ ಕಳಂಕಾ
ನಡತೆ ನಿನ್ನಯ ಮಾಟಾ ನಾನಚಿಯನೆ ಬೇಟಾ
ಸಡಗರವದು ಸಾರಲೊಲ್ಲೆ ನಾ ಬಲ್ಲೆ ೨

ಜೂಜುಗಾಚಿನೆ ನಾನಾ ಜೂಟತನವು ನೀನಾ
ಗೋಜೆಯೆಲ್ಲವು ಸಲ್ಲದೆಂದೆ ನಾನಂದೆ
ಮೂಜಗದಾದಿದೇವಾ ಮುದದಿ ನೀಲಗ್ರೀವಾ
ರಾಜನೆರೆದು ಎನ್ನ ಪುಣ್ಯ ತಾ ಗಣ್ಯಾ ೩

೧೪

ರಾಗ: ಆಹರಿ

ಹಸನಾದುದೊಮ್ಮೆ ಇಮ್ಮೆ ಹೇಳ್ವುದು ಕೇಳ್ವು
ದೊಸಗೆ ಏನೊಂದು ಸಾವಿರ ಬಾ. . . ॥ ಪಲ್ಲ ॥

ಎನ್ನ ಮಾತನು ಮೀಚಿ ಜಾಚಿದೆ ಮೊನ್ನಿನ ದಿನ
ಬನ್ನಣೆಗಾತಿ ಬೋಸರಿತಿ ಮನೆಯಹಾ
ನಿನ್ನ ಕೇಳುವೆ ಮೇಚಿದಿದ್ದುದಾ ಕೇಳಿದೆ ಬೇಚಿ
ಇನ್ನಿದೇನಯ್ಯ ಹೊಚಿಗೆ ಹೊಸಬೆಟ್ಟಾ ೧

ಇಟ್ಟ ಮುಸುಕಾಗಿ ನಂಬರಾ ಮಡಿಸಿತೋದು
ಕಟ್ಟಿದೆಲೆಗಳ ಘಳಿಗೆಗಳಡಕೆಗಳ
ದಿಟ್ಟಕೂರಸಿ ಕೈಯಾ ರಾತ್ರೆಯಾ ಮನೆಯು ಪೊಱ
ಪಟ್ಟನೆಂದೆಲ್ಲರಲು ಬರಬೇಕೆ ೨

ತರಹರಿಸದು ಎನ್ನ ಮನಸೂ ವೊದಲದೊಂದು
ಪರವರಿಯನು ಬಿಟ್ಟೆನೆಂದೆನ್ನ ಮುಟ್ಟು
ಸುರಸುಖದಿ ನೆರದೆನ್ನನು ಕೂಡಿರು ಕೂಡೆ
ಗರುವದೇವರ ದೇವನೆ ನೀಲಗ್ರೀವಾ ೩

೧೮

ರಾಗ: ತೆಲುಗಕಾಂಬೋದಿ

ಸಾಕಿನಿಯುನೆ ಸರಸದ ಮಾತುಗೀತುಗಳಾಡ ಬೇಡಾ
ನೀ ಕಪಟವನಾಂತೆ ನಿಲ್ಲು ಸಾವೊಗನೋಡಗಿಡಬೇಡಾ ॥ ಪಲ್ಲ ॥

ಕಾತರಿಯಲ್ಲ ಕಾಮಿನಿಯರನ್ಯರಿಗೆಂದೆ ಹಿಂದೆ ಬೇಡಾ
ಏತಕೆಲ್ಲರುಲಿವ ಶುದ್ಧಿ ಬಂದುದಿದೆಂದೆ ಬೇಡಾ
ನೂತನವಿದು ನಿನ್ನ ನುಡಿಯುಲಾವುದು ಲೇಸ ಮೋಸ ಬೇಡಾ
ಪಾತಕವಹುದು ಪಲವು ಸತ್ಯನಿತ್ಯವೆಂದಿತ್ತೆ ಬೇಡಾ ೧

ಕಂಗಡೆಗೆಂಪಾದದರ ಕಂದದಿ ಸುಯಿಲ ಹೊಯಿಲು ಬೇಡಾ
ಸಂಗಳಿಸಿದರೆ ಭೇಕದವುರ ತೋಳೆಡೆ ಪಾಡೆ ಬೇಡಾ
ತಿಂಗಳಿಂದಾನು ತಿಳಿದೆ ನಿನ್ನ ಚಿತ್ರವದೆತ್ತು ಬೇಡಾ
ಹಿಂಗಿದ ಮೇಲೆ ಹಾಗಿರು ಎನ್ನನೀ ಮುಟ್ಟಗಿಡ್ಡ ಬೇಡಾ ೨

ಬಲ್ಲೆನಾರಿದ ಬಹುಕಾಲ ನೀಲಗ್ರೀವ ದೇವ ಬೇಡಾ
ಮೆಲ್ಲೆಡೆವೆಣ್ಣು ನಾನೆಂದು ಮೇರೆಯ ಮಿಱಿ ತೋಱಬೇಡಾ
ಇಲ್ಲ ಇನ್ನವುಬಾರದೆಂದು ಭಾಷೆಯ ಕೊಟ್ಟು ಮುಟ್ಟಬೇಡಾ
ಕಲ್ಲೆರ್ದೆಯಾಕೆ ಕೂಡಿರು ಎನ್ನನೀ ಹಿಂಗಗಿಂಗ ಬೇಡಾ ೩

ಶೃಂಗಾರ ಪದ ೧೮ಕ್ಕಂ ಮಂಗಳ ಮಹಾ ಶ್ರೀ

ಪದ್ಧತಿ : ಎರಡು

೧+ ನೀತಿಸಾರ

೧

ವಾರ್ಧಕ್ಯ॥

ಭೂಮಿತಳದ ಸುರತ್ನದಾಭರಣಯಿಹ ಪೀಠಿ
ಕಾವಾರಿ ರಾಸಿ ಮಿಗೆ ಬತ್ತಳಿಕೆ ಕಮಲಾಸ
ನಾಕ ವಕ್ರ್ರವತಿಲಾಯು ಪಾಕಶಾಸನ ಮುಖ್ಯಸಭೆ ಸೈನ್ಯಗೂಡಿ (?)
ಠೀವಿಯಿಂ ರಜತಗಿರಿ ದುರ್ಗದಧಿಪತಿಯೆನಿಸಿ
ವೋವಿಯಿರೇಳು ಭುವನವನಾಳುತಿಹ ನೀಲ
ಗ್ರೀವನುನ್ನತ ಜನರ ಕಾವನೆಮಗಿಷ್ಟತೆಯು ಈವುದನವರತ ನೀನು ೧

ಸಂಪದಗಳುದಿಸಿ ಸಂತಸಬಡದೆ ಸುರರಸುರ
ರಿಂ ಫಲವು ದ್ರವ್ಯವಿನ್ನುಂಟೆಂದು ಪಯಧಿಯಂ
ಗುಂಪುಗಾಣದೆ ಮಥನಮಾಡಲುಱಿ ಶೇಷಕುಲಪತಿಯು ತಾನಂ ಬಳಲಿ
ಕಂಪಿಸುತ ವಿಷವನೋಗಡಿ[1][ಸೆ ಹರಿಯಜ][1]ರಮರ
ರಂ ಪಾರಿ ಸುಡುವ ಗರಳವ ಸವಿದು ಕಾಯ್ದು ಭಯ
ವಂಂ ಪರಿಹರ ನೀಲಗ್ರೀವನೆಮಗಿಷ್ಟತೆಯುನಿಂ ಪ್ರೇಮದಿಂದಲ್ಲಿಗೆ ೨

ಸುರರನಂಡಲೆದು ಸೆಱೆವಿಡಿದು ಕಾಣುತ ಕಲ್ಪ
ತರುವ ಶಾಖೆಯು ಮುಱಿದು ಕಾಮಧೇನುವನತ್ತ
ಉರುವಣಿಸುತೆಳೆದು ಚಿಂತಾಮಣಿಯುನಱಿಸಿ ಕಾರಿರುಳಕಾಯದ ದನುಜರು
ವರರಂಭೆ ಶಚಿರಾಣಿಯರ ಭಂಗ ಬರಿಸಲತಿ
ಮೊಱೆಯಿಡುವ ನೀನದ[2][ನ][2]ನಱಿದು ಬೇಗದಿ ಮೂಱು
ಪುರವಾಸಿಗಳ ನುಗ್ಗುನಂರಿಗಯ್ಯ ಗರಳಧರ ಕರುಣ ಮಿಗೆ ಸಲಹುಗೆಮ್ಮ ೩

೧+ 'ಶ್ರೀ ಗುರುಚನ್ನಬಸವೇಶ್ವರಾಯ ನಮಃ' (ಮೂ)

[1] ಸಲು ಹರಿಯಜಬ (ಮೂ) [2] ವ(ಮೂ)

೨

ರಾಗ : ಆಹರಿಪಂತು

ಬೇಡಲರಿದು ಬೆಂದವೊಡಲಿಗೋಸುಗ ಮಹಾ
ಮೂಢನಾಗಿಯೆ ಮನುಜರನುರೆ ಜೀವಾ ‖ ಪಲ್ಲ ‖

ಪ್ರತ್ಯಕ್ಷ ನೋಡು ಪ್ರಭುತ್ವವಾಗಿಹ ದೇವಾ
ಇತ್ತುದಲ್ಲದೆ ಈಗ ನೀನು ಜೀವಾ
ಚಿತ್ತವಲುಗಿ ಚಿರಕಾಲ ತೃಷ್ಣೆಯೊಳೀಗಾ
ವಿತ್ತವಿಧರ ಕಾಡಲೆಂತೆಲೋ ಜೀವಾ ೧

ದಿಕ್ಕಿನೊಳ್ದಿಗುದೆಸೆ ಮೊದಲಾಗಿ ಜಲಧರ
ಮುಕ್ಕುಳಿಸಿಯೇ ಮುಂದೆ ಮಳೆಯು ಜೀವಾ
ಗಕ್ಕನೆ ಕಳಿಯಲೆರಡು ಪಯವನೀ ಚಾತ
ಕಕ್ಕಿ ಬಾಯೊಳು ಬೀಳ್ವುದಱಿದು ಜೀವಾ ೨

ಕೂಪವಾಗಲಿ ಜಲರಾಸಿಯಾಗಿಹ ಮ
ಹಾ ಪಾರಾವಾರವೊಡೆಯು ಜೀವಾ
ತಾ ಪೊಱುಗೊಡ ಹಿಡಿವನಿತಲ್ಲದೆ ಬೇಱೆ
ವ್ಯಾಪಿ[ಸ]ಲೆಲ್ಲಿ ತಾಬಹಂದೊ ಜೀವಾ ೩

ಚತುರತೆಯಲಿ ಚೌಷಷ್ಟಿ ವಿದ್ಯವನತಿ
ಧೃತಿಯಿಂದಱಿದು ಕಲಾವಿದನು ಜೀವಾ
ಪ್ರತಿಯಿಲ್ಲವೆಂದೆನಿಸಲು ಫಲವೇನಿನ್ನೂ
ಜಿತಮಾಯನಿತ್ತುದಲ್ಲದೆ ಜೀವಾ ೪

ಪ್ರೀತಿಯಿಂದ ಪ್ರೇಮತಾ ತತಿಯಾಳ್ದವು
ಮಾಪತಿ ನೀಲಗ್ರೀವನನೂ ಜೀವಾ
ನೀತಿಯಿಂದಱಿದು ನಿಜದೊಳಾಡಿ ನೀ ತತ್ತ್ವಾ
ತೀತನೊಳಿರೆ ಜೀವ ಪರಮಜೀವಾ ೫

೩

ರಾಗ ; ದೇಶಿ

ಮನದೊಳಗತಿ ಮಚ್ಚರವನೆಣಿಸಿಯೆ ಬಿಚ್ಚುಮಾತ ಜೀವಾ
ಇನಿರಸದಂತುಸುರುವ ತುಚ್ಛಜನನೆಚ್ಚಬೇಡ ಜೀವಾ ॥ ಪಲ್ಲ ॥

ವಿನಯದಿಂದಲಿ ಧನದಾಸೆ ವಿದ್ಯದ ವಾಂಛೆಯಿಂದ ಜೀವಾ
ತನುವನೊಪ್ಪಿಸಿ ತೋಱುತಿಹರು ಬೆಱವರಂತರಂಗ ಜೀವಾ
ಘನತರ ಕುಂಭದೊಳಗೆ ವಿಷವಮುಖ ಸುಧೆಯಂತೆ ಜೀವಾ
ನೆನೆದ ಕಾರ್ಯವ ಗೆದ್ದು ನೆಱೆ ಮುನಿವರ ಹೊಂದಬೇಡ ಜೀವಾ ೧

ಒಲವನಱಿದು ವಾಸಿಯುಳಿದು ಬೆಂಬಳಿಯಿಂದ ಬೇಗ ಜೀವಾ
ಹಲವು ಬಗೆಯ ಹೂಸಿ ಹಸರ ನೂತನ ನುಡಿಯಿಂದ ಜೀವಾ
ನೆಲೆಯು ತಿಳಿದು ನೇಮಿಸಿದ ಬಹು ಬಯಕೆ ಕೈಸಾರೆ ಜೀವಾ
ಗೆಲವನಡರಿ ಗೇಹವಮುಱಿವ ದುರ್ಜನ ಸ್ನೇಹ ಬೇಡ ಜೀವಾ ೨

ಸಾಕು ಈ ಪರಿ ಸರಸದ ಶತ್ರುಜನದೊಡನಾಟ ಜೀವಾ
ಏಕೆನಿನಿತರವಲ್ಲ ತಾಪತ್ರಯಾ ಮಾಣು ಜೀವಾ
ಏಕೋಭಾವದಿ ಎಡದೆಱಹಿಲ್ಲದೆ ನೀನು ಈಗ ಜೀವಾ
ಲೋಕಾದಿದೇವ ನೀಲಗ್ರೀವನೊಳು ಲೀಯವಾಗು ಜೀವಾ ೩

೪

ರಾಗ : ದೇಶಿ

ಪರಮ ಪ್ರೀಯಳೆಂದು ಮಹಾಪ್ರಾಣ ಘಾತಕರಹ
ನರರ ಕಾಹೃದಯುವೆ ನಾಗರಾಶ್ರಯು ಭಾವೆ
ಸರಸವವರಸಂಗ ಸಾಕು ಮೃತ್ಯುವಿನಂಗ
ವರವೆ ವಾರಿಜಮುಖಿಯೆ ಭಾವೆ ॥ ಪಲ್ಲ ॥

ತನುವಿನೊಳತಿ ವಿಷ ತಾಳಿ ಮಾತಿನ ಲೇಸ
ಮನಮಚ್ಚಲಾಡುವ ಮಾಯಾಡಂಬರನಾವ
ಜನರೆನ್ನಬಹುದೀಗಾ ಜಾಣುವಿಂದಲಿ ಬೇಗಾ
ನಿನಗಱುಹುವೆ ನೀತಿಯಾ ಭಾವೆ
ಮನುಜವೇಷದಿ ಬೇಱೆ ಮಾರಿ ಬಂದಿದೆ ನೀರೆ
ಮುನಿಸು ಮುದವ ಬಿಟ್ಟು ಮಾನನಂದದಿ ಗುಟ್ಟು
ಇನಿಸುದೋಱದಲಿರೆ ಈಡೇಱಬಹುದೂಱೆ
ಮನದನ್ನೆ ಮಾನಿನಿ ರನ್ನೆ [ಭಾವೆ] ೧

ಬಳಿವಿಡಿದತಿ ತವಕ್ಕಾ ಬಾಹಿರದಲಿ ಹವ್ಮ್ಯ
ಕಳಿದೂಡಿದವರಂತೆ ಕಾರ್ಯಕೋಸಂಗ ಕಾಂತೆ
ಕೆಳೆವೆರವರು ಮಿಗೆ ಕೇಳಿಗವರ ಬಗೆ
ತಿಳಿಯಲಾರಿಗೆ ತಿರುಗೆ ಭಾವೆ
ಇಳೆಯೊಳಗವರೀಗ ಈ ವಿದ[1][ಗ್ಧ][1]ದ ರೋಗ
ಬಳಸಿ ಬಂದಿದೆ ಎಂದು ಭಾವಿಸಂತವೆ ಇಂದು
ತಳಿತ ಗುಣಜ್ಞರು ತಾವಟಿದಿರುವರು
ಕಳೆಮುಖಿಕಾತರಾಕ್ಷೀ ಭಾವೆ ೨

ಮಂಗಣವಾಗಿರುತಿಹ ಮಾನವಂತನು ಸ್ನೇಹ
ನಗಣವಾಗಿಹರೊಡನಾಡಲವನ ಕೇಡ
ತಗುಲಿದುದ ಕೂಡೆ ತಾತ್ಪರಿಯದಿ ನೋಡೆ
ನಗೆಯ ನಾಣ್ನುಡಿಯೊಡನೆ ಭಾವೆ
ಜಗದೊಳಾಡುವದತ್ತು ಜಾಟಿದಾತನ ಇತ್ತು
ಖಗಗಮನ ಪ್ರೀಯ ಕಾಮಾರಿ ಶಿರಗಯ್ಯ
ನಿಗಮಂಗೋಚರ ನೀಲಗ್ರೀವನೊಲಿದು ಕಾವ
ಸುಗುಣೆಯೇ ಸುಪ್ರವೀಣೆ ಭಾವೆ ೩

೫

ರಾಗ : ಮಲಹರಿ

ಬಾಯಂನುಡಿಗಳಿಂದ ಭವವಳಿವ್ರುದೆ ಬೆಂದಾ
ಬಾಯಂತೆ ನಡೆದರೆ ಭವವುಂಟೆ ಜೀವಾ ॥ ಪಲ್ಲ ॥

ಕರಣೇಂದ್ರಿಗಳ ಕರಹತಿಗಳುಕದೆ ಮಹಾ
ಪರಮಪದವ ನಂಬಿಯಿರಿಯೆಂದು ಪರರಿಗೆ
ಒರೆಯಬಹುದು ನೀನು ಒಯ್ಯನಾ ಪರಿಯಿಂದಾ
ಇರಲಾವ ಭಯವುಂಟು ಇಚ್ಚಕ ಜೀವನೇ ೧

ತಿಳಿದು ಹೃದಯದೊಳು ಕಳೆಯುಳ್ಳ ಜ್ಯೋತಿಯು
ಬೆಳಗ ನೋಡಿಹುದೆಂದು ಬೇಗಲೋಗರಿಗೆಲ್ಲಾ
ಹೊಳಹನುಸುರಿ ಹೊಂದಲಟಿಯೆ ನೀನದನೀಗ
ಗಳಹಲೇತಕೆ ಸಾಕು ಗಯ್ಯಾಳಿ ಜೀವನೇ ೨

[1] ಗ್ಗ (ಮೂ)

ಸಕಲ ವಾಗ್ಬ್ರಹ್ಮವ ಸಾಱಿ ನುಡಿಯಲಾವ
ಮುಕುತಿ ನಿನಗೆ ಮೂಢತನ ಬೇಡ ಜೀವಾ
ಸಕಲ ನಿಷ್ಕಲವೆಂಬ ಸಮರಸದನುಪಮ
ಸುಖಿ ನೀಲಗ್ರೀವನೊಳಿರೆ ಜೀವ ಪರಮಾ ೩

೩

ರಾಗ : ಮೇಚ ಬಹುಳಿ

ಎಂತುಸುರೆಬಹುದು ಏವೆನು ನಿನ್ನನಱಿಯದ
ನಂತ ಪರಿಯೊಳು ತೊಳಲುವಾ ವಿಷಯೇಂದ್ರಿ[ಯ]
ಚಿಂತೆಯಿಂದತಿ ಬಳಲುವಾ ಪರಮಗತಿ
ಎಂತೆನ್ನದಧಮ ಮನವಾ ದೇವಾ ॥ ಪಲ್ಲ ॥

ಹಲವು ಭವ ಬಂದು ಹೇಗೆಂದು ತಿಳಿಯದಲಿಂದು
ನೆಲೆಯಿಹದ ಸಿರಿಯೆಂದು ಹೀಗೆ
ಹೊಲಬುಗಾಣದೆ ಕಡೆಗೆ ಹರಿದು ನಾನಾ ದೆಸೆಗೆ
ಚಲಿಸುವುದು ತಾನೊಂದು ಚಾತುರ್ಯಾ
ಫಲತನಗೆ ಬಹಳವೆಂದು ಈ ಪರಿಯ ಗೆಲ
ಗೊಳಿಪ ಮನವನಿಂದು ದೇವಾ ೧

ಮತಿಯ ವಿಸ್ತರವ ಮನ್ಮಥನು ಸೆಳೆಕೊಂಡನುವ
ಹಿತವೆಂದು ಹಿರಿದು ತಾನು ಮಹಾ
ಧೃತಿಗುಂದಿ ದೂರವಾಗಿಹುದು ನಿನ್ನಯ ಪದವ
ನತಿ ಭಜಿಸಲರಿಯದಿರುವ ನಾಣ್ನುಡಿಯ
ಸ್ತುತಿಯಿಂದಲತಿ ಹೆಚ್ಚುವ ಈ ತೆಱದಿ
ಹಿತ ಶತ್ರುವಾದ ಮನವಾ ದೇವಾ ೨

ಕುಟಿಲವನೆ ಬಳಸಿ ಕುಹಕವೆಂಬುದಾಶ್ರಯಿಸಿ
ಪಟುವಮಾಡಿ ಕರಣವತಿಯ ಕೂಡಿ
ಘಟಿಸಿರುವ ಮನವ ಗಟಿಸಿ ನಿಲಿಸಿ ಸಲಹೊ ದೂ
ರ್ಜಟಿ ನೀಲಕಂಠೇಶನೆ ದರ್ಪಕನ
ನಿಟಿಲಾಕ್ಷೆಯಿಂ ಸುಟ್ಟನೆ ನಂಬಿದೆನು
ದಿಟ ಕೊಲ್ಲು ಶಿವನೇ ದೇವಾ ೩

೭

ರಾಗ : ವರಾಳಿ

ಸಾಕೆಂದೆನಿಸದೆ ಜೀವಾ ಸಾಕಿನ್ನಿನಾವ ವಿ
ವೇಕಿಯೆನುತ ದೇವಾ ಏಕಿತ್ತನುವಾ ॥ ಪಲ್ಲ ॥

ತನ್ನ ಮುಖದಿಂದಲಾದುನ್ನತವೈದನು ತವೆ
ನಿನ್ನ ದೇಹವೆನಿಸಿ ಮುನ್ನವೆ ಇತ್ತನು
ಕನ್ನಡಿ ರೂಹಿನಂತೆ ನಿನ್ನೊಳಿಹನು ನೋಡು
ಬನ್ನಬಡದೀಗ ಭಾವಿಸಿಯದನು ೧

ಹಣ್ಣ ಮೇಲಣಾಸೆಯಿಂ ತನ್ನಳಿವರಿದು
ಕಣ್ಣುಗಾಣದಿಹ ಖಗವಿನಂತಿಹುದು
ಹೆಣ್ಣು ಹೊನ್ನು ಮಣ್ಣು ನಿನ್ನದೆನ್ನಲರಿದು ಇದು
ಸಣ್ಣಹ ಮಾತನು ಶಾಶ್ವತವೆಂಬುದು ೨

ಇಂತು ಮನೋಭ್ರಮೆಯಿಂದನಂತ ಪರಿಯಾನೊಂದು
ಶ್ರಾಂತನಾಗವೆ ಭವದ ಮಾಲೆಯಾ
ಮುಂತೆ ನೀಲಗ್ರೀವನಿಂದಂತವ ಪರಿಯ ಮೇಲೆ
ಸಂತತ ನೀ ಜೀವಾ ಶುದ್ಧಾತ್ಮವಳಿಯಾ ೩

೮

ರಾಗ : ಮಾಧವಿ

ನಿಟಿಲನೇತ್ರನು ಎಂದು ನಿಜವನಳಿಯದಳಿಂದು ಪರತರವಾಗಿ
ಸ್ಫಟಿಕವರ್ಣದ ಜ್ಯೋತಿಯೊಳೊಂದಿ ನಿಂದು ದೂ
ರ್ಜಟಿಯೆನ್ನುತಿರು ಜೀವನೇ ॥ ಪಲ್ಲ ॥

ಜತನವಾಗಿರು ಜಾಱುತಿಹ ಪರಮಾತ್ಮ ಮನ್ಮಥನ ಮಥನದಿಂದಲಿ
ಗತಿಗೆಡದಿರೆ ಸ್ಫುರಿಸುವ ಜ್ಯೋತಿಯಾಗಿ ತಾನತಿತೋಱುತಿಹನಾಗಲಿ
ಮತಿಯಿಂದಱಿದು ಮಹಾಘನವೆಳಗನು ನೋಡಿ ನುತಿಯಿಸುತಾನಂದದಿ
ಸತಿಯಾಗಿ ಸಚ್ಚಿದಾನಂದನೇ ಪತಿಯೆಂದು ಚತುರಿಂದಲಿರು ಜೀವನೇ ೧

2.

ಪಾರಿಜಪತ್ರದೊಳಿಹ ವಾರಿಯಂತೆ ನೀ ಸಾರಿ ಸಮಸ್ತವನೂ
ತೋಱಿಸೈಮೊಗ ಪರಬ್ರಹ್ಮಸೂತ್ರದೊಳಿಹ ಕಾರಣಾತ್ಮಕ ಲಿಂಗಕೇ
ಆರಾಧಿಸುತ ಅಪರಾಧಿತೇಶನ ಮಹಾ ಮೇರುವೆಯೊಳು ನೋಡುತಾ
ಮಾರಾರಿಯರಿಷಡುವರ್ಗವಳಿಯೆ ಕ್ಷೀರವಾರುಧಿಯಹುದು ಜೀವನೇ ೨

ಕಾಯಮಱಿದು ಕರಣಾದಿ ಗುಣಗಳೊಂದುಪಾಯದಿಂ ಪರಮನೊಳು
ಲೀಯಮಾಡಿಯೆ ಲಿಂಗ ಜಂಗಮವನು ಗುರುದಾಯಕನಿಂ ತಿಳಿದು
ಸಾಯಸಗೊಳದೆ ಸಾಧಿಸು ಮೇಲುಲೋಕದಿ ರಾಯನೆಂದೆನಿಸುತಿಹ
ಮಾಯಜಿತನು ಗುರುಚೆನ್ನಬಸವ ಸಂಪ್ರದಾಯದೊಳಿರು ಜೀವನೇ ೩

೯

ರಾಗ : ಮಲಹರಿ

ಕಾಣರು ಮನುಜರು ಕಮಲಭವನ ಶಿರ
ಪಾಣಿಯ ಪರಮಪಾವನ ಕಟ್ಟಾಣಿಯಾ ॥ ಪಲ್ಲ ॥

ನಾದದ ಗೃಹದಿ ವಿನೋದದಿ ಬಿಂದುವಾ
ನಾದರಹಿತದಿ ಬೆಳಗಲಾ ಬೆಳಗಾ
ಸಾಧಿಸಿ ಕಳೆಯೊಂಬರಧರನಾಗಿ ತಾ
ಮಾಧವನಾಥನ ಪಾದವಾ ೧

ಕಲುಕಲು ಪ[1] [ಯೋಧಿ][1]ಯಂ ಸುರರಸುರರು ಕೂಡಲಸು
ತಲಹಿಪತಿಯೋಗಡಿಸಲುರಿಯಾ
ನಿಲಿಸುವರಿಲ್ಲದೆ ಚಲಿಸಲಮರ ಬಲ
ದುಲಿಸನಱಿವು ತದನುಂಡನ ಖಂಡನಾ(?) ೨

ಗೂಢ ನಿಗಮತತಿಯಾಡಲವನ ನಿಜ
ಪಾಡನಱಿದ ನತಜನರ ಸಂತತಿಯಾ
ಕೂಡೆ ಸಲಹುವಾಱೊಡನಭವ ಭಯಂ
ಗೇಡನೆನಿಪ ನೀಲಗ್ರೀವನ ಕಾವನಾ ೩

---

1 ಯದಿ(ಮೂ)

೧೦

ರಾಗ : ದೇಶಿ

ಕುಂಬಿಹಿಗೆ ಬಂದು ಕೂಗಿಡುವ ಮನುಜರಿಂದ ಎನ್ನ ದೇಹಾ
ಉಟುವ ಊಣಯುವನುಣ್ಣಿಸರಿಪುವಾಗಿದೆ ಎನ್ನ ದೇಹಾ ॥ ಪಲ್ಲ ॥

ಬಾಲ ಯೌವನ ಬಹುವೃದ್ಧನೆಂದೆನಿಸಿದುದೆನ್ನ ದೇಹಾ
ಮೇಲವಟಿೊಳು ಮೆಱದುದು ತನ್ನ ಮಹಿಮೆಯ ಎನ್ನ ದೇಹಾ
ಹಾಲಸವಿದು ಹಲವಂಗದಾಹರಗೊಂಡುದೆನ್ನ ದೇಹಾ
ಸಾಲವಟಿಯದೆ ಸೋತುದು ಕಾಲಕಾವರಿಗೆನ್ನ ದೇಹಾ ೧

ಧಾತ ಧನಿಕ ದಾರಿದ್ರನೆಂದೆನಿಸಿದುದೆನ್ನ ದೇಹಾ
ಮಾತಾ ಪಿತನು ಮಗ ಸತಿ ಪತಿಯೆನಿಸುವದೆನ್ನ ದೇಹಾ
ಜಾತವಾಗುತ ಜಾತಿವಿಡಿದು ಜಾಟಿಸುತಿಹುದೆನ್ನ ದೇಹಾ
ಭೂತಭುಜಗಭಯ ವ್ರಾತಕವ್ವಳಿಸುವದೆನ್ನ ದೇಹಾ ೨

ಕಾಡನಟಿದು ಕಡೆಯೂದ ಸವಿಯನುಣ್ಣುತೆನ್ನ ದೇಹಾ
ನೋಡುತಿಹುದು ನೊಟಜಿನದೊಂದು ತಿನಿಸನು ಎನ್ನ ದೇಹಾ
ಪಾಡುಗಾಣದು ಫಲಪದದೊಳಿದ್ದುದು ಹಿಂದೆ ಎನ್ನ ದೇಹಾ
ಕೂಡೆ ಕೃಪೆಯನೀಡಾಡ ನೀಲಗ್ರೀವಬೆನ್ನ ದೇಹಾ ೩

೧೧

ರಾಗ : ಮೇಚಬಹುಳಿ

ಕಾಯವಿಡಿದಿಹ ಮನುಜರಾಯತವನಟಿ ನಿಜ
ತಾಯೆನಿಸುತಿಹ ಗಂಗೆಯಾ ಸವಿಜೀತ
ಮಾಯಾ ತಾನೆನಿಪಾಂಗೆಯಾ ಮೋಕ್ಷ ಸ
ಹಾಯುವರ ತಾ ಗಂಗೆಯ ಬೇಗಾ ॥ ಪಲ್ಲ ॥

ಧಾತನತಿ ಜನನಿ ಮಾರಾರಾತಿಯುನು ಪಡೆದವರ
ಮಾತೆ ರುದ್ರನ ಚಿತ್ತವಾ
ಪ್ರೀತಿಯಿಂದುಸಿ ಈಶನ ಹೃದಯವೆನಿಸಿ ಶಿವ
ನಾತುಕೊಂಡಿಹ ವಾರಿಯಾ ನೋಡಭವಾ
ಭೀತಿನಾಶನಕಾರಿಯಾ ಜಗ
ನ್ಮಾತೆ ಮಹ ರಸಪೂರಿಯಾ ಬೇಗಾ ೧

ಜನನ ಮರಣಗಳ ತಾನನುನಯದಿ ಹಿಂಗಿಪಳ
ದನುಜ ದಿವಿಜರ ಮುನಿಗಳಾ ತಾನು
ಸನುರಾಗದಿಂದ ಸಲಹುವ ಜೀಪವಾದಪಯ
ಪನವನಂಬಿನಿ ಕಾಲ ರುಜೆಯಿಲ್ಲ
ತನುಸೋಂಕಿಲ್ಲವಗೆ ಪಾಲನುಂಡು
ಮನಪೆಜಿಗಿ ಮಹದಕಿಲಾ ಬೇಗಾ ೨

ಸಲಿಲದಿಂದಿದೆ ದೇಹ ಬಲವಿಹುದನಱಿದು ಇಹ
ಪಲ ಪದದ ಹಂಗ ಹಱಿದು......
......ವೃದು ನೀಲಗ್ರೀವ ಮುಡಿಯೊಳಗಿಟ್ಟ
ಜಲಪ ಸಾಧಿಸಿ ಸರ್ವರಾ ಮುಕ್ತಿಗಲ್ತೆ
ಗೆಲವು ಮಿಗೆಯುಂ ಪಾರ್ವರು ಕಾಲ
ನೆಲೆಯ ರಾಸಿಯ ತೂರ್ವರು ಬೇಗಾ ೩

೧೨

ರಾಗ : ಭೈರವಿ

ಮದ ಹೃದಯುರ ಮಾಯಾ ಮಂತ್ರವಾದದಡೊಂದು
ಬೆದಱಿಗಂಜಿಗಂಜಿದೆನು ತಾಯೇ ॥ ಪಲ್ಲ ॥

ತನುವನಿತ್ತೆನಗೆ ತಾಮಸಜನ ನಿವಹದಿ
ಮನೆ ಮಾಡ ಮಾತೆ ಮಾತಿನದೊಂದು
ಘನ ಕಿಱುದಿನ ಗಾರುಡಪೋಡಿಯಿದಿರಿಡೆ
ವನಜಪತ್ರಾಂಬುವಾದೆನು ತಾಯೇ ೧

ಹೇಳಲಾವುದು ಹೇವರಿಪದಗ್ಗದ ನರ
ಕಾಳಿಗಳತುಳ ಮಾಟಗಳೆಂಬಾ
ಬಾಳುವಿಡಿದು ಬಾಯಲಾಡಲಂಜಿದೆ ನವ
ಕಾಳಿಕಾ ನುಡಿಗೆ ಕಾತ್ಯಾಯನೀ ೨

ತರಹರಿಸನು ತರುವರಿ ಇವ ತರಳನೆಂ
ದಿರದೆನ್ನ ಮರುಳತನವನಿಂದು
ವರದೆ ನೀ ಮಱದು ರಕ್ಷಿಸು ನೀಲಗ್ರೀವನಾ
ಹರಣವಾಗಿಹ ಹೈಮಾವತೀ ೩

೧೩

ರಾಗ : ಕಲ್ಯಾಣಿ

ನಾನಲಸಿದೆ ಮಹಾ ನರರಿಂದಲತಿ ಬಾಹಾ
ಹಾನಿ ಹಲವು ಹಚಿಂಕತೆಯಿದಿರಿಸೆ ದೇವಾ ॥ ಪಲ್ಲ ॥

ಬಹುಮುಖರಲೆಯಿಂದಾ ಬಾಳಲಾದಿರೆ ಒಂದಾ
ಸಹಜರೂಪನೆ ಬೇಗಾ ಸಾಯೆನ್ನಲ್ಲಡೀಗಾ ೧

ಮೊತ್ತವಾಗಿಹ ಮಾಯಾ ಮೊದಲರಿಗೆ ಲಾಯಾ
ಚಿತ್ರಜಾರಿಯ ಇತ್ತು ಚೀಚಿಸಲುವತ್ತು ೨

ಬಾಲನಂದಿಯ ಚೆನ್ನಬಸವೇಶಾಲಿಸಿ ಎನ್ನಾ
ಮೇಲಪಹರಿಪ ಮಾಯೆಯ ಮಾಜಿಸದಚಿಂದಾ ೩

೧೪

ರಾಗ : ಸಾಳಂಗ

ಹಾದಿಗಾಣದಲತ್ತ ಹರಿಯೆ ಚಿತ್ತಾ
ಸಾಧಿಸರಿದಾದಿಯ ಕಾಣಲರಿಯೇ ॥ ಪಲ್ಲ ॥

ತಿಳಿಯಲಾಗದೆ ನಿನ್ನ ನೆಲೆಯ ಇತ್ತಾ
ಇಳೆಗಿರಿಸಿದ ತಾತಸನಚಿದಲೆಯಾ ಹಿಂಗಿ
ಗಳಗರಳನನರ್ಚಿಸದೆ ಚಿತ್ತ ಕತ್ತಲೆಯಾ* ೧

ಎಣಿಸದಗ್ಗದ ಜನನಗಳ ಸಾರಿ
ಗಣೆತೆಯಾಗಿರಿಸಿರಿಸಿದ ಶರೀರಗಳಾ
ದಣಿಸದಾಗದೆ ಕರಣಗಳಾ ನಚ್ಚಿ
ಹಣತೆಯಾಗಿಹ ಚಿತ್ತಜನ ಚಿತ್ತಾರಗಳಾ ೨

ಧಾತದಾಯಿಗನಾದದಾರಾ ಚೆನ್ನ
ಗೀತನಿಷ್ಪಾರ್ಥಸಿದ್ಧಿಯಸೀತ ಧೀರಾ
ನೀತಿಗಿಲ್ಲದ ನಿರಾಕಾರ ಚಿತ್ತ
ನಾಥನಾಗಿಹ ನೀಲಕಂಠನ ಸಾರಾ ೩

* ಈ ಪದದಲ್ಲಿ ಒಂದು ಪಾದ ಕಡಮೆಯಾಗಿದೆ.

೧೫

ರಾಗ : ಶಂಕರಾಭರಣ

ಮಯ್ಯುವಿಡಿದು ಶೂಲಗಯ್ಯನೊಂದೆನು ಬಹು
ಹುಯ್ಯ[1][ಲಿ][1]ಡುತ ಜನರು
ಒಯ್ಯನೆಯಪವಾದ ಶಯ್ಯೆಯೊಳಿಟ್ಟರು ಜಗ
ದಯ್ಯ ನಿಟ್ಟಿಸಬಾರದೇ ॥ ಪಲ್ಲ ॥

ಹತ್ತಿರ ಸಾರಿಸು ಚಿತ್ತದವರ ಹಾಗೆ
ಮುತ್ತಿ ಮುಸುಕಿ ಪಾಲಿಪ ಹುತ್ತಮಾಡಿದವೊಲು
ಬಿತ್ತರಿಸು ತಡದುತ್ತಮ ನೀನೆನುತಾ
ಕರ್ತರಿಯುನು ಕರುಳತ್ತಲಾಗಿಸಿಯರಂತಸ್ತವಾಗಿಯೆ ಪಿಡಿದು
ತತ್ತಗಲುತಪಮೃತ್ಯುರೂಪೆನಿಸುವ
ಮತ್ತಮನುಜರೆಡೆಯಾ ೧

ಬಂಧಿಸಿ ಬಹು ನುಡಿಯಿಂದ ಕುಹಕ ಜನ
ವೃಂದ ಊಹಿಸಿ ಮಾರಿಯು
ಬಿಂದವಾಗಿಯೆ ಹಾಯೆಂದು ಹರಿದು ಮೊಗಗಂದಿಸಿ ಮೊರದಾಡುವಾ
ಮಂದಿಯಿಂದಲಿ ಮನಗುಂದಿ ಮಹಾವಿಧಿ
ತಿಂದು ತೀರದೆ ಇರಲು
ನಿಂದು ಜೀವಿಸಲರಿದಿಂದು ಮರ್ತ್ಯಾದಿ ಭಕ್ತ
ಬಂದು ರಕ್ಷಿಸಬಾರದೇ ೨

ಕಾಳಕೂಟವ ಸವಿದಾಳಿ ಧಾತೃವಿನ ಕ
ಪಾಳವರಿದು ಕರದಿ ಮೇಳವಿಸುತಲಾಗ
ಪಾಳಸ ಗರದತ್ತ ಕೂಳದಿ ತಿರಿದುಣುವಾ
ಬೇಳುವಿಗನೆ ಬಿಡದಾಳಿಯಾಡುವರಿಗೊಂ
ದೇಳು ನಾಲಗೆಯಾಗಲು.........
.........ಳು ಸಲಹು ನಿರಾಳ ನೀಲಗ್ರೀವನೇ (?) ೩

---

1 ರಿ(ಮೂ)

೧೬

ರಾಗ : ಶಂಕರಾಭರಣ

ಮಾರಾರಿಯ ಪದಹೃದಯರ ಪಂಸವಳಿದ ಪಿ
ಚಾರಗೆಟ್ಟುಳಿ ಸಂಬಿದೆ
ನೀರೊಸದ ನಯನಕ್ಕೆ ನೆತ್ತರೆನು ತಂದು
......ಬುವರೆಂದಳಿಯೇ ॥ ಪಲ್ಲ ॥

ತಕ್ಕ ಹಾಗಿರದೆ ತಾಮಸಜನರೆನ್ನೊಡ
ತೊಕ್ಕವಾಗಿಯೇ ತೋಱಲು
ಹೊಕ್ಕೆನು ಹೊಲಬುಗಾಣದೆ ಹೊಸ ಕಂಟಿಲ
ರಕ್ಕೃತ್ಯಪದೇವೇಳ್ವೆನು
ಗಕ್ಕನೆ ಗನ್ನಘಾತಕ ಹುಸಿನುಸಿಗಳ
ಸೊಕ್ಕಿ ಸೊರಹುತಾಡುತಾ
ತಿಕ್ಕಿ ತಿಱಿದು ಎನ್ನ ಮನವ ಮೂವಿಧಿಯಿಂದ
ಮುಕ್ಕುವರೆಂದಱಿಯೇ ೧

ಇಱಿದರೀರ್ಯೆದು ಸಾರಿಯು ಎನ್ನ ಚಿತ್ತವ
ತಱಿದು ತಾವಿತ್ತ ಮಹಾ
ಉಱುವ ನಂಬುಗೆ ಎಂಬ ವೃಕ್ಷದ ಶಾಖೆಯ
ಮುರಿದು ಮೆಲ್ಲುತಲೊಡನೆ
ಮುಱಿದರೆನ್ನಯ ಮಾತುಗೀತೆಂಬ ಹಂಗನು
ಹಱಿದು ಹವಣೆಗಿರದೆ
ಜಱಿದು ಚಾಗಿ ಜಾಗಿಸಿ ಮೇಕುದೋಱಿ ಮೇಱಿಯ ಮೀಱಿ
ಮೆಱಿವವರೆಂದಱಿಯೇ ೨

ತನುವಿಗೆ ತಾಪವೀವುತ ಮನಸಿನದೊಂದು
ನೆನಹಿಗೆ ಮಾರಿಯಾಗಿ
ಕನಲಿಸಿದರು ಕಾಲು ಮೋದಪೆನ್ನಹೃದಯ ಸ
ದ್ವನಜವೆಂ[1][ದು][1] ನೋಯಿನೆ
ಇನಿತಱಿಂದಲಸಿ ನೊಂದೆನು
ಇನಿಬರಮದನು ಸಿರಿಸಂಪದವಾ
ಮನಸಿಟ್ಟು ಮಾಣಿಸಬಹುದು ನೀಲಗ್ರೀವಾ
ನಿನಗೆ ತಾ ರಿಪುವಱಿಯೇ ೩

1 ಬು (ಮೂ)

೧೭

ರಾಗ : ಆಹರಿ

ಕವಲಲ್ಲ ಲೋಭವನೊಂದನು ತೊಲಗಿದ
ಆಕೆವಾಳನೇ ಮನುಜರೊಳವ ದೇವಾ ॥ ಪಲ್ಲ ॥

ಬಿಡದಡಸಿದ ಬಡತನದಿಂದೆ ಬಹುಕಾಲ
ಕಡುನೊಂದು ಕಣ್ಣುದೆಱಿಪ ಕಾಣದೆ
ಬಡನೊರ್ವನು ಬಾಯಬಿಡಲವ ನೀರಗಂಡು
ಒಡನೆ ಕಾಂಚನವಾಸೆಯುಳಿದು ಸಲಹುವಾ ೧

ಹುಟ್ಟಿದ ಮೊದಲು ದೇಸಿಗತನವಾಮೇಲೆ
ಸುಟ್ಟರೆ ಸಾಯದುಳಿದ ನಂಬಿಗೆ
ನೆಟ್ಟನೆ ಗುಱಿಯಾದಗೆ ಕನ್ನಿಕೆಯ ತಂದು
ಕೊಟ್ಟು ಕೋವರಪ ಮಾಡಿರಿಸಿ ರಕ್ಷಿಸುವಾತಾ ೨

ಈ ಪರಿಯಿಂದ ವಿತ್ತ್ರಪಕನ್ಯವಾಲಯು (?)
ವಾ ಪರಬ್ರಹ್ಮ ನೀಲಗ್ರೀವನಾ
ಓಪಾದ ಭಕ್ತ್ರಜನರಿಗೆ ಈವುತ ಇವರ
ತಾಪತ್ರಯವ ಹಿಂಗಿ ತನುವಿಡಿದಿರುವಂತಾ ೩

೧೮

ರಾಗ : ತೆಲುಗ ಕಾಂಬೋದಿ

ಇವರೆನ್ನ ಮಾತು ಬಗೆಯದೆ ನಿನ್ನನು ಹಾಗೆ
ಇವರಗೆಟ್ಟುತಹರೆ ನೀ ನಡೆಯುವ ಲಕ್ಷ್ಮೀ ॥ ಪಲ್ಲ ॥

ಇಂದೆನ್ನ ಈಕೆ ಈರ್ಯೆದಬ್ದ ಮೊದಲಾಗಿ
ಹೊಂದೀತ ಹೊಱಗೆ ಲೋಕದ ಕಣ್ಣಿಗೆ
ಒಂದಿನ ತೋಱಿದಾ ಪಿತ ಮಾತೆ ಸತಿ ಸುತ
ಬಂಧುಗಳಲಸಿ ಬಿಟ್ಟರೆ ಬೆಂಬಿಡದಳೆನೇ ೧

ಬಿಂಕವೇತಕೆ ಬೇಡದಸಿ ಬಡತನ
ದಂಕೆಗೊಂದದೆ ಹಲಾಯುನ ನಿಕ್ಷೇಪ
ವಂಕೆ ಎಂದೆನ್ನ ಜಱಿದು ನೀತಿಯಱುಹುತ
ಮುಂಕಂಡು ಸಖರಗಲಿದರಗಲದಳೆನೇ ೨

ಹಲವು ಮಾತೇನು ಆಣವ ಮಾಯಾ ಕಾರ್ಮಿಕ
ಮಲಹರ ಗುರುಚೆನ್ನಬಸವೇಶನಾ
ಒಲುಮೆಯ ಕರಕಂಜದಿಂದು[ದಿ]ಸಿದ ಮಹಾ
ಒಲುಗೆಯ್ಯ ವೀರರವರು ನೀನು ಬಡವೆಣ್ಣೇ ೩

೧೯

ರಾಗ: ಪಾಹಡಿ

ಸಲುವದೆ ಸತ್ಪಾತ್ರಕೆಯ ಧರ್ಮಿಯ ದ್ರವ್ಯ
ಹಲವ ಪಾತ್ರಕ್ಕೆ ಹರಿದೆಡೆಯಾಹದಲ್ಲದೆ ॥ ಪಲ್ಲ ॥

ಶಿವಭಕ್ತರೆಡರಿಗೆ ಶಿವಶರಣರ
ನಿವಹಕರ್ಪಿಸಲು ಬಾಹದೆ ಬಾರದು
ತವೆ ಚೋರರಿಗೆ ಸಲುವುದು ಕೆಲವಿರಲೊಮ್ಮೆ
ಭುವನೇಶರೆಡೆಗೆ ಭೋಂಕನೆ ಹೋಹದಲ್ಲದೆ ೧

ಒಂದರೆ ಕಾಸು ಧರ್ಮಕೆ ತನ್ನ ಭೋಗಕೆ
ಸಂದಿಸದದುವೆ ಸಾಧಿಸಿ ರಾಜರು
ಸಂದು ಸಂದಿಗೆ ಗಿ[1][ಲಿ][1]ಕೆಯನಿಕ್ಕಿಸಲು
ಮುಂದೆ ತಂದಿರಿಸುವರೆ ಒಂದಕೆ ಬಾಹದಲ್ಲದೆ ೨

ಬೇಡವೆನ್ನಯ ನೀತಿಯನೆನ್ನ ಬೋಧೆಯ
ಪಾಡರಿವರೆ ಪಲವು ಲೋಭವಾ
ಗೂಡುಗೊಂಡಿಹ ಮನುಜರಿಗೆ ಸಾಟಿನೆ ಬೇಗಾ
ಕೂಡದ ಬುದ್ಧಿ ನೀಲಗ್ರೀವ ದೇವಾ ೩

೨೦

ರಾಗ: ತೆಲುಗು ಕಾಂಬೋದಿ

ಕಾಣೆನು ಎನ್ನ ಕಂದನ ಕಣ್ಣ ಮುಂದೀಗ
ಸ್ಥಾಣುವೆ ಬಾರದೆ ಕನಸಿನೊಳೊರ್ಮೆ ॥ ಪಲ್ಲ ॥

ಇದೆ ಶಬ್ದಮಣಿಯೇಕಾಕ್ಷರವು ವ್ಯಾಕರಣವು ತಾ
ನಿದೆ ನಾಗವರ್ಮನಾಮರಸಿಂಹವು
ಇದೆ ಧನಂಜಯ ಮುಂಗಿರಾಜ ಪುಸ್ತಕವಪ್ಪ
ಇದೆ ಎಂದು ಬೇಡಿದಾಗಿ ಮಗಳನೊರ್ಮೆ ೧

---
[1] ಟಿ(ಮೂ)

ಕನ್ನೆ ಉರವಸುವಾಪಣಸರ ಪಾಡಿಸು
ಹೊನ್ನಹೂವಿಗೆ ಕಿರಣಗೈಯಿಸು
ಉನ್ನತವವೌಕ್ತಿಗಳನು ಕೊಪ್ಪಿಗೆ ಬೇಗ
ಇನ್ನು ತರಿಸು ತಂದೆಯೆಂಬಾತ್ಮಜೆಯನೊರ್ವ ೨

ತನುವಿಹುದೆಲ್ಲಿ[ಯ] ತನಕ ಮಚಿಯದು ಮಹಾ
ಮನವದಚಿಂದಲೆನಗೆ ತೀರದೆ
ಕನಸಿನೊಳೊಮ್ಮೊಮ್ಮೆಯಾದರೆ ತೋಚಿಸು
ತನುಜೆ[1][ಯಿರವ][1]ನಿರವನು ನೀಲಗ್ರೀವಾ ೩

೨೧

ರಾಗ : ಆಹರಿ

ಇದೆ ಒಂದೆ ನಿಂದೆಯಮ್ಮ ಮರ್ತ್ಯಾದಿ ಮಹಾ
ಒದಗಿಂದ ಪರಲೋಕ ಪದಕೆಯ್ದೆಯಮ್ಮಾ ॥ ಪಲ್ಲ ॥

ರೂಪದಿಮ್ಮಡಿ ಗುಣಮೂವಡಿ ಸಿರಿ ನಾಲ್ವ
ಡೀ ಪಸರಿಸಿದ ಯೌವನವೈವಡಿಯಾ
ದೇ ಪತಿಹಿತ...ತದೆಟಕಾಗಿನದೆ ಗರ್ಭಿ
ಣೀ ಪ್ರಸುವಾಗಲಾತ್ಮಜ ಬೇಗವಮ್ಮಾ ೧

ಪಾಕಶಾಸನನ ಚಾಪದವೊಲು ವಿದ್ಯುಲ್ಲತೆ
ತಾ ಕರಮೇಘವಡರಿ ತೋಚುವಂತೆ
ಲೋಕದೊಳಗೆ ನೀನು ಸುಳಿದು ಮೋಕ್ಷಕೆ ಬೇಗ
ರಾಕೇಂದುವದನೆ ಲಾಗಿಪುದರಿದಮ್ಮಾ ೨

ರಸಿಗದೆ ಬನ್ನೂರ ಚೆನ್ನನಾ ಚೆನ್ನೆಯು ಪೊಡೆ
ವಶದಿಂದಲುದಿಸಿ ಷೋಡಶವಬ್ದದೊಳಗೆ
ಒಸದ ಪ್ರಣಮುವಿಡಿದೊಡನೆ ಪುಷ್ಪಕವೇಚಿ
ವಿಷಗ್ರೀವಪುರಕೆ ಹೋಹುದ[2][ಕರಿದ][2]ಮ್ಮಾ ೩

---

[1] ವಿರಯ (ಮೂ) [2] ಕಿವಿರ (ಮೂ)

೨೨

ರಾಗ : ಮೇಚ ಬಹುಳಿ

ಪ್ರೇತವಮನವೆ ಪೆಟಿದಲೆಯನಿರಲು ಬೇಟಿ
ಭೂತಜೀವಿಗಳ ಬೇಡುವ ಶ್ರಾಂತನಳಿಯಾ ॥ ಪಲ್ಲ ॥

ಕೊಡಲರಿಯರು ಕೊಡದಿರೆ ಇಲ್ಲವೆನ್ನರು
ಬಿಡದೆಡೆಯಾಡಿಸುತಿಹರಾಸಿದೋಟಿ
ಕಡೆಯಲ್ಲಿ ಕಡುಪಿನಿಂ ಕೊಸಟಿ ಕೋಪಿಸಿ ಹೋಗು
ನಡೆಯಿಲ್ಲವೆಂದು ನಾಚಿಸಿ ನಾಚದೇಕೆ ೧

ಮೊದಲಿಸುವರು ಮುನ್ನಿತ್ತ ಮುನ್ನಿತ್ತುದಾ ಎಂದು
ಸಾಧಿಸುವರು ಸೇಪೆಗೈಪರಾಮೇಲೆ
ಆದರಿಸದ ಅವಗುಣವ ಸ್ಮರಿಸುತಾಗ
ಬೀದಿಯ ತೃಣಗಂಡವೊಲು ಕಾಬ ಜನರಾ ೨

ಬೇಡಬಹುದೆ ಮಾಡಿಗಿಡಿ ಮನಸು ನಿಜ
ಗೂಡದವಗುಣವಜಿದಿಹ ನೆಲಕಲರಾ
ಬೇಡದೆ ಬೇಡು ನೀ ಗುರುಚೆನ್ನಬಸವನ
ಕೂಡೆ ಕೂಡಿಹ ಕುಟುಹಿನ ಭಕ್ತಪತಿಯಾ ೩

೨೩

ರಾಗ : ಕಾಂಬೋದಿ

ಸುಮ್ಮನದೇತಕೆ ಸುಜನರ ಚಿತ್ತಕೆ
ಮುಮ್ಮಳಿಯನು ದುಷ್ಟರಿರ ಮಾಡಬೇಡ ॥ ಪಲ್ಲ ॥

ಕೋಟಿಯೇತಕೆ ತೊನೆದಾಡುವವರ ತೊಂಗೀ
ತೂಟಾಡಿಸುವರೆ ಕೇಳೊಮ್ಮೆ
ಪಾಟಿ ಮಾಡುವರೆ ನಿಮ್ಮನು ಪಾಟಿಗಳಿರಷ್ಟೋ
ಲೂಟಿ ಏಕದಕೆ ತಾ ಹಮ್ಮೆ
ನಾಟಕದವರೆ ನರರ ಹಾಗೆ ಒಳ್ಳಿದ
ರಾಟಕಾಂಬುದಕೆ ಕಾಬ ಸೊಮ್ಮೆ
ನೀಟಿಸುವರೆ ಮಹಾನಿಂದೆ ನಿಮಗೆ ಮುಂದೆ
ಕೂಟವೆ ಮನೋಹರಕೊಂಗಿ ಜೀವರಿರಾ ೧

ಶಶಿ ರವಿ ಮೇಘದ ಹಾಗೆ ಸಜ್ಜನ ಜನ
ಎಸೆವುದು ಲೋಕೋಪಕಾರ
ಮುಸುಂಕಿಯುವರ ಮುಂದೆ ರಾಹು ಮಾರುತನಂತೆ
ಗಸಣಿಗೊಳಿಸುವರೆ ಕ್ರೂರೆ
ಮುಸಕದೇಹಿಗಳಿರಾ ಮಾಜದದಪಸಜ
ಹುಸಿಯಲ್ಲ ಬಾಹಪಾರಾ
ಹಸನೆಯಶಾಗಿದು ಒಂದು ಬಾಳಿ ನಿಮಗೆ ಹೇಳೆ
ಸಸಿಜೂಟನವರೀಗಾಗೆ ಸಾಟಿದೆ ನಿಂದೆ ೨

ಜಲಚರಕುಲಕೆ [1][ದೀವ][1]ರ ರಿಪುಮೃಗದ ಸಂ
ಕುಲಕೆ ಲುಬ್ಧಕರರಿಯಾಗೆ
ಸಲೆ ಸಲ್ಲದೆಂದರವರು ಬಿಡರದು ತಮ್ಮ
ಕುಲಧರ್ಮವವರೀಗಾ ಬೇಗೆ
ಎಲೆ ಪಿಸುನಾಳಿಯೇನಿದಟಿಂದ ಫಲಸಾಧು
ಕುಲಕತಿಕಂಟಕರಾಗೆ
ಒಲಿವನೆ ಚೆನ್ನನ್ನಾ ಕಾವ ನೀಲಗ್ರೀವಾ
ಕೊಲುವನೀವತಿ ಜೋಕೆ ಕೊಟ್ಟಿತನವೇಕೆ ೩

೨೪

ರಾಗ : ಭೈರವಿ

ಈ ಲೋಕದೊಳು ಬಾಳುವ ವೀರರನೆಲ್ಲ
ಸೋಲಿಸಿದನು ಕಂಜಮುಖಿ ಕಬ್ಬುವಿಲ್ಲ ॥ ಪಲ್ಲ ॥

ಕಡಿಯೆ ಖಡ್ಗದಿ ಶಿರ ಸೀಳಿಯುಪ್ಪೊಳಾಗ
ಲೊಡನೆ ಮದಗಜಗಳ ಗೆದ್ದು ಯುದ್ಧದೊಳು
ಪೊಡವಿಗಾನವರೆ ವೀರರು ಎಂಬರನೆಲ್ಲ
ತಡುಕಿದ ತುಳಿದನಕ್ಕಟ ತುಂಬಿವೆದೆಯಾ ೧

ಮತ್ತೆ ಕೆಲಬರುಗ್ರತರ ಸಿಂಹವವನು ಕೊಡೆ
ಕತ್ತರಿಸಲು ತುಂಡೆರಡಾಗೆ ಜಸದಾ
ಬಿತ್ತಿಪರೆನೆ ಬಿರುದಿಗೆ ಸಂದ ವೀರರ
ಮೊತ್ತವ ಪಲ್ಲುಗಿರಿಸಿದ ಪುಷ್ಪಾಸ್ತ್ರಾ ೨

[1] ದಿಂದ್ವ(ಮೂ)

ಇಂತು ಮೂಲೋಕದ ವೀರ ಸಮೂಹವ
ಚಿಂತೆ ಮಾಡಿಸುವ ಬಾಧಿಸುವ ಬಂಧಿಸುವ
ಕಂತುನೀಲಗ್ರೀವನೊಡವೆರೆದವರೊಳು
ಸಂತವಾಗಿಹನೆಲೆ ಕಾಂತೆ ಕಂದರ್ಪಾ ೩

೨೫

ರಾಗ : ?.....,...

ಭಾವವರಿದರಾಗಲೆ ಭಾವಜವನ
ದಾಪನೆಂದಿರದೀಗಲೆ ಗುರುಲಿಂಗ
ದೇವನು ನಿನ್ನನು ಮಹಾದೆಸೆಯ ಭಕ್ತಸಮೂಹಾ ॥ ಪಲ್ಲ ॥

ಒಂದಱಿವೃತ ಬೇಗ ಒಣಗಿಸಿದೆರಡಾಗ
ಸಂಧಿಸಿ ಮೂಱಕ್ಕೆ ಸಿಕ್ಕ ಸಾಹಸಿ ನಾಲ್ಕಕೆ ದಕ್ಕ
ಬಂಧಿಸಂತಯಿದ ದೂಡಿದಾ ಆಱೇಳೆಂಟ
ಕಂದಿಸಿ ಕರಿಮಾಡಿದಾ ಒಂಬತ್ತ
ಹೊಂದಿದ ಮೂರ್ತಿ ನೀನೆಂದು ಹತ್ತನೊದೆದನೆಂದು ೧

ತನುವಿಡಿದಿದೆ ಸತ್ಯ ತಾನವಯವ ನಿತ್ಯಾ
ಘನಭಕ್ತಿ ಜ್ಞಾನ ತಾ ಘಾಟಿಸಿ ನಿಂದಿದೆ ನತ
ರನುರಾಗವದು ಮಾಣದೆ ವಿಗ್ರಹವಾಂತು
ಇನಿಸಹುದದು ಕಾಣದೆ ಭಕ್ತರಿಗಿನ್ನು
ಅನುಮಾನ ಬೇಱುಂಟೆ ಆಱುಲಿಂಗದ ಗಂಟೆ ೨

ರಸೆಗೆ ಧಾರೇಶ್ವರ ರಾಜಿಸಲಾಪುರಾಗಾರ
ಸಸಿಜೂಟನವತಾರ ಶಿವಪೂಜೆ ಯತಿವರ
ನೆಸೆವ ಕರಾಬ್ಜದಿಂದ ಮಹಾದೇವ
ವೆಸರಾಂತ ಪುರದಿ ನಿಂದಾ ಗುರುಲಿಂಗ
ಜಸವೆತ್ತ ದೇವ ನಿಮ್ಮ ಜಯದನುವಿನ ಸೊಮ್ಮ ೩

೨೬

ರಾಗ : ಶಂಕರಾಭರಣ

ಇನ್ನೇಕೆ ಎನ್ನ ಜೀವನೆ ಕ್ರೂರಸಲ್ಲದೆ
ಎನ್ನಬಹುದೆ ಜೀವರ ಕ್ರೂರರೆಂದು ॥ ಪಲ್ಲ ॥

ಕೆಟ್ಟಕ್ಕಳಿೞೊಳು ಕಾಳೋರಗ ವ್ಯಾಘ್ರ ಚು[1][ಳ][1]ಕೆಯು
ನೆಟ್ಟನಾ ದೊರೆಯ ಜೀವ ನಂಬಿ ನೋವ
ಕೆಟ್ಟಮನಸು ಸುರೆ ತರು ಸಸಿ ಪಶುಗಳ
ನಿಟ್ಟಿಸಲೆಣೆಯು ಸುಜನರನಱಿಯದೊಮ್ಮೆ ೧

ಜನಿತಕಿತ್ತಕಿಯಿಾರಿ ಗುಣಿತರುಚಯದಿಂದ
ಇನಿಸು ಮಿಗಿಲ ಕಂಟಕರೆಡೆವಿಡದೆ (?)
ಮನಸಿಹುದಾವೋ...ಚೂತ ಫಲಸು ತೆಂಗು
ವಿನ ಕುಜವ್ರಜ ಪಡಿದಯರ ಸಾರಿರೆಲೊಲ್ಲ ೨

ಕಡು ಲೋಭ ಕಪಟಕಾತನಕಾ ಪುರುಷರ
ಒಡನಾಡಿ ಬಳಲಿ ನಿಂದಿದೆ ಈ ಮನಸಾ
ಬಿಡದೆನ್ನ ನೋಡಿ ಪಾಲಿಸು......ಹ ಜಗ
ದೊಡೆಯ ನಿನ್ನಡಿಯಲಿಟ್ಟುಕೋ ನೀಲಗ್ರೀವಾ ೩

೨೭

ರಾಗ : ಶಂಕರಾಭರಣ

ಸಾಕು ಸಾಕಾದನಿಬರಿಗೆ ಸಂಸಾರ
ಬೇಕಾದವರಿಗೆ ಬೇಕಾಗಿಹುದೆಂತೋ ॥ ಪಲ್ಲ ॥

ತೆಗೆದೊಂದಯಿದಾ ಹೊನ್ನರುಗುತಿದ್ದ (?)
ಬಗೆಯಿಲ್ಲದವರಿಗೆ ಬೇಸಱಿ ಬೇಗಬಹುದೋ
ಒಗಡಿಸದಿಹುದೊವೊಂದೇಳೆಂಟು ಹೊಂಗಿಹ
ಹಗರಣದರಿಗೆ ಹಾವಸೆಯಂಥಾ ಸಂಸಾರ ೧

ಮನಸನೆಲ್ಲವನು ನೋಯಿಸುತಿಹ ಸತಿಸುತ
ರನುಕೂಲವಿಲ್ಲದವರಿಗೆ ನೋವಹುದೋ
ವನಿತೆಯಾತ್ಮಜರೊಸಗೆಯಲೊಂದುಗಾಲ ಹೊ
ನ್ನಿನವಾದವರಿಗೆ ದೀಪನವೋ ಈ ಸಂಸಾರ ೨

---
[1] ಳಿ(ಮೂ)

ಬಿಡದನುದಿನ ಕಾಂತೆ ಕನಕ ಭೂಮಿಯು ತನ್ನ
ಒಡವೆಯೆಂದವರಿಗೊಮ್ಮಿಗೆ ಅಳಲಹುದೋ
ಸಡಗರವಹುದೋ ಸಂಪದವ ನೀಲಗ್ರೀವಾ
ನಡಿಗೆ ಒಪ್ಪಿಸಿದವರಿಗೆ ಮಹಾ ಸಂಸಾರ ೩

೨೮

ರಾಗ : ದೇಸಿ

ಹೋ ಹೋ ಇಚ್ಛಕ ಜೀವ ಹೊರೆಯಬಹುದೆ ಬೆಂದ
ದೇಹವ ದೇಹಿ ಎನುತ ಲೋಗರೆಡೆಯ ॥ ಪಲ್ಲ ॥

ಪುರುಹೂತ ಪುಷ್ಪಾಯುಧ ಫಲುಗುಣ ಕರ್ಣ
ಗೊರೆಯೆಂದು ಭೋಗ ರೂಪಿಗೆ ಮಿಾಱಿದ
ದುರುಗಲಿತನಗೆ ಪರಕರಕೆ ಕಲ್ಪಿಸಿ ಕಂಡ
ವರ ಕಾಡಿ ಬೇಡಿ ಬಾಡಿದೆ ಮೊಗವಕಟಾ ೧

ಬಯಿಚಿಡುತಿಹೆ ಬಾಹಿರವ ಮಾಡುವೆ ಮಹಾ
ಮಯಿವೆಚ್ಚುತಿಹೆ ಮೊಗಗಂದುತಿಹೆ
ಬಯಿದರೊಳ್ಳಿದನೆಂದರೊಮ್ಮೆ ವ್ಯುತ್ಪತ್ತಿಗಾಲೋ
ಕಯಿಕ ಸಾಗಿಹೆ ಜನರೆಡೆಯು ಕಪಟರೂಪಾ ೨

ದೊರೆವುದೆ ದೊರೆಯಬಹುದೆ ಬಂದರೆ ಕೂಡೆ
ನೆರಪುದೆಂದಿಗೆ ತನು ಈಶಭಕ್ತಿ
ಶರಣಸಂಕುಲವಿದ್ದಾಗಲೆ ಮೋಕ್ಷವೊಂ
ದಿರದೆ ಸಾಧಿಸು ನೀಲಗ್ರೀವ ದೇವಾ ಎಂದು ೩

೨೯

ರಾಗ : ಕಲ್ಯಾಣಿ

ಎರ್ದೆ ಹಾರುವಱಡಬೇಡಾ ಎಂದು ಎನ್ನೆದೆಗೇಡಾ
ವೊದೆ ಇನ್ನದ ನಾನೊಂದೆವೊದೆ ನೀಲಗ್ರೀವ ತಂದೆ ॥ ಪಲ್ಲ ॥

ನನ್ನಿಂದಾರನು ಕಾಣೆ...ನರರೊಳು ನಿಮ್ಮಾಣೆ
ಬನ್ನಬಂದವರಿಲ್ಲ್ಲ ಬಾಹಿರಂಗವ್ವೆಸಲ್ಲ ೧

ಒಂದೆರಡಲ್ಲ ಹಾಗೆ ಒಡಲೊಳಿಡಿದ ಬೇಗೆ
ನಿಂದುರಿಯಲು ದೇಹ ನಿಲ್ಲಲಾವುದು ಮಹಾ ೨

ನಗುವರಿದಿರತಂದು ನಾಚಿಸುವುದು ಒಂದು
ಸುಗುಣವಲ್ಲೆಲೆ ದೇವ ಸಲಹೋ ನೀಲಗ್ರೀವಾ ೩

೩೦

ರಾಗ : ಶಂಕರಾಭರಣ

ತಿಳಿದರೇನತಿಶಯ ವಿವಿಧ ವಿದ್ಯಗಳನು
ಬಳಲಿ ಬಾಹಿರದಿ ಬಾಳುವ ಬಹುಮುಖರೀಗಾ ॥ ಪಲ್ಲ ॥

ಕಾಣರು ಕರುಣರಸದ ಕರುವಿನೊಳಿಹ
ಪ್ರಾಣಲಿಂಗದ ಪರವಶದ ಪ್ರಣವುರ
ಮಾಣದೆ ಮರುಳಿನಂದದಿ ನಿಂದಿಸುತೆ ಪುಷ್ಪ
ಬಾಣನಂಡಲೆಯ ಬಲೆಯ ಬಿದ್ದುಯಿಹರೀಗ ೧

ಮಱದು ತಮ್ಮಯ ನಿಜವನು ಇದಿರಿಗೆ ಬಾಯ
ದೆಱದುದೇಸಿಯ ಹುರುಡಿನ ಪೂಜೆಯಿಂದ
ಕೆಱೆ ತೊಱೆ ವನವಡವಿಯನಱಸುತ ಮುಕ್ತಿ
ಎಱೆಯನನಱದೆಱಗದೆಯಾಡುವರೀಗ ೨

ಒಡವನುದಾರ ಲೋಭಿಯು ಸಿರಿಯಧಮಗೆ
ಕಡುರೂಪುವಿರೆ ಗುಣವಱದುಗೂರ್ಮಿಸುವ
ಸಡಗರುಗನಱದ ವಿದ್ಯದಲಾವ ಫಲ ಚೆನ್ನ
ನೊಡೆಯ ನೀಲಗ್ರೀವನೊಡಪೆರೆಯದರೀಗ ೩

೩೧

ರಾಗ : ಭೈರವಿ

ಮೀಱಲಾಪರೆ ವಿಧಿಯ ಜೀವರಿಗಿನ್ನು
ನೂಱು ಶಾಸ್ತ್ರದ ಶುದ್ಧಿಯ ಮನಸು ಸಂದು
ಚೀಱಲವರ ಫಲಪ್ರಾಪ್ತಿಯೆಂಬುದೆ ಬೇಱೆ ॥ ಪಲ್ಲ ॥

ಮಲೆಯಮಾಚಲದಿ ಬೇಗ ಮಾಣದುದಿಸಲಾಗ
ನೆಲಸ ಗುಣದೀ ಹಾಗೆ ನೆಟಿ ತರುತೃಣವೀಗೆ
ಸಲೆ ಗಂಧವತಿ ಬಂದುದು ಸಾಕವಚಿಂತೆ
ಒಲು ಬಿದಿರಿಗೆ ಹೊಂದದು ಅಜ್ಞರಿಗಿನ್ನು
ಹಲವು ಶಾಸ್ತ್ರದ ಬೋಧೆ ಹಾಗವಿವರಿಗೆ ಬಾಧೆ ೧

ಪರುಷಮುಟ್ಟಿದ ಲೋಹ ಫಲವು ಕಾನನವಾಹ
ಸಿರಿಯನರಿದು ಕೂಡೆ ಸಿಡಿದ ಹಂಚನು ನೋಡೆ
ಬೆರಸಲಂತದು ಹೇಮವೆ ತಾಮಸರಾದ
ನರರ ಬೋಧಿಸೆ ನೇಮವೆ ಬೇಡದಚಿಂದ
ಇರದೆ ಚಿತ್ತಕೆ ದುಃಖ ಇನ್ನದೇತಕೆ ಲೆಕ್ಕ ೨

ಕಡು ತವಕದೀ ಜೀವ ಕಲ್ಲಕರಗಲಾವ
ಒಡವೆ ನಿನಗೆ ಬೇಡ ಒಮ್ಮೆ ಸಾಚಿದೆ ನಾಡ
ಜಡಜೀವರುಗಳೆಡೆಯ ಮೌನವ ತಾಳಿ
ಒಡನೆ ನೀನತಿ ನಡೆಯ ಯೋಚನೆಯನು
ಬಿಡದೆ ನಿನ್ನನು ಕಾವ ಬಿರಿದು ನೀಲಗ್ರೀವಾ ೩

೩೨

ರಾಗ : ಆಹರಿಪಂತು

ತನ್ನಿಚ್ಛೆಯಲ್ಲ ತಾವರೆಗಂಧ ರಚಿಸಿದ
ತನ್ನ ಹಣೆಯ ಮಹಾ ಬರಹ ಜೀವಾ ತನ್ನಾಧೀನವೇ ॥ ಪಲ್ಲ ॥

ಪರರ ಮನಸ ಸುಮತಿಯಚಿದು ನೀತಿಯ ಬೇಗ
ವಿರಚಿಸುವನೆ ತಾನೀಗ ಜೀವಾ
[1][ತಿಳಿ][1]ಗೇಡಿತನದ ಬುದ್ಧಿಯ ಯೋಚಿಸಿದನೆಂದು
ನರರಾಡಸಲ್ಲಾತನಳವೇ ೧

ಬಲ್ಲ ಪುರುಷ ಬಹುಸಿರಿವಂತನು ನಡೆನುಡಿ
ಯೆಲ್ಲ ಸಹಜವೆಂದು ಜನರು ಜೀವಾ
ನಿಲ್ಲದೆ ಸ್ತುತಿಯಿಸಿ ಯಾತನೆಗೆ ಬಡತನ ಬರ
ಲೆಲ್ಲ ಹುಸಿಕನೆನ್ನಬಹುದೆ ಜೀವಾ ೨

---

[1] ತಿಟಿ (ಮೂ)

ಪೂಜಬಾರದು ಮನಸಿಗೆ ತಂದು ತೋಜಿಸಿದ
ಮೂಜಗದೊಡೆಯನೆನಿಸುವ ಜೀವಾ
ರಾಜಶೇಖರನು ನೀಲಗ್ರೀವ ನೀತಿಯು
ಓಜೆಯಿಂದದನೊಯ್ಯನೊರೆದೆ ಜೀವಾ ೩

೩೩

ರಾಗ : ಆಹರಿಪಂತು

ಎಂಥಾ ದೇಹವೊ ದೇವಾ ಎನಗಿತ್ತುದಿದು ಕಾವಾ
ನಂತಃಪುರವೊ ಯಮಂಪುರವೋ ದೇವಾ ॥ ಪಲ್ಲ ॥

ತವಕದ ವಾಸ ತಾಪದ ತಾಣ ತಾಮಸ
ಭವನವೊ ಲೋಭದಾಶ್ರಯವೋ ಮೋಹ ದೇವಾ
ಕವಿದಿಹನೆಲೆ ಕ್ರೋಧ ಮದ ಮತ್ಸರ ಮಾಯೆ
ತವೆಯಿಹ ಗೊತ್ತೊ ತಾ ತನುವೋ ದೇವಾ ೧

ಜನನ ಮರಣ ರೋಗ ರುಜೆ ಸಿರಿ ದಾರಿದ್ರ್ಯ
ಘನಸುಖ ದುಃಖ ತಾಗುವರೆ ಬ್ರಹ್ಮಾ
ಮನಸಂದು ರಚಿಸಿದ ಗುಜಿಯಿದೊ ಕಾಯವೋ
ನೆನಹಿಡೆ ಮಜಿಹೆ ಮಂದಿರವೋ ದೇವಾ ೨

ಇತ್ತೆಯಾ ಶರೀರವ ಸಲಹಿದೆ ಕಡೆಗೆ ನಿ
ನ್ನತ್ತಲೊಯಿವೆ ನೀನೆ ಇದಱದೊಂದು
ಬಿತ್ತರದನುವ ನಾನಱಿದೆನಿಸು ಸುಖ ದುಃಖ
ಮೊತ್ತ ನಿನ್ನದು ನೀಲಗ್ರೀವ ದೇವಾ ೩

೩೪

ರಾಗ : ಮೇಚ ಬವುಳಿ

ನರದೇಹದಿಂದ ನನ್ನಿಂದ ನಾನತಿನೊಂದ
ಪರಿಯುಡುವು ಬಾಲದಿಂದ ತನ್ನ ತಾ
ನಿರದೆ ಬಂಧಿಸಿದ ಛಂದ ಎನಗೀಗ
ಗಿರಿಜೆಯ ಮನತಾಹದೊಂದ ತಾಯೇ ॥ ಪಲ್ಲ ॥

ತನ್ನ ಕಣ್ಣೆರಡಿಲ್ಲ ತರಳೆಯೊರ್ವಳು ಹುಲ್ಲ
ಉನ್ನತದಿ ರಸವೀ ಹಲವಾ ಪಿರಕ್ತಿಯೊಳ್
ತನ್ನ ಮಯ್ಯಿ ಕಯ್ಯಿ ಕಾಲು ಕಟಿ ಕಂಠಗಳಿಗೆಲ್ಲಾ
ಬಿನ್ನಣದಿ ಸ್ತುತಿಯಾಕೆಮಿಾಷಮನೆ
ಎನ್ನ ಧೀಃಕಿಡಿಯು ಸೋಕೆ ತನು ಬೆಂದ
ಕನ್ನೆಯತಿಕಥೆಯ ಜೋಕೆ ತಾಯೇ ೧

ಭರವಸದಲಾಗ ಬಾಳುವೆನೆನುತ ಬೇಗಲಾ
ತೆರಳಿಪ್ಪಳು ತನ್ನೊಡಲೊಳು
ಬಿಡದೆ ಒರುವ ನೂಲನು ಮನೆಯು ಮಾಡೆ ತನ್ನನೆ ಸುತ್ತಿ
ಪರಿಣಮಿಸುವದಟಿ ಬಾಳೆಯೆನ್ನಮನ
ದುರುವಣೆಯದೊಂದು ಬೇಳ್ವೆ ನೋಡಮ್ಮ
ಹರಸಿಯೇನ ಪೇಳ್ವೆ ತಾಯೇ ೨

ಹೋಗಲಾಗದೆ ಹೊಲಬರಿಯದವರಂತಾದೆ
ಏಗೈಪೆನೆನ್ನದೊಮ್ಮೆವೊರ್ಮೆ
ಕೂ[1][ಗು][1] ಮಾರಿಯು ಕರೆದ ನರಿಯಂಥ ಮನದಲೆಯ
ಬೇಗ ನಿಲ್ಲಿಸು ಪೆತ್ತಳೆ ನೀಲಗ್ರೀವ
ನಾಗು ಚೆರಿಗೆ ಕರ್ತಳೇ ಎನ್ನಸುವ
ಜೋಗೈಸುತಿಹಪರ್ತಳೆ ತಾಯೇ ೩

೩೫

ರಾಗ : ಮೇಚಬಹುಳಿ

ಒಲಿಯಾಗಿಡುವರೆ ಬಾಹಿರದರನ್ನೃತವಾದ
ಖಳಲರೆಂಬ ಗ್ರಹಗಳಿದಿರ ನಿನ್ನನವರ ದೇವಾ ॥ ಪಲ್ಲ ॥

ಒಂದೊಂದಾಯಸ ಒಡನಾಡಿದಾಗಲೆ ಕೂಡೆ
ಕುಂದು ಹೆಚ್ಚದೆ ಒಂದು ಮಾತಾಡೆ ನೋಡೆ
ಒಂದಪ್ಪುದೊಂದಪವಾದ ನಿಂದೆಯ ದುಷ್ಟ
ರಿಂ[2][ದಲೀ][2] ಭೂತದಿದಿರ ನಿನ್ನವರ ದೇವಾ ೧

[1] ಗ(ಮೂ) [2] ದುಲಾ (ಮೂ)

ಮಾರುತನಿದಿರಿಗೆ ಜ್ಯೋತಿಯು ವಾಮದೊಡನೆಯ
ಕ್ಷೀರವ ಸಲಿಲಸಂಗದಲಾಗ ಮಥುವಾ
ಸಾರಿದೂರಿಯು ಸರಸಕೆ ಸೂತವಿಟ್ಟವೊಲ್
ಕ್ರೂರ ನಿಶಾಚರಿದಿರ ನಿನ್ನವರ ದೇವಾ ೨

ಕುಸುಮವೊಗೆದ ಚಂದನ ತರು ಪಣ್ಣಾದ
ರಸದಾಳಿಯಂತೆಸೆದಿಹರು ನಿನ್ನವರ್ಗೆ
ಒಸೆದು ನಿನ್ನವರ ಸಂಗವನೆ ಪಾಲಿಸಿ ಚೆನ್ನ
ಬಸವರಾಜನೆ ರಕ್ಷಿಸು ನಿನ್ನವರ ದೇವಾ ೩

೩೬

ರಾಗ : ಆಹರಿ

ಆರಾದರೇನು ಎಂದು ಉತ್ತಮರಿಗೆ
ವಹಿಾಋ ವುನೆಯುಲು(?) ನಿನಗೆ ಕಷ್ಟ ಮನುಜಾ ॥ ಪಲ್ಲ ॥

ಬಲ್ಲ ಮಾತದು ಹಾಗೆ ಕಾಣದೆ ನಂಜುಂಡನ
ಬಲ್ಲವರೊಡನೆ ಬಯಲ ಬೇಗೆ ಬೇಡಾ
ಸಲ್ಲದೆಲವೊ ಸಾಕಿನ್ನವರ ಮನಸು ನೊಂದು
ದೆಲ್ಲ ತಾ ಮಾರಿ ನಿನಗೆ ವುತ್ತ ಮನುಜಾ ೧

ಲೇಸಿದಾದುದು ಹಾಲಸವಿದು ಕುಜನ ಮಹಾ
ಶೇಷನಂತತಿ ವಿಷನಿಂದುದೇ ನಿನಗೆ
ರಾಶಿಜನರನೆಲ್ಲ ಜಱಿದು ನಿನ್ನನೇ ಮನ
ದಾಸೆಗೈದವರ ನೋಯಿಸೆ ನಷ್ಟ ಮನುಜಾ ೨

ಪುರುಷ ಕಾರ್ಬೊನ್ನ ಸಂಜೀವನಾ ಒಯ್ಯನೆ ಪುಣ್ಯ
ವಿರಹಿತ ನಿನಗೆ ಕಂಡುದೆ ನಿನಗೆ ಗಂಜಿಯಹಾಗಿ
ಗುರುವ ನರನು ಎನ್ನಬಹುದೆ ನಿಲೀಗ್ರೀವಾ
ಪರವಸ್ತು ಮೊಗದೆಗೆಯನೆ ಪಾಪಿ ಮನುಜಾ ೩

೩೭

ರಾಗ : ನಾಟಿ

ಎನಗಾರುಯಿಲ್ಲ ಎಳೆವೆಱಿದಲೆಯ ನೀನಲ್ಲ
ದನುಕೂಲರಾವೆಡೆಯುರಧಿಕ ಕಟ್ಟಾಡೆಯಾ ॥ ಪಲ್ಲ ॥

ಇಂದೆನ್ನ ಮನಸಿಗೆ ಇರದೆ ಸಾಕೆನೆ ಬೇಗ
ಸಂಧಿಸಿದೆ ಋಣಸಿರಿಯು ಸವೆಯದಟ ಪರಿಯಾ
ಚಂದವಳಿದತಿ ಕುಜನಚಯು ನುತಿಸಂವಂತ ಜನ
ಒಂದಲೆಯು ಕರಕಿಟ್ಟ ಒಲಿದೆನಗೆ ಕೊಟ್ಟಾ ೧

ಒಡನೆ ಸುಹೃದರತ್ತ ವಾರೆಯಾಗಲು ತತ್ತ
ಕೊಡುವೆ ತಪನೀಯ ಕೊಟ್ಟವರೆ ಸಹಾಯು
ಸಡಗರವ ರುಜೆದಾಯು ಸಾರಿವುರಿ ಕಾಯು
ಕಡೆಯಾಗದಂತೆ ಕಾವವರು ನಿನ್ನಂತೇ ೨

ಲೋಕವಳಿಯದ ಹಾಗೆ ಲೋಭದಿಂದೆನ್ನ ಮಿಗೆ
ನೀ ಕಡೆಯ ಬಿಟ್ಟಿಟ್ಟ ನಿಜವವರೆ ಗುಟ್ಟು
ನಾ ಕಾಬುದೊಂದು ಪದ ನನಗೆ ಪಾಲಿಸಿದೆ ಸದಾ
ಏ ಕರುಣವೋ ದೇವಾ ಎಲೆ ನೀಲಗ್ರೀವಾ ೩
ಅಂತು [1][ನೀತಿಸಾರ ೩೦ಕ್ಕಂ][1] ಮಂಗಳ ಮಹಾಶ್ರೀ

---

[1] ಶೃಂಗಾರ ನೀತಿಯಿಂದಲೂ ಪದ ೫೫ಕ್ಕಂ ಮಂಗಳ ಮಹಾಶ್ರೀ

ಪದ್ಧತಿ : ಮೂರು

೧ + ವೈರಾಗ್ಯಮಾರ್ಗದ ವಚನ

೧

ರಾಗ : ಶಂಕರಾಭರಣ

ನಂಬಿದೆನೆರಡಿಲ್ಲದೆ ನಿಮ್ಮ ಪಾದವಾ
ಕುಂಭಿನಿಗೇಕೊ ದೇವಾ
ಎಂಬ ಶ್ರುತಿನೆರ್ದೆಗೊಂಡು ಸಾರಿದೆ ತ್ರಿ
ಯಂಬಕನವತಾರನೇ ॥ ಪಲ್ಲ ॥

ಹಲವು ಭವದ ಬಲೆಯೊಳು ಬಿರ್ದ ಮುಕ್ತಿ
ಹೊಲಬುಗಾಣದೆ ಹೃದಯಾ
ತಲೆದೊಡಕಿದ ನೂಲ ತೆಱನಂತೆ ತತ್ತ್ವದ
ನೆಲೆಗೆ ತಂದು ನೆಲೆಗೆ ತಾ ದೂರವಾಗಿ
ಜಲದ ಪತ್ರದ ವಾರಿಯಂತೆ
ಚಲಿಸುವುದಾಱ[ಡಿ]ಗೆ ಬೆದಱಿ ಬೇಗದಿ
ಫಲವ ಹಾರದೆ ಬಿತ್ತಿ ಮೊಳೆಯಂಕುರಿಸಲತಿ
ಮೆಲುವವನು ಮತ್ಪ್ರಭುರಾಯನೇ ೧

ಮಾಣದೆ ಮನಸಿಜನೆಂಬ ತಸ್ಕರತನು
ಕಾಣದೆಡೆಯಂ ತನ್ನಯಾ
ಬಾಣವೈದ್ಯರಿಂದ ಬಲುಹನಳಿದು ಎನ್ನ
ಪ್ರಾಣವ ಪಿಡಿದೆಳವಾ
ಜಾಣುವೆ ಆನುಜನರೊಡನಾಡಲವರು ನಿ
ತ್ರಾಣಿಗಳೆನ್ನಂದದಿ ಕಾಣರದಕೆ
ಕಾರಣವೆಂದು ಮೋಕ್ಷದ
ಸ್ಥಾಣು ನೀನೆಂದಱಿದು ೨

---

[1] + ಶ್ರೀ ಗುರುಬಸವಲಿಂಗಾಯ ನಮಃ (ಮೂ)

ಹುಸಿ ಹುರುಡುಪಚಾರ ಹದಿರು ಘಾತಕ ಮಹಾ
ವಶವಾಗಿ ವರ್ತಿಸುವಾ
ರಸಿಕರೆನಿಸಿ ರಚನೆಯ ನುಡಿ ರಂಜಿಪ
ಅಸದಳ ಲೌಕಿಕರಾ
ಗಸಣೆಯೊಳಿರಿಸಿ ಗೆಲುವ ಪರಿಯನು ನೀನು
ಒಸೆದು ಒಯ್ಯನೆ ಪಾಲಿಸಿ
ಶಿಶು ಚೆನ್ನ ಬಾರೋ ಬಾಯೆಂದು ಕರೆದು ಚೆನ್ನ
ಒಸವರಾಜನೆ ಸಲಹೋ ೩

೨

ರಾಗ : ಪೂಡ್ಡಿ ಧನ್ಯಾಸಿ

ಇವನೆಲ್ಲಿಯವನು ಎನ್ನದೆ ಗುರುವೆ ಎನ್ನ
ಹವಣ ನೀನಱಿದಱುಹಿದೆ ಗುರುವೇ ॥ ಪಲ್ಲ ॥

ಹಲವು ಜನ್ಮವ ಹೊಂದಿ ಬಂದನಾ ಬಂದು
ಮಲತ್ರಯಗಳಿಗೊಮ್ಮೆ ಸಂದನಾ
ತಲೆಕೆಳಕಾಗೀತ ನಿಂದನಾ ಕಂಡು
ಅಲಸದೆತ್ತಿದೆ ಕೃಪಾನಂದನಾ ೧

ಕರಣಾದಿಗಳಹಳಂ ಹಬ್ಬಿದಾ
ಪಿರಿದಹಂಕಾರದಿಂದುಬ್ಬಿದಾ
ಪರರ ನೀ ನಿಂದಿಸಿ ಕೊಬ್ಬಿದಾ ಜಡ
ನರನೆಂದೆನ್ನದೆ ಎನ್ನ ತಬ್ಬಿದಾ

ಘನನಿರಂಜನ ಜ್ಞಾನ ಪ್ರಭುವಯ್ಯಾ ಎನ್ನ
ಮನವೆ ತಾ ನಿಜ ನೀಲಗ್ರೀವಯ್ಯಾ
ತನುವೆ ಮದ್ಗುರು ಚೆನ್ನಬಸವಯ್ಯಾ ಎಂಬ
ಅನುವನಱುಹಿದೆ ಶ್ರೀಗುರುವಯ್ಯಾ ೩

೩

ರಾಗ : ಆಹರಿ

ಈತನಿರವಱಿವರಾರೊಮ್ಮೆ ಮನುಜ
ವ್ರಾತದೊಡನಾದಿಯಾಗಿರಲದರಸೊಮ್ಮೆ ॥ ಪಲ್ಲ ॥

ತನುವಿದ್ದು ತವೆ ತಿಂದು ತೇಗುವತಿ ಮನವಿಲ್ಲ
ಮನವಿರಲು ಮಾಯ ಮೋಹದ ತೊಂಡು ತೊಳಸಿಲ್ಲ
ಧನವೊದಗಿಧಾತುಗುಂದಿಪ ಲೋಭದ ಥಟ್ಟಿಲ್ಲ
ಮುನಿಪ ತಾ ಮೌನವೆಂದಿಲ್ಲಾ
ಮನೆವಾಸಿಯಾಗಿ ಮಚ್ಚರಿಪರಿಗಳಾರಿಲ್ಲಾ
ಸನುಮಾನಿಯಹುದು ಸಾಗಿಸುವ ಫಲಪದವಿಲ್ಲ
ನನೆಗಣೆಯೆನಂತಕರ ನಾಡಕರೆ ಕರೆಯಿಲ್ಲ
ಜನರಂತೆ ತೋಱಿ ಜಗಕೆಲ್ಲ ಘನದ
ನೆನಹೆ ರೂಪಾದ ಬಯಲನು ಲೋಕವೆಲ್ಲ ೧

ತೆಗಳು ಬಿಗುಹು ಹೀನತಾಪ ತಾಮಸಂಗಳ ಜಱಿದು
ಒಗುಮಿಗೆಯ ಮದದ ಮದವೆಂಟ ಸೊಂಡಿಲ ಕೊಱಿದು
ಬಗೆಯಲವುಕುತಿಹ ಸಪ್ತವ್ಯಸನಗಳಱಿದ
ನಗೆಮಾಡಿ ನರರವೆಯ ಮಱಿದಾ
ಸಿಗಿದುಗಿದನಿನಿಸಿನಿಸವೆಯಿದೇಂದ್ರಿಗಳ ಬೆಱಿದ
ಹಗೆಯಂತೆ ಹವಣಿಸುವ ಹಮ್ಮುಬಿಮ್ಮನು ಪೊಱಿದ
ಸೊಗಯಿಸುವ ಸಂಸಾರಸುಖದ ಸುಗ್ಗಿಯ ತೊಱಿದ
ನಿಗಮ ಶಾಸ್ತ್ರದ ನಾನಾ ತೆಱದ ಒಡಲ
ಬಗೆಯನನುವಱಿದು ಭಕ್ತರಿಗೆ ದಯೆಗಱಿದ ೨

ನಿಟ್ಟಿಸಲು ನಿಟಿಲನಯನದ ದೇವನವತಾರ
ಪಟ್ಟಕಧಿಪತಿಯಂತರಂಗ ರಾಜ್ಯೋದ್ಧಾರ
ಕಟ್ಟಕಡೆಯೊಟವಾಡದ ಕಪಟಸಂಹಾರ
ಒಟ್ಟಯಿಪ ವಾದಿ ಜನದೂರ
ಘಟ್ಟಿಗುರುಸಿದ್ಧಬಸವನ ಶಾಂತರಸ ಸಾರ
ಕಟ್ಟೆಱಕದಿಂ ಕಂಜಕರವೆಂಬ ಕಾಸಾರ
ನೆಟ್ಟನುದಿಸಿದುದಿಂದು ನಿಜದಿ ಪುರುಷಾಕಾರ
ದಿಟ್ಟ ಚೆನ್ನಬಸವಕುಮಾರ ಚೆನ್ನಾ
ಗಿಷ್ಟತೆಯನಿತ್ತು ಸಲಹುವ ಪ್ರಾಣಾಧಾರ ೩

೪

ರಾಗ : ಕಲ್ಯಾಣಿ

ಮಾತಿಗಳಿದು ಮನಸಿಜನೆನಿಸುವ ಗ್ರಹಕಾಟ
ನೂತನ ನುಡಿಗಲಿಗಳಿಗಸದಳವವನಾಟ ನಗ
ಜಾತೆಯಂರಸನ ಜಳಿಯಲಿಡೆ ಚೆಂದತಿ ಜೂಟ ಕಾವನು ಕಾಂತೆ ॥ ಪಲ್ಲ ॥

ಮಗಳ ತೋಳಿಯೆ ಮಾಧವತನಯನ ಶಿರವೊಂದಾ
ಉಗುರಿನಿಂದಲಿ ಊಣಯದಲಿರಿಸಿ ಮನಸಂದಾ
ಹಗರಣದಿಂದ ಹಾವಾಡಿಯ ಕರೆತಂದಾ ಹೀಗೆ
ಜಗದೊಡೆಯನ ಜಾಣುವೆಯಿಂದ ತೀರಿಸುತ ಬಂದಾ ೧

ಪಾಕಶಾಸನ ಪರಮೇಷ್ಠಿ ಶೌರಿಯ ಮನವಾಜೀ
ಸಾಕು ಸಮೂಹದಸುರ ಬಂಧಿಸುವರೆ ಪಾಜೀ
ಲೋಕದೊಳಗೆ ಲೋಗ ವೇಷದಾಲಿಯೆ ರೂಪಮಾಜೀ ಬಹು
ಮೂಕತೆಯಾದ ಮುನಿಗಳೆರ್ದೆ ಬಿಟ್ಟುವ ಸೂಜೀ ೨

ಇಂತು ಈರೇಳುಲೋಕದ ಜೀವಾವಧಿಯ ಕಾಂತಾ
ಸಂತಸದಿಂದ ಸಾಧಿಸಿದ ತನ್ನನಳಿದರೆ ಶಾಂತಾ
ಚಿಂತಿತಾಯಕ ಚೆನ್ನಬಸವರಾಜನ ನೆಟಿ ನೋಂತಾ ಘನ
ತಂತ್ರವನಳಿದು ತಾನಾದ ಮಹಿಮಂಗವಬಿಂತಾ (?) ೩

೫

ರಾಗ : ಶಂಕರಾಭರಣ

ಗುರುವಿನಿದಿರದಿಹದಿರಿದಿರಿಡುವತಿ ಮದ ಬೇಡ ಜೀವಾ
ಗುರು ಪರತರ ದಿವ್ಯವರ ಜ್ಯೋತಿಯೆಂದ ನೀನಳಿದು ಜೀವಾ ॥ ಪಲ್ಲ ॥

ಗುರು ಸದಾಶಿವ ಗುರು ಸತಿಯುಮೆ ಗುರುಸುತ
ಕರಿಮುಖ ಗುರುವಿರಾ ಜೀವಾ
ಗುರು ಸಖರ್ವರ ಗಣೇಶ್ವರರು ಶ್ರೀಗುರುಕುಲ
ಹರಕುಲ ಗುರುನುಡಿ ಜೀವಾ
ಪರಮ ಪಂಚಾಕ್ಷರಿ ಎನಂತಿಹ ಶ್ರುತಿಯಾಗಿ
ಪರಿಯನಳಿದು ಕೂಡೆ ಜೀವಾ
ಗುರುವಿನೆಡೆಯು ಗರುವಿಕೆ ಗರ್ವವಿರುತಿರೆ
ಉರುವ ನರಕ ಕೇಳು ಜೀವಾ ೧

ನುಡಿದ ನುಡಿಯು ಪುಸಿಯಿಡಂತ ವಿಪ್ರನ ಮಿಗೆ
ಮಡುಹಿ ಮಾನ್ಯರ ಮಾತ ಜೀವಾ
ಜಡಮತಿ ಜನರ ರಚ್ಚೆಯೊಳಾಡಿ ನಿಂದ್ಯವ
ಬಿಡದೆ ಕೇಳಿದ ದೋಷ ಜೀವಾ
ಕಡೆಯಿಲ್ಲದನೀತ ಕಳೆಯಬಹುದುಱಿ ಗುರು
ನುಡಿಯ ಲೆಕ್ಕಿಸದೀಗ ಜೀವಾ
ನಡೆಯಲವನ ಪಾಪ ಕಡೆಯು ಕಾಣೆನು ಜಗ
ದೊಡೆಯ ತಾವ ಕಾವನೆ ಜೀವಾ ೨

ಮಾಯುವ ಗವಿಸಿಹ ಪುಱುವೆಯ ದೇಹ ವಿ
ಡಾಯಮೆಂಬುದಱಿಂದ ಜೀವಾ
ಕಾಯಜರಿಪು ಗುರುವಾಜ್ಞೆ ಮಿಾಱಿ ವ್ಯ
ಥಾಯ ಮಾಡಿದ ಭಕ್ತಿ ಜೀವಾ
ಬಾಯಬಿಟ್ಟರೆ ಒರಲಱಿಯದಾಗಲು ನಿ
ರ್ಣಾಯವಹುದು ಮೋಕ್ಷ ಜೀವಾ
ಸಾಯಸವಳಿ ಶರಣಾಳಿಗೂಡಿಯೆ ಗುರು
ರಾಯ ಶರಣು ಎನ್ನ ಜೀವಾ ೩

ಫಲವ ಸಾಗಿಸಿ ಸಲಹುವದಾತನ ಹೊಲ
ಕಳೆಯ ಕಾಣುತಲಾಗ ಜೀವಾ
ಮುಳಿದು ಮುಱಿದು ಬಿಸುಟ್ಟುವನಲ್ಲದೆ ಕೈಯ
ಬೆಳಗೆ ತಾ ಮುನಿವನೇ ಜೀವಾ
ತಿಳಿದೊಳಗಱಿದ ತನ್ನಯ ಭಕ್ತರೊಳು ಕಾಮ
ಕಳವಳವಿರುತಿರೆ ಜೀವಾ
ತಳುಹದಳಿದನದ ಬಳಿಕ ಭಕ್ತರ ಪ್ರಾಣ
ಕಳೆಯ ಕಾರಣ ಜೀವಾ ೪

ಚದುರು ಚೌಪಳ ಚೌಟ ಹದಿರು ಹವಣು ಹಾರ
ಬೆದಱು ಬೆಱಗು ಬೇಗ ಜೀವಾ
ಕುದಿವುತ ಕುಟಿಲ ಕುಹಕದಿಂದ ನೀನತಿ
ಮುದದಿ ಮೂರ್ಛೆಯ ಮೂಕ ಜೀವಾ
ಮದವನಳಿದು ಮಚ್ಚರವನುಳಿ ಮಾಯೆಯ
ಪೊದಱ ಪೊಂದದೆ ಪಾಪಿ ಜೀವಾ
ಸದಮಲಾತ್ಮಕ ಗುರುಚೆನ್ನಬಸವನಾಜ್ಞೆ
ಪದವ ಪಡೆಯಾ ಬೇಗ ಜೀವಾ ೫

೬

ರಾಗ : ಶಂಕರಾಭರಣ

ತನುವೆಂಬ ವೃಕ್ಷದ ಕೊನೆಯ ಸಾವಾರಿಹ ಕಪಿ
ಮನವೆಂಬುದು ಮಾಯೆ ತಾನೆ
ಕನಸಿನ ಸಿರಿಯ ಕಾಣುತ ಕರ ಬಯಸುವ
ಇನಿಸು ವಾಂಛೆಯು [1][ತಾಳ್ವನೆ][1] ॥ ಪಲ್ಲ ॥

ರೂಪನಱಿದು ರುಚಿ ಸುತರಂಜನೆಯಿಂದ
ರೂಪಿಸುವದು ಪೂಾಯೆ ತಾನೆ
ರೂಪ ಮಱೆದು ನಿರೂಪವಗವಿಸಿಹ
ರೂಪುಗಾಣದ ಮಾಯೆ ತಾನೆ
ರೂಪುನಿರೂಪರಡವು ಪರಮನ ನಿಜ
ರೂಪೆನ್ನದದು ಮಾಯೆ ತಾನೆ
ರೂಪಿಗೆಳಸಿ ಬಹುರೂಪನಱಿಸುತಿಹ
ರೂಪೆ ರೂಪಿನ ಮಾಯೆ ತಾನೆ ೧

ಚಿತ್ತವ ಸಾಱಿ ಚಿತ್ತಜಗತ್ತ ಮಾಱಿ ದು
ಶ್ಚಿತ್ತವಹುದು ಮಾಯೆ ತಾನೆ
ಚಿತ್ತವ ಬೀಱಿ ಕುಚಿತ್ತವ ಸಾರಿಸು
ಚಿತ್ತಪಱದ ಮಾಯೆ ತಾನೆ
ಚಿತ್ತವ ಸ್ಥಿರಕರಿಸದೆ ಚಿದ್ಬ್ರಹ್ಮ
ಚಿತ್ತವಿಲ್ಲದ ಮಾಯೆ ತಾನೆ
ಚಿತ್ತವ ಚಿತ್ರಭಿಯೊಳಿರಿಸಿಗಿರಿಸದೆ ಬಹು
ಚಿತ್ತವಾಗಿರೆ ಮಾಯೆ ತಾನೆ ೨

ಮಾಣಿಕಮಣಿಯ ಮಱೆದು ಮಹಗಾಜಿನ
ಪೋಣಿಗೆಯದು ಮಾಯೆ ತಾನೆ
ವಾಣಿಯೆ ತೋಱಿವಾಸಿಯೊಳಾಡಿ ವಾದಿಪ
ಜಾಣಲಿಹುದು ಮಾಯೆ ತಾನೆ
ಹೂಣಿಯರೀ ಷಡುವರ್ಗದ ಹುತ್ತವ
ಕೇಣಗೊಂಬುದು ಮಾಯೆ ತಾನೆ
ಪ್ರಾಣನಾಥನು ಚೆನ್ನಬಸವರಾಜನ ಪದ
ಗಾಣದಿಹುದು ಮಾಯೆ ತಾನೆ ೩

[1] ತ್ಯಾಲುನೆ (ಮೂ)

೭

ರಾಗ : ಆಹರಿಪಂತು

ಕಾಂತೆ ಕರೆದು ತಾರೆ ಕಾಣಬಾರದ ಜ್ಯೋತಿ
ಯಂತುವಟಿದಡೆ ಪರೀಕ್ಷಿತನಾ ಬೇಗಾ ಕಾಂತೆ ತಾರವಮ್ಮಾ ॥ ಪಲ್ಲ ॥

ಧಾತ್ರಿಯೊಳಗೆ ಮಹಾ ಸೂತ್ರವಟಿದು ಜ್ಞಾನ
ನೇತ್ರವಾಗಿವೆ ನಂಬಿದವರಾ ಬೇಗಾ
ರಾತ್ರಿಯಳಿದು ರೋಜೆಯಿಲ್ಲದತುಳ ಪ್ರಭೆ
ಗಾತ್ರದೆಡೆಯಲಬುಹುವನಾ ಬೇಗಾ ೧

ರೂಪುವಿಡಿದು ಪ್ರತಿರೂಪ ಸಾಧಿಸಿ ಬೇಟಿ
ರೂಪನಡರಿಯೆ ನಿರೂಪ ಬೇಗಾ
ಈ ಪರಿಯಲಿ ಬೆರೆದಿರುವ ಪರಮರೂಪ
ಈ ಪರಿ ತಡೆದ ನೀ ತಾರಮ್ಮ ಬೇಗಾ ೨

ಕೂಡೆಯಗಲದುಗ್ರಗೂಡವಾದನ ಪಿಡಿ
ದಾಡುಂತ ಶಿರದ ಮಾಮಣಿಯಹೊ ಬೇಗಾ
ನೋಡಿಸೇಳದ ಗುರುಚೆನ್ನಬಸವನೆಂಬ
ಗಾಡಿಕಾಱನ ಮೊಗದೋಱಮ್ಮ ಬೇಗಾ ೩

೮

ರಾಗ : ತೆಲುಗ ಕಾಂಬೋದಿ

ಕಾರಣರೂಪನ ಕರಣಗದಡಿಸುವರಾರು ಕಂಡಾ
ಪಾರಾವಾರ ಗುಣಧಾರದಾಯಕ ಪೇಳಿದೆನು ಕಂಡಾ ॥ ಪಲ್ಲ ॥

ಪದನಱಿದೊಂದು ಕುಂಭದ ಪಾಲು ಪುಳಿ ತಾಗೆ ದಧಿಯು ಕಂ[1]ಡಾ[1]
ಸುಧೆಗಡಲಿಗೆ ತಂದು ಬಿದಿರಿಸುವವನಾವ ಚದುರ ಕಂಡಾ
ಕುದಿಯಲಾವುದು ಪಯವೊದವಿಹುದೆಂದಿಗೆ ಹದನು ಕಂಡಾ
ಸದು ಹೃದಯನೀಗೆನ್ನ ಮದಡನೆಂದೊಱಿದರೆ ಗದಱಿ ಕಂಡಾ ೧

ಪರುಷವೇಷ್ಟಿಗೆ ಲೋಹವೆರಸಿ ಬಿಟ್ಟರೆಯದಕೋರುಷ ಕಂಡಾ
ಹರುಷವಳಿವು ತಾಗಲುಱಿಸುಗಾಬುದೆ ಮತ್ತೆ ಸರಸ ಕಂಡಾ
ಧರಿಸಂತದಱಿ ಪೂರ್ವವೊರಸಂತಾಕ್ಷಣ ಚಿನ್ನದೊರೆಸು ಕಂಡಾ
ಪರುಷರತ್ನಕೆ ಎನ್ನ ಮಱಿಸ ಸೂಚಿಸಲೇನುಗಱಿಸಿ ಕಂಡಾ ೧

[1] ಡಾ ಮಹಾ (ಮೂ)

ಏಳಿಲಗಾಣದೆ ಬಾಲನ ಶುದ್ಧಿಯು ಪಾಲ ಕಂಡಾ
ವ್ಯಾಲಕುಂಡಲಗತ್ತ ಸಾಲಿಡುತಿಹನಾವ ಲೋಲ ಕಂಡಾ
ಮೇಲದಳಿಂದೆನ್ನ ಸೋಲವ ಪಳಿದೆಂಥಾ ಲೀಲ ಕಂಡಾ
ಕಾಲಸಂಹರ ಪರಶೀಲ ಬಸವ ಚೆನ್ನನಾಳು ಕಂಡಾ ೩

೯

ರಾಗ : ?

ಬೆಳಗಾದರೊಳಗೆ ಜ್ಯೋತಿಯ ಬೇಗ ಪಟುಮಾಡಿ
ಬೆಳಗಿದಾ ಮೇಲೆ ಬೆಳಗನೆ ಪಿಡಿದ ಯೋಗೀ ॥ ಪಲ್ಲ ॥

ಮುನ್ನ ತಾನಾರು ಮೂಜಗದಾದಿ ದೇಶಿಕನು
ಎನ್ನನೇತಕೆ ಇತ್ತ ತಂದನೆಂದೂ
ತನ್ನ ತಾ ತಿಳಿದು ತಾಮಸವಳಿದು ಗುರುಕೃಪೆಯು
ಉನ್ನತದಿ ಪಡೆದೂರ್ಧ್ವಮುಖವಾದ ಯೋಗೀ ೧

ತಲೆಯುಳಿದ ಮುಂಡಗಳ ತಾ ಕಾಣುತಲೆ ಬೆದಱಿ
ಜಲಜಸಂತ ಹರಿ ರುದ್ರ, ಈಶ ಶಿವರಾ
ನೆಲೆಯ ನೇಮಿಸಿ ನಿಜವನಡರಿ ನಿಲುಕದೆ ಬೆಂದ
ನುಲಿಯ ಪರಿಯಾಗಿರುಮವ ಪರಮಯೋಗೀ ೨

ತಿರುಗುತಿಹ ತ್ರಿಪುರಗಳ ಉರುವ ಕೀಲನು ಮುಱಿದು
ಬಱಿಕೈದು ದಹಿಸಿ ಬಿಸಿಗಣ್ಣನಿಂದ
ತೆಱಹಿಲ್ಲದಾಯಕನನಱುಹಿ ಕರತಲರಲೆತ್ತ
ಗುರುಚೆನ್ನಬಸವ ಕೃಪೆವಡೆದುರುವ ಯೋಗೀ ೩

೧೦

ರಾಗ : ಸಾಳಂಗ

ಎಂತು ಗೆಲಿದೆ ದೇವ ಎರ್ದೆಗೆಡಿಸುತ ಬಂದು ನಿಂದು ಮಾಯಾ
ಸಂತತ ಸಾರಿ ಸಕಲರೂಪ ತಾಳಿ ತಾನೆಂಬ ಮಾಯಾ ॥ ಪಲ್ಲ ॥

ಕಳ್ಳರೆಂಬರೆ ಕಾಲನ ಕಂಡ ಪರಿವಾರವಾದ ಮಾಯಾ
ಸುಳ್ಳರೆಂಬರೆ ಸೂಸುವ ಶಂಕೆ ನುಡಿಯೊಂದೆಯಾದ ಮಾಯಾ
ಬಳ್ಳಿವರಿದು ಬಾಯಲುವ ಮಾನಸ ಮಾರಿ ಮಾಯಾ
ಒಳ್ಳಿತಾಯಿತು ವಾಸಿಯುಳಿದು ಗೆಲಿದ ಗೆಲಗೂಳಿ ಮಾಯಾ ೧

ಹಾಲತೋಱಿದರೆ ಹಾಳಾಹಳ ವಿಷವೆಂದು ಎಂಬ ಮಾಯಾ
ಶೀಲ ತನಗೆ ಶಿವನಿಂದೆಯೆಂಬುದೆ ಸೀಮೆ ಶಿವನ ಮಾಯಾ
ಬಾಲವ ಸೋಂಕೆ ಬ್ರಹ್ಮಾಂಡವಾಗೇಳುವ ಮಾಲಾ ಮಾಯಾ
ಮೇಲಾರು ಜಯಸಲಾಪರು ಮೇದಿನಿಯೊಳು ಮೆಱೆವ ಮಾಯಾ ೨

ತಲೆಯಿಲ್ಲದಿರೆ ಮುಂಡ ತಾನೆದ್ದು ತಿರುಗುವ ಚಲದ ಮಾಯಾ
ಗೆಲವನಱಿದು ಗೇರುಬೀಜದಂದದಿ ನೀನು ಹೊಂದಿ ಮಾಯಾ
ಚಲನವನಱಿದು ಚಾತುರ್ಯದಿಂದಲಿ ಗೆದ್ದೆ ಬಂದ ಮಾಯಾ
ಮಲಹರಮಾಯಾಗಿ ಚೆನ್ನಬಸವರಾಜ ನೀನು ಮಾಯಾ ೩

೧೧

ರಾಗ : ತೆಲುಗ ಕಾಂಭೋದಿ

ಮುಂದುವರಿದು ಮಾಯೆಯಂದವ ತಿಳಿಯದಲಿಂದು ಜೀವಾ
ನಿಂದುದೀವೆ ನಿಜಾನಂದದ ನಿಲವನೀ ಮುಂದಮಾಯಾ ಜೀವಾ ॥ ಪಲ್ಲ ॥

ಬಂದುದಾವ ಭಾಗ್ಯವು ನಿನಗಿತ್ತದಱಿಂದ ಜೀವಾ
ಸಂದು ಪದವ ಸಾರಿ ತಂದಾಡುತಿಹುದಾವ ಚಂದ ಜೀವಾ
ಹಿಂದೆ ಸಕಲಗಣವೃಂದವೆಲ್ಲವು ಬಹು ನೊಂದು ಜೀವಾ
ತಿಂದು ತೇಗುವ ಮಾರಿಯೆಂದು ಗೆದ್ದರು ಗುಪ್ತದಿಂದ ಜೀವಾ ೧

ಹುಸಿಯು ಗಳಿಸಿ ಕರ್ಮವ ಸರವಿಕ್ಕಿರುವ ತಾಮಸರ ಜೀವಾ
ವಶವಾಗಿ ಸಹಜವನೆಸಗಿ ಬಿತ್ತುವದದುಂ ಹದನೆ ಜೀವಾ
ಬೆಸುಗೆಯಿಂದಿರ್ದುದನುಸುರಿ ಗುಂದ್ದಿಸಿಕೊಂಡ ಒಸಗೆ ಜೀವಾ
ಜಸವಡೆದಿದೆ ನೀನು ಪೆಸರಳಿದಿರು ಮರ್ತ್ಯದೆಸೆಯು ಜೀವಾ ೨

ಪರಮ ಪ್ರಸಾದದ ಇರವ ಕಾಣದೆ ಮೈಮಱೆದು ಜೀವಾ
ಚರವ ನಿಂದಿಸಿಯಾಲಿ ಪರಿವುತಿಹರ ಸಂಗ ತರವೆ ಜೀವಾ
ಗುರು ಚೆನ್ನಬಸವ ತಾನಱುಹಿದಾಗಮ ಲೋಕಕರಿದು ಜೀವಾ
ಬಱಿದೆ ಬಾಹಿರದರಿಗೊರೆಯಬಹುದೆಯೇಕೆ ಮಱೆವೆ ಜೀವಾ ೩

೧೨

ರಾಗ : ಭೈರವಿಪಂತು

ಈಕೆಯು ವಿಪರೀತ ನಡತೆಯುದೊಂದಾ
ಲೋಕವಱಿಯದೆ ಮೆಚ್ಚಿದಹುದ ಹೊಚಂದಾ ॥ ಪಲ್ಲ ॥

ಕೂಸ ನುಂಗುವಳು ಬಾಗಿಲ ಮುಂದೆ ಸುಳಿಯೆ
ಲೇಸದೆನಿಸಿ ನವಮಾಸವ ಕಳಿಯೆ
ಮೋಸವಿಲ್ಲದೆಯುಂಡ ಪುಖದಲುಗುಳಿಯೆ
ತಾ ಸಲಹುತಾಲಾಗ ಸಾವಿತ್ರಿ ತಿಳಿಯೆ ೧

ಸತಿ ಸುತೆ ಸಹೋದರಿಯಾಗಿಯಾ ಮೇಲೆ
ಪತಿ ಜಾಮಾತೃ ಶಾಲರವಂದು ಲೋಲೆ
ಗತಿಗುಂದಿ ಸುತಲಗಿದುಗಿದನುಕೂಲೆ
ಹಿತದೋಱಿ ಜನನಿಯಾಗಿಪಲಾಸಪಾಲೆ ೨

ಒಂದು ರೂಪನು ಬಹುರೂಪ ಮಾಡುವಳು
ಮುಂದೆ ಮತ್ತವ ತನ್ನ ಒಡಲ ಕೊಡುವಳು
ತಿಂದು ತಿರುಗಿಸುತ ತಾಯೆಂದಾಡುವಳು
ತಂದೆ ನೀಲಗ್ರೀವಾ ತವಿಸು ಕಾಡುವಳು (?) ೩

೧೩

ರಾಗ : ಆಹರಿ

ಈಕೆಯೆಂದಿಂದ ಇವರ ತಿಂಬಳೋ
ಲೋಕವೆಲ್ಲವ ನಿಂದೆ ತಿನ್ನ ಕಲಿತಿಹಳೋ ॥ ಪಲ್ಲ ॥

ತೋಱುತಿಹುದು ತನವೊಂದೆಯಾಕೆಗೆ ಮೊಗ
ಮೂಱು ಮಂತ್ರವಱ ಪೆಸರುಗೊಂಬರೆ
ಬೇಱಿಯಾಣವ ಮಾಯ ಕಾರ್ಮಿಕ ಮೊಗವೆಂದು
ತೋಱಿತೊಮ್ಮೆಯ ತನುದಂತ ಮೊಲೆಯೊಳು ೧

ನುಂಗಿದಳದಕೊ ತಾಣದವದಿಂದ ಮರ್ತ್ಯವ
ನುಂಗಿದಳದಕೊ ಮಾಯದಿ ಸ್ವರ್ಗವ
ನುಂಗಿದಳದಕೊ ಕಾರ್ಮಿಕದಿ ಪಾತಾಳವ
ನುಂಗಿದಳದಕೊ ನುಣ್ಣನೆ ಇವನೆಲ್ಲ

ಕಡೆಗೊಡಗೊಡದೆ ಮಾನವ ಸುರರುರಗರ ೨
ಒಡಲ ತುಂಬಿಹ ಮೋಹಂ ಮಾಯೆಯ
ಒಡೆಯ ನೀಲಗ್ರೀವ ನಿಮ್ಮವರುಗಳೊರ್ಮೆ
ತಡೆಯ ಮಾಡಿದರೊ ತಮ್ಮೆಡೆಗೆ ತೊತ್ತಹಳು (?) ೩

೧೪

ರಾಗ: ಕಲ್ಯಾಣಿ

ಅಣ್ಣಾ ಪ್ರಮಾಣದಲ್ಲಾ
ಕಣ್ಣಿಗಾಣದೆ ನಿಮಗೆ ಮಾಯಾ ಕಾಂತೆದೊಂದಾಯಾ ॥ ಪಲ್ಲ ॥

ನೆಲನೆನಿಸುತ ಬಂದು ನೆಱೆ ನೃಪರನು ಕೊಂದು
ಲಲನೆಯಾಗಿಯೆ ಬೇಗಲಾಗಿಸುತಲಾಗ
ಬಲುಗಯ್ಯವರನೆಲ್ಲ ಬಾಯಿವಿಡಿಸಿ ಹಲ್ಲ
ಸಲೆ ಕಿರಿಸುಗಾತ್ರಿದಾರಿ ಮಾಯದ ಮಾರಿ ೧

ಕನಕ ರೂಪಾಗಿ ಮಹಾ ಕಾನನದೊಳಗಿಪಾ
ಮುನಿಜನತಾಪರಾ ಮುನ್ನವೆ ಘೋರಾ
ಘನಸಂಸಾರದೊಳು ಘಾಸಿ ಬಡಿಸುವಳು
ಮನುಜಾರಿಗಾತ್ರಿದಾರಿ ಮಾಯದ ಮಾರಿ ೨

ನೀನೀಕೆ ಇಹ ಬೇಗೆ ನಿಲ್ಲ ದಾರಿಗೆ ಹಾಗೆ
ನೀನೆ ನಿಲ್ಲಿಸು ಮಾಯಾ ನೀಲಗ್ರೀವಾಯ
ನೀನೆ ಗತಿಯು ಎಂದು ನಿಜವ ಸಾಧಿಸು ಎಂದು
ಮಾನಗುಂದಿಹುದೊಮ್ಮೆ ಮಾಯೆಯ ಹೆಮ್ಮೆ ೩

೧೫

ರಾಗ: ಪೂಡ್ಡಿ ಧನ್ಯಾಸಿ

ಹಾಗತ್ತ ಮಾರ್ಗವಲ್ಲ ಬಾರಯ್ಯ ಆತ್ರ
ಹೋಗದಿರತ್ತ ನೀ ಬಾರಯ್ಯಾ ॥ ಪಲ್ಲ ॥

ನಡೆಯಲಾರಾದಾರಾದಾದ್ದಿರಿಯಾ ಮುಂದೆ
ಎಡಬಲ್ಲೆ ಮುಱಿವೆ ಸಾರಿಯು
ಗಡಿಯು ಕೊಟ್ಟಿಗೆಯದೆ ಮಾರಿಯು ಅತ್ತ
ನಡೆವ ರಾಯಸ ಮಹಾ ಮಾರಿಯು ೧

ಮೋಸವಲ್ಲದೆ ಮುಂದೆ ಹೋಗಲೂ ಪಾಪಿ
ಕೂಸುವಂದದೆ ಎದ್ದು ಕೂಗಲು
ರಾಸಿ ರೆಕ್ಕಸಿಯಹರಾಗಲೂ ಕಂಡು
ಕಾಸವೀವರು ಬಹುಬೇಗಲು ೨

ಅತ್ತಲಾ ಮಾರ್ಗವಿಡಿವಾ ಬೇಗೆ ಬೇಡ
ಇತ್ತ ಸುಪಥವಿಡಿದನುವಾಗೆ
ಚಿತ್ತಜರಿಪು ನೀಲಗ್ರೀವಗೆ ನೀನು
ತೆತ್ತ ಸೇವೆಯ ಮಾಡುತಿರು ಹಾಗೆ ೩

೧೩

ರಾಗ : ದೇಸಿ

ಸಕ್ಕರೆಗಿಂದ ಸ್ವಾದವ ತೋರುತಿಹುದೊಮ್ಮೆ
ಸಿಕ್ಕಿಬಿದ್ದಿಹ ಜೀವರಿಗೆ ಸಂಸಾರ ॥ ಪಲ್ಲ ॥

ಸತಿಯ ಲೋಲುಪ್ತಿ ಸುತರ ವ್ಯಾಮೋಹ ಸಂ
ತತ ಸಹೋದರ ಸಖರುಗಳಗ್ಗದ
ಹಿತವಾದ ನಡತೆಯೆಂಬುದೆ ಸ್ವರ್ಗಪದದಿಂದ
ಲತಿಶಯವೆಂದಾಸೆಬಡುತ ಬಾಳುವರಿಗೆ ೧

ಮನಸಿಗಿನಿತು ದಣಿವಿಲ್ಲಲೊದವಿಸಿ
ಕನಕವ ಕಾಲು ಮೊದಲು ಮತ್ತದ
ತನಗೆ ತನ್ನವರಿಗೊಮ್ಮಿಗೆ ಸಾಲದೆನುತಾಗ
ಜಿನುಗುತ ಜೀವಿಸುತಿಹ ಜೀವರುಗಳಿಗೆ ೨

ಕಾಲಕಾವರು ಎಸಗುವಲುಪು ಜನನದ
ಮಾಲೆಯ ಮಮತೆಯಾಗಿ ಧರಿಸಿ
ಕಾಲಸಂಹಾರಕಾವ ದಹನವೆನಿಪ ನಿತ್ಯಾ
ನೀಲಗ್ರೀವನ ನಿಜವಜಿಯದವರುಗಳಿಗೆ ೩

೧೪

ರಾಗ : ಭೈರವಿ ಪಂತು

ಇನ್ನಾಟಿ ಈ ದೇಹ ಈ ಲೋಕದಲೆಗೆ
ಪನ್ನಗಕಟ ನಿನ್ನಯ ಮಾಯೆ ಬಲೆಗೆ ॥ ಪಲ್ಲ ॥

ಮುಂದರಿಯದೆ ಮೂವಿಧಿಯಿಂದ ಹಿಂದೆ
ಬಂದನು ಬಹು ಯೋನಿಮುಖದಿಂದ ನೊಂದೆ
ಇಂದಿಗೆ ಇನ್ನು ತೀರದ ತಂದೆ
ಸಂದೇಹಿಸುತ ಸಾರಿ ನಿಂದಿದೆ ಮುಂದೆ ೧

ಹುಸಿ ನುಸಿ ಹೊಸಕ ಹುರುಡಿನ ಕೊಟ್ಟ
ಮುಸುಕಿದ ತಾಮಸ ಮಱಹಿನ ಘಟ್ಟ
ಮಿಸುಕಲಿಸದ ಮರ್ತ್ಯರದೊಂದು ತಿಟ್ಟ
ಹಸುಳೆನಾ ತಾಳಲಾಪೆನೆಯು ಘರಟ್ಟ ೨

ಇತ್ತ ಬಾ ಬಾರೆಲೆ ಕಂದಾ ಎಂದೊಮ್ಮೆ
ಹತ್ತಿರ ಕರೆದು ಮನ್ನಿಸದೇಕೆ ಹೆಮ್ಮೆ
ಹೆತ್ತಾತ ನಿನಗೆ ಸಲುವುದೆ ಈಸೊಮ್ಮೆ
ಚಿತ್ತಜರಿಪು ನೀಲಗ್ರೀವಾ ನಾನೊಮ್ಮೆ ೩

೧೪

ರಾಗ : ಭೈರವಿ ಪಂತು

ಅಮ್ಮವ್ಮ ಮಾಯದ ಮನದಾರವಣೆಯು
ಸಮ್ಮಾ[1][ನ][1]ಕಾಣೆ ನಾ ಕಾಯ್ವ ಕರುಣೆಯು ॥ ಪಲ್ಲ ॥

ನಿಲ್ಲದು ನಿಜವನಱಿದು ಮತ್ತೆ ಮಾಯಾ
ಗೆಲ್ಲಸೋಲವ ಗೆರೆ ಮುಟ್ಟದೆ ನೋಯಾ
ಮಲ್ಲಾಡುತಿಹುದು ಮಾಣದೆ ತನ್ನ ದಾಯಾ
ಸಲ್ಲದೆಂದರೆ ಸಾಕೆನಿಸದೇನುಪಾಯಾ ೧

ಹೋಯಿತೆ ಹೋದುದಾಗಳೆ ಹತ್ತು ದೆಸೆಗೆ
ಮಾಯಿತೆ ಮಾದುದೊಮ್ಮಿಗೆ ಮಹದೊಸಗೆ
ಹಾಯಿತೆ ಹಾದುದದ ಕೊಮಾರನೆಸೆಗೆ
ಆಯಿತೆ ಆದುದರಸು ತಾನೆ ರಸೆಗೆ ೨

ತನ್ನ ಹಱಿಯುತ ತನ್ನ ಕೊಳಲು ತಾ ಮಾಹಾ
ಇನ್ನೇನು ಈಗಲಾಗಿಸಿ ತೋಱುತಿಹಾ
ಗನ್ನಗಾತಕವ ಸಂತತ ನಿನ್ನ ಮೋಹಾ
ಎನ್ನ ಮೇಲಿಡೆಯು ನೀಲಗ್ರೀವಾಯ ಹಾ ೩

೧೫

ರಾಗ : ಶಂಕರಾಭರಣ

ಮಂಸುಜರಿಗದೆ ಮಾರಿ ಮಱವೆಯೊಂದಲ್ಲದೆ
ಮನವಾರೆ ಮಾರಿ ಬೇಱುಂಟೆ ॥ ಪಲ್ಲ ॥

---

[1] ಣೆ (ಮೂ)

ಹಿತದೋಱಿ ಹಲವು ರೂಪಿಗೆ ಸಂದ ಮಾಯೆಯಾ
ಕೃತಕಗಾಣದೆ ಕಾಲು ಮೊದಲು
ಮತಿ ಮಱಿದೊಡನಿಹ ಮಾನವರಿಗೆ ಇನ್ನು
ಪ್ರತಿಯಾಗಿ ಮಾರಿ ಬೇಱುಂಟೆ ೧

ತನುವಿದು ತಮಗೇನು ಕಾರಣ ದೊರೆದುದೊ
ಎನುತದಱಾದಿಯಱಿಯದೆ
ಮನವಱಿವೆಯೊಳಿಹ ಜೀವಗದಱಿಂದ
ಘನತರ ಮಾರಿ ಬೇಱುಂಟೆ ೨

ನಡೆಸಿ ನುಡಿಸಿ ತುತ್ತನು ನುಡಿಸಿ ರಕ್ಷಿಸುತಿಹ
ಮೃಡನೀಲಗ್ರೀವನ ಮಱಿದು
ಎಡೆಯಲೊಂದ ದೇವರು ಎಂಬ ಜಡರಿಗೆ
ಕಡೆಗೊಂದು ಮಾರಿ ಬೇಱುಂಟೆ ೩

೨೦

ರಾಗ : ಮಲಹರಿ

ಇಚ್ಛೆಯನಾಡದಿರಕಟ ರಚ್ಚೆಯೊಳೊಮ್ಮೆ
ಹುಚ್ಚಮನುಜ ಮುಂದೆ ನರಕಬಾಹದು ಬೇಡ ॥ ಪಲ್ಲ ॥

ನಂಟು ಮಾಡುವರು ನಿನ್ನನು ತಮ್ಮ ಹುಸಿಮಾತ
ಉಂಟುಮಾಡುವರೆ ಉತ್ತಮರಿಗೆ ಮುನಿದು
ಗಂಟಿಕ್ಕುವವರ ಮಾತನು ಮನಸಿಗೆ ತಂದು
ಕಂಟಕವಹರೆ ಕಂಡದ ನಾಡು ಮನುಜ ೧

ಹಲವುಪಚಾರವ ಮಾಡಿದರೆ ಹಂಗಿಗನಾಗಿ
ಒಲವರವನ ಒಯ್ಯನೆ ಒಂದು ನುಡಿಯೆ
ನೆಲಹೋಱುವುದೆ ನಿನ್ನ ಧರ್ಮ ತಾ ಕೆಡುವುದು
ಎಲೆ ಪಾಪಿ ಮನುಜ ಕಂಡದ ನಾಡು ಕಂಡದಾ ಕಂಡ ೨

ಬಡವರ ಮಾರಿ ಬಲ್ಲಿದರು ಬಾಯುಳ್ಳವ
ರೊಡನೆ ಮುನಿಯಲವರುಳಿವರೆಯುದಕೆ
ಬಡವರಾಧಾರವಾಗಿರು ಬಲ್ಲಿದರ ಮಾತ
ಹಿಡಿದಾಡಬೇಡ ನೀಲಗ್ರೀವ ಕೊಲುವ ೩

೨೧

ರಾಗ : ಮೇಚ ಬಹುಳಿ

ವಾಸಿಯಿಂದೊಬ್ಬ ರೊಕ್ಕಲ ಕೊಂಬವರಿಗೊಮ್ಮೆ
ನೀ ಸಹವಾಗಿ ನುಡಿಯಬೇಡಾ ಮನುಜಾ ॥ ಪಲ್ಲ ॥

ಬಿಡದೊಂದು ಮಾತ ಹಿಡಿದುಕೊಂಡು ಕೊನರಂತ
ಬಡವರ ಬಾಯ ಬಂಧಿಸುತ ಬೆಂಬಿಡದೆ
ಕಡೆಗಪಮೃತ್ಯುರೂಪಾಗಿ ಕಾಡುವರಿಗೆ
ನುಡಿಯದಿರವರ ಇಚ್ಛೆಯ ಮೂಢ ಮನುಜಾ ೧

ಹುಸಿಯ ಸಾಧಿಸುತ ಹುನ್ನಾರದಿಂದ ಬಡವರ
ದೆಸೆಗೆಡಿಸುವ ದುಷ್ಟ ದಯಹೀನ ಜನರಾ
ಗಸಣೆಯೇನವರ ಇಚ್ಛೆಯ ಮಾತನಾಡದೆ
ಸಸಿನೆ ನೀನೊಂದ ಕಂಡದ ನಾಡು ಮನುಜಾ ೨

ಕೊಲುವರೊಕ್ಕಲು ಕೊಳುವರ ನೋಯಿಸುವರ
ಒಲವನಱಿಯದೊಲವರ ನೀನಾಡೆ
ಸಲೆಸಂದು ಹೋಹೆ ನಾರಕಕೆ ನೀನದಱಿಂದ
ನೆಲೆಯಿದು ನೀಲಗ್ರೀವನ ವಾಕ್ಯ ಮನುಜಾ ೩

೨೨

ರಾಗ : ಮಲಹರಿ

ಮಾತಾಡಲಮ್ಮೆ ಮಂದಿರಲಮ್ಮೆ ದುಷ್ಟರ
ನೀತಿಗೆ ನಾಚಿ ನಿಲ್ಲದೆ ನಾನು ದೇವಾ ॥ ಪಲ್ಲ ॥

ಬಲ್ಲ ಮಾತನು ಬಾಯಿದೆಗೆದೊಂದನಾಡದೆ
ಸಲ್ಲದ ನುಡಿಯ ಸಾಧಿಸುತ ದುರ್ಜನರ
ಕಲ್ಲೆರ್ದೆಯಾದ ಕಪಟಕೊಲೆಗೊಳಗಾಗಿ
ಮಲ್ಲಾಡಿ ಮಱಿದು ಬಾಳುವರ ಕಾಡುವರೊಳು ೧

ಹುಸಿಯಿಂದ ಮೂಱು ಹುನ್ನಾರದಿಂದಲಾಱಿಕೆ
ಹೆಸರಾಗಿ ಹೆಚ್ಚು ಕುಂದಿಗೆ ಮಹಾರ್ಣವಕೆ
ಜಸವೆತ್ತು ಜಾಗಿ ಮಾಮಸಕದ ಮಱವೆಗೆ
ಮುಸುಕಿದಿರುಳ್ಳನೊಮ್ಮೆ ಮೂದಲಿಸುವರಾ ೨

ಕೋದಾಮ ಗಂಡ ಕೇಕಿಯು ಹಾಗೆ ಪಂಜರ
ಸಾಧಿಸುವಿದಿರ ನಿಂದಿಹ ಗಿಳಿಯಂತೆ
ಸಾಧು ಸತ್ಪುರುಷರಂಜುವರ ಕ್ರೂರರುಗಳ
ಬಾಧೆಗಂತದ ಬೇಗ ತೆಗೆ ನೀಲಗ್ರೀವಾ ೩

೨೩

ರಾಗ: ತೆಲುಗ ಕಾಂಭೋದಿ "ಸ್ವರೂಪು" ರಾಗ: ಸಾಕ್ಷಿ
ಬಲ್ಲವರು ಎಂದು ಬಱಿದೇಕಹಂಕರಿಸುವರು
ಬಲ್ಲವರದಾರು ಬಲ್ಲಿರೆ ಹೇಳರೇ ॥ ಪಲ್ಲ ॥

ಹಲವು ಶಾಸ್ತ್ರದ ಹವಣನಱಿದವರು ಬಲ್ಲವರೆ
ಹಲವು ಶಾಸ್ತ್ರವನಱಿಯದವರಱಿಯರೆ
ಹಲವು ವಾಗ್ಜಾಲಿಕರು ಹಾಗವರು ಬಲ್ಲರೆ
ಹಲವು ವಾಗ್ಜಾಲವಿಲ್ಲದರಱಿಯರೆ ೧

ಬಲ್ಲತನವಿರಲು ಬಹುಶಾಸ್ತ್ರ ಸಾಧಕರಹರೆ
ಬಲ್ಲತನವಿರಲು ಬಹುಪಾಟು ಬಹರೆ
ಬಲ್ಲತನವಿರಲಾಸೆ ರೋಷ ಪಾಶದೊಳಿಹರೆ
ಬಲ್ಲತನವಿರೆ ಹಮ್ಮು ದಿಮ್ಮಿಯಿಹರೆ ೨

ನೀಲಗ್ರೀವನ ನಿಜವನಱಿದವರೆ ಬಲ್ಲವರು
ನೀಲಗ್ರೀವನ ನಿಜವನಱಿಯದವರು
ನೀಲಗ್ರೀವನೆ ಬಲ್ಲನವರೆಱಿಯದವರೆಂದು
ನೀಲಗ್ರೀವನೆ ಬಲ್ಲಬಲ್ಲವರನು ೩

೨೪

ರಾಗ: ತೆಲುಗ ಕಾಂಭೋದಿ
ನೀನಿರೆ ಎನ್ನ ಮಾನಸಕೆ ಯೋಚನೆ ಏಕೆ
ನೀನಿರೆ ದೇವ ತನಗೆ ಚಿಂತೆ ಬೇಕೆ ॥ ಪಲ್ಲ ॥

ತನುವಿದು ನಿಮ್ಮ ಪೂಜೆಗೆ ಸಾಗಿ ನಿಂದುದು
ಮನತಾನೆ ನಿಮ್ಮ ಧ್ಯಾನದೊಳಿಹುದು
ಅನುದಿನ ನೀವೆನ್ನೊಳಗೆ ಹೊಱಗಿರೆ ನಿಮ್ಮ
ನೆನೆವುದೊಂದಲ್ಲದೇತಕೆ ಚಿಂತೆ ಬಱಿದೆ ೧

ಸತಿ ಶಾಂತಕುಂಭ ಮೃತ್ತಿಕೆ ಮೂರ್ಖದೇ ಹಿಂದೆ
ಮತಿಯಿತ್ತ ಮನವು ತನ್ನಯ ಮಾಟದಾ
ಗತಿಯು ಗುಂಜದನಿನ್ನು ಮಱೆಯದು ಸಂಸಾರ
ಜಿತಮಾಯು ನಿಮ್ಮದೆಂಬುದನಱಿದೇಕೆ ೨

ತನು ಮನ ಧನದ ಚಿಂತೆಯು ನೀವೆ ಕೈಕೊಂಡು
ಮನಸಿಗೆ ನಿಮ್ಮ ನೆನೆವ ಚಿಂತೆಯೊಂದ
ಮನಸಂದು ಮನಕೆ ಪಾಲಿಸಲು ನೀಲಗ್ರೀವಾ
ಕನಕಾದ್ರಿಯೆನಗೆ ಇಂತು ಕಂಡ ದೇವಾ ೩

೨೫

ರಾಗ : ಸೌರಾಷ್ಟ

ಇವರ ಭ್ರಾಂತೆಂದಿಗೆಯಿರದೆ ತಾ ಹರವುದೊ
ಇವರಿಗಿನ್ನೆಂದು ಈಶನ ಕೃಪೆಯಹುದೊ ॥ ಪಲ್ಲ ॥

ಬೆಟ್ಟವನೇಱಿ ನಿಂದರು ಬೆಂದ ಹಾರುವನ ಕಯ್ಯ
ಕೊಟ್ಟರು ರತ್ನವನೊಂದಕೊಗು ನಿಲವನು
ಕೊಟ್ಟನವ ಬದಲೊಂದ ಕೊಂಡುಹೋದ ರನ್ನವ
ಕಟ್ಟಿಕೊಂಡವರಿತ್ತ ಕೊಂಗೆಂದಱಿಯದೆ ೧

ಹಗಲುಳ್ಳನ ಕೂಡೆ ಹರಿದಾಡುತಗಲದೆ
ಹಗಲೆಗತ್ತಲೆಯಾದ ಹಳುವದೊಳು
ಮೃಗವಾಗಿ ತಿರುಗುತ ಮುಂದುಗಾಣದೆ ಹಾಗೆ
ಅಗಿದುಗಿವ ವ್ಯಾಘ್ರನ ಅಂಡಲೆಗೆ ಅಂಜರಲ್ಲಾ ೨

ತಂದೆ ತಾಯಿಬ್ಬರಾದಿಯ ತಲೆಯಱಿಯದೆ ಬಹು
ತಂದೆ ತಾಯ ಬಸುರಿಗೆ ತವೆ ಸಂದು ಬಾಹಾ
ಮಂದಮತಿ ಮನುಜರ ಮಱವೆ ಹಿಂಗುವದೆಂದು
ಇಂದುಧರ ನೀಲಗ್ರೀವ ಇವರೆತ್ತ ತೆಗೆಯ ೩

೨೬

ರಾಗ : ಕಲ್ಯಾಣಿ

ನಿನ್ನವರಿಗೆ ಎಲ್ಲಾ ನೀನಿರಲಾಯಸವಿಲ್ಲಾ
ಪನ್ನಗಭೂಷಣ ಮಹಾ ಪರಮಾನಂದದೊಳಿಹಾ ॥ ಪಲ್ಲ ॥

ತನು ಗುಣಗಳ ಬಂಟೆ ತಾಪತ್ರಯಗಳುಂಟೆ
ಮನದ ತುದಿಯಲೊಮ್ಮೆ ಮಹಾದೇವ ನೀನಮ್ಮೆ ೧

ಕರಕರಿಸುವ ಕಾಲ ಕಾವರಂಡಲೆಯ ಜಾಲ
ಇರಲಮ್ಮೆವು ಕೂಡೆ ಈಶ ನೀನೊಡನಾಡೆ ೨

ನಿಲ್ಲಲಾಪೆವೆ ಮಾಯ ನೀಟು ನಟನೆಯ ದಾಯ
ನಿಲ್ಲವಾರುಣ ರೋಗ ನೀಲಗ್ರೀವನೆ ಬೇಗಾ ೩

೨೭

ರಾಗ : ಶ್ರೀರಾಗ

ಎಂದಿಗೆನಗೆ ತೋಱುವೆ ನಿನ್ನೊಳು
ನಿಂದು ನಿಜವ ಸಾಧಿಸುವ ಶರಣರ ದೇವಾ ॥ ಪಲ್ಲ ॥

ತನುವೆ ಗುರುವಿನ ರೂಪಾಗಿ ತೋಱುವ ಮಹಾ
ಮನವೆ ತಾ ಲಿಂಗವಾಗಿಯೆ ಕೂಡಿದಾ
ಧನವೆ ಜಂಗಮವಾಗಿ ಆರಾಧಿಸುತ ಮೀಱಿ
ಅನುವನಱಿದ ಅನುಪಮ ಶರಣರ ದೇವಾ ೧

ಒಂದಱಿಂದೆರಡನಱಿದು ಮೀಱಿ ಪಿಡಿವುತಾ
ಮುಂದಾಱನಳಿದಾಱಡರಿ ಮೀಱುತಾ
ಕಂದನನೆತ್ತಿ ಕಾಡುವ ಕೂಸಕಡೆ ಮಾಡಿ
ಅಂದಿಂದೆನ್ನರಲಾದಿಯಱಿದಚಲರ ದೇವಾ ೨

ನುಡಿದುದೆಲ್ಲಾ ಱಕ್ಷರ ವಾಚ ಮನ ಸಂದು
ನಡೆದುದೆಲ್ಲವು ಸುಚಾರಿತ್ರ ಮಾರ್ಗ
ಹಿಡಿದುದೆಲ್ಲವು ವಸ್ತುರೂಪಾಗಿ ನಿನ್ನೊಳು
ಒಡಗೂಡಿ ನೀವೆಯಾಗಿ ಹರನೀಲಗ್ರೀವಾ ೩

೨೮

ರಾಗ : ಕೇತಾರ

ಕಾಣರಲ್ಲಾ ದೇವ ಕಾಣರಲ್ಲಾ ತಮ್ಮ
ಪ್ರಾಣಲಿಂಗವು ಪಲಾಯನವಾಗೆ ಕೆಲಬರು ॥ ಪಲ್ಲ ॥

ಬಱಿಯ ಕಱಹ ಬಲುಹಿಂದ ಹಿಡಿದುಕೊಂಡು
ಉಱುವ ಉನ್ನತಮೂರ್ತಿ ಓಸರಿಸುವದದಾ ೧

ಇದೆ ಗುರು ಲಿಂಗ ಜಂಗಮವೆನುತನುದಿನ
ಇದಿರಿಟ್ಟು ತಮ್ಮಿಷ್ಟಲಿಂಗ ಹಿಂಗುವಪದದಾ ೨

ಗುಡಿಯು ತೋಜಿಸಿ ಗುಬುತಿನ ರೂಪ ತೋಜಿಸಿ
ಒಡನೆ ನೀಲಗ್ರೀವಾ ಓಡಿ ಹೋಹದನದ ಕಾಣರಲ್ಲಾ ೩

೨೯

ರಾಗ : ಮೇಚ ಬವುಳಿ

ಸಾಕು ಸಾಕು ಈ ಲೋಕದಾಟ ದೇವಾ
ಸಾಕು ಸಾಕು [ಸಾ]ಕಿದೇನು ಕಾಟ ॥ ಪಲ್ಲ ॥

ನೀನಿರಿಸಿದ ಮಾಯೆವೊಂದು ಲೋಕ
ತಾನೆಯಾದುದು ಮನಸಂದು
ನಾನು ನೀನೆಂಬವರಸು ತಿಂದು ತನ್ನ
ತಾನಾಗಿರೆನ್ನ ಮನನೊಂದು ೧

ಮಣ್ಣು ನೀರು ಅಗ್ನಿ ವಾಯು ಬಯಲ ಕೂಡಿ
ಹಣ್ಣಿದ ಹಂಜರಗಳ ಹೊಯಿಲಾ
ಕಣ್ಣುಗೆಡಿಸುವ ಕಾವಗೆಯಿಲಾ ಕಿಡಿ
ಗಣ್ಣದೇವ ಕೇಳೆನ್ನ ಸುಯಿಲಾ ೨

ಕದ್ದ ಕಳ್ಳನ ಹಾಗೆ ಜೋಕೆಯಾಗಿ
ಇದ್ದು ಮಾಯೆಯು ಗೆಲಸಾಕೆ
ಮಂದ್ದು ಉರಿನಂಜು ಎನಗೇಕೆ ಈವ
ಬುದ್ಧಿಯು ನೀಲಗ್ರೀವ ಬೇಕೆ ೩

೩೦

ರಾಗ : ಮೇಚ ಬಹುಳಿ

ಏನ ಮಾಡುವೆ ಎನ್ನ ಮನವೆ ನಿನಗೆ ಹಾಗೆ
ಎನ ಹೇಳಿದರೆನ್ನ ಮಾತ ನೀ ಕೇಳೆ ॥ ಪಲ್ಲ ॥

ಸಜ್ಜನ ಜನರ ಸಾಯಸ ಬಡಿಸುವ ಮಹಾ
ದುರ್ಜನರನು ದೂರ ಬಿಟ್ಟೆರು
ಹೆಜ್ಜೆ ಹೆಜ್ಜೆಗೆ ನಾನು ನುಡಿಯೆ ಲಾಲಿಸದೊಮ್ಮೆ
ಲಜ್ಜೆಯಿಲ್ಲದವರೊಡನಾಡಬಹುದೆ ೧

ಕಂಡು ಮಾತಾಡಲವರ ಕೂಡೆ ಕೋಪದಿ
ಕೆಂಡವ ಕೆದಱಿದಂತಹ ಕ್ರೂರರುಗಳಾ
ತಂಡವ ತಡಹಿ ನಾನಾ ತಾಪತ್ರಯಗಳ ಕಂಡು
ಉಂಡವರ ಕಣ್ಣೆದಿರಿರಬಹುದೆ ೨

ಕಡೆಮಾಡು ಕಾಪುರುಷರ ಸುಟ್ಟ ಸರಸವ
ಬಿಡದಿರು ನೀಲಗ್ರೀವನ ಪದಯುಗವ
ಒಡನಾಡು ಶಿವಶರಣರ ಒಲವಱಿವುತ
ನಡೆವುದೆಂದರೆ ನಾಡುಗರ ಮಾತದೇಕೆ ೩

೩೧

ರಾಗ : ಪೂರ್ವಿ ಧನ್ಯಾಸಿ

ನಾನು ನೀನಾದೆನು ನಿನ್ನೊಳಗೆ ನಿಂದು ದೇವಾ
ನೀನು ನಾನಾಗಿರು ನನ್ನೊಳಗೆ ಇಂದು ॥ ಪಲ್ಲ ॥

ಬಿಡದೈಮೊಗಗಳ ನೋಡುತಾ ನಿನ್ನ
ತೊಡರಿ ಭುಜವಹತ್ತ ಕೂಡುತಾ
ಒಡೆಯ ಜಡೆಯ ಹೆಣ್ಣ ಪಾಡುತ ನಾನು
ಒಡನೆ ನಿನ್ನೊಳಗಾವಾಗಾಡುತಾ ೧

ಶಶಿ ರವಿ ವಹ್ನಿ ಲೋಚನನೆಂದು ಮಹಾ
ವೃಷಭವಾಹನ ಚರ್ಮಾಂಬರನೆಂದು
ತ್ರಿಶೂಲ ಕಪಾಲಾಹಿಕರನೆಂದು ನಾನು
ಅಸುರರ ಶಿರ ಮೂಲಧರನೆಂದು ೨

ತನುವೆ ನಿನಗೆ ದೇವಾಲಯ ಕಂಡಾ ಎನ್ನಾ
ಮನವೆ ನಿನಗೆ ಸಿಂಹಾಸನ ಕಂಡಾ
ತನು ಮನವನು ನೀನೆ ನೆಲೆಗೊಂಡಾ ಎನ್ನ
ಘನ ನೀಲಗ್ರೀವನೆನ್ನೊಳಿರು ಕಂಡಾ ೩

೩೨

ರಾಗ : ದೇಸಿ

ನೀರೆ ನಿಂದಿದೆ ಏರಿಯಿಲ್ಲವೇನಿದು ಚಿತ್ರ
ಮಾರಾರಿ ನಿನಗೆ ಕಟ್ಟಿಸಿದ ಕಟ್ಟೆಯೊಳು ॥ ಪಲ್ಲ ॥

ಏರಿ ತಾ ಕರಗಿ ನೀರೊಳಗೆ ನೆರೆದಿಹದೆ ಕೂಡೆ
ನೀರೆ ತಾನೇರಿಯಾಗಿದೆ ಬಲಿದು
ಏರಿಯನುಂ ಹೊಂದಿದ ಇದು ತುಂಬಿ ಗುರಿಹತ್ತಿ
ನೀರೊಳುರಿಯೆದ್ದಡರುತಿಹುದೇನು ಚಿತ್ರ ೧

ನೀರಿನೊಳಗೈದು ಮುಖದಿಂದ ಉರಿಯಡರುತಿರೆ
ನೀರೆ ತಾನುರಿಯಂ ರೂಪಾಗಲಾಗ
ನೀರಿನೊಳ ಹೊರಗೆ ನಿಂದಿಹವೆಲ್ಲ ಉರಿಯಾಗೆ
ನೀರುವುರಿಯಿವೆ ಏರಿಯಿಲ್ಲವಿದು ಚಿತ್ರ ೨

ಉರಿಯನುರಿಯಿಂದ ನೀರನು ನೀರಿನಿಂದೊಮ್ಮೆ
ಉರಿಯಿಸುತ ತೊಳದು ನಿಂದವರುಗಳಿಗೆ
ಉರಿನೀರ ಕಟ್ಟಿ ಕಾಣೆವುದು ನೀಲಗ್ರೀವಾ
ಉರಿನೀರ ದಹಿಸಿ ತೊಳೆಯದರಱಿಯರಿದು ಚಿತ್ರ ೩

೩೩

ರಾಗ: ಭೂಪಾಳಿ. ಚೌಪದ ವರ್ಣ

ಸಲಹು ಸಂತತ ಸಕಲ ಭಕತ ಸಂತತಿಯ
ಎಲೆ ದೇವ ನಿನ್ನನರ್ಚಿಪ ಮಹೋನ್ನತಿಯ ॥ ಪಲ್ಲ ॥

ನಿನ್ನ ನಿಜದಿಂದಾದ ಮೂಱು ನಗರಗಳ
ನಿನ್ನನವರೊಳಗಿರಿಸಿ ನುತಿಪನ ತರುಗಳ
ನಿನ್ನನಿರವಯುದ ಸಾಯುದತಿರುಗಳ (?)
ನಿನ್ನನಱಿದಾಗ ತನ್ನನೆ ಮಱೆದರುಗಳ ೧

ಕಣ್ಣಿಂದ ಬಂದ ಕಂದನು ಎಂದು ನಿಮ್ಮ
ಕಣ್ಣೆದಿರಿಗಿಟ್ಟು ಕಾಣುತಲಾಗ ತಮ್ಮ
ಕಣ್ಣು ನೀನೆಂದು ನಿನ್ನಯ ಮಹಾ ಸೊಮ್ಮ
ಕಣ್ಣೆನೊಳಗಿಟ್ಟು ಕರುಣೆಗಳ ಪರಬೊಮ್ಮ ೨

ನೀಲವನು ಸವಿದು ನಿಂದಿರುವ ದಿವ್ಯಾಂಗ
ನೀಲರಾಯಗೆಯಿತ್ತೆ ನಿತ್ಯವರ್ಧಾಂಗ
ನೀಲವಂದಿನಿಸ ಹೊದ್ದದರಂತರಂಗ
ನೀಲಾಸುರಾರಿ ನೀಲಗ್ರೀವ ಲಿಂಗಾ ೩

೩೪

ರಾಗ : ಶಂಕರಾಭರಣ

ನಿನ್ನನಱಿದ ರೂಪದೇಶ ಭಕ್ತ ಜಂಗಮ
ನಿನ್ನ ಮಱಿದ ರೂಪದೇನೆಂಬೆ ದೇವ ॥ ಪಲ್ಲ ॥

ತನು ಸದಾಚಾರ ತ್ರಿವಿಧ ಲಿಂಗವೆ ಪ್ರಾಣ
ಮನ: ಮಹಾದೇವನಾರಾಧನೆ ಧ್ಯಾನ
ಮನಸಿಜಾರಿಯು ನಿಜರೂಪಿಗೆಱಗುತಿಹ
ಘನ ಭಕ್ತಿರಸದ ಸಮನೆ ಭಕ್ತ ದೇವಾ ೧

ಭಸಿತ ರುದ್ರಾಕ್ಷಿ ತಾನದೆ ಶಾಂತಿ ಸುಚಿತ್ತಾ
ಎಸೆವ ಕಂಥೆಯು ದಂಡ ಸಮತೆ ಸುಜ್ಞಾನ
ಒಸೆದು ಖರ್ಪರ ಭಿಕ್ಷೆ ವೈರಾಗ್ಯ ಭಕ್ತಿಯ
ವ್ಯಸನವಾಗಿಹ ರೂಪೆ ಜಂಗಮದೇವಾ ೨

ಇಂತು ಭಕ್ತನು ಜಂಗಮವೆನಿಸುವರದೆ
ಅಂತರಂಗದೊಳು ನೀಲಗ್ರೀವ ತಾನೆ
ನಿಂತ ಕಾರಣ ಇತ್ತ ಬಾಹಿರಂಗದ ವೇಷ
ಎಂತು ತಾನದು ಭಕ್ತ ಜಂಗಮ ದೇವಾ ೩

೩೫

ರಾಗ : ಭೈರವಿ ಪಂತು

ಏನಯ್ಯ ಎಂತಸದಳವಾದ ಬಳಿಯು
ನೀನೆನ್ನ ಕಯ್ಯ ಪೂಜಿಸಿಕೊಳುದುಳಿಯು ॥ ಪಲ್ಲ ॥

ಏಱಿ ನೀನಿಹೆಯೊಮ್ಮೆ ಉರಗನ ಹೆಡೆಯ
ಹೇಱಿಹುದಾ ಗಜ ತನ್ನ ಬೆನ್ನೆಡೆಯ
ಮೀಱಿ ಹತ್ತಿಹೆ ವ್ಯಾಘ್ರನ ಮುಂದುಗಡೆಯ
ತೋಱಿಲಲ್ಲಿಯೆ ಪೂಜಿಸಲೆಯೆ ಎನ್ನೊಡೆಯ ೧

ಎಲ್ಲಿ ನೀ ವಿಶ್ವರೂಪನು ತೋಱಿಲಾಗ
ಅಲ್ಲಿ ನಾ ಮಾನಸಪೂಜೆಯು ಬೇಗ
ನಿಲ್ಲದೊಡರಿಸುವೆ ನಿಜರೂಪಹಾಗ
ತಲ್ಲಣ ಪೂಜೆ ಬಹಿರಂಗಪೂಜೆಯೆಂತಾಗ ೨

ಹಸುಳೆಯೊಂದಾಡಿಸುತಿಹುದವರಾಟ
ಒಸೆದವರಿಗೆ ನಿನ್ನ ನೆನಹಿತ[ರ] ಕಾಟ
ಹಸಿಯು ಬಿಸಿಲ ಹಂಗ ಹಱಿದರ ಮಾಟ
ಹಸನೆ ಹಾಗಪರೊಳಗೆ ಹರಿದಾಟ ೨

ನಿನ್ನನಱಿದವರೊಳು ಮಾತನಾಡು
ನಿನ್ನ ಪಱಿದರೊಳಗಿಹುದೇನು ಪಾಡು
ನಿನ್ನ ನೀನಱಿದು ನೀಲಗ್ರೀವಾ ನೋಡು
ನಿನ್ನ ಮೂರ್ತಿಗೆ ಎನ್ನ ಹೃದಯ ತಾ ಬೀಡು ೩

೪೦

ರಾಗ : ಆಹರಿ

ನೀನೆ ಹಿಂಗಿರಬಾರದೆ ಮಾನವರನು
ಮಾನ ಮಱವೆಯಾಗಿರಲಾತ್ಮ ॥ ಪಲ್ಲ॥

ತನುವಿದ್ದಾಗಲೆ ತಮ್ಮ ನಿಜವನಱಿದವದೊಂದು
ಮನವಿಲ್ಲದವರೊಳು ಮಾತನಾಡದೆ ಹಾಗೆ ೧

ಉರಿಯಂತೆಯುರಿದು ನೊಂದದೆಯುಱವರಣೆಸುವ
ನರರಿದಿರಿಗೆ ನೀರಿನಂತೆ ತಣ್ಣನೆಯಾಗಿ ೨

ನೀಲಗ್ರೀವ ನೆಲೆಯುಱಿಯದೆ ಮಾಯೆಯ
ಪಾಲಾದ ಪರಿವಾರದ ಥಟ್ಟಿಗೆ ಬೇಗಾ ೩

೪೧

ರಾಗ : ಸಾಳಂಗ

ತನ್ನ ಮಱಿಯೆ ತಾನೆ ಕಾವ ಆತ್ಮ
ತನ್ನನಱಿದರೆ ತಾನೆ ಮಹಾದೇವ ॥ ಪಲ್ಲ ॥

ತಿಳಿಯದಿರಲು ಕಬ್ಬುವಿಲ್ಲು ಆದ
ತಿಳಿದರಾದನು ದೇಹವೆಂದೆಂಬ ಸೊಲ್ಲು
ಅಳಿವೆದೆ ಕರಣಾದಿ ನಿಲ್ಲು ಗುಣ
ವಳಿಯೆ ಮೋಕ್ಷಕೆ ನಿಚ್ಚಣಿಕೆಯ ಹಲ್ಲು ೧

ಪರಿಗಾಣದಿ ಪುಷ್ಪಬಾಣ ಅವ
ಪರಿಯನಱಿದಿರೆ ತನಗೆ ಪಂಚಪ್ರಾಣ
ಪರಿವಾರ ಪಕ್ಕಿಯೆ ವಶಾಣ ತನ್ನ
ಪರಿವಿಡಿದವಯವಯವು ಮಹಾ ಜಾಣ ೨

ಕಾಮವೆನಿಸುತಿಹುದಾಸೆ ತಾನೆ
ಕಾಮದಹನವೆನಿಸುವದು ನಿರಾಸೆ
ಕಾಮವಿಲ್ಲದೆ ಮುಕ್ತಿ ಲೇಸೆ ತನಗೆ
ಕಾಮಾರಿ ನೀಲಗ್ರೀವನು ಕೈಗೂಸೆ ೩

೪೨

ರಾಗ: ಮಲಹರಿ

ಇದಿರ ನಿಂದಿರಲಾಗದು ಮದನಾರಿಯವರಿಂದು ಮಾಯೆಯ ಮುಖ
ದಿದಿರ ನಿಂದಿರಲಾಗದು ॥ ಪಲ್ಲ ॥

ಕರುಣರಸದ ಕರುವಿದೊ ತನುವಿದೊ ಎಂಬ
ಪರಮಪುರುಷರಿಂದು ಪಾಪರೂಪರ ಮುಖ ೧

ಉಲುವಡಗಿದ ವೃಕ್ಷದ ಹಾಗೆ ನಿಜದೊಳು
ನಿಲುವ ನಿತ್ಯರು ಇಂದು ನಿರನಿಷ್ಠೂರ ಮುಖ (?) ೨

ತಡೆಯದೆ ತಾವೆ ನೀಲಗ್ರೀವನಾಗಿಹ
ಮೃಡಶರಣರು ಇಂದು ಮೂರ್ಖಜನರ ಮುಖ ೩

೪೩

ರಾಗ: ಸಾಳಂಗ

ನಾನೇನೆಂದಾಡುವನಲ್ಲ ದೇವಾ
ನೀನಾಡಿಸಿದರೆ ನುಡಿವೆನೊಂದು ಸೊಲ್ಲಾ ॥ ಪಲ್ಲ ॥

ಎಲ್ಲಿಯು ಮಾತನಾ ಕಾಣೆ ಅವ
ಮೆಲ್ಲಮೆಲ್ಲನೆ ತಂದಾಡಿಸುವುದು ಜಾಣೆ
ಒಲ್ಲೆನೆಂದರೆ ನೀನು ಮಾಣೆ ಎನ್ನ
ಕೊಲ್ಲರೆ ಲೋಕದ ಜನರು ನಿಮ್ಮಾಣೆ ೧

ನೆಲೆಯ ತಿಳಿದ ರೂಪಿಸೊಳಗಂತರಂಗ
ಒಲಿದು ನೀನಿರಲರ್ಚಿಸುವೆ ಬಹಿರಂಗ
ನೆಲೆಯಿಂದಲಾನು ನೀಲಗ್ರೀವ ಲಿಂಗ
ಸಲುವುದೆ ವಿಶ್ವರೂಪಿಗೆ ಬಹಿರಂಗ ೩

೩೬

ರಾಗ : ಕೇತಾರ

ಈತನಾರೆ ಈತನಾರೆ ಅಕ್ಕ
ಆತನೆಂತು ನಿನ್ನ ಪತಿಯಾತನಿದಿರಕ್ಕ ॥ ಪಲ್ಲ ॥

ನಡೆಯ ನುಡಿಯ ನೋಡ ನೀಡುತೊಡ ಮಾತಾಡ
ಒಡನೆ ನಿನ್ನವನೊಡನೆಯೀ ಅಕ್ಕ ೧

ತುತ್ತಿಡಲೊಲ್ಲ ನಿನ್ನವನುಣುತಿರಲಮ್ಮೆ
ಮತ್ತೆಯಾತನ ಕಯ್ಯ ಬಾಯ ಬಳಿಯಲಕ್ಕ ೨

ನೋಡೆ ನೋಡದೆ ನಿನ್ನ ಪತಿ ನೀಲಗ್ರೀವನ
ಕೂಡಿತಾ ಕೂಡನಗಲಿಯಗಲನಕ್ಕ ೩

೩೭

ರಾಗ : ಭೈರವಿ ಪಂತು

ಎಂದಿಗೆ ಮನುಜ ಮಱವೆ ಹರವದು
ಅಂದಿಗೆನಗೆ ದೇವ ಹರುಷದೊರೆವದು ॥ ಪಲ್ಲ ॥

ಮಱವೆಯುವರಿಗೆನ್ನ ನಿನ್ನ ಮಾತಾಡೆ
ಮಱವೆಯಿಂದವರು ಬರವಱದೆ ಕೂಡೆ
ಮಱವೆಯಾಗಿರಲೊಮ್ಮೆ ಮೋಕ್ಷದ ಪಾಡೆ
ಮಱವ ನೋಡಿಸಿ ನಿಮ್ಮ ಭಕ್ತರು ನೋಡೆ ೧

ಅವರ ಮನಸಿಗೆಯಱುಹುತಾನೆ ಕಲಕು
ಅವರ ಮಱಹೆಯಱುಹಿಗೆ ಮಂಗಲಮಲಕು
ಅವರ ಮಱಹು ಹಿಂಗುವರೆ ನೀನತ್ತೊಲಕು
ಅವರಱಿದಾಗಮುವುದು ಎಲ್ಲಗಲಕ್ಕು ೨

ಮುಱಿಹೆ ನಿಮ್ಮುಱಿಹಿಗೆ ಮಾರಿ ತಾ ದೇವ
ಮುಱಿಹಿಯಿಂದವರೆನ್ನಱಿದರದೆ ಸಾವ
ಮುಱಿಹೆಗೆಟ್ಟವರೆನ್ನಱಿದರೊಂದೆ ಭಾವ
ಮುಱಿಹು ಹಿಂಗಿಸು ನರರಿಗೆ ನೀಲಗ್ರೀವಾ ೩

೩೮

ರಾಗ : ಸಾಕ್ಷಿ

ಕಂಡ ಮಾತದನಾಡುವದೆ ಕಷ್ಟ ಕಾಣದುದ
ಕಂಡ ಹಾಗಾಡುತಿಹ ನರರಿಗೆಂತೋ ॥ ಪಲ್ಲ ॥

ಹುಸಿದನಳುಪಿದ ಕದ್ದು ಕೊಂದನೆಂಬುದ ಕಂಡು
ಉಸುರಲಂಜುವರು ಉತ್ತಮಪುರುಷರು
ಹುಸಿಯುಳುಪು ಕಳವು ಕೊಲೆಗಳ ಕಾಣದಾಡುತಿಹ
ಹುಸಿಯ ಜೀವರಿಗವೆ ಗತಿಯಾಗವೆ ೧

ಸುರೆಯ ಸೇವಿಸಿದ ಋಷಿಗಿರಿಗಳೆದ್ದವು ನಭಕೆ
ತರಣಿ ನೆಲಕಿಳಿದ ಸಸಿಯುರಿದನೆಂದು
ಪರಮ ಪಾತಕರು ಹುಟ್ಟಿಸಿ ಹುಸಿಯುನಾಡಲದ
ಪರಿಯರಿಱಿಯದಾಡುವರೀಗಕಟ ಪಾಪ ೨

ನುಡಿಯಬಾರದು ತನಗೆ ಪಾಪ ತೊಡರುವ ಮಾತ
ನುಡಿಯಬಹುದು ತನ್ನ ಪಾಪಹರವ
ನುಡಿಯ ಸಾಧಿಸಿ ನೀಲಗ್ರೀವನಂಘ್ರಿಯ ಬೇಗ
ಒಡನೆ ಸಾಕುವದೊಂದೆ ಸಹಜವಾತ್ಮಾ ೩

೩೯

ರಾಗ : ಭೈರವಿ

ಹಾಗತ್ತಲಿಹೆಯು ಹಲವು ರೂಪಿಗೊಡೆಯು
ಹೀಗೆ ಹಾಗೆನ್ನಬಾರದು ನಿನ್ನ ನಡೆಯು ॥ ಪಲ್ಲ ॥

ಜೀವವಿಲ್ಲದ ಪೆಣನನು ಹೊತ್ತುಕೊಂಡು
ಜೀವ ವಿಂಸುಕುವ ಮುಂಡದ ಬಳಿಗೊಂಡು
ಜೀವರ ಜ್ಞಾನದಾಟವ ಕಂಡು ಕಂಡು
ಜೀವರೊಳೆಡೆಯಾಡುವರೆ ಮಱೆಗೊಂಡು ೧

ಹಸುಳೆಯೊಂದಾಡಿಸುಂತಿಹುದವರಾಟ
ಒಸೆದವರಿಗೆ ನಿನ್ನ ನೆನಹಿತ[ರೆ] ಕಾಟ
ಹಸಿಯು ಬಿಸಿಲ ಹಂಗ ಹಜಿದರ ಮಾಟ
ಪಸನೆ ಹಾಗವರೊಳಗೆ ಹರಿದಾಟ ೨

ನಿನ್ನನಱಿದವರೊಳು ಮಾತನಾಡು
ನಿನ್ನ ಪಂಱಿದರೊಳಗಿಹುದೇನು ಪಾಡು
ನಿನ್ನ ನೀನಱಿದು ನೀಲಗ್ರೀವಾ ನೋಡು
ನಿನ್ನ ಮೂರ್ತಿಗೆ ಎನ್ನ ಹೃದಯು ತಾ ಬೀಡು ೩

೪೦

ರಾಗ : ಆಹರಿ
ನೀನೆ ಹಿಂಗಿರಬಾರದೆ ಮಾನವರನು
ಮಾನ ಮಱಿವೆಯಾಗಿರಲಾತ್ಮ ॥ ಪಲ್ಲ ॥

ತನುವಿದ್ದಾಗಲೆ ತಮ್ಮ ನಿಜವನಱಿದವದೊಂದು
ಮನವಿಲ್ಲದವರೊಳು ಮಾತನಾಡದೆ ಹಾಗೆ ೧

ಉರಿಯಂತೆಯುರಿದು ನೊಂದದೆಯುಱವರಣಿಸುವ
ನರರಿದಿರಿಗೆ ನೀರಿನಂತೆ ತಣ್ಣನೆಯಾಗಿ ೨

ನೀಲಗ್ರೀವ ನೆಲೆಯಱಿಯದೆ ಮಾಯೆಯು
ಪಾಲಾದ ಪರಿವಾರದ ಥಟ್ಟಿಗೆ ಬೇಗಾ ೩

೪೧

ರಾಗ : ಸಾಳಂಗ
ತನ್ನ ಮಱಿಯೆ ತಾನೆ ಕಾವ ಆತ್ಮ
ತನ್ನನಱಿದರೆ ತಾನೆ ಮಹಾದೇವ ॥ ಪಲ್ಲ ॥

ತಿಳಿಯದಿರಲಂ ಕಬ್ಬುವಿಲ್ಲು ಆದ
ತಿಳಿದರಾದನು ದೇಹವೆಂದೆಂಬ ಸೊಲ್ಲು
ಅಳಿವೆದೆ ಕರಣಾದಿ ನಿಲ್ಲು ಗುಣ
ವಳಿಯೆ ಮೋಕ್ಷಕೆ ನಿಚ್ಚಣಿಕೆಯು ಹಲ್ಲು ೧

ಪರಿಗಾಣದಿ ಪುಷ್ಪಬಾಣ ಅವ
ಪರಿಯನರಿದರೆ ತನಗೆ ಪಂಚಪ್ರಾಣ
ಪರಿವಾರ ಪಕ್ಕಿಯೆ ವಶಾಣ ತನ್ನ
ಪರಿವಿಡಿದವಯವಯವು ಮಹಾ ಜಾಣ ೨

ಕಾಮವೆನಿಸುತಿಹುದಾಸೆ ತಾನೆ
ಕಾಮದಹನವೆನಿಸುವದು ನಿರಾಸೆ
ಕಾಮವಿಲ್ಲದೆ ಮುಕ್ತಿ ಲೇಸೆ ತನಗೆ
ಕಾಮಾರಿ ನೀಲಗ್ರೀವನು ಕೈಗೂಸೆ ೩

೪೨

ರಾಗ: ಮಲಹರಿ

ಇದಿರ ನಿಂದಿರಲಾಗದು ಮದನಾರಿಯವರಿಂದು ಮಾಯೆಯ ಮುಖ
ದಿದಿರ ನಿಂದಿರಲಾಗದು ॥ ಪಲ್ಲ ॥

ಕರುಣರಸದ ಕರುವಿದೊ ತನುವಿದೊ ಎಂಬ
ಪರಮಪುರುಷರಿಂದು ಪಾಪರೂಪರ ಮುಖ ೧

ಉಲುವಡಗಿದ ವೃಕ್ಷದ ಹಾಗೆ ನಿಜದೊಳು
ನಿಲುವ ನಿತ್ಯರು ಇಂದು ನಿರನಿಷ್ಠೂರ ಮುಖ (?) ೨

ತಡೆಯದೆ ತಾವೆ ನೀಲಗ್ರೀವನಾಗಿಹ
ಮೃಡಶರಣರು ಇಂದು ಮೂರ್ಖಜನರ ಮುಖ ೩

೪೩

ರಾಗ : ಸಾಳಂಗ

ನಾನೇನೆಂದಾಡುವನಲ್ಲ ದೇವಾ
ನೀನಾಡಿಸಿದರೆ ನುಡಿವೆನೊಂದು ಸೊಲ್ಲಾ ॥ ಪಲ್ಲ ॥

ಎಲ್ಲಿಯು ಮಾತನಾ ಕಾಣೆ ಅವ
ಮೆಲ್ಲಮೆಲ್ಲನೆ ತಂದಾಡಿಸುವುದು ಜಾಣೆ
ಒಲ್ಲೆನೆಂದರೆ ನೀನು ಮಾಣೆ ಎನ್ನ
ಕೊಲ್ಲರೆ ಲೋಕದ ಜನರು ನಿಮ್ಮಾಣೆ ೧

ಇದರರ್ಥವೇನೆಂದು ಲೋಕ ಕೇಳ್ಗೆ
ಮದನಾರಿಯೇಕಿಂದಾಡುವೆನೊಂದು ವಾಕ
ಒದವಿಸದಿರ್ದರನೇಕ ಜನ
ರದೆ ನಿಂದಿಸದೆ ನಿಲುವರೆ ನಿಮ್ಮ ವಾಕ ೨

ಬಿಡದಾಡಿಸದಕೇನು ಚಿಂತೆ ಎನ್ನ
ನುಡಿಸಿ ನೀನಾಗಲವರ ಮುಂದೆ ನಿಂತೆ
ಒಡಒಡಿಸುವುದಾಡಿದಂತೆ ಎನ್ನ
ಒಡೆಯ ನೀಲಗ್ರೀವ ನುಡಿ[ದಿ]ರುವರಂತೆ ೩

೪೪

ರಾಗ : ಶಂಕರಾಭರಣ

ಎನ್ನ ಕಾಯವೆ ಸೆಜ್ಜೆವನೆಯಲ್ಲದೆ ಬೇಱೆ
ಇನ್ನು ನಿಮಗೆ ಸೆಜ್ಜೆವನೆ [1][ಯುಂಟೆ][1] ದೇವಾ ॥ ಪಲ್ಲ ॥

ಇದೆ ಶಾಂತಿ ಸಲಿಲ ಮಜ್ಜನಕೆಱವರೆ ಗಂಧ
ವಿದೆ ನಿಜ ವಸ್ತುವಕ್ಷತೆಯುರುಹು
ಇದೆ ಪುಷ್ಪ ನಿಜಸಹಸ್ರದಳದ ಕಮಲಧೂಪ
ವಿದೆ ಸದ್ವಾಸನೆ ಸುಖ ನಿಜವಿದೆ ನಿಮಗೆ ೧

ಜ್ಞಾನಜ್ಯೋತಿಯೆ ದೀಪ ನಿರ್ಮಲವೆನಿಸುವ
ಧ್ಯಾನಮಹಾಮೃತ ನೈವೇದ್ಯವಿದಕೊ
ಏನೆಂಬೆ ಫಲಪದ ರಹಿತ ನಿರಾಸೆಯೆ
ತಾನೆ ತಾಂಬೂಲವಿಂತಿದೆ ನಿಲ್ಲು ನಿಮಗೆ ೨

ಎಡದೆಱವಿಲ್ಲದಾವಾಗ ಮಾನಸದಿಂದ
ಒಡರಿಸುವಷ್ಟ ವಿಧದ ಪೂಜೆಯೊಮ್ಮೆ
ಬಿಡದೆನ್ನೊಳಗೆ ಇಹವಱಿದು ನೀಲಗ್ರೀವ
ಕಡೆಯಲಾವುದು ಪೂಜೆಯೆಂಬುದು ನಿಮಗೆ ೩

೪೫

ರಾಗ : ಆಹರಿ

ನುಂಗುವ ಮಾರಿಯಯೆಂಬುದು ಕಂಡೆನು ನಿನ್ನ
ಸಂಗವೆ ಸಾಕು ಮಾಣಮ್ಮ ಮಾಯಮ್ಮ ॥ ಪಲ್ಲ ॥

---

1 ಯುಟ್ಟೆ (ಮೂ)

ಹುಟ್ಟಿಸುವವನ ತಲೆಯ ಸೂಜಿ ಮಾಡಿದೆ
ಮುಟ್ಟಿ ರಕ್ಷಿಸುವನರ್ದೆಯನೇಜಿದೆ
ಆಟ್ಟಿ ಒಡಿವನರ್ಧ ಅಂಗವನರ್ಧ ಮಾಡಿದೆ
ಕೆಟ್ಟ ನಡೆಯು ಸೂಳೆ ಕೆಲರಸಗೊಳ್ಳೆ ೧

ಕಡೆಯಿಲ್ಲ ನೀನು ಜುಗಿದ ಮೆದ್ದಲೋಕಕೆ
ಕಡೆಯಿಲ್ಲ ನೀನು ಉಗಿದ ಲೋಕಕೆ
ಕಡೆಯಿಲ್ಲ ನೀನು ಕುಡಿದ ಮಹಾಲೋಕಕೆ
ಕಡೆಯಿಲ್ಲ ನೀ ಮಾರಿಯುವ್ವ ಮಾಯವ್ವ ೨

ಬಲ್ಲೆನು ನೀನು ಒಡವೆಯಲ್ಲ ಜಗದಮ್ಮ
ಬಲ್ಲಿದೆ ಬಹುವೆ ಬಾಹಿರೆಯ ಸೊಮ್ಮ
ಎಲ್ಲವ ಬಿಟ್ಟು ನೀಲಗ್ರೀವನೊಳು ಹಮ್ಮ
ಇಲ್ಲವಾಗಿಯೆ ಸೇವೆಗೈವೆ ನಿದ್ದೆಯ ೩

೪೩

ರಾಗ : ಮಲಹರಿ

ಏತಕೆ ಮನುಜಯೋವೆನು ಹೀಗೆ ಮಚಿವರೆ
ಏತಕೆ ಏಟಿಯೆ ಶಿವನ ನೀನು ತೋಟಿವರೆ ॥ ಪಲ್ಲ ॥

ಬಹು ಯೋನಿಮುಖದಿ ಬಾಹರೆ ನೀನೊಂದಹಿಯಾಗಿ
ಬಹು ಪ್ರಯಾಸದ ಬಾಧೆಗೆ ಕಾರ್ಬೊನ್ನಾಗಿ
ಬಹು ಬಾಹಿರದ ಸ್ಮರ ಮನಕುಟಿಯಾಗಿ
ಬಹು ಮುಖ ಬಾಲೇಂದುಧರನನೀ ಮರನಾಗಿ ೧

ನಿಲ್ಲುವದಲ್ಲ ನಿನಗೆ ಸತಿಸುತರ ಜಾಲ
ನಿಲ್ಲುವದಲ್ಲ ನಿನಗೆ ದೇಹ ಬಹುಕಾಲ
ನಿಲ್ಲುವದಲ್ಲ ನಿನಗೆ ಇವೆ ಮೂಲ* ೨

ನಿಜವೆನ್ನು ನಿನ್ನ ಪಡೆದ ಮಹಾದೇವನ
ನಿಜವೆನ್ನು ನಿನ್ನ ಸಲಹುತಿಹ ಶಿವನ
ನಿಜವೆನ್ನು ನಿನ್ನ ನೆನಹಿಂದ ಕಾವನ
ನಿಜವೆಂದು ನಂಬು ನೀನೆಲೆ ನೀಲಗ್ರೀವನಾ ೩

* ಈ ಪದದಲ್ಲಿ ಒಂದು ಪಂಕ್ತಿ ಕಡಮೆಯಾಗಿದೆ (ಮೂ)

೪೭

ರಾಗ : ದೇಶಿ

ಎನಗಾಸೆಯುಂಟು ಏನೆಂಬೆ ಲೇಸಾಗಿ ಇದೆ
ಎನಗಾಸೆ ಬಹಳ ನಿನ್ನೊಳು ಮಹಾದೇವಾ ॥ ಪಲ್ಲ ॥

ಮಣ್ಣಿನಾಸೆಯು ನಿನ್ನ ಮೂರ್ತಿಯ ಪೂಜೆಗೆ
ಹೆಣ್ಣಿನಾಸೆಯು ನಿನ್ನ ನೆನೆವರೊಮ್ಮೆ
ಹಣ್ಣಿದ ಹೊನ್ನಿನಾಸೆಯು ನಿನ್ನ ಬೆರೆವರೆ
ತಿಣ್ಣಿಪಲ್ಲಿವು ಮೂಱಱಾಸೆ ಎನಗೆ ದೇವಾ ೧

ಊಟದಾಸೆಯು ನಿನ್ನೈಮೊಗ ತೃಪ್ತಿಗೆ
ಬೇಟದಾಸೆಯು ನಿನ್ನ ಸಂಯೋಗಕೆ
ಕೂಟದಾಸೆಯು ನಿನ್ನ ನೆನೆವ ಶರಣರೊಳು
ಮೀಟಾಗಿ ಎನ್ನೊಳಗಿದೆಯಾಸೆ ದೇವಾ ೨

ನಾನೆಂಬಾಸೆಯು ನಾನಾಱೆಂಬುದಱಿವರೆ
ನೀನೆಂಬಾಸೆಯು ನಾನು ನೀನಹರೆ
ನಾನು ನೀನೆಂಬೆರಡಳಿದು ಒಂ[1][ದಾ][1]ಹ ಆಸೆ
ಏನೆಂಬೆ ನಿರ್ವಯಲಾಸೆ ನೀಲಗ್ರೀವಾ ೩

೪೮

ರಾಗ : ವೊಡ್ಡಿ ಧನ್ಯಾಸಿ

ನಿನ್ನನಱಿದವರಿಗೆ ಒಂದುಂಟು ದೇವಾ
ನಿನ್ನ ಮಱೆದವರಿಗೆ ಎರಡುಂಟು ॥ ಪಲ್ಲ ॥

ನೆನೆದವರಿಗೆ ಒಮ್ಮನವುಂಟು ನಿನ್ನ
ನೆನೆಯದವರಿಗೆ ಇಮ್ಮನವುಂಟು
ನೆನೆದವರಿಗೆ ನಿಷ್ಫಲವುಂಟು
ನೆನೆಯದವರಿಗೆ ಫಲಪದವುಂಟು ೧

ಅಱಿದವರಿಗೆ ಅಸದಳವುಂಟು ನಿನ್ನ
ಅಱಿಯದವರಿಗೆ ಸದಳವುಂಟು
ಅಱಿಯದವರಿಗೆ ಲೋಕ ಬಯಲುಂಟು ಎನ್ನ
ಅಱಿಯದವರಿಗೆ ಲೋಕವೆ ಉಂಟು ೨

1 ದೊ (ಮೂ)

ಮಱೆಯದವರಿಗೆ ಮೂಱಾಱುಂಟು ನಿನ್ನ
ಮಱೆದವರಿಗೆಯಾಱೊಳುಂಟುಂಟು
ಮಱೆಯದವರಿಗೆ ನೀನೆ ನಂಟು ಎನ್ನ
ಎಱೆಯ ನೀಲಗ್ರೀವಾವಾಗುಂಟು ೩

೪೯

ರಾಗ: ಮೇಚ ಬಹುಳಿ

ಹುಚ್ಚನ ಕೂಡೆ ಹುಡುಗರಾಡುತಿರಲಾತಾ
ಕಚ್ಚುವ ಕಪಿಯು ಕುಣಿಸುತಿಹ ನವ್ಮಾ ॥ ಪಲ್ಲ ॥

ಕೋಡಗವಾಡುತಿರಲು ಕೊಱಗಿತಿಯೊರ್ವೆ
ನೋಡುವ ನೆವದಿ ಪಿಡಿಯಲದನೊಮ್ಮೆ
ಕೂಡೆ ಮತ್ತದು ಕುಣಿವುತ್ತಲಾಕೆಯಡರು
ನೋಡುವ ಹುಡುಗರಾಹಹಾಯೆಂದರಮ್ಮಾ ೧

ಇಂತಿವರೆಲ್ಲ ಕರಿಯ ಬೇಡನೊಬ್ಬನ
ಗೊಂತಿನ ಗೃಹದ ಪ್ರಾಕಾರದೊಳಿರಲು
ಇಂತೆನ್ನಬಹುದಾ ಬೇಡನ ಕೂಡೆ ಮತ್ತೊಬ್ಬ
ನಿಂತಿಹುದೈ ತಾ ನಿಷ್ಮರದವನಮ್ಮಾ ೨

ಹುಚ್ಚನುನ್ಮಾದ ಹರದು ಹುಡುಗರು ಹಿಂಗಿ
ಕಚ್ಚುವ ಕಪಿಕೊಱವಿಬೇಡದ್ವೈತ
ರುಚ್ಚುಹಗೆಡಿಸಿದಲ್ಲದೆ ನೀಲಗ್ರೀವನ
ಕಿಚ್ಚುಗಣ್ಣಾರಿಗೆ ಕಾಬುವದಮ್ಮಾ ೩

೫೦

ರಾಗ: ಮೇಚ ಬಹುಳಿ

ಇದೆ ನಿಜ ಮನವೆ ನೀ ನಂಬು ಸ್ಥಾಣು
ಇದೆ ಇದೆ ಮನ ಲತೆ ಹಂಬು ॥ ಪಲ್ಲ ॥

ಆದಿಯೆಂಬುದು ಇದೆ ಎಂದೆಯೂ
ನಾದಿಯೆಂಬುದು ಇದೆ ಮುಂದೆ
ಸಾಧಿಸಿವೆರಡೊಂದೆಂದೆ ಪರ
ವಾದ ವಸ್ತುವೆ ಇದೆವೊಂದೆ ೧

ತನುವಿದೆ ತನು ತಾನೆಯಹುದು ಕೂಡೆ
ಮನವಿದೆ ಮನವಾಗುತಿಹುದು
ಘನವಿದೆ ಘನವಾಗಬಹುದು ತಾನೆ
ನೆನಹಿದೆನೇನ ಲೇಸಹುದು ೨

ಇಂತು ಹಿಂದೆ ನಿನ್ನ ಭಾವಾ ತಾನೆ
ಕಂತುಹರನು ಎನ್ನಲಾವ
ಚಿಂತೆಯಿಲ್ಲವು ಮನ ದೇವಾ ನೀನೆ
ಚಿಂತಾಯಕ ನೀಲಗ್ರೀವಾ ೩

೫೧

ರಾಗ : ಮೇಚ ಬಹುಳಿ

ಕಂಡೆ ಕಂಡನಯ್ಯಾ ನಿನ್ನ ಮಾಯಾ ಮಹಾ
ಲೆಂಡೆ ಲೆಂಡೆಯಯ್ಯಾ ಜಿತವಶಾಯಾ ॥ ಪಲ್ಲ ॥

ಕಣ್ಣುದೆಱೆದು ಲೋಕವನು ತಂದೊ ಮತ್ತೆ
ಕಣ್ಣುಮುಚ್ಚಿ ಲೋಕವನು ಕೊಂದೊ
ಕಣ್ಣುದೆಱೆದು ಮುಚ್ಚುತಾಗ ತಿಂದೊ
ಕಣ್ಣಿಂದಲುಂಡುಗುಳ ಬಂದೊ ೧

ಉದ್ದವಾದುನ್ನತ ದಂತ ನೋಡೆ ಬಹು
ಬಿದ್ದಮೇಲೆ ಬಿದ್ದದೊಲದಾಡೆ
ಎದ್ದಿತೊ ಮೈಯಾದ ದೇಹಜೋಡೆ ಮಹಾ
ಹೊದ್ದಿ ಮೆದ್ದೊ ಮೂಲೋಕದವ ಕೂಡೆ ೨

ಹಿಂಗದೆ ಈಕೆಯಂದೊಂದು ಬೊಬ್ಬೆಯಿಂದು
ತೊಂಗಿ ಮೂಲೋಕವ ತಾನೇ ಹಚ್ಚಿ
ಕಂಗೆಡುತಲಾನು ನಿನ್ನ ತಬ್ಬಿ ಮಹಾ
ಲಿಂಗ ನೀಲಗ್ರೀವ ಎದ್ದಲಬ್ಬೆ (?) ೩

೫೨

ರಾಗ : ಮಲಹರಿ

ನಡೆಯಿಲ್ಲದೆ ನುಡಿಯಿಂದಲೇನಹುದು
ನಡತೆಯೊಂದಿರೆ ನುಡಿಯಶಾತಕೆಯಾತ್ಮಾ ॥ ಪಲ್ಲ ॥

ಊಟವಿಲ್ಲದೆ ಅಡಿಗೆಯ ವಿರಚಿಸಲೇಕೆ
ಕೂಟವಿಲ್ಲದೆ ತರುಣಿಯರ ವಿಸ್ತರವೆ
ಪಾಟವಿಲ್ಲದೆ ಮಸ್ತಕದ ಕೂದಲುಗಳೇತಕೆ
ನಾಟಿದ ನಡತೆಯಿಲ್ಲದ ನುಡಿಯೇಕೆ ೧

ಸಿರಿಯಿಲ್ಲದವನ ಸಿಂಗರದ ಗರ್ವದ ಹಾಗೆ
ವರನಿಲ್ಲದಾಕೆ ಹವಣಗೊಂಬವೊಲು
ಪರಮಶಾಂತಿಯ ನೆಲೆಯಿಲ್ಲದ ತಪದಂತೆ
ಮರನಂತೆ ನಡತೆ ಮಾತಿನ ಬಣ್ಣವೇಕೆ ೨

ಮಾತಿನ ಮಾಲೆಯಿಂದಲಿ ಲೋಕವಹದೆ
ಏತಕೆ ಮಾತು ನಡತೆಯೊಂದೆ ಸಹಜ
ನೀತವಾಗಿರೆ ನಿಜದಿಂದ ನೀಲಗ್ರೀವಾ
ಜ್ಯೋತಿಯಾಗಿಹ ನಿನ್ನವೊ ಹೊರಗಾತ್ಮಾ ೩

೫೩

ರಾಗ : ಮೇಚ ಬಹುಳಿ

ನುಡಿಯು ತೋರಿಸುವ ನೂತನ ರೂಪ ತೋರುವೆ
ನಡೆಯು ನೀನೊಂದನೇತಕೆ ತೋರೆಯಣ್ಣಾ ॥ ಪಲ್ಲ ॥

ಮಲತ್ರಯಗಳ ವಾಣ ಮಾರನ ಎಸುಗೆಗೆ
ಸಲೆ ಗುರಿಯಾಗಿ ಸಿಕ್ಕದೆ ಕಾಲನೆಲೆಯು
ಗೆಲುವದೆ ಗೆಲದೇಹದೊರೆದ ಕಾಲದೊಳೆಂದು
ಕೆಲರೊಳುಸುರಬೇಕೆ ನಡೆಯಿಲ್ಲದೇಕೆ ೧

ನಡೆಯೆ ಪಾವುಗೆ ಕಯ್ಯದಂಡ ಕಮಂಡಲ
ಒಡನೆ ಕಾವಿಯ ಕಾಶಾಂಬರದಿಂದ ಕಂಡೆ
ಜಡೆ ಕರ್ಣಕುಂಡಲ ಭಸಿತ ರುದ್ರಾಕ್ಷೆಯ
ಮೃಡರೂಪ ತೋರಿಸಬೇಕೆ ನಡೆಯಂದೇಕೆ ೨

ಮೂರು ನಾಲುಕು ಐದಾರೇಳೆಂಟೆಂದೆಂಬ
ಗಾರುಚಾರಿದನೆ ಗುಣಗಳ ಸುಟ್ಟುಬಿಟ್ಟು
ಬೀರುತ ದಯ ದಾಕ್ಷಿಣ್ಯವ ಶಾಂತಿ ಸ್ಥೈರಣೆ
ಹೀರಿ ನೀಲಗ್ರೀವನೊಳಗಾಗಬೇಕೆ ೩

೫೪

ರಾಗ : ಕೇತಾರ

ನಾನೇ ಬಲ್ಲೆ ನಾನೇ ಬಲ್ಲೆ
ನಾನೇ ಬಲ್ಲೆನು ನನ್ನ ಪತಿಯು ಪಾಡನು ಅಮ್ಮಾ ॥ ಪಲ್ಲ ॥

ಹಿಂಗದೆ ಹಿತವನ ಹಾಗೆ ಎನ್ನೊಡನಿಹ
ತೊಂಗಿ ಮತ್ತೈವರಂಗನೆಯರ ಕೂಡಿಹ ೧
ನುಡಿವ ನೋಡುವ ಸೋಂಕುವ ಸುಗಂಧನೀವ
ಒಡನೆ ಸವಿವ ವನಿತೆಯರೈವರ ಕೂಡೆ ೨

ನೋಡಲವರು ಎನ್ನ ಮೊಮ್ಮಕ್ಕಳೈವರು
ಕೂಡಿಕೊಂಡಿಹ ಎನ್ನ ಪತಿ ನೀಲಗ್ರೀವಾ ೩

೫೫

ರಾಗ : ತೆಲುಗ ಕಾಂಭೋದಿ

ನಿನಗೆ ಸಂಸಾರವಾದುದ ನಾನು ಬಲ್ಲೆನು
ನಿನಗೆ ಸಂಸಾರ ಜೋಚಾರವಲ್ಲಾತ್ಮ ॥ ಪಲ್ಲ ॥

ಪರಮಸುಜ್ಞಾನ ಶಾಂತಿಯು ತಂದೆ ತಾಯಿ ಸಹೋ
ದರರೆ ನಿನಗೆ ಸ್ವೈರಣೆ ಸವಂತೆಗಳು
ವರಸತಿ ನಿನ್ನ ಚಿತ್ತವ ತಾನೆಯಾಗಿದೆ
ಪಿರಿದಹ ಸುಗುಣವೆಲ್ಲವು ಸುಗುಣಾತ್ಮಾ ೧

ಒದವಿದ ದಯವುದಾಕ್ಷಣ ಧರ್ಮ ಸಹಜದ
ಪುದುವೆನಿಸುವ ಇಷ್ಟವಹ ಬಂಧುವರ್ಗ
ಹೃದಯ ಶುದ್ಧವೆ ಗೃಹವಾಗಿ ಸದಾಚಾರ
ಅದೆ ಗ್ರಾಮ ಸರಳ ನಿನಗೆ ಸತ್ಯವಾತ್ಮಾ ೨

ಇಂತು ಸಂಸಾರ ನಿನಗೆ ಮೇಲೆ ಮಹೋಚಿಟು
ನಿಂತು ಮಹೇಶ್ವರರಿಹರವರ
ಸಂತತಾಸೆಯನಾಗಿಸಿ ಸಂಸಾರ
ಗೊಂತೆನಿಸುವೆ ನೀಲಗ್ರೀವ ನೀನಾತ್ಮಾ ೩

೫೬

ರಾಗ : ಮೇಚ ಬಹುಳಿ

ಅಂಗವಾಗಿಹ ಕನ್ನಿಕೆಯ ವಿಚಾರಿಸಿ ತಂದು
ಲಿಂಗವೆನಿಸುವವರ ಕೈಯಿತ್ತೆ ದೇವಾ ॥ ಪಲ್ಲ ॥

ಹನ್ನೆರಡೊರುಷವಾಗಿದೆ ದ್ವಾದಶಾಂಗವೆ
ಕನ್ನಿಕೆಗಿಂದು ದಿವ್ಯಜ್ಞಾನ ಕಳೆಯು
ಸನ್ನಹಿತ ಪರವಮರೀ ಪೂರ್ಣಪ್ರಾಯವಾದುದೆ ಮಹಾ
ಉನ್ನತವರಕೆ ಷೋಡಶವಾಬ್ದ ದೇವಾ ೧

ಕರಣಾದಿ ಗುಣಗಳೆಲ್ಲವು ಸುಗುಣಗಳಾಗಿ
ಹರಿವ ಮನಸು ಹವಣಿಗೆ ನಿಂದುದೊಮ್ಮೆ
ಕರಲೇಸು ಶಕುನ ಶಾಲಿವಳಿ ಎಂದಾಗ
ವರಸತ್ಯ ಸಹತ್ವ ಸತ್ಕುಲವೆಂದು ೨

ಬಿಡದೆ ಸುಚಿತ್ತ ಸುಬುದ್ಧಿ ನಿರಹಂಕಾರ
ಒಡನೆ ಸುಮನಗಳೆನಿಪ ನೆಂಟರೊಪ್ಪೆ
ಮೃತ ನೀಲಗ್ರೀವಲಿಂಗಕೆ ಎನ್ನ ಮದುವೆಯ
ಸಡಗರಿಸಿದ ಮಹಾಗುರು ಚೆನ್ನಬಸವಾ ೩

೫೭

ರಾಗ : ಸಾಳಂಗ

ನಿಜವನರಿದು ನಿತ್ಯವೆಂದು ನಿನ್ನ
ಗಜಬಜವಳಿ ಜೀವ ಪರಮನಾಗಿಂದು ॥ ಪಲ್ಲ ॥

ಕಳ್ತಲೆ ಗೃಹದೊಳಗೊಂದು ಮಹಾ
ರತ್ನವಿಹುದು ಮಾಣದೆ ನೋಡಿ ತಂದು
ಚಿತ್ತವದಕೆ ಸಲೆಸಂದು ಮುಂದೆ
ನೇತ್ರದಣೆಯೆ ನೋಡುತಲಿರು ನಿಂದು ೧

ಎಚ್ಚಱಿಂದೊಳಗಾಡು ಕಂಡಾ ಎರ್ದೆ
ಬಿಚ್ಚುಮಾತು ಗ್ರಹಿಯಿಪುದದು ಲೆಂಡ
ಕಚ್ಚಲೆಳಸಿ ಪಿಡಿಕೊಂಡ ಬಹು
ಅಚ್ಚರಿಯಿಂದದು ಒಡಿಕೊಂಡ ೨

ದೋಷವಿಲ್ಲುರುಗನ ಸದ್ದು ಮೃಗ
ವಾಸದೊಳಗೆ ಜ್ಯೋತಿಯು ಬೆಳಗೆದ್ದು
ಪಾಶಭವವ ಕಡೆಗೊದ್ದು ಚಿತ್ಪ್ರ
ಕಾಶ ನೀಲಗ್ರೀವ ಬೇಗ ಹೊದ್ದು ೩

೫೮

ರಾಗ : ಶಂಕರಾಭರಣ

ತನುವಿನೊಳಗೆ ತಿಳಿಯದ ನರಜನ್ಮ ವೃಥಾಯ ಮಹಾ
ಘನ ಪರಬ್ರಹ್ಮದೊಳಗೆ ಒಡವೆರೆದವರಾಯಾ ॥ ಪಲ್ಲ ॥

ಕಾಯವೆನಿಪ ಕಾಂತಾರ ಗರ್ಜಿಸುತಿದ್ದ
ಮಾಯದ ಮದನನೆನಿಪ ಶಬರನ ಕಾಣುತೊದ್ದ
ಬಾಯಬಿಡಲು ಕರಣೇಂದ್ರಿಯೆನಿಪ ಮೃಗಸದ್ದೊ ಇಂತು
ಸಾಯಸವಳಿದು ಸಾಧಿಸುವ ಮಹಿಮ ಮೃತ್ಯು ಗೆದ್ದ ೧

ಉರುವಣಿಸುವ ಮದಕರಿಗಳೆಂಟನು ಕೆಡೆಮೆಟ್ಟಿ ಮುಂದು
ವರಿವ ಪಂಚೇಂದ್ರಿಯ ಫಲವು ಶುನಿಯ ಕಡಿದೊಟ್ಟಿ
ಪರಿದು ಪಣ್ಫಲವಗಿದುಗಿವ ಕಪಿಗಳೇಳನಟ್ಟಿ ಹೀಗೆ
ಪರಮನಿಲವ ಗೆಲಿದವ ತಾನೆ ಪರುಷದ ಘಟ್ಟಿ ೨

ಈ ಪರಿಯಲಿ ವಿಪಿನದ ಸಮದೇಹದ ಜೊತ್ತಾ ನೋಡಿ
ಆ ಪರಮಾನಂದ ಸುಖದೊಳಿಹುದೇ ಸುಚಿತ್ತ
ಪಾಪರಹಿತ ನೀಲಗ್ರೀವನೊಳಿರುತಿಹ ಭಕ್ತ ಲಿಂಗ
ತಾ ಪಿರಿದಟಿಸೆ ಕಾಣಿಸುವವ ಮುಕ್ತಾ ೩

೫೯

ರಾಗ : ಪಹಡಿ

ನಾನಱಿಯನೆ ನಿನಗಿನಿತು ನಿರ್ದಯ ದಯ
ವೇನು ಕಾರಣ ಎನ್ನೊಳೆಂದೆಂಬ ಬಗೆಯ ॥ ಪಲ್ಲ ॥

ತಪ್ಪದೊಮ್ಮಿಗೆ ಜಲನಿಧಿಯೊಳು ಮುಳುಗಿಪೆ
ಅಪ್ಪಪ್ಪ ಎಂದೊಱಲುವ ವೇಳೆಗೆ
ಅಪ್ಪಿ ತೆಗೆದು ಅಂಜಬೇಡೆಂದು ತಡಿಗಿತ್ತು
ಸೊಪ್ಪುಳಾಗಿಸಿ ಸಲಹುವದೊಂದು ಪರಿಯ ೧

ಬಿಡದನುದಿನ ರುಜೆಯಿಂದ ಬಾಯ್ಬಿಡಿಸುವೆ
ಒಡತನದಿಂದ ಬಾಹಿರ ಮಾಡುವೆ
ಒಡನೆ ಮತ್ತವ ಹಿಂಗಿಸುವೆ ಹಿತವನ ಹಾಗೆ
ಒಡೆಯ ಬಲ್ಲೆನು ನಿನ್ನ ಕಾಯಿಪ ಕರುಣವ ೨

ಕೆಟ್ಟುದೊಂದರೆ ಕೆಲವೊಳ್ಳಿತೆಂಬರೆ ಚಿತ್ತ
ಬಿಟೊಟ್ಟಯು ಕಾಯೊಳಾವುದು ನೋಡಲು
ಮುಟ್ಟಿ ರಕ್ಷಿಸು ಎನ್ನ ಗುಣವವಗುಣಗಳ
ನೆಟ್ಟನೆ ಮಱಿದು ನೀಲಗ್ರೀವ ತಂದೇ ೩

೬೦

ರಾಗ : ಮಲಹರಿ

ಉಂಡವರೈದಾಱು ದೇವರೆಮ್ಮನೆಯೊಳು
ಕಂಡರಂಗನೆ ರೋಗಯೆನಗೇಕೆ ಬಹುದೇ ॥ ಪಲ್ಲ ॥

ಎಸೆವ ಪ್ರಸಾದ ಜಂಗಮ ಶಿವ ಗುರು ಲಿಂಗ
ಪೆಸರಾದಾಚಾರಲಿಂಗಗಳೆಂದೈವರು
ಒಸೆದು ತಮ್ಮಿಚ್ಛೆಯದನಱಿದುಣಾತಿರೆ
ಸಸಿಮುಖಿ ನಾ ಕಾಣಲೆನಗೇಕೆ ರೋಗಾ ೧

ಸವಿದರವರು ವಿಷಹುಳಿ ಖಾರವೊಗರತಿ
ನವಮಧುರಸಗಳೊಳೊಬ್ಬರೊಂದೊಂದಾ
ತವಕದಿಂದವರಾಸೆವಿಡಿದಾರೋಗಿಸಿದರೆ
ಯುವತಿ ನಾನಿಟ್ಟಿಸಲೆನಗೇಕೆ ರೋಗಾ ೨

ಬಿಡದೈವರೆ ತನ್ನ ಮುಖವೆಂದು ತೃಪ್ತಿಯ
ಒಡನೈದುವ ಮಹಾದೇವ ತಾನೆಂದು
ಮೃಡನೀಲಗ್ರೀವನೊಬ್ಬನೆ ಆಱು ರೂಪಾಗಿ
ಬೆಡಗಿಂದರ್ಪಿಸೆ ರೋಗ ಎನಗುಂಟೆ ಸತಿಯೇ ೩

೬೧

ರಾಗ : ವೊಡ್ಡಿ ಧನ್ಯಾಸಿ

ನಾನೇನ ನಿನ್ನ ಬೇಡುವನಲ್ಲ ದೇವಾ
ನೀನೇನ ಎನಗೆ ಕೊಡುವನಲ್ಲಾ ॥ ಪಲ್ಲ ॥

ತನುವ ಬಯಸಿ ನಿನ್ನ ನಾ ಬೇಡೆ ಇನ್ನು
ತನುವ ತಾಯೆನೆ ನೀನೆನ್ನೊಡನಾಡೆ
ಮನವ ಬೇಡೆನೆ ನಿನ್ನೊಳದೆ ಕೂಡೆ ನಾನು
ಮನವ ಬೇಡಿದರೆ ನೀ ಮಾತಾಡೆ ೧

ಈ ತನು ಮನ ಧನ ನಿನಗಂದೆ ಇತ್ತು
ಏತಕೆ ಎನಗೆ ಬಯಕೆ ಮುಂದೆ
ಸೋತು ದಮ್ಮಯ್ಯ ಈಯೆನೆ ಹೊಂದೆ ನಾನು
ಓತುಬೇಕೆನೆ ನೀನು ಕೂಡೆನೆಂದೆ ೨

ನಾನು ನನ್ನನು ಬೇಡುವುದು ಉಂಟೆ ಹಾಗೆ
ನೀನೆ ನಿನಗೆ ಕೊಡುವದು ಉಂಟೆ
ನಾನು ನೀನೆಂದಿನ್ನು ಎರಡುಂಟೆ ಇಲ್ಲ
ನೀನೆ ನೀಲಗ್ರೀವ ನಾನುಂಟೆ ೩

೬೨

ರಾಗ : ಮೇಚ ಬವುಳಿ

ಎಂದಿನ ಹಾಗೆ ನೀರು ಎಂದೆನಲ್ಲದೆ
ಇಂದು ನಿನ್ನನು ನಾನು ಏನೆಂದೆ ದೇವಾ ॥ ಪಲ್ಲ ॥

ಕಿವಿ ಕಯ್ ಕಣ್ಣು ನಾಲಗೆ ಮೂಗನಳಿದಿಹ
ಯುವತಿಯರೊಡನೆ ನಿನ್ನೊಡವೆರವಾಗ
ಹವಣಿಬಿದೆಂದಿಂತಿರು ಎಂದೆನಲ್ಲದೆ
ಅವರೈವರ ನಿನ್ನನೇನೆಂದೆ ದೈವಾ ೧

ಪಾಡುವಳೊರ್ವೆ ಸೋಂಕುವಳೊರ್ವೆ ಮನವ ಸಂದು
ನೋಡುವಳೊರ್ವೆ ತುತ್ತುಡಿಸುವಳೊರ್ವೆ
ತೀಡುವಳೊರ್ವೆ ಗಂಧವೇನನುದಿನ ನಿನ್ನ
ಕೂಡುವಳೊರ್ವೆ ನಾನೈಸನ್ನ ಕೂಡೆ ೨

ಇಂತು ನಿನ್ನೈವರ ಸಂಗ ಸಂಯೋಗದ
ಚಿಂತೆಯಿರಲು ಎನ್ನ ಚಿಚ್ಛಕ್ತಿಯೆಂದು
ಎಂತು ನೀ ಬಲ್ಲೆ ನೀಲಗ್ರೀವಾಯೆಂದೆನೆ
ಸಂತತವಾರಿಯ...ಹಾಗಿರೆಂದೆ ೩

೬೩

ರಾಗ : ದೇಶಿ

ನೀ ಮಹಾದೇವನೆನ್ನತಿ ಭಕ್ತನೆನಿಸಲು
ಭೂಮಿಯೊಳು ಭೂಮಂಡಲದೊಳಗೆಂದರಿದೆ ॥ ಪಲ್ಲ ॥

ನಿಗಮಾತೀತನೆ ನಿರವಯು ನಿತ್ಯ ತೃಪ್ತನೆ
ಬಗೆಯಿಂದಲೆನ್ನ ಹೃದಯ ಮಧ್ಯದಿ
ಅಗಲದೆ ನೀನಿರೆ ರವಿ ಸಸಿಗಳ ಕೂಡ
ಮಿಗೆ ತಾಳವೆನ್ನಿಸು ಶಿಶುನಾ[1][ದರಿ][1]ಪುದರಿಂದೆ ೧

ಅಂಬುಧಿಯನು ಉರಿಯಿಸಿ ಬಿಡದನುದಿನ
ಬೆಂಬಿಡದಳುವ ಕೂಸನು ಕೊಲ್ಲುತ
ಮುಂಬಿಲೊಂಭತ್ತು ರೂಪಾಗಲೆನ್ನೊಳು ನೀನೆ
ಅಂಬುವಿನೊಳು ಜ್ಯೋತಿ ಬೆಳಗಿಪುದರಿಂದೆ ೨

ಉಸುರರಾವುದು ಮೂಗ ಕಂಡ ಕನಸು ಮಹಾ
ಎಸೆವಂಗ ಲಿಂಗ ಸಂಗದ ಸಂಯೋಗಾ
ಬಿಸಿಗಣ್ಣ ನೀಲಗ್ರೀವನೆ ನಾ ನೀನಾಗಿರೆ
ರಸದ ಬಾವಿಯು ತುಂಬಿ ತುಳುಕಿಪುದರಿಂದೆ ೩

೬೪

ರಾಗ : ದೇಶಿ

ಕಂಡೆನು ನಿನ್ನವರಾವ ಬಲ್ಲವರಾವುಾಯು
ತಂಡದವರೆ ಬಲ್ಲವರು ಮಹಾದೇವಾ ॥ ಪಲ್ಲ ॥

ಸುದತಿ ಸುವರ್ಣ ಭೂಮಿ ಸೋತು ಲಜ್ಜೆಯು
ಮುದೆಗೆಡಹಿದರು ನಿನ್ನವರಾಕೆಯು
ಪದೆವಿಡಿದವರೊಮ್ಮೆ ಸೋಲರೀ ಮೂಜಿನು
ಒದವಿದ ಲಜ್ಜೆಗೂಡಿಹರೆಲೆ ದೇವಾ ೧

ಕುಲ ಚಲಗಳನಳಿದರು ನಿನ್ನವರು ಮುಂದೆ
ಫಲಪದಗಳನು ಸಾಧಿಸರಾ ಮಾಯಾ
ಬಲದವರತಿ ಕುಲ ಚಲ ಫಲ ಪದಗಳ
ಸಲೆ ಸಾಧಿಸುವರು ಸಂತತವೆಲೆ ದೇವಾ ೨

ಹಿಡಿದ ಮುಷ್ಟಿಗೆ ಹೊರುತಿಹರೊಂದು ಮೂಟಾಟಾ
ಚಿಡೆಯೊಳು ಬಳಕೆಯಿಲ್ಲದಲಾ ಮಾಯಾ
ಪಡೆಯಂತೆ ಲಕ್ಷಣಕೋಟಿಯು ಕೂಡೆ ಲೋಕ
ನಡತೆಕಾಟಿರೆ ನಿನ್ನವರು ನೀಲಗ್ರೀವಾ ೩

[1] ದಿ(ಮೂ)

೭೫

ರಾಗ : ಮೇಚ ಬವುಳಿ

ಹೀಗಾದರಾನು ಬಾಹೆನೆ ನಿನ್ನ ಲೋಕಕೆ
ಹೀಗಾದರಿತ್ತ ಹೆಜ್ಜೆಯನಿಕ್ಕೆ ದೇವಾ ॥ ಪಲ್ಲ ॥

ಸತಿ ಸುತ ಸಹೋದರರ ಸಕಲ ಬಾಂಧವರೆಂದು
ಹಿತದೋರುಯುವರ ಹಿಂಗಿಸಿ ಎನ್ನ ಕೂಡೆ
ಮತಿಗುಂದಿಸುವೆ ಮರುಹೆಯೊಳಿರಿಸುವೆನೆಂಬ
ಶ್ರುತಿಯ ನೀನೆತ್ತ ಬಾಹೆನೆಯಿತ್ತ ದೇವಾ ೧

ತನುವ ತೋರಿಸುವೆ ತನುವಿನ ಗುಣಗಳ
ಮನವ ತೋರಿಸುವೆ ಮಾನಸಕೆ ಮರುಹೆಯ
ಧನವ ತೋರಿಸುವೆ ಧನದ ಮಹಾಕಾಂಕ್ಷೆಯು
ಎನಗೆ ತೋರಿಸುವೆನೆಂದರೆ ಇತ್ತ ಬಾಹೆನೇ ೨

ಬಿಡದೆನ್ನ ನಿನ್ನ ಲೀಲೆಗೆ ಸಂಸಾರವ
ತೊಡರಿಸಿ ನೀನು ನಾನಾಗಿಹೆನೆಂದು
ಕಡೆಯಲಿ ಸುಖದುಃಖ ನಿನ್ನ ನನ್ನದು ಎಂಬ
ಮಡಿಗಾರುತನವ ಬಲ್ಲೆನೆ ನೀಲಗ್ರೀವಾ ೩

೭೬

ರಾಗ : ವರಾಳಿ

ಉಣ್ಣದುಳಿವರೆ ಇಂದು ಉಣ್ಣದುಳಿವರೇ
ಹಣ್ಣೆ ನಿನ್ನ ಹೊಂದಿ ಘೋರದ ಅಣ್ಣಗಳು ಅಹೋ ದೇವಾ ॥ ಪಲ್ಲ ॥

ಊರ ಮುಂದೆ ಉಲುಹಿಗಿಕ್ಕಿ ಕ್ರೂರಜನರ ಕೈಯಲೊಮ್ಮೆ
ಮೋರುದಪ್ಪಿ ನುಡಿಸಿ ಮೇಲೆ ತೀರದವರಲಿಟ್ಟುದೂಟವಾ ೧

ತನುವಿನಿಂದ ರೋಗರುಜೆಯ ತನುಜರಿಂದ ತಾಪತ್ರಯವ
ಮನುಜರಿಂದ ಮಾಣದಲೆಯ ವನಿತೆಯಿಂದ ಒದವಿದಳಲಾ ೨

ಇಂತು ನೀನು ಇರದೆ ಉಣಿಸಿ ಎಂತು ಎನ್ನದುಂಡುವುಟ್ಟು
ನಿಂತವರು ನೀನೆಯಾಗಿ ಕಂತುದಹನ ನೀಲಗ್ರೀವಾ ೩

೩೭

ರಾಗ : ಸಾಕ್ಷಿ

ನೀ ಹೀಗೆ ಹೋಟಿಗೆ ಗುರು ಲಿಂಗ ಜಂಗಮ ಮೋಟಿ
ನೀ ಹೀಗೆ ಮಟಿದು ಒಳಗಟಿದೆ ಅಣ್ಣಾ ॥ ಪಲ್ಲ ॥

ಹೋಟಿಗೆ ಕೈಯಿಹುದು ತನುವಿನದೊಂದು ಎರಡೆಸಳಕೆ
ಹೋಟಿಗೆ ಇಷ್ಟತೆಯಿಹುದು ಮನಸಿಗೊಮ್ಮೆ
ಹೋಟಿಗೆ ಪ್ರಾಣದ ನೆನಹು ಇಹುದು ಧನದಾತುರಕೆ
ಹೋಟಿಗೆ ಮಟದೊಳಗೆ ಏನಟಿದೆಯಣ್ಣಾ ೧

ತನುವಡಗುವನಕ ಗುರುವಾಜ್ಞೆ ವಿಡಿದಿರಬೇಕು
ಮನವಡಗುವನಕ ಲಿಂಗದ ಪೂಜೆ ಬೇಕು
ಧನವಡಗುವನಕ ಜಂಗಮಕೆ ಸವೆಯಲು ಬೇಕು
ಘನ ಮೋಟಿ ಹೀಗೆ ಹೋಟಿಗಟಿಯುದಣ್ಣಾ ೨

ಒಳಗೆ ನೀನಟಿದು ಸುಜ್ಞಾನ ಜ್ಯೋತಿಯ ಬೆಳಗು
ಬಳಿ ನೀ ಕರಣಾದಿ ಗುಣಗಳತುಳ
ಗಳಬಳವ ನಿಲಿಸುವ ನೀಲಗ್ರೀವನೊಳಗಹರೆ
ತಿಳಿದು ಸತ್ಕ್ರಿಯ ಹೋಟಿಗಟಿದಿರಣ್ಣಾ ೩

೩೮

ರಾಗ : ವರಾಳಿ

ಏನು ತೋಟಿದೆ ದೇವ ಏನ ತೋಟಿದೇ
ನೀನೆಂದು ನಂಬಲೊಮ್ಮೆ ಮನಗೆಡಿಪ ನಿನ್ನ ಮಾಯಾ ॥ ಪಲ್ಲ ॥

ನಿನ್ನ ಮಟಿಸಿ ತನ್ನ ತೋಟಿ ಎನ್ನ ತಿಂಬ ಮಾರಿಯೆಂದು
ಮುನ್ನ ನಾನು ಜಟಿದ ಮೇಲೆ ಇನ್ನು ತಿರಿಗಿ ತಂದು ಇವಳ ೧

ಸುದತಿ ಎಂದು ಸುತರು ಎಂದು ಒದವಿ ಸಹೋದರರು ಎಂದು
ಇದಕೊ ಇಷ್ಟಬಂಧುವೆಂದು ಇದನೆ ಹಲವು ರೂಪಮಾಡಿ ೨

ಜಾಲವಾದ ಜಗದ ಮಾಯೆ ಮಾಲೆಯಾದ ಮಟಹ ಬಿಡಿಸಿ
ಪಾಲಿಸಯ್ಯ ನಿನ್ನ ಕೃಪೆಯ ನೀಲಗ್ರೀವಾ ಎಂದರೆ ೩

೭೯

ರಾಗ : ಸಾಕ್ಷಿ

ಗುರುವಿನಾಜ್ಞೆಯು ಮೀಱಿದರೆ [1][ಕೊರಡು][1] ಮುಳುಗದೆ
ಗುರುವಿನಾಜ್ಞೆಯ ಮೀಱಿ ನರಕವಣ್ಣಾ ॥ ಪಲ್ಲ ॥

ಗುರುವಱುಹಿದರೆ ದೇಹವೇ ಗುರುವಾದುದು
ಗುರುವಱುಹಿದರೆ ಮಾನಸಲಿಂಗವಾಯಿತ್ತು
ಗುರುವಱುಹಿದರೆ ಪ್ರಾಣವೇ ಚರವಾದುದು
ಗುರುವಾಜ್ಞೆಗೆಡಲಱುಹಿನ ಕೆಡದಣ್ಣಾ ೧

ಗುರುವಾಜ್ಞೆಗೆಡಲು ಎಲ್ಲಿಯ ಲಿಂಗ ನಿನಗುಂಟು
ಗುರುವಾಜ್ಞೆಗೆಡಲು ಎಲ್ಲಿಯ ಜಂಗಮ
ಗುರುವಾಜ್ಞೆಗೆಡಲು ಎಲ್ಲಿಯ ಮಂತ್ರಜ್ಞಾನವು
ಗುರುವಾಜ್ಞೆಗೆಡಲು ಎಲ್ಲಿಯ ಮೋಕ್ಷವಣ್ಣಾ ೨

ಗುರುಭಕ್ತಿವಿಡಿದು ಬಾಳುವದೈದುದಿನ ಸಾಕು
ಗುರುಭಕ್ತಿಯಳಿದು ಸಾವಿರಗಾಲವು
ಗುರುವ ಜೀವಿಸಲು ನೀಲಗ್ರೀವನೊಲಿವನೇ
ಗುರು ನೀಲಗ್ರೀವನೆಂದಿರಣ್ಣಾ ೩

೮೦

ರಾಗ : ಶಂಕರಾಭರಣ

ಬಯಲದೂಱೀತಕಾ ಹಮ್ಮು ನಿನಗೆ ಬೇಡ
ಪಯಣವಾಗೊಡೆಯ ಬಂದನು ಸಾರಿಲ್ಲಡಗು ॥ ಪಲ್ಲ ॥

ನಿನ್ನದೀ ಕಾಯುವೆನಂತಲಿದ್ದೆಯನುದಿನ
ಇನ್ನದು ಹುಸಿಯೆಂದಱಿದೆ ಗುರುವಮುಖದಿ
ಮುನ್ನಲಾನಱಿಯೆನೆಂದರೆ ಇನ್ನು ಅಱಿಯೆನೆ
ಎನ್ನಾಳ್ದ ಬಂದನೀ ಹೋಗಿಲ್ಲವಾಗು ೧

ಹೃದಯಕಮಲದಿ ಓಂಕಾರನು ರೂಪನು ನಿಲ್ಲು
ತದೇಕರ್ಣತ್ವ ಚಕ್ಷು ಜಿಹ್ವೆ ಘ್ರಾಣಗಳ
ಗುದ ಗುಹ್ಯ ಪದ ಪಾಣಿ ವಾಕುಗಳೆಂದೆಂಬ
ಸದನದಿ ನಮಃ ಶಿವಾಯೆಂಬ ಮುದ್ರೆಯನಿಟ್ಟ ೨

---
[1] ಕೊಂಡು (ಮೂ)

ಈ ಪರಿಯಿಂದಲಂಗವ ತನ್ನ ವಶವಮಾಡಿ
ವ್ಯಾಪಿಸಿಕೊಂಡ ನೀಲಗ್ರೀವ ಕೂಡೆ
ತಾಪಿಸಿ ತನು ನಿನ್ನದೆಂಬರೆ ತಾಮಸ
ಪಾಪಿಯು ಹಮ್ಮೆ ನೀ ತೊಲಗತ್ತ ತೊಲಗು ೩

೭೧

ರಾಗ : ಮೇಚ ಬವುಳಿ

ತಾನೆ ನಿಮಗೆ ಭಕ್ತನಾದುದು ಮನಸೋತು
ನಾನೇನೆಂದುಸುರಲಿಲ್ಲತಿ ನಿಮ್ಮ ಮಹಿಮೆಯಾ ॥ ಪಲ್ಲ ॥

ನೆನೆವುದು ನಿಮ್ಮ ಮೂರ್ತಿಯ ಕಂಡ ಮೇಲೆಯಾ
ನೆನಹು ನಿಮ್ಮೊಳಗಡಗಲು ತಾನೆ ಮಹಾ
ಸನುಮಾನದಿಂದ ಪೂಜಿಸಿ ನಿಮ್ಮ ಕರುಣದ
ಘನ ಪ್ರಸಾದದಿ ತೃಪ್ತಿಯಾಗಿ ಈ ಮನಸೂ ೧

ದಣಿಯದು ನಿಮ್ಮನರ್ಚಿಸಂತಲನ್ಯಕೆ ಶಿರ
ಮಣಿಯದು ಭಕ್ತಭರವಸಕಲ್ಲದೆ
ಕಣಿಯದು ನಿಮ್ಮ ನಿಂದಿಸುವರೆಡೆಯ ಕೋಪ
ಹಣಿಯದು ತನಗೆ ನಿಮ್ಮೊಳಗಾಗಿ ಮನಸೂ ೨

ಮಳೆಹೊಯಿದು ಹೊಳಹಿದಂತಾದುದೀ ಮನದ
ಸುಳುಹಿಲ್ಲ ನಿಮ್ಮ ಸೇವೆಗೆ ಸಲೆಸಂದು
ಘಳಿಲನೆ ನಿಂದು ನೀಲಗ್ರೀವ ನಿಮ್ಮ ತಾ
ತಿಳಿದುದಾಶ್ಚರಿ ಸ್ಥಿರಂಜೀವಿಯಿಹಾ ಮನಸೂ ೩

೭೨

ರಾಗ: ಮಲಹರಿ

ಹುಸಿಯ ನೀನುಡಿದು ಜೀವಿಸುವ ಬಾಳುವೆಯಿಂದ
ಸಸಿನೆ ಸತ್ಯವನಾಡಿ ಸಾಯೆ ಲೇಸಣ್ಣಾ ॥ ಪಲ್ಲ ॥

ನಿಲಲಱಿಯದು ಮೂಲ ಮಂತ್ರ ಕರ್ಣದೊಳೊಮ್ಮೆ
ತೊಲಗುತಿಹುದು ಮಸ್ತಕದೊಳಿಟ್ಟ ಹಸ್ತಾ
ನೆಲೆದಪ್ಪುವದು ಕರಸ್ಥಲದ ಚಿತ್ಕಳೆ ಮಹಾ
ಒಲವಹ ಗುರು ನಿನಗದೆಯಣ್ಣಾ ೧

ಹಿಂಗಿಸುವದು ಸಂಗುಣವ ಸೂಚಿಯಮಾಡುಂತ
ತೊಂಗಿಸುವದು ಜಾರ ಚೋರತನಗಳ
ಹೊಂಗಿಸುವದು ಕಾವ ಕಾಲರ ಇದಿರಿಗೆ
ಸಂಗವಾಗಿಹ ಹುಸಿ ಸದರವಲ್ಲಣ್ಣಾ ೨

ನುಡಿಯಲಾಗದು ಹುಸಿಯುನು ಗುರುವಿನ ಕೂಡೆ
ಮೃಡಶರಣರುಗಳೊಳಗೆ ಹುಸಿ ಬೇಡ
ಒಡನೆ ನೀಲಗ್ರೀವನೊಲುಮೆ ಬೇಕಾದರೆ
ಕಡೆಮಾಡು ಹುಸಿಯು ಕಾಲದಲೆಚ್ಚತ್ತಣ್ಣಾ ೩

೭೩

ರಾಗ : ಮೇಚ ಬವುಳಿ

ನಿನ್ನ ಲೀಲೆಗೆ ನೀ ಹಿಂದೆ ಎರಡಾಗಿ ತೋಱಿದೆ
ಇನ್ನವೆರಡೇ ಕೋಟಿಯಾಗವೆ ದೇವಾ ॥ ಪಲ್ಲ ॥

ಬಿತ್ತದಿದ್ದರೆ ಒಂದು ಹೋಕ ಭೂಮಿಯ ಮೇಲೆ
ಬಿತ್ತದರಾವ ಬೀಜವು ಜಗಕೆಲ್ಲಾ
ಬಿತ್ತುದಾಗಿಯೆ ಬೆಳೆಯದೆ ಏಕೆ ಸಂದೇಹಾ
ಬಿತ್ತ ಕಾಳುಖಿಂಡುಗ ಕಂಡ ದೇವಾ ೧

ರಸವ ವಣಿಜನು ತೂಕವ ಮಾಡುಂತಿರಲೊಮ್ಮೆ
ರಸ ತುಂಬಿ ತ್ರಾಸು ತಾನೊಲೆಯಲು ಕೂಡೆ
ರಸ ರಸೆಯೊಳಗುರುಳಲು ಬಿಂದು ಕಡೆಯೋಹೋ
ರಸ ಚಲ್ಲಿದಂತೆಯಾಗಿದೆ ಎಲೆ ದೇವಾ ೨

ಆದೆ ಪರಶಿವತತ್ತ್ವ ಲಿಂಗ ಸದಾಶಿವ
ಆದೆ ಈಶ ರುದ್ರ ವಿಷ್ಣುವು ವಿಧಿ ಇಂದ್ರ
ಆದೆ ಸುರಾಸುರ ಮಾನಸರುರಗರು ಎಂದು
ಆದೆ ನಿನ್ನ ಲೀಲೆಯುಱಿದು ನೀಲಗ್ರೀವಾ ೩

೭೪

ರಾಗ : ಮಲಹರಿ

ಕುಱುಹಿಗೆ ಬಂದು ಈ ಕೂಸನೆತ್ತುವದೊಂದು
ಮಱಿಹಿಯು ಬಣ್ಣ ಮಾಜದೆ ನಿನಗಣ್ಣಾ ॥ ಪಲ್ಲ ॥

೮೧

ಕೆಟ್ಟ ಕೂಸದು ಹಿಂದೆ ಕೆಲರ ನುಂಗಿತು ಮುಂದೆ
ಮುಟ್ಟಬಾರದು ಎಂದು ಮುಂಗಾಣದಿಂದು
ಬೆಟ್ಟವನೇಱಿ ಬೇತಾಳಗೆ ಮೊಗದೋಱಿ
ತೊಟ್ಟವನೆ ಹೊತ್ತುವನಂತೆ ತೋಱುವ ಭ್ರಾಂತೆ ೧

ಮುಸುಕುತ ಮಱೆಱಿ ಜಱಿವುತ ಮೂಱಿಱಿವುತ
ಕೊಸರುಗೆಡಿಸಂತಾಱಿ ಹೆಸರಿಡುತಾಱಿ
ಕುಸುರಿದಱಿದು ಹಾಗೆ ಕೂಸ ಕೊಂದವರಿಗೆ
ಒಸೆದು ನೀ ಕೂಸವೊಯ್ಯನೆ ತೋಱಿ ಮೋಸ ೨

ಜಾಲಗಾಱಿನು ನೋಡೆ ಜಗದೇವಿಯನು ಕೂಡೆ
ಬಾಲನಾಗಿಹುದೊಮ್ಮೆ ಬಡವರ ಸೊಮ್ಮೆ
ನೀಲಗ್ರೀವನೆ ಬಲ್ಲ ನೀನೆತ್ತುವದು ಹೊಲ್ಲ
ಬಾಲನಲ್ಲದು ನಾಡು ಭವಮಾಲೆ ಬೇಡ ೩

೭೫

ರಾಗ : ಮೇಚ ಬಹುಳಿ

ಅಜ್ಞಾನಿಗಳನೆಲ್ಲ ಬಳಿಯಲ್ಲಿ ತೋಱುವೆ
ಸುಜ್ಞಾನಿಗಳನು ಎಲ್ಲಿ ತೋಱೆ ದೇವಾ ॥ ಪಲ್ಲ ॥

ಹಲವು ಪರಿವೇಷಧಾರಿಗಳನು ತಂದು
ನಿಲಕಾಲವಿಲ್ಲದಾವಾಗ ತೋಱಿಸುವೆ
ಮಲತ್ರಯಗಳುಮಾದ ಮಹಾ ದಿವ್ಯಜ್ಞಾನದ
ನೆಲೆಯಱಿದವರನೇತಕೆ ತೋಱೆ ದೇವಾ ೧

ಅರಿಷಡುವರ್ಗಷ್ಟಮದ ಪಂಚೇಂದ್ರಿಯಗಳ
ಉರುವಣೆಯಿಂದಲುಬ್ಬಿಹರ ತೋಱಿಸುವೆ
ಕರಣಾದಿ ಗುಣಗಳೆಲ್ಲವ ಕಡೆ ಮಾಡಿದ
ಪರಮ ಜ್ಞಾನಿಗಳನೇತಕೆ ತೋಱೆ ದೇವಾ ೨

ಕಾಲ ಮೊದಲು ಕಾವ ಕಾಲರಿರ್ವರ ಕೂಡೆ
ಸೋಲವಾಗಿಹ ಸೊಗಡುಂಗರ ತೋಱಿಸುವೆ
ನೀಲಗ್ರೀವನೆ ನಿನ್ನ ನಿಜವನಱಿದ ಮಹಾ
ಮೂಲಮೂರ್ತಿಗಳನೇತಕೆ ತೋಱೆ ದೇವಾ ೩

೬೭

ರಾಗ : ವರಾಳಿ

ಇವರು ಬಲ್ಲರೆ ನಿನ್ನ ಇವರು ಬಲ್ಲರೇ
ಹವಣುದಪ್ಪಿ ವಿವರಗೆಟ್ಟ ಜನರು ದೇವಾ ॥ ಪಲ್ಲ ॥

ಕರಿಯು ಕಾಲ ಬೇಳೆ ಚವುಡಿ
ಉರಿವ ಮಾರಿ ಉಡುಚಲಮ್ಮ
ವರವನೀವ ಒಲಿವನೆಂಬ
ಹಿರಿಯು ಹುಚ್ಚ ಹಿಡಿದ ಮೇಲೆ ೧

ಬಿಡದೆ ಬೀರ ಜಟ್ಟಿಗರಿಗೆ
ಒಡನೆ ಒಮ್ಮೆ ಹರಕೆದೆಗೆದು
ಮಡದಿ ಮಕ್ಕಳೆಲ್ಲ ಕೂಡೆ
ಮುಡುಹು [1][ಮೊ][1]ದಲೆಗೊಟ್ಟ ಮೇಲೆ ೨

ನಿತ್ಯ ನೀಲಗ್ರೀವಯೆಂಬ
ಚಿತ್ತಜ ಗುರುವೊಮ್ಮೆ ಮರೆಯು
ಮತ್ತ ಮರೆವೆ ಭ್ರಾಂತುವೆಂಬ
ಪಿತ್ತಪಿರಿದು ಭ್ರಮಣೆಯಾಗೆ ೩

೬೮

ರಾಗ : ಮೇಚ ಬಹುಳಿ

ತೋರಬೇಡೆನಗೆ ನಿನ್ನನುವರಿತರಿಯದೆ
ಪಾರಾದ ಪಾಮರರನು ಮಹಾದೇವಾ ॥ ಪಲ್ಲ ॥

ಬಿಡದೆ ನಿನ್ನವರಿಗೆ ತನು ಮನ ಧನವನು
ಒಡನೆ ಈವುತ ನಿನ್ನ ನಿಜವ ತಾನರಿದ
ದೃಢವುಳ್ಳವರ ತೋರಿಸು ದುರ್ವಿದಗ್ಧರ
ತೊಡರ ತಂದೆನಗೆ ತೋರಿಸಬೇಡ ದೇವಾ ೧

ನಿನ್ನ ನಿಜವನರಿಯಂದೆ ಮರಹಿಯೊಳೊರ್ವ
ಮುನ್ನವೆ ಪಶುಗಳಾಗಿಹರ ತೋರಿಸುವೆ
ನಿನ್ನ ಮನಸು ನಿನ್ನನರಿತರಿಯದರನು
ಎನ್ನಿದಿರಿಗೆ ತೋರಬೇಡೆಲೆ ದೇವಾ ೨

---

[1]ಮುಂ (ಮೊ)

ಅಱುಹ ಸಾಧಿಸುವರಾಗಳೆ ಉಕ್ಕುದೊಱೆಯಂತೆ
ಒಱುದೊಱೆಯಂಹರಾಗಳೆಯಱುಹಱಿತು
ಅಱಿವ ಮರುಳುಗಳ ತೋಱಿಸಬೇಡವೆನಗಿನ್ನು
ಅಱಿದ ಭಕ್ತರನೆ ತೋಱಿಸು ನೀಲಗ್ರೀವಾ ೩

೭೮

ರಾಗ: ತೆಲುಗ ಕಾಂಭೋದಿ

ನೋಡಿರೆ ಬೆಡಗು ಬಿನ್ನಾಣವಾ[1][ಗಿ][1]ದೆ ಭವ
ಗೇಡಿಯ ಭಕ್ತನ ಬಹು ಭಜನೆಗಳಾಟ

ತಲೆಯನಱಿದು ಲಿಂಗಕಾರತಿಯೆತ್ತಲಾ
ತಲೆ ಲಿಂಗದೊಳಡಗುವದತ್ತಲಿತ್ತ
ತಲೆಯಿಹುದೆಂದಿನಂದದಿ ಈತನಾಗಳೆ
ತಲೆಯಿತ್ತಲೆ ಜಿಗುತಿಹನದೊಂದಿರವಾ ೧

ಕರದಿಂದ ಲಿಂಗಪೂಜೆಯ ಮಾಡುತಾಕ್ಷಣ
ಕರವ ಕತ್ತರಿಸಿ ಲಿಂಗದ ಮುಂದೆ ಇಡಲು
ಕರವೊಂದನೀಯೆ ನಾಲುಕು ಹಸ್ತ ಬಾಹವು
ಕರಗಳೇಸಿಹವೊ ಕಾಣದುವಾತನೊಳಗೆ ೨

ಕಣ್ಣೊಳಗಿಷ್ಟಲಿಂಗವಹುದು ಬೇಱೆ
ಕಣ್ಣ ತೋಱುವನು ಸತ್ಯಕೆ ಸದಾಕಾಲ
ಕಣ್ಣಾಗಿ ಕಾತ್ಯಾಯನಿಯವರನೆನಿಪ ಮು
ಕ್ಕಣ್ಣ ನೀಲಗ್ರೀವನಾದನದಕೋ ೩

೭೯

ರಾಗ: ಆಹರಿ

ಇನಿತೇಕೆ ಸುಮ್ಮನಿರದೆ ನಿನ್ನ ಕೂಡೊಮ್ಮೆ
ಇನಿತಿವು ಸೆಣಸಿ ಕೆಡುವವೆಲೆಯಾತ್ಮಾ ॥ ಪಲ್ಲ ॥

ಮದಕರಿಯೆಂಟಱೆಡೆಗೆ ಸಿಂಹಯೇಳಾಗಿ
ಒದವಿದ ವ್ಯಸನವೆನಿಪ ಕಪಿಗಳಿಗೆ
ಹದನಾದ ಕೊಡತತ ಪಂಚೇಂದ್ರಿಯವೆನಿಸುವ
ಹುದುಗಿದ ಶುನಿಗಳೆಡೆಗೆ ನೀನು ವ್ಯಾಘ್ರ ೧

[1] ಯಿ (ಮೂ)

ಕರಣ ನಾಲ್ಕಱ ಕಪಟದ ಗುಣಗಳು ಎಂಬ
ಉರಗಗಳಿಗೆ ಗರುಡನು ತಾಪತ್ರಯದ
ಉರಿಯ ನೊಂದಿಸುವರುಂದಕ ನೀನು ಎಂಬುದ
ಇರದಱಿಯಂದಲೇಕೆ ಕೆಣಕಿ ಕೆಡುವವು ೨

ಬಿಱುಗಾಳಿಯಾಗಿ ನೀ ನಿಹಿತನು ಗುಣಗಳೆ
ತಱಗೆಲೆಗಳ ಹಾಗೆ ತಾವಿದಿರೆಹಾ
ತೆಱನದಾವುದು ನೀಲಗ್ರೀವಮೂರ್ತಿಯ ಮಹಾ
ಅಱಿದೊಡೆವೆರೆದು ನೀನೀಹುದಱಿದಱಿದು ೩

೭೦

ರಾಗ : ತೆಲುಗ ಕಾಂಭೋದಿ

ಮನವನಾನಂದೆ ಲಿಂಗದ ಬಳಿಗಟ್ಟಿದೆ
ಮನುವಿತ್ತ ತಿರುಗದಿನ್ನತ್ತಲೇನಾಯಿತು ॥ ಪಲ್ಲ ॥

ಎಡೆವಿಡದಾತನೊಂದಯಿಂದಾಱು ಮೊಗಗಳಾ
ಬಿಡದೆ ಈಕ್ಷಿಸುತ್ತಿರಲೊಂದು ಶತಸಹಸ್ರಲಕ್ಷಾ
ಒಡನೊಂದು ಕೋಟಿ ವಿಶ್ವತೋಮುಖವಾಗಲಾ
ಒಡೆಯನ ಮೊಗಗಳ ನೋಡುತತ್ತಿಹುದೋ ೧

ಮತ್ತೆಯಾ ಮೊಗವೊಂದೊಂದಾಱಾಗಲವಕೆ ತಾ
ಹೊತ್ತುಡಕುತ ಗಂಧ ರಸ ರೂಪ ಸೋಂಕಾ
ಉತ್ತಮ ಶಬ್ದಗಳವನೆಂದಿನಂತದೆ
ಇತ್ತು ದಣಿಯುಂದಲಾನಂದಗೂಡಿಹುದೋ ೨

ಕಾಲುಂದೆಗೆದು ಬರಲಾಱದತ್ತಲೆ ಮಹಾ
ಲೀಲಾವಿಗ್ರಹನ ಸೇವೆಗೆ ಸಲೆ ಸಂದೂ
ಮೇಲಾದ ಫಲಪದಗಳ ಹಂಗ ಹಱಿದತ್ತಾ
ನೀಲಗ್ರೀವನೆ ತಾನೆಯಾಗಿ ನಿಂದಿಹುದೋ ೩

೭೧

ರಾಗ : ಮೇಚ ಬಹುಳಿ

ಈತಗೀಕೆಯನೀಯ್ಯಬಹುದೆ ಮುಂದಱಿಯಂದೆ
ಈತ ಹೆಂಡಿರುಗಂಱುಕನು ಪುಂಡನವ್ವಾ ॥ ಪಲ್ಲ ॥

ಬಡವನೆ ಬಹುಕಾಲ ಮೊದಲಾಗಿ ಕೂಡಿದ
ಮಡದಿಯರುಗಳು ಲೆಕ್ಕವ ಮಾಡಿ ಬರೆಯೆ
ಕಡಿತ ಸಾಲದು ಕಾಣೆನವರೊಳಗೊರ್ವರ
ವಿಡದೆ ನುಂಗಿದ ನುಂಗುಮಾರಿಯೆಂದಱಿದು ೧

ನಗೆಯು ಮಾತಲ್ಲ ನಾಚಿಕೆಯಿಲ್ಲ ಈತಗೆ
ಮಗಳು ಮಾತೆಯು ಅಕ್ಕ ತಂಗಿ ಹಾಗತ್ತೆ
ಮಗನ ಸತಿಯು ನಾದಿನಿಯು ಅತ್ತಿಗೆಯೆಂಬ
ಬಗೆಗಾಣ ಬಹುಲಜ್ಜ ಭಂಡನೆಂದಱಿದು ೨

ಗಂಧ ರಸವು ರೂಪು ಸ್ಪರ್ಶ ಶಬ್ದಗಳೊಳ
ಗೊಂದುಳಿಯದಲಾಕೆಯೆಡೆಮಾಡಲುಂಡು
ಸಂಧಿಲ್ಲದಾನಂದವಾಗಿ ನೀಲಗ್ರೀವಾ
ಇಂದಿಗೀಕೆಯ ಮೆಚ್ಚಿ ಇಹುದರಿದವ್ವಾ ೩

೮೨

ರಾಗ: ಆಹರಿ
ಕಡೆಗಾಣನವ್ವ ಈತನ ಸೇವೆಯಾ ಎನ್ನಾ
ಬಿಡಬೀಸಿ ತಾಗಿದ್ದಂದೆನಗಾಡುಗೆಲಸಾ ॥ ಪಲ್ಲ ॥

ವಾಸಿಸುವಾಗಲುಂಬಾಗ ಈಕ್ಷಿಸುವಾಗ
ತಾ ಸೋಂಕುವಾಗ ಕೇಳುವೆಯೊಳಾಗ
ಲೇಸದಾನಂದಗೊಂಬಾಗಲೊಂದಾಱಾ
ಮೀಸಲಾಗಿಯೆ ಈತಗೀಯಬೇಕವ್ವಾ ೧

ಏನೆಂದು ಉಸುರಲಮ್ಮೆನು ಈತನಾಟವ
ತಾನೆ ವಾಸಿಸಿನುಣ್ಣನೋಡ ಸೋಂಕ
ಗಾನವ ಕೇಳನಾಗಾನಂದಬಡ ಹಾಗೆ
ನಾನವನಿತ್ತಲ್ಲದೆ ಒಲ್ಲನವ್ವಾ ೨

ತುತ್ತಿಡಲೊಲ್ಲ ತನ್ನಯ ಕಲೆಯಱಿಯದೆ
ಮುತ್ತಾರು ನೀಡಲುಣ್ಣನುವದಕೆ
ತತ್ತ್ವಗಲ್ಲದೆ ಎನ್ನ ಪತಿ ನೀಲಗ್ರೀವನಾ
ಇತ್ತೊಡವೆರದಗಲದೆ ಇಹೆನವ್ವಾ ೩

೮೩

ರಾಗ : ಮೇಚ ಬಹುಳಿ

ಏನನಱಿದರೆ ಏತಕೆ ಬಾಹದೆಲೆಯಾತ್ಮಾ
ತಾನೆ ಶಾಂತಿಯುನ್ನೈದದೆ ಕೋಪ ಬಿಡದೆ ॥ ಪಲ್ಲ ॥

ಸುಜನರ ಕಂಡರೆ ಸೇರದಾಗಳೆ ಮಹಾ
ಕುಜನರೆಡೆಯು ಕೂಡೆ ನಲಿದಾಟವಕಟಾ
ಗಜಬಜಿಸುವ ಕರಣಾದಿ[ಗ]ಳೊಂದು
ಸಜಕೆ ತಾರದೆ ಸಕಲಾಗಮಾದಿಗಳಾ ೧

ಮಾನಹಾನಿಯು ಮಾಡುತ್ತಿಹ ಆಸೆಯಿಂದನು
ಮಾನವಿಲ್ಲದೆ ಪರರನು ಕಾಡಿ ಬೇಡಿ
ಏನು ಇಲ್ಲೆಂದದವರ ನಿಂದಿಸುವ ನಿಂದೆ
ತಾನಳಿದಳಿಯದತ್ತ ವೇದಶಾಸ್ತ್ರಗಳಾ ೨

ಹಿಂದೆ ತಾ ಬಂದ ಕಾರಣವ ತಾನಱಿಯದೆ
ಇಂದಿನ ಘನದ ಸಾಧನವನಱಿಯದೆ
ಮುಂದೆ ನೀಲಗ್ರೀವನೊಡನಿಹುದಱಿಯದೆ
ಸಂದೇಹಿಸುಂತಲೊಂದು ಸಾವಿರಗಾಲಾ ೩

೮೪

ರಾಗ : ಆಹರಿ

ಹಾಕಿ ಕಲ್ಲವ್ವ ಹಾವಿನ ಮುಂಡಿಗೆ ಅದು
ಲೋಕದೊಳಾರು ಎತ್ತುವರು ಗೆಲುವರು ॥ ಪಲ್ಲ ॥

ಒಂದಂದಂಗದಿಂದಲೆರಡ ಮಾಡಿ ಹನ್ನೆರ
ಡೆಂದವ ನಾಲ್ವತ್ತುನಾಲ್ಕಾರ್ಥಕೆ
ತಂದೊಂದರೆಗೆ ಮೂಱಿಕೂಡುತ್ತೈವತ್ತೇಳ
ಸಂದಿಕ್ಕಿ ನೂಱೊಂದ ತೋಱಿ ತೊಡಕ ಮಾಡಿ ೧

ಮೊದಲೆಂದೆರಡು ಮೂಱು ಮಾತ ಮಂತ್ರದನಾಱು
ಪದಱ ಮೂವತ್ತಾಱೆನಿಸಿಯೀ ನೂಱಾ
ಹದಿನಾಱ ಮಾಡಿ ಹಾವಿನ ತೊಡಿಗೆಯು ತೊಟ್ಟ
ಮದನಾರಿ ಗುರುರೂಪನಾಡಿ ಮುಡಿಯು ಮಾಡಿ ೨

ನೀರಿಂದಲುರುಹಿ ದೀಪನವರತ್ನದ
ಹಾರ ರಾತ್ರೆಯೊಳಿರಲದ ತೆಗೆದಾ
ವೀರರೆತ್ತಿರೆಯೆಂದು ನೀಲಗ್ರೀವನು ತನ್ನ
ತೋರಹಾರದ ಕುಂಡಲಿಯುನೆ ಕುಱುಹು ಮಾಡಿ ೩

೮೫

ರಾಗ : ಪಾಹಡಿ

ಏನ ತೋಱಿದರೆ ನಿನ್ನನ್ನು ಬಿಡೆನು ಆದ
ನಾನಾಡಲೇಕೆ ನೀನೆ ಬಲ್ಲೆ ದೇವಾ ॥ ಪಲ್ಲ ॥

ತನುವಿಗೆ ತರಹರಿಸದ ರೋಗಗಳ ತೋಱಿ
ಮುನಸಿಗೆ ತಾಪತ್ರಯಗಳ ತೋಱಿ
ಅನುದಿನ ಎಡರು ಬಡತನಗಳೆಲ್ಲವ ತೋಱಿ
ಮುನಮುಱುಗದೆ ನೀನೆ ಗತಿಯೆಂಬೆನಲ್ಲದೆ ೧

ಪರುಷವ ತೋಱಿ ಪಾವನತೀರ್ಥಗಳ ತೋಱಿ
ಸುರತರು ಕಾಮಧೇನುಗಳ ತೋಱಿ
ವರಚಿಂತಾಮಣಿಯ ಒಯ್ಯನೆ ತೋಱಲವಕಾಗ
ಮರುಳುಗೊಳ್ಳದೆ ನೀನೇ ಗತಿಯೆಂಬೆನಲ್ಲದೆ ೨

ಅಂಗವ ಗುರುವೆನಿಸಿದರೆ ಪ್ರಾಣವ ಮಹಾ
ಲಿಂಗವೆನಿಸುತಲಱುಹ ನಿರ್ಮ್ಮಾಯ
ಜಂಗಮವೆನಿಸಿ ತೋಱಿದರೆ ನೀಲಗ್ರೀವಾ
ಲಿಂಗವೆ ಎನಗೆ ನೀ ಗತಿಯೆಂಬೆನಲ್ಲದೆ ೩

೮೬

ರಾಗ : ಮೇಚ ಬಹುಳಿ

ಕಣ್ಣುಗೆಟ್ಟವರು ಮುಂದಕೆ ಮುಕ್ತಿಯೆಂಬರು
ಕಣ್ಣುಮುಂದಿದೆ ಮುಕ್ತಿಯಿಂದಾಹೊ ಆತ್ಮಾ ॥ ಪಲ್ಲ ॥

ಹಲವು ವ್ರತ್ತವು ನೇಮ ಜಪ ತಪವೆಂದೆಂಬ
ಬಲೆಯೊಳು ಬಿದ್ದು ಬಱಿದೆ ಬಾಹಿರದೊಳು
ನೆಲೆಯಾದ ನಿಜವ ಸಾಧಿಸಲಱಿಯದೆ ಇಂದು
ಸಲೆ ಮುಕ್ತಿಪಥಕೆ ಸಲ್ಲದೆ ಹೋದರಕಟಾ ೧

ಕಂದಮೂಲವು ತಱಗೆಲೆ ವಾಯುವಾರಿಯ
ಕುಂದದಾಹಾರವ ಕೊಂಡ[ನ]ನುಗಾಲ
ಸಂದೇಹಿಸುತ ತಮ್ಮ ನಿಜವ ಮಱೆದು ಇಂದು
ಮುಂದೆ ಮೋಕ್ಷವ ಬಯಸುವದರಿದಕಟಾ ೨

ಮನವಿದೆಯಱುಹುವಿದಿದೆ ಗುರುಪದವೆಂಬ
ಘನವಿದೆ ಲಿಂಗ ಜಂಗಮವಿದೆ ಇಂದು
ಮನಸಿಜಾರಿಯು ನೀಲಗ್ರೀವನಿಂದಿರುತಿರೆ
ನೆನೆಸುವರೆ ಮುಕ್ತಿಯು ಮುಂದೆಯಕಟಾ ೩

೮೭

ರಾಗ : ಆಹರಿ

ತಾನೆಯೆ ಹೇಸಿತು ಎನ್ನ ಮನಸು ಲೋಕದ
ನಾನಾ ಪ್ರಪಂಚವನೆಲ್ಲವ ಕಂಡು ದೇವಾ ॥ ಪಲ್ಲ ॥

ಮನೆಯು ಮಾಱು ಸೀಮೆ ಭೂಮಿಯು ಸಾಧಿಸುವ ಲೋಭ
ತನಗೆ ರೂಪಾಗಿ ಮಾರಣಗಾಣದ
ಮನುಜ ಬಾಳುತಲುಳಿವುದ ಕಾಣುತೆನ್ನಯ
ಮನವನತ್ತಲಲಸಿ ತಾಣವದು ಮಲದೆಡೆಗೆ ೧

ಮತ್ತೊರ್ವನೊಡತಿಯಾತನ ಸತಿ ಕಪಟದ
ಲತ್ತ ತೆಗೆದುಯುಪತಿಯೊಡನೆ
ತೊತ್ತಾಗಿಯೊಡಲದನು ಎನ್ನ ಮನ ಕಂಡು
ಇತ್ತ ಕಾರ್ಮಿಕಮಲದ ಕಾಣಿಕೆಗೆ ೨

ಕಲಿಯುಗದಿಂದ ಕಾಪುರುಷರ ಕಂಡಲೆಯಿಂದ
ಸಲೆಯೆನ್ನ ಮನವು ತಾನೊಂದು ಬೆಂದು
ತಲೆದಾಗಿತಯ್ಯ ದಮ್ಮಯ್ಯ ನೀಲಗ್ರೀವಾ
ಸಲಹು ನಿಮ್ಮಡಿಗಂಡು ಬಿಡದೆ ಹೊಂದಿದಕೋ ೩

೮೮

ರಾಗ : ಮೇಚ ಬಹುಳಿ

ಏತಕೆ ನಿನಗೆ ಯೋಚನೆ ತನುವಿಡಿದಿಂದು
ಏತಕೆ ಬಱಿದೆ ವ್ಯಾಕುಲಗೊಂಬೆಯಾತ್ಮಾ ॥ ಪಲ್ಲ ॥

೮೯

ಸತಿಯಿಂದಲೊಂದುಸಾವಿರ ದುಃಖದಲೆಯುಂಟು
ಸುತರಿಂದ ಲಕ್ಷತ್ರಯಗಳುಂಟು
ಕತಿಯೊಂದು ಕೋಟಿಯೆಂಬುದು ಸಹೋದರರಿಂದ
ಮಿತಿ ಮಾಡಲರಿಯೆ ಬಾಂಧವರದೊಂದೆಡರಾ ೧

ತನುವಿಗೆ ಹಲವು ರೋಗದ ಬಹು ಭಯವುಂಟು
ಮನಸಿಗೆ ಮಹಾಕ್ರೂರ ಭಯವುಂಟು
ಧನವೊದವಿರೆ ದೊರೆಗಳದೊಂದು ಭಯವುಂಟು
ತನುವಿಡಿದವರಿಗಿಂತಿವು ಸಹಜವಾತ್ಮಾ ೨

ಬೆಟ್ಟದನಿತು ದುಃಖಗಳನುಂಡು ಜೀವರು
ಬೊಟ್ಟಿನನಿತು ಸುಖದೋಳ್ ಮೆಚ್ಚಿವರು
ಮುಟ್ಟಿನೀ ನೀಲಗ್ರೀವನ ಪದಯುಗಕೊಮ್ಮೆ
ಕಟ್ಟು ಈ ಸುಖದುಃಖಗಳ ಕೊಡೆಯಾತ್ಮಾ ೩

೯೦

ರಾಗ : ಆಹರಿ

ನೀನೆಲ್ಲಿ ಪೊಳಲಲ್ಲಿಯೆ ನಿನಗೆ ಎನ್ನ
ಮಾನಸಪೂಜೆ ಮಾಡದೆ ಮಾಣದಯ್ಯಾ ॥ ಪಲ್ಲ ॥

ಪುರದೊಳು ಪ್ರಾಕಾರದೊಳು ಉಪವನದೊಳು
ಸರಸಿಗಳೊಳು ಸರಸಿಜಗಳೊಳು
ನರರೊಳುನ್ನತ ಮೃಗದೊಳು ಪಕ್ಷಿ ಪಶು ದೇಶ
ಪರದೊಳಗೊದವಿದ ನವಫಲರಸದೊಳು ೧

ಕುಳುಕೋಹು ಬಯಲು ಕಾನನ ಕಾಡು ಗಿರಿ ಗುಹೆ
ಜಳಿ ಕೋಡುಗಲ್ಲು ಕಾತುರ್ತುಕಾಮುರಾ (?)
ಕೆಟಿ ಕಟ್ಟೆ ಕಾಲುವೆ ಹಳ್ಳ ಕಮ್ಮಡು ಮಹಾ
ತೊಟಿ ಜಲನಿಧಿ ಸೇತು ದೀಪಾಂತರಗಳೊಳು ೨

ಹುಸಿಯಲ್ಲವಿದು ನೀಲಗ್ರೀವ ನೀ ಎನ್ನೊಳು
ಒಸೆದಿರುತಿಹೆ ಇದ್ದೂ ಇವರೊಳಗೆ
ಪಸರಿಸಿಹುದು ನಿನ್ನ ದೃಷ್ಟಿಯಾ ದೃಷ್ಟಿಯ
ಬೆಸುಗೆ ಬಿಡದೆ ಎನ್ನ ಮನವಿಹುದದಕೊಮ್ಮೆ ೩

೬೦

ರಾಗ : ಮೇಚ ಬಹುಳಿ

ಇಂತೇಕೆ ಹಲ್ಲಕಿರಿವೆ ಇಂದು ಹಾ
ಎಂದು ಮುನ್ನ ಕೀಲ್ಗಿತ್ತ ಕಪಿಯ ಹಾಗೆ ಯಾತ್ಮಾ ॥ ಪಲ್ಲ ॥

ಮುಂದಱಿಯದೆ ತನುವಿಡಿದಿಂದು
ದಂದುಗ ತೊಡರಿ ಸಂಸಾರದ ಮಾಯೆಯಾ
ಹೊಂದಿರುತಿದ್ದ ನೀನಯ್ಯಪ್ಪಯೆಂದರೆ
ಇಂದಾರು ನಿನ್ನ ಮೆಚ್ಚುವರೆ ಎಲೆಯಾತ್ಮಾ ೧

ನಡು ಹೊಳೆಯೊ ಹರಿಗಲ ತೆಗೆವುತಲೊಮ್ಮೆ
ಹಿಡಿದ ಹುಟ್ಟಿಯು ಕಯ್ಯ ಮಱೆದವನಂತೆ
ಕಡೆಗಾಣದೇಕೆ ಸಂಸಾರಸಾಗರದ ಮಹಾ
ತಡಿಯಿಂದಿತ್ತಲೆ ಅಪ್ಪಯ್ಯಂ ಬರೆಯಾತ್ಮಾ ೨

ಕಂಗೆಡಬೇಡ ನಾ ನಿನಗೊಂದು ಬುದ್ಧಿಯು
ಸಂಗಡಿಸುವೆನು ಈ ಸುಖದುಃಖಗಳನು
ಹಿಂಗದೆ ನೀಲಗ್ರೀವಗೆ ಸಮರ್ಪಿಸಿ ನೀನು
ಲಿಂಗವಾಗಿರು ಬೆಚ್ಚಿ ಬೆದಱದೆಯಾತ್ಮಾ ೩

೬೧

ರಾಗ : ದೇಶಿ

ನಿನ್ನೊಡಲಿಗೆ ಹಸಿವಾದಾಗ ಲಿಂಗವಾ
ಇನ್ನು ಹುಡುಕಿ ನೋಡುವದರಿದಣ್ಣಾ ॥ ಪಲ್ಲ ॥

ನಾಸಿಕದೆಡೆಗೆ ಸುಗಂಧ ಜಿಹ್ವೆಗೆ ಸುರಸ
ಲೇಸಾದ ರೂಪು ನೇತ್ರಕೆ ತ್ವಕ್ಕಿಗೆ
ಆ ಸುಸ್ಪರ್ಶನವು ಶ್ರೋತ್ರಕೆ ಸುಶಬ್ದವು ಕೂಡೆ
ತಾ ಸೋಂಕಲೇಕೆ ಲಿಂಗಕೆ ಕೂಡೆಯಣ್ಣಾ ೧

ನುಡಿವಾಗಲಿಲ್ಲ ನಿನಗೆ ಲಿಂಗವಸ್ತು
ಪಿಡಿವಾಗಲಿಲ್ಲ ನಾನಾ ಬಗೆಯ
ನಡೆಯೊಳಗಿಲ್ಲ ರತಿಯೊಳಿಂತೊ ಮುನ್ನಿಲ್ಲ
ಒಡಲು ತೆಗೆದರಾ ಗಲಿಂಗವೆಯಣ್ಣಾ ೨

ತನು ಮನ ಪ್ರಾಣ ತಾನಾಗಿ ತೋಱುವ ಮಹಾ
ಘನ ನೀಲಗ್ರೀವಲಿಂಗವ ನೀನೊಮ್ಮೆ
ಅನುವಱಿದೊಳಗುಣಿಸದೆ ಹೊಱಗುಣ್ಣೆಂಬ
ಅನುಮಾನವೇಕೆ ಹಾಗುಂಬನೆಯಣ್ಣಾ ೩

೯೨

ರಾಗ : ಮೇಚ ಬಹುಳಿ

ಅನುಕೂಲವಿಲ್ಲದಂಗನೆಯೊಳು ಬಾಳುವ
ಮನುಜಗೇತಕೆ ಬೇಱೆ ವ್ಯಾಧಿಗಳಾತ್ಮಾ ॥ ಪಲ್ಲ ॥

ಹಿತವಾದ ಮಾತನಾಡಿದರೆ ಅದನರಿಯದೆ
ಖತಿಗೊಂಡು ಮುನಿದು ಮತ್ಸರಿಸುತೆ ಕೂಡೆ
ಪತಿಯಿಂದಿರಿಗೆ ಕೆಟ್ಟುತ್ತರಗಳ ಕೊಡುವ
ಸತಿಯಿಂದ ಬಿಟ್ಟ ಮೃತ್ಯುಗಳುಂಟೆಯಾತ್ಮಾ ೧

ನುಡಿಯಿಂದ ನೂತನ ಪುಸಿ ಕಲಹವ ಬೀಱಿ
ನಡೆಯಿಂದ ನಾನಾ ಪ್ರಪಂಚಗಳನೆ ತೋಱಿ
ಬಿಡದನುದಿನ ಮಹಾ ಪ್ರತಿಕೂಲವಾಗಿಹ
ಮಡದಿಯಿಂದಧಿಕ ಮಾರಿಯು ಬೇಱೆಯಾತ್ಮಾ ೨

ಪತಿಯು ದೇಹವೆ ತನ್ನ ದೇಹವಾ ಸುಖದುಃಖ
ಪತಿಯಿಂದ ಬರಲು ತನ್ನವೆಯೆಂದು ತಿಳಿದು
ಪತಿಯೆ ತನಗೆ ನೀಲಗ್ರೀವನೆಂದಱಿದಿಹ
ಸತಿಯೆ ಸಾಕ್ಷಾತ್ ಮೋಕ್ಷಾಂಗನೆಯಾತ್ಮಾ ೩

೯೩

ರಾಗ : ಪಾಹಡಿ

ಕಾಣಬಹುದು ಗಾಜಿನ ಮಣಿಯಶಾ ಮಹಾ
ಗಾಣಿಯುದೊಳಗೆ ರತ್ನ ಕಾಣಬಹುದೇ ॥ ಪಲ್ಲ ॥

ಊರೂರ ಮುಂದೆ ಸಿಂಹವೆ ಕಾಣದಲ್ಲದೆ
ಸಾರಮೆಗಳ ಕಾಣಬಹುದು ನೋಡೆ
ನೀರೀವ ಕೆಱೆಗಳೆಲ್ಲವ ಕಾಣಬಹುದೊಮ್ಮೆ
ನೀರು ಮುತ್ತಹುದೊಂದು ಕೆಱೆ ಕಾಣದಲ್ಲಾ ೧

ನೋಡಲಾರಿಗೆ ಕಲ್ಪತರುವೊಂದೆ ಕಾಣದು
ಕಾಡವೃಕ್ಷಗಳು ಕಾಣ್ಬವು ಕಣ್ಣಿಗೆ
ಕೂಡಿ ನದಿಗಳೊಳು ಬಕ ಕಾಣಬಾಹುವು
ಪಾಡುಂಗಾಣ್ಬರೆ ಹಂಸೆಯೊಂದಿಲ್ಲವಲ್ಲಾ ೨

ಮೆಲ್ಲನೆ ವೇಷಧಾರಿಗಳೊಂದು ಕೋಟಿಯ
ಎಲ್ಲೆಡೆಯೊಳು ಕಾಣಬಹುದಲ್ಲದೆ
ನಿಲ್ಲದೆ ನೀಲಗ್ರೀವನ ನಿಜವಱಿದಿಹ
ಬಲ್ಲ ಮಹಾತ್ಮರ ಪೂರ್ವವಲ್ಲಾತ್ಮಾ ೩

೯೪

ರಾಗ : ಆಹರಿ

ನಿನ್ನ ನೀನಱಿಯದೊಮ್ಮೆ ಇನ್ನು
ನಾನಾಡಲೇತಕೆ ಬಾಹದೆಲೆಯಾತ್ಮಾ ॥ ಪಲ್ಲ ॥

ನೆರೆದು ತಾಹರವ ಸಂತೆಯು ಹಾಗೆ ಸಂಸಾರ
ಸಿರಿಯಂ ನೆಚ್ಚಿಯಂಹುದೊಂದು ಮರುಳುಬುದ್ಧಿಯು ಎಂದು ೧

ತನುಗುಣಗಳ ಜಿನುಗಿಗೆ ಸಿಕ್ಕಿ ನೋಯಂದೆ
ಮನವನಂದಿನ ಮಹಾ ಘನವ ಹೊಂದುವದೊಂದ ೨

ನುಡಿದಂತೆ ನಡೆದು ನೀಲಗ್ರೀವನಾ
ಒಡವೆರದೊಡನೆ ಸಡಿಲದಿಹ ದೃಢವೊಂದಾ ೩

೯೫

ರಾಗ : ಸೌರಾಷ್ಟ

ಏನ ಬೇಡುವನಲ್ಲ ನಾನು ನಿನ್ನನು ಹಾಗೆ
ಏನ ಬೇಡೆನು ಏನ ಬಯಸೆನು ದೇವಾ ॥ ಪಲ್ಲ ॥

ಕಾಯುವ ಬೇಡುವರಂಜುವೆನು ಕಾವಕಾಲರ
ದಾಯುವನಱಿದು ಧಾವತಿಗಾಱದೊಮ್ಮೆ
ಆಯುವ ಬೇಡುವರಂಜುವೆನು ಸಂಸಾರಕೆ
ಶ್ರೀಯು ಬೇಡುವರೆ ಪರಸತಿ ಪಾಪ ದೇವಾ ೧

ಸುರಪನಂಗದ ಮುಂದೆ ಸಾಲೋಕ್ಯಪದವಿಯೆ
ವಿರಂಚಿಯು ಶಿರಗಂಡು ಸಾರೂಪ್ಯವೆ
ಹರಿಯಾವತಾರದ ಮುಂದೆ ಸಾಮೀಪ್ಯವೆ
ಇರದೆ ರುದ್ರನ ವೇಷವಳಿದು ಸಾಯುಜ್ಯ[ವೆ] ೨

ಬಟ್ಟೆಯ ಮೆಟ್ಟೆನು ನಾನು ಈ ಫಲ ಪದಗಳ
ಮುಟ್ಟಿಬೇಡಲು ಮುಕ್ತಿಪದ ನಿನ್ನದಹುದು
ನೆಟ್ಟನೇ ನೀಲಗ್ರೀವನೆ ನಿನ್ನ ಪಾದದ
ಕಟ್ಟೆಳಿಕದ ಸೇವೆ ಎನಗೊಂದೆ ಸಾಕು ೩

೯೩

ರಾಗ : ಆಹರಿ

ಬಸವ ಬಸವ ಎಂದರೆ
ಅಸಮ ಲಿಂಗಾಂಗಿಯಾತನೆಯುಹುದೆಲೆಯಾತ್ಮಾ ॥ ಪಲ್ಲ ॥

ಬಸವ ತಾ ದೇಹ ಬಸವ ಪ್ರಾಣ ಸುಜ್ಞಾನ
ಬಸವ ನಿರ್ಮಲ ಬಸವ ತಾ ನಿರವಯ ೧

ಬಸವಣ್ಣನಾದಿ ಬಸವಣ್ಣನನಾದಿ
ಬಸವಣ್ಣ ಪರಮಾತ್ಮ ಬಸವಣ್ಣ ಪರಬ್ರಹ್ಮಾ ೨

ಬಸವನೆ ಗುರು ಚೆನ್ನಬಸವನೆ ಲಿಂಗವ
ಬಸವನೆ ಚರಪರ ಬಸವ ನೀಲಗ್ರೀವಾ ೩

೯೪

ರಾಗ : ಸಾಳಂಗ ನಾಟಿ

ಎನ್ನಿದಿರಿಗೆ ತೋಱದಿರು ದೇವಾ
ನಿನ್ನಱಿದಱಿಯದವರ ಹಾಗೆ ॥ ಪಲ್ಲ ॥

ಅಱಿದಱಿಹನು ಬಱುದೊಱೆ ಮಾಡಿ
ಮೆಱೆವ ಮಾಯೆಯ ಮಾಟಕೆ ಸಂದು
ಸೆಱೆಯಾಗಿ ಕಾವಕಾಲರ ಕೂಡಿ
ಉಱುವ ನಿರವಯಕೆ ಹೆದಱದವರಾ ೧

ಹಿಂಗಿದ ಭವದ ಬಲೆಯಂ ಬಿಟ್ಟುದು
ತೊಂಗು ತಗಲಿದಂಗಗುಣಗಳನು
ಸಂಗಳಿಸಿದ ಸದ್ಧರ್ಮಗಳ
ಹಂಗಹಱಿದ ಹರಿಹಂಚುಗಳಾ

ಹಿಡಿದ ಸತ್ಯವ ಸಡಿಲಿಸಿ ಬಿಟ್ಟು
ತುಡುಗುಣಿಯ ನಾಯ ಬಾಳುವೆಯಂತೆ
ಒಡಲ ಹೊರೆವ ಭ್ರಷ್ಟ ಜಡರುಗಳ
ಕಡೆಗತ್ತಲೆಗೆ ನೀಲಗ್ರೀವಾ ೩

೯೮

ರಾಗ : ಆಹರಿ

ತರಹರಿಸುವನೆ ಜಾಣ ಎರವಿನ
ಸಿರಿಯೊಮ್ಮೆ ಹರೆಯಲಾವೆಳೆಯಾ ॥ ಪಲ್ಲ ॥

ಇತ್ತಾತ ದೇವಯಿತ್ತದ ತೆಗೆದ ದೇವಾ
ಮತ್ತಾರಿಗೇಕೆ ದುಶ್ಚಿತವೆಂಬುದು ಎಂದೂ ೧

ವಾರಕವಾಗಿ ಮಾರಾರಿ ತ್ರಿಮಲಗಳಾ
ಸಾರಿ ಈವುತ್ತ ಮನೋಹಾರ ತೆಗೆವನೆಂದೂ ೨

ಅನುದಿನ ತನಗೊದವಿದ ಸುಖದುಃಖವಾ
ಘನ ನೀಲಗ್ರೀವದೇವನಿಗೆ ಅರ್ಪಿತವೆಂದೂ ೩

೯೯

ರಾಗ: ಸಾಳಂಗ ನಾಟಿ

ನಾನೇನ ನಿನಗೆ ಹೇಳುವೆನಣ್ಣಾ
ನೀನೇನ ಎನ್ನ ಕೇಳುವೆಯಣ್ಣಾ ॥ ಪಲ್ಲ ॥

ಗುರುವೆ ಹೇಳಿದ ನಿನಗಂದು
ಶರಣಸೇವೆಯ ಮಾಡುತಿರಿ ಎಂದು
ಮರಳಿ ಮತ್ತೇನು ಬಯಕೆ ಇಂದು
ಹರಹರಾ ಬಯಸಲಾವುದು ಹೊಂದು ೧

ಹಿಂದೆ ನೀನರಿದರುಹನು ಎಲ್ಲಾ
ಇಂದಿಗೆ ಮರೆಯಬಹುದೆ ಹೊಲ್ಲಾ
ಮುಂದೆ ಮತ್ತೊಂದರಾಸೆಯು ಸಲ್ಲಾ
ಒಂದೊಂದ ಮೇಲೆ ಎರಡೆಂಬುದಿಲ್ಲಾ

ಹಿಡಿದ ಸತ್ಯವನು ಸಾಧಿಸದೇಕೆ
ಕಡೆಯಲೊಂದರ ಕಾಣಿಕೆ ಬೇಕೆ
ಎಡಮರಿಲಾಗಿ ಈಹರೇಕಾಕೆ
ಮೃಡ ನೀಲಗ್ರೀವನೊಲುಮೆ ಜೋಕೆ

೧೦೦

ರಾಗ: ಭೈರವಿ ಪಂತು

ಇನ್ನೇನು ಈ ಮನಸಿನ ಮಾಟದಿಂದಾ
ನಿನ್ನ ನೆನೆವುದು ದುರ್ಲಭ ದಿವ್ಯಾನಂದಾ ॥ ಪಲ್ಲ ॥

ಒಂದಿನ ಸಂಸಾರದೆಳಿಡೆಸಳಗೊಂಡು
ಒಂದಿನ ಲೋಕದವರ ಕೆಳೆಗೊಂಡು
ಒಂದಿನ ವ್ಯಾಕುಲವಿಂಬುಗೊಂಡು
ಒಂದಿನ ನಿಮ್ಮ ನೆನೆಯದೆದೆಗೊಂಡು ೧

ತನುವಿಗೆ ರೋಗವೆನಂತ ನೋವದೊಮ್ಮೆ
ಧನವಿನಾತುರದಿದಾವತಿಗೊಂಬುದೊಮ್ಮೆ
ಅನುಮಾನವಲಸಿಕೆಯೊಳಗಿಹದೊಮ್ಮೆ
ನೆನೆಯಲೊಲ್ಲದು ಒಂದಿನಿಸೆ ನಿಮ್ಮನೊಮ್ಮೆ ೨

ಇಂತಲಾವರಿಸಿ ಕಾಡುವದಾವಾಗಯ್ಯ
ಎಂತು ನಿಲ್ಲಿಸುವೆನೀ ಮನಸ ನಮ್ಮಯ್ಯ
ಗೊಂತುಗೊಳಿಸಿ ನಿಮ್ಮಂಘ್ರಿಯೊಳಿರಿಸಯ್ಯ
ಚಿಂತಿತಾಯಂತ ನೀಲಗ್ರೀವ ದಮ್ಮಯ್ಯ ೩

೧೦೧

ರಾಗ : ಭೈರವಿ ಪಂತು

ಏತಕೆ ನಿನಗೆ ಹಾಗೆ ಎದೆ ಹಾಟು
ಏತಕೆ ಮನವೆ ಬೇಡಾ
ನೀತಿಯಲ್ಲದು ನಿನ್ನ ಹೊರೆವ ದೇವನು ಇರ
ಲೇತಕೆ ಚಿಂತೆಯೊಮ್ಮೆ ॥ ಪಲ್ಲ ॥

ಸಾರಮೆ ಮನೆಮನೆಯು ಸಾಯಸಗೊಂಡು
ಸಾರಲಾ ಹರಗಾಣದು
ವಾರಣವಲ್ಲೆನಂದರೆ ಕಡಿದುಣಿಪರು
ದಾರ ಹಾರೈಪದುಂಟೆ
ತೀರದೆ ತೀವಿದಾಸೆಯಾವೇಶ
ದಾರಿಗೆ ಬಹುಯೋಚನೆ
ವೀರಪುರುಷಗಿಲ್ಲ ಮನಸಿಗಾಯಸ ಮದ
ನಾರಿಯ ಭಜಿಸು ಬೇಗ ೧

ನೆಲನೆ ಹಾಸಿಕೆ ನೆಟ್ಟನೆ ಶಯನಕೆ
ಹುಲುನಿರಾಹಾರವಾಗಿಹ
ಸಲೆ ಪಶುಗಳು ಸಂತೋಷವನೈದವೆ ಮಹಾ
ಎಲರುಣಿಸಂಗಳು ಕೂಡೆ
ಬಲುಹ ಮಾಡದೆ ಲೋಗರ ಬೇಡದೆ
ಎಲರನಿದ್ದಲ್ಲೆಯುಂಡು
ಗೆಲಹುಗೊಂಡಿವದಜಿಂದ ಮನವೇನು
ಹಲವ ಹಂಬಲಿಸಲೇಕೆ ೨

ಇಂದಿಗೆ ನಾಳಿಗೆಂದು ಇರದೆ ನೀ
ಸಂದೇಹಿಸುವದ ಬಿಟ್ಟು
ಬಂದುದನನುಭವಿಸುತ ಬಾರದುದ ಬಗೆ
ಇಂದು ಬಯಸದಿಹುದು
ಚಂದವಲ್ಲದೆ ನಿನಗೆ ಚಂಚಲ
ದಿಂದ ಕುದಿಯಲೇತಕೆ
ತಂದೆ ನೀಲಗ್ರೀವ ತಾನಿರುತಿಹ ನಂಬು
ಇಂದು ಸಾರಿದೆ ಮನವೇ ೩

೧೦೨

ರಾಗ : ಸಾಳಂಗನಾಟಿ

ಶರಣ ಸಂಚೆಯು ಸೇವೆಯೆ ಸಾಕು
ತಿರುಗ ನಾನೇನ ಒಲ್ಲೆನು ದೇವಾ ॥ ಪಲ್ಲ ॥

ಪರಮ ಚಿತ್ಕಳೆಯ ಬೆಳಗಿನೊಳಗೆ
ಶರೀರವನೇಕೀಕರಿಸಿಯೊಮ್ಮೆ
ಪರವಜೀಯದ ಮಹಾಮಹಿಮರ
ಚರಣಯುಗವ ಕಾದಿಹುದೊಂದು ೧

ನುಡಿದರಾ ಪರಬ್ರಹ್ಮವು ತಾನೆ
ನಡೆವರಾವೆಡೆಯು ಹೆಜ್ಜೆಗಳಿಲ್ಲಾ
ಒಡಲದೇ ಹಿಡಿತಗಿಲ್ಲದೆ ಇಹಾ
ಬೆಡಗಿನವರ ಬೆಂಬಿಡದೊಂದು ೨

ಕನಕಗಿರಿಯು ಕೈಲಾಸದೊಳು
ಮನೆಯು ಬೇಡುವರು ಬೇಡಲಿಯೊಮ್ಮೆ
ಅನುಪ[ಮ] ನೀಲಗ್ರೀವನೆಯಿಂದು
ಎನಗೆ ನಿನ್ನವರ ಸೇವೆಯೆ ಸಾಕು ೩

೧೦೩

ರಾಗ : ದೇಶಿ

ಮನುಜರಿಗೆಲ್ಲ ಮಾಣದ ಭವರೋಗ ತಾ ಬಂದುದಲ್ಲಾ
ದಿನದಿನಕದು ಗುಣವಾಗದೆ ಬಹು ಹೆಚ್ಚಿ ಹಿಡಿದುದಲ್ಲಾ ॥ ಪಲ್ಲ ॥

ಒಡಲಿಗೆ ಮನೆಗೆ ಚಿಂತಿಸುವ ಚಿಂತೆಯು ವಾತ ಒದವಿತಲ್ಲಾ
ಮಡದಿ ಮಕ್ಕಳ ಮೋಹವೆಂಬ ಪಿತ್ತದ ಭ್ರಾಂತು ಹತ್ತಿತಲ್ಲಾ
ಕಡೆಯಿಲ್ಲದರ್ಥದಾತುರವೆನಿಸುವ ಶ್ವಾಸ ಹೊಂದಿತಲ್ಲಾ
ಬಿಡದಹಂಕಾರ ಮೂಲರೋಗ ಮುಂದೆಡೆಗೊಂಡಿತಲ್ಲಾ ೧

ನಿಲ್ಲದಾಶಾಪಾಶವೆಂಬುದೊಂದತಿಸಾರವಾದುದಲ್ಲಾ
ತಲ್ಲಣಿಸುವ ತಾಪತ್ರಯ ಉಷ್ಣಜ್ವರವೂ ಹಾಕಾದವಲ್ಲಾ
ಮೆಲ್ಲನೆ ಚಾತುರ್ಥಿಜ್ವರ ಚತುಃಕರಣಂಗಳಾದವಲ್ಲಾ
ಹೊಲ್ಲಹ ಕಪಟ ಕಾಡುವ ಗುಲ್ಮವದು ತೊಂಗಿ ಹಿಂಗಿದುದಲ್ಲಾ ೨

ಉಳಿದಾದ ತನುಗುಣಗಳ ಊರ್ಧ್ವ ಶ್ವಾಸ ತಾನೆತ್ತಿತಲ್ಲಾ
ಕಳೆದುಳಿದರೆ ಕಾವಕಾಲರಿರ್ವರು ಮೃತ್ಯುವಾದರಲ್ಲಾ
ತಿಳಿಯರು ಭವರೋಗವೈದ್ಯ ನೀಲಗ್ರೀವ ನಿಮ್ಮನೆಲ್ಲಾ
ಸುಳುಹಬಲ್ಲವರಿಗೀ ಭವರೋಗವೆಂಬುದು ಮಾಯಿತಲ್ಲಾ ೩

೧೦೪

ರಾಗ : ಮಲಹರಿ

ತನುವಿಗೆ ರೋಗ ಬಂದರೆ ಚಿಂತೆ ಏತಕೆ
ಎನಗೆ ಹಿಂಗಿಸುತ್ತವ ರೋಗವೊಂದದ ದೇವಾ ॥ ಪಲ್ಲ ॥

ಕಡೆಗೆ ಈ ತನು ಮನ ಧನವ ನಿನಗೆಯೊಮ್ಮೆ
ತೊಡರಿಸಿದಂಡೆ ತೀರಿದವು ತ್ರಿದೋಷಾ
ಒಡಲುಗೊಂಡಾಶಾಪಾಶವು ತೊಲಗಿದ ಮೇಲೆ
ಬಿಡದತಿಸಾರ ಬಿಟ್ಟಿತು ಮಹಾದೇವಾ ೧

ಮೂಲಹಂಕಾರ ಮುನ್ನಳಿದು ನೀನಱಿದಾಗ
ತೇಲಿತು ಮೂಲವ್ಯಾಧಿಯು ಮುಂದುಗೆಟ್ಟು
ಮೇಲಾದ ಕರಣಾದಿಗಳ ಗುಣಜಾಱಲು
ಜಾಲವಾಗಿಹ ಜ್ವರ ಹೋದವು ದೇವಾ ೨

ಈ ಪರಿಯಿಂದಂಗವೆನಗಿಲ್ಲ ರುಜೆಯಿಲ್ಲಾ
ರೂಪಿಟ್ಟ ದೇಹ ನಿನ್ನದುವದಱಿಂದಾ
ಏ ಪರಿಯೆನಗೆ ಯೋಚನೆಯೆ ನೀಲಗ್ರೀವಾ
ನೀ ಪಿರಿದಾದ ಭವರೋಗವೈದ್ಯನು ದೇವಾ ೩

೧೦೫

ರಾಗ : ಸಾಳಂಗನಾಟಿ

ಶರಣಮಾರ್ಗವನು ಶಿವನೇ ಬಲ್ಲ
ನರರಱಿವರೆ ಕಾಣಪುದಲ್ಲ ॥ ಪಲ್ಲ ॥

ಎಸೆವ ವಸಂತಕಾಲವ ಕೂಡೆ
ಸಸಿನೆ ಕೋಕಿಲೆ ಬಲ್ಲದು ನೋಡೆ
ಹೆಸರೆಱಿವವೆ ಕಾಕಗಳಾಡೆ
ಸಸಿಧರನವರು ನರರ ಪಾಡೆ ೧

ಕ್ಷೀರ ನೀರಿನ ಭೇದವನತ್ತಾ
ಸಾರಿ ಮರಾಳಬಲ್ಲದು ಮತ್ತಾ
ತೀರಚಿಪವೆ ಬಕಗಳ ಮೊತ್ತಾ
ಮಾರಾರಿಯುವರನೀ ನರರೆತ್ತಾ

ಪರವ ನೆಮ್ಮಿಹ ಶರಣರುಗಳಾ
ವರ ನೀಲಗ್ರೀವ ಬಲ್ಲವರುಗಳಾ
ಇರಲನುದಿನ ಮನುಜರುಗಳಾ
ನೆರವಿಬಲ್ಲುದೆ ಮಹಾತ್ಮರುಗಳಾ

೧೧೩

ರಾಗ: ದೇಶಿ

ಏನೆಂಬೆ ನಿನ್ನ ಕರುಣವೆನಗೊದವಿದ ಮೇಲೆ
ತಾನೆ ಹಱಿದುದತ್ತಲಾ ಪರಿಭವಮಾಲೆ ದೇವಾ ‖ ಪಲ್ಲ ‖

ಬಿಡದೆ ಬಿತ್ತರಿಸಿ ತಾಣವ ಮಲವನು ನೀನು ಕಳೆಯೆ ದೇವಾ
ಒಡನೆ ಓಡಿತು ಕವಿದಜ್ಞಾನ ಜ್ಞಾನ ತಾ ಮೊಳೆಯೆ ದೇವಾ
ಮಡಲಿಱಿದಿರ್ದ ಮಱಹೆ ಹರದಱುಹಿತ್ತ ಹೊಳೆಯೇ ದೇವಾ* ೧

ತಾನಿಡುತಿಹ ಕಾರ್ಮಿಕಮಲ ನಿನ್ನತ್ತಲಾಗೆ ದೇವಾ
ನಾನಿಂದು ನಿಶ್ಭ್ರಾಂತನಾದೆ ಭ್ರಾಂತಿನ ಭ್ರಮೆ ಹೋಗೆ ದೇವಾ
ಮಾನವರಿದಿರಿಗೆನ್ನನು ತೋಱಿ ತೋಱಿದ ಹಾಗೆ ದೇವಾ
ನೀನೆನ್ನ ಸಲಹೆನ್ನೊಂದಿಗೊಮ್ಮೆ ತ್ರಿತಾಪ ಬೇಗೆ ದೇವಾ ೨

ಮಟ್ಟಿಕೆ ತಂದೆನ್ನ ಮನವನೀ ನೆಮ್ಮಿರಲಾಗ ದೇವಾ
ಬಿಟ್ಟಗಲಿತು ತನು ಗುಣ ಕರಣಾದಿಯ ರೋಗ ದೇವಾ
ನೆಟ್ಟನೆ ನಾನೆನಿಸುವ ವರ್ಣವನು ನೀನು ಬೇಗ ದೇವಾ
ದಟ್ಟಿಸಿ ನಾನು ನಿನ್ನೊಳಗೆ ನೀಲಗ್ರೀವ ಯೋಗ ದೇವಾ ೩

೧೧೪

ರಾಗ : ಕಾನಡ

ಮನಸು ನಿಂದರೆ ನಿಜದಱಿಹು ಹೀಗೆ ಇಂದು
ಇನಿಸು ನಿಲ್ಲದೆ ತಾ ತಾಪತ್ರಯ ಹಾಗೆ ‖ ಪಲ್ಲ ‖

* ಈ ಪದದಲ್ಲಿ ಒಂದು ಪಾದ ಕಡಮೆಯಾಗಿದೆ (ಮೂ)

ಮುಸುಕಿದ ಮೂಱು ಮಲಗಳೊಮ್ಮೆ ಹಿಂಗೆ
ಹಸಗೆಡದಿಹುದೆ ಮಾಯೆಯ ಹೆಮ್ಮೆ
ಸಸಿಕರಣಗಳೊಳಾತ್ಮನನೆಮ್ಮೆ ಮತ್ತೆ
ಎಸೆವರೆ ಕಾವ ಕಾಲರಸೊಮ್ಮೆ ೧

ಬಿಗಿದಾಶಾಪಾಶವೆಂಬುದು ಕೂಡೆ ಬಿಚ್ಚೆ
ಮುಗಿಯದೆಯಾಗಿ ಹೋಗದು ನೋಡೆ
ಮಿಗೆ ತನ್ನ ನೆಲೆಯ ತಾನಱಿದಾಡೆ ಇತ್ತ
ಜಗತು ತನ್ನನಱಿವರವರ ಪಾಡೆ ೨

ನಿಟಿಲದಲೆಸೆವ ಜ್ಯೋತಿಯ ಮಹಾ ನೋಡೆ
ಪಟಂ ಮಾಡೆ ತನಗೆ ಎಲ್ಲಿಯ ದೇಹಾ
ನಟಿಸುವ ನಟಣೆಯಿಷ್ಟದೊಳಿಹ ಭಾವಾ
ಘಟಿಸಿರೆ ನೀಲಗ್ರೀವನೆಯಾಹಾ ೩

೧೦೮

ರಾಗ : ದೇಸಿ

ಎನ್ನ ಮನಸಿಗೇನೂ ಬಾರದು ಬೇಱೊಂದು
ನಿನ್ನ ನಾಮಾಕ್ಷರವೈದಾಱಿಲ್ಲ ದೇವಾ ॥ ಪಲ್ಲ ॥

ವೇದ ಪುರಾಣಾಗಮವುಪನಿಷತ್ತೆಂಬ
ಗಾದೆಯು ಗರುಡಿಯೆಂಬುದ ಹೊಗದೆ
ಮಾದೇವರೊಡೆಯ ನಿನ್ನಯ ನಾಮಾಕ್ಷರಗಳ
ಓದುವದೋನ್ನಮಃ ಶಿವಾಯೆಂಬುದಲ್ಲದೆ ೧

ಎದೆಯ ಲಿಂಗ ಮತ್ತಿದ ಸಂಗ ಸಂಯೋಗ
ವಿದೆಯಂತರಂಗ ಬಹಿರಂಗವೆಂಬಾ
ಪೊದಱನಱಿಯದೀಶ ನಿನ್ನ ನಾಮಂವ ಕೂಡೆ
ಒದವಿ ಓಂ ನಮಃ ಶಿವಾ ಎಂಬುದೊಂದಲ್ಲದೆ ೨

ಅಱುಹಿನಿಂದಾದರಾಗಲಿ ಬಿಡದಾವಾಗ
ಮಱಹಿನಿಂದಾದರಾಗಲಿ ಮಾಣದೆ
ಎಱೆಯ ನೀಲಗ್ರೀವ ನಾಮವನೊಮ್ಮೆ
ನೆಱೆ ನಂಬಿ ನಮಃ ಶಿವಾ ಎಂಬುದಲ್ಲದೆ ೩

೧೦೯

ರಾಗ : ಆಹರಿ

ಕಾಡದಿರೆನ್ನ ಕಂಡ ಕಡೆಗೆ ಹರಿದೆನ್ನ ಮನವೆ
ಓಡದಿರತ್ತ ಒಯ್ಯನೆ ಒಂದೆಡೆ ನಿಲ್ಲು ಎನ್ನ ಮನವೇ ॥ ಪಲ್ಲ ॥

ಪುಟನೆಗೆವುತ ಪುರಂದರಲೋಕ ಮರ್ತ್ಯಕೆ ಎನ್ನ ಮನವೆ
ತಟಹಾಯಿದು ಪಾತಾಳತಳಕೆ ತಳರೆದಿರು ಎನ್ನ ಮನವೆ
ತುಟಿ ಮಿಟುಕದೆ ತುಚ್ಛ ಜನರ ಸಮೂಹದಿ ಎನ್ನ ಮನವೆ
ಪಟಿಸದಿರವರೆಡೆ ವರ ಗುರು ವಾಕ್ಯವ ಎನ್ನ ಮನವೇ ೧

ಒದವಿದಜ್ಞಾನಗತ್ತಲೆಯೊಳಗಾಡದಿರೆನ್ನ ಮನವೆ
ಪದವಿಡಿದಡಕದಿರಹಂಕಾರ ಪರ್ವತಕೆನ್ನ ಮನವೆ
ಹುದುಗಿ ನಿರ್ಬುದ್ಧಿಯ ಹೂಣೆ ಹೊಗದಿರು ಎನ್ನ ಮನವೆ
ಕುದಿವುತ ಕುಟಿಲ ಕುಚಿತ್ತದೊಳಿರದಿರು ಎನ್ನ ಮನವೇ ೨

ನಚ್ಚದಿರೀ ನರದೇಹವೆಂಬುದನೊಮ್ಮೆ ಎನ್ನ ಮನವೆ
ಮಚ್ಚದಿರೆಲೆ ಮಲತ್ರಯ ಮಾಯದಾಯವ ಎನ್ನ ಮನವೆ
ಎಚ್ಚತ್ತು ಎಚಿಯ ನೀಲಗ್ರೀವದೇವನ ಎನ್ನ ಮನವೆ
ಎಚ್ಚತ್ತು ನೀನಗಲದೆ ಒಡವೆರದಿರು ಎನ್ನ ಮನವೇ ೩

೧೧೦

ರಾಗ : ಕಲ್ಯಾಣ

ಎತ್ತಣ[ದು] ಸಂಸಾರ ಹಾಗೆ ಎಚಿಯ ನಿನ್ನವರಿಗೆ
ಎತ್ತಣದು ದೇಹಾಭಾವವೆಂದು ಮಲತ್ರಯ ಬೆಂದು
ಮಾಯೆಯ ನೀಗಿ ನಿಂದು ನಿನ್ನವರಿಗೆ ॥ ಪಲ್ಲ ॥

ಒಡನೆ ನಾಲ್ಕಾಯಿದಾಚವೊತ್ತಿ ಮೆಟ್ಟುತ ಮೂಟ
ಕಡುಪನಳಿದು ಏಳನೊದ್ದು ಎಂಟನು ಮಿಗೆ ಗೆದ್ದು
ಹತ್ತನು ಜಯಿಸಿದ್ದು ನಿನ್ನವರಿಗೆ ೧

ತನುಗುಣಾದಿಗಳೊಮ್ಮೆ ತಣ್ಣಗಾಗಿಯೆ ಒಮ್ಮೆ
ಇನಿಸು ಇಲ್ಲದೆ ಹಿಂಗಿಹೋದ ಮೋಕ್ಷಕೆ ಮನವಾದ
ಸಂಸೃತಿರೋಗಮಾದ ನಿನ್ನವರಿಗೆ ೨

ಕಂತುಕಾಲರ ಸುಟ್ಟು ಕಡೆಗೆ ಭಸ್ಮವನಿಟ್ಟು
ನಿಂತನಿರವಯ ಮಹಾದೇವಾ ನಿನ್ನೊಳವರ ಭಾವ
ನಿಂದಿರೆ ನೀಲಗ್ರೀವ ನಿನ್ನವರಿಗೆ ೩

೧೧೧

ರಾಗ : ಮೇಚಬವುಳಿ

ಏನ ಮೆಚ್ಚಿತು ಎನ್ನ ಮನ ಮಾಯಾ ಮೋಹಾ
ಏನೆನ್ನಬಹುದು ಏವೆನು ಮಹಾದೇವಾ ॥ ಪಲ್ಲ ॥

ಕಿವಿ ತ್ವಕ್ಕು ಕಣ್ಣು ಜಿಹ್ವೆಯು ಘ್ರಾಣವೈದೊಮ್ಮೆ
ಅವೆ ಇಲ್ಲ ನಿಮ್ಮ ವಾಸನಧರ್ಮ ಶೇಷ
ತವೆ ರೂಪು ಸೋಂಕು ಮಂತ್ರದ ಶಬ್ದಲಾಲಿಪ
ಹವಣಱಿಯದಹರಾವರಿಯಾದ ಮಾಯಾ ೧

ನುಡಿ ಹಸ್ತವಾದ ಗುಹ್ಯವು ಗುದವೆನಿಸುವ
ಒಡನೈದಿಲ್ಲ ನಿಮ್ಮಯ ಸ್ತುತಿ ಪೂಜೆ
ಕಡೆಗೆ ಸನ್ಮಾರ್ಗವಾನಂದ ನಿಮ್ಮೊಳೆಡೆಯೊಳು
ಬಿಡದೆ ಕುಳ್ಳಿರದ ಕುಹಕಿ ಮಾಯಾ ಹೋ ಹೋ ೨

ಶಶಿ ರವಿಗಳ ಪ್ರಭೆಯೊಳು ಕಣ್ಣಿಗಾಣದ
ದೆಸೆದಿಕ್ಕನಡರಿ ಕಾಳದೊಳಡಿಯಿಡುವಾ
ಪಸರಗಾತಿಯ ಪಾಱುತನವಱಿದೆಲೆ ನಿಮ್ಮ
ವಶವಾದ ಎನ್ನ ಮನಸು ನೀಲಗ್ರೀವಾ ೩

೧೧೨

ರಾಗ : ದೇಶಿ

ಒಂದುದು ಬಹು ಬಟ್ಟಬಯಲ ಸೀಮೆಯೊಳಿಂದಿದೊಂದು ತುಂದಿ
ನಿಂದಿತೆನ್ನಂಗ ಸರಸಿಯ ಕಮಲವೆಳಕಿಂದು ತುಂಬಿ ॥ ಪಲ್ಲ ॥

ನೋಡಲದೊಂದೆ ಎರಡು ಮೂಱು ಆಱಾಗಿ ತೋಱಿ ತುಂಬಿ
ಕೂಡೆ ಮೂವತ್ತಾಱಾದವು ಚಿತ್ರತರದಲವಾಱಿ ತುಂಬಿ
ಓಡೊಡೆಯದೆ ಮೂವತ್ತಾಱು ಇನ್ನೂಱ ಹದಿನಾಱಿ ತುಂಬಿ
ಪಾಡುದಪ್ಪದೆಯಾದವಕೆ ಕಮಲವಾಱಿ ಸೂಱಿ ತುಂಬಿ ೧

೧೧೩

ಎಸೆವ ಕಮಲವೊಂದನುಳಿದಾಱು ಕಮಲಕ್ಕೆ ಬಂದು ತುಂಬಿ
ಮುಸುಕಿ ಪರಾಗ ವಶವಿದು ದ್ವಿಶತ ಶೋಳ(?)ವಂದು ತುಂಬಿ
ಸಸಿನೆ ಮೂವತ್ತಾಱಾಗುತ್ತಲಾಱಾಗಿ ನಿಂದು ತುಂಬಿ
ಪುಸಿಯೆ ಮೂಱೆರಡೊಂದಾಗಿಯೆ ಮಿಕ್ಕ ಕಮಲಕೆ ಸಂದು ತುಂಬಿ ೨

ಪಲ್ಲವಿಸಿದ ಏಳನೆಯ ಕಮಲಕೆ ಸಲೆ ಸಂದು ತುಂಬಿ
ಅಲ್ಲಿಂದಲಿರದೆ ನೋಡಕ್ಕ ಪಾಱಿದುದತ್ತ ಬಂದು ತುಂಬಿ
ಮೆಲ್ಲನೆ ತನ್ನ ಬಯಲಸೀಮೆಗೆದ್ದಿದು ಛಂದ ತುಂಬಿ
ನಿಲ್ಲದೆ ನೀಲಗ್ರೀವನು ಎನಿಸುವ ಮಹಾನಂದ ತುಂಬಿ ೩

೧೧೩

ರಾಗ : ಭೈರವಿ

ನೋಡಮ್ಮ ಇದು ಬೆಡಗಲ್ಲ ಸೋಜಿಗವಾ
ಓಡುಣ್ಣೆ ನುಂಗಿತಲ್ಲದಕೊ ಮೂಜಗವಾ ॥ ಪಲ್ಲ ॥

ಹೀರುತಲದೆ ಕಡಲನು ಕಪ್ಪೆಯೊಂದು
ಸಾರಿ ಎದ್ದುರಿಯು ಕುಣಪವಟ್ಟಿ ಬಂದು
ಓರಂತೆ ನುಂಗುತಲದೆ ಸಲೆ ಸಂದು
ಮಾರುತ ಬೀಸಿಯೆ ಏಱಿತು ಮಂಗ ಇಂದು ೧

ಗಗನವನಮವಾಸ್ಯೆ ನುಂಗಿತು ನೋಡೆ
ನೆಗೆವ ಹಂಸೆಗೆಯುರಿಯು ಶರಹೂಡೆ
ಮಿಗೆಯುರಿದುದಕಮೃತ ತಂದು ಕೂಡೆ
ಸುಗಮಂದಲೀಱೆಯೆ ಹಂಸೆ ನಲಿದಾಡೆ ೨

ಉಣ್ಣೆದರ್ದುರವಟ್ಟೆ ವನಚರವೆಲ್ಲಾ
ಕಣ್ಣುಗೆಟ್ಟಳಿದು ಹೋದವು ಹಂಸೆಗೆಲ್ಲಾ
ಹಣ್ಣಿದನಿತಕೆ ಕತ್ತಲೆ ಹೋಯಿತಲ್ಲಾ
ಕಣ್ಣು ಮೂಱವ ನೀಲಗ್ರೀವನೆ ಬಲ್ಲಾ ೩

೧೧೪

ರಾಗ : ದೇಶಿ

ಬಲ್ಲೆ ಬಲ್ಲೆ ಬಲ್ಲೆ ನಿನ್ನ ಮಾಯ ದಮ್ಮಯ್ಯ ನಾನು
ಒಲ್ಲೆ ಒಲ್ಲೆ ಒಲ್ಲೆ ಜಿತಮಾಯ ದಮ್ಮಯ್ಯ ನಾನು ॥ ಪಲ್ಲ ॥

ನೋಡೆ ನೋಡೆ ನೋಡೆ ಮಣ್ಣ ಮಾಟಿ ದಮ್ಮಯ್ಯ ತನ್ನೊಡ
ನಾಡೆಯಾಡೆಯಾಡೆ ಪೆಣ್ಣ ಸಾಟಿ ದಮ್ಮಯ್ಯಾ
ಕೂಡೆ ಕೂಡೆ ಕೂಡೆ ಹೊನ್ನ ಪಾಟಿ ದಮ್ಮಯ್ಯ ಮಾತ
ನಾಡೆಯಾಡೆಯಾಡೆ ಲೋಕ ತೋಟಿ ದಮ್ಮಯ್ಯಾ ..

ಒಕ್ಕ ಒಕ್ಕ ಒಕ್ಕ ಕಾಯವಾಕೆ ದಮ್ಮಯ್ಯ ಎನ್ನ
ಮಿಕ್ಕ ಮಿಕ್ಕ ಮಿಕ್ಕ ಪ್ರಾಣವಾಕೆ ದಮ್ಮಯ್ಯಾ
ತಕ್ಕ ತಕ್ಕ ತಕ್ಕ ಮನಸ್ಯಾಕೆ ದಮ್ಮಯ್ಯ ಹೊಣೆ
ಹೊಕ್ಕ ಹೊಕ್ಕ ಹೊಕ್ಕ ಮಾರಿಯಾಕೆ ದಮ್ಮಯ್ಯಾ ೨

ದೂಟಿ ದೂಟಿ ದೂಟಿ ನವಳ್ಭಾವ ದಮ್ಮಯ್ಯ ಅತ್ತ
ಬೇಟಿ ಬೇಟಿ ಬೇಟಿ ಮಹಾದೇವ ದಮ್ಮಯ್ಯಾ
ತೋಟಿ ತೋಟಿ ತೋಟಿ ಹಾಗವಳಾವ ದಮ್ಮಯ್ಯ ಪುಣ್ಯ
ನೀಟಿ ನೀಟಿ ನೀಟಿ ನೀಲಗ್ರೀವ ದಮ್ಮಯ್ಯಾ ೩

೧೧೫

ರಾಗ : ಭೈರವಿ

ಅನುಮಾನವೇಕೆಯಾತ್ಮನ ನಂಬೆಯೊಮ್ಮೆ
ಮನಸಿಜಾರಿಯ ಪುಣ್ಯಪಾದವನು ನೀನೊಮ್ಮೆ ॥ ಪಲ್ಲ ॥

ನಿನ್ನ ದೇಹವೆಯಾತನ ಗೃಹವಾಗಿ
ನಿನ್ನ ಹೃದಯುವೆಯಾತನ ಕುಳ್ಳಿರಾಗಿ
ನಿನ್ನ ಇಷ್ಟತೆಯೆಯಾತನ ಮೂರ್ತಿಯಾಗಿ
ನಿನ್ನ ಸ್ವಚ್ಚರಿತವಾತನ ಪಾದವಾಗಿ ೧

ನಿನ್ನಂತಃಕರಣವಾತನ ಹಸ್ತವಾಗಿ
ನಿನ್ನ ದಶವಾಯುವಾತನ ಭುಜವಾಗಿ
ನಿನ್ನ ಪಂಚೇಂದ್ರಿಯಾತನ ಮುಖವಾಗಿ
ನಿನ್ನ ಮಹಾಜ್ಞಾನವಾತನ ನೇತ್ರವಾಗಿ ೨

ನಿನ್ನ ಸದ್ಭಕ್ತಿಯಾತನ ಜಿಹ್ವೆಯಾಗಿ
ನಿನ್ನ ವಿಷಯವಾತನ ತುತ್ತದಾಗಿ
ನಿನ್ನ ಆನಂದವಾತನ ತೃಪ್ತಿಯಾಗಿ
ನಿನ್ನ ನೀನಱಿಯೆ ನೀಲಗ್ರೀವನಾಗಿ ೩

೧೧೬

ರಾಗ : ತಮ್ಮಿಚ್ಚೆ

ತನುವಿಂಗೆ ವ್ಯಾಧಿ ವ್ಯಾಪಿಸಿತ್ತು ತನಗೆಂತೆಂದು ಪಲುಂಬುವಲ್ಲಿ ಮುನ್ನಲಾ ತನುವ ಗುರುವಿಂಗಿತಾಣವಮಲ ಬಯಲಾಯಿತ್ತೆಂಬ ನುಡಿ ಹುಸಿಯಾಯಿತ್ತಲ್ಲಯ್ಯಾ. ತನ್ನ ಮನಸ್ಸು ತನ್ನ ಸತಿ ತನಗೆಯ್ಯಲಲಸಿದಳೆಂದು ನೋವಲ್ಲಿ ಮುನ್ನಲಾ ಮನವ ಲಿಂಗ ಕಿತ್ತುಮಾಯಾಮಲ ಬಯಲಾಯಿತೆಂಬ ನುಡಿ ಹುಸಿಯಾಯಿತ್ತಯ್ಯಾ. ತನ್ನ ಧನವರೊಯಿದೀಯರು. ತನ್ನ ಸಂಸಾರಕ್ಕಿಂತೆಂದು ತನ್ನ ಚಿತ್ತ ಮಱುಗುವಲ್ಲಿ ಮುನ್ನಲಾ ಪ್ರಾಣವನಿರಂತರ ಜಂಗಮಕಿತ್ತು ಕಾರ್ಮಿಕ ಮಲ ಬಯಲಾಯಿತೆಂಬ ನುಡಿ ಹುಸಿಯಾಯಿತ್ತಲ್ಲಯ್ಯಾ. ಮುನ್ನವೆ ತನ್ನವಲ್ಲ ಮಲತ್ರಯಗಳೆಂದು ತಿಳಿದು ಗುರುವಿಂಗಿತ್ತು ನಿರ್ವಾಣ ದೀಕ್ಷಿತನಾಗಿ ಈಗಲವನವಗ್ರಹಿಸಿ ಕೊಂಬಲ್ಲಿ ಮುನ್ನಿನ ಮಲತ್ರಯವನೆ ಆವರಿಂಗಿತ್ತು ನೀಲಗ್ರೀವಾ ನೀವಾ ಮಲಗ್ರಾಹಿಕರಲ್ಲಿಲ್ಲವಾಗ ಅವರು ಭಕ್ತರಲ್ಲ ಮುನ್ನಿನುತೆ ಭವಕ್ಕೆ ಭಾಜನವಾಹರಯ್ಯಾ. ೧

೧೧೭

ರಾಗ : ಮೇಚ ಬಹುಳಿ

ಈ ತನುವಿಗೆ ಇಂದುವಿನಿತಾದಿ ವ್ಯಾಧಿಯು
ನೀ ತಗುಲಿಸಲವು ನಿನಗೆಲೆ ದೇವಾ ॥ ಪಲ್ಲ ॥

ಬಲ್ಲೆನೀ ತನು ತಾಯಿ ತಂದೆಯಿಂದುದಿಸಿತ್ತೆ
ಬಲ್ಲೆನೀ ತನು ತನ್ನ ಬಯಕೆಗೆ ಬಂತೆ
ಬಲ್ಲೆನೀ ತನು ತನ್ನ ತಾನೆ ಹೞಿದು ಬಿತ್ತೆ
ಬಲ್ಲೆನೀ ತನುವನಿತ್ತಾತನೀ ದೇವಾ ೧

ನೀ ನಿನ್ನ ಪರಮಾನಂದಕೆ ತಂದ ತನುವಿಗೆ
ಏನಾದರೇನು ಈ ಮಾತು ಕಥೆಯಹಾ
ನಾನು ತಾನೆಂದು ಒಯಿಸಿ ಕಟ್ಟುವವರಿಲ್ಲ
ನಾನದನಾಡಲೇತಕೆ ನೀನೆ ಬಲ್ಲೆ ೨

ತನುವಿನಿಂದಾಗಿ ತನುವಿನೊಂದಲೊದವಿದ
ಘನ ಸುಖದುಃಖವೆಲ್ಲವು ನಿನ್ನವದಕೆ
ತನುವ ಸಂಬಾಳಿಸಬಹುದಲಸದೆ ಇತ್ತಾ
ತನುವಿಗೆ ಕರ್ತ ನೀನೆಲೆ ನೀಲಗ್ರೀವಾ ೩

೧೧೮

ರಾಗ : ಭೈರವಿ ಪಂತು

ಆರಯ್ಯ ಬೀಜುತ ನಡುತೊಟ್ಟಿಲೊಳಗೆ
ಆರಯ್ಯಗಾಚಿಂಬುದ ನೀ ನಿನ್ನಮೊಳಗೆ ॥ ಪಲ್ಲ ॥

ಹಿಂದೆ ನೀ ನವಮಾಸದಿಂದತ್ತ ನೋಡೆ
ಹೊಂದಿದೆ ಈ ಮಾಯಾಪತಿಯಾಗಿ ಕೂಡೆ
ಇಂದಿಗೋ ಇವಳ ಬಾಲಕನಾಗೆ ಪಾಡೆ
ಎಂದೆಂದು ಬಿಡದು ನಿನಗೆ ಇದೆ ಪಾಡೆ ೧

ಮದನಮಂದಿರದಲಂದಿಸಿ ಮೊಲೆಯುಂಡೆ
ಆದೆಯೊಂದ ರವಿಸುತ್ತೆರಡ ಪಿಡಿಕೊಂಡೆ
ಮೊದಲೊಳು ತಾತನೆನಿಸುವದ ಕಂಡೆ
ಇದೆ ಇಂದೆ ಕಂದನಾಗಿ ಎಡೆಗೊಂಡೆ ೨

ಮಾಣದೆ ಮರಳಿ ಹೀಗೆ ಹೀಗೆ ಬಂದು
ವೇಣಿಸೂತ್ರದ ಹಾಗೆ ತಿರುಗದೆ ಇಂದು
ಪ್ರಾಣದೊಡೆಯ ನೀಲಗ್ರೀವನ ಹೊಂದು
ಕಾಣಬಹುದಕ್ಕೆ ಕನ್ನಡಿ ಬೇಡವೆಂದು ೩

೧೧೯

ರಾಗ : ಮೇಚ ಬಹುಳಿ

ದೇವರಿದ್ದುದನು ದೇವಾಲಯಪೆಂಬಂತೆ
ಭಾವಿಸೆ ಸತ್ತ್ವವಿದ್ದವನೆ ಸತ್ಪುರುಷ ॥ ಪಲ್ಲ ॥

ಹುಸಿಯಿಲ್ಲದವನೆ ಹೊಸಕವಲ್ಲ ಕುಲಜನು
ಹುಸಿಯಿರಲವನ ಹೊಲೆಯನೆನ್ನಬಹುದು
ಒಸೆದು ಸತ್ಯವನು ಸಾಧಿಸಲಾತ ಸದ್ಭಕ್ತ
ಸಸಿನೆ ಸತ್ಯವ ಸಾರದವ ತಾನೆ ಭವಿಯು ೧

ಕಣಿಯು ವಿಭೂತಿ ಕಾವಿಯು ಕಂಥೆ ವಿಪಿನದ
ಮಣಿಯಿಂದ ಮನುಜ ಮಾಹೇಶ್ವರನಹನೆ
ತ್ರಿಣಯಧ್ಯಾನದಿಂದವೆ ತನುಗುಣಗಳ
ಹಣತೆಯ ಹಿಂಗಿದಾತನೆ ಚರದೇವಾ ೨

೧೦೭

ಗುರುವೆನಿಸುವ ಸತ್ಯವಿರೆ ಸದಾಚಾರ ಹೊಂ
ದಿರೆ ಲಿಂಗವೆನಿಪ ಮಹಾಜ್ಞಾನವಿರಲು
ಚರವೆನಿಸುವನಿವಟಿಗೊಳು ಕೂಡದವರನು
ನರರೆನಿಸುವ ನೀಲಗ್ರೀವ ನೋಡಾತ್ಮಾ ೩

೧೨೦

ರಾಗ : ಆಹರಿ

ನಡೆಯುಜಿಯು ನಿಮ್ಮ ಹಾಗೆ ಲೋಕ
ನುಡಿಯ ನಿಮ್ಮಮೊಲು ಶರಣನು ಒಮ್ಮೆ ॥ ಪಲ್ಲ ॥

ಬಲ್ಲ ಬಹು ಭಾಷೆಯು ಹಿಡಿತೆ ನಿಮ್ಮ
ಎಲ್ಲರಂದದಿಯಾನಂದದಿಯಾನಂದಿಸು ಕಳ್ಳಿರಾ
ಬಲ್ಲನೆ ಬಾಹಿರಂಗದ ನಿಮ್ಮ ಮಾರ್ಗವ
ಒಲ್ಲದೆ ಓಡುಗಯ್ಯನ ಕೂಡಿದವನೊಮ್ಮೆ ೧

ಲಾಲಿಸ ಸೋಂಕನೀಕ್ಷಿಸನಣ್ಣವಾಸಿಸ
ಮೇಲೆ ನಿಮ್ಮಂತೆಯಾ ತನುವಜಿಯ
ಕಾಲ ಮೊದಲು ನಿಮ್ಮ ಕಂಡು ಕಡೆಗಾದಾತ
ಸೋಲಸು ನಿಮ್ಮ ಸೊಗಡ ಹೊಂದನವನೊಂದೆ ೨

ಒದವಿದ ವಸ್ತುಚಯದ ಸುಖಗಳನೆಲ್ಲ
ಉದರದುಂಬಿರಿವಿರಿ ನಿಮಗೆ ಎನುತ
ಮದನಾರಿ ನೀಲಗ್ರೀವನೆ ತಾನೆಯಾಗಿ ತ
ನ್ನಿದಿರಿಟ್ಟು ಸುಖದ ಸುಗ್ಗಿಯ ಸಲಿಸುವನೊಮ್ಮೆ ೩

೧೨೧

ರಾಗ : ಮೇಚ ಬಹುಳಿ

ಏನೆಂದು ಎನಬಹುದು ಶಿವಯೋಗದ
ಧ್ಯಾನದಿಂದಿದಿರಜಿಯುದ ಮಹಾಮಹಿಮನ ॥ ಪಲ್ಲ ॥

ನಡುಪಟ್ಟ ನಾಗದಂದದಿನಿಸಜಿಯದೆ
ಎಡೆಯಾಡುತಿಹ ತನ್ನ ಒಲುಮೆಯ ಸತಿಯ
ಒಡನೆ ವಿಯೋಗವಾದವನಂತೆ ನಿದ್ರೆಯ
ಕಡೆಮಾಡಿ ನಿಂದ ಕಾರಣಿಕ ಪುರುಷನ ೧

ಸುರಲೋಕದವರ ತೆಱದಿ ಹಸಿವಱಿಯದೆ
ಪರಮಾನಂದದ ಪರವಶದಿಂದಲೊಮ್ಮೆ
ತರುಣರ ಹಾಗೆ ನಾಣಱಿಯದೆ ತಾಮಸ
ನರರ ಸಾರದೆ ಸಾರದೆ ನಟಿಸುವ ನಟಣೆಗನ ೨

ಕಾಸಿದನಿತು ಕಡೆಗಿನಿದಾಹ ಪಾಲಂತೆ
ಲೇಸನುವಗಲಲು ಮೋಹಿಪಂತೆ
ಓಸರಿಸದೆ ಲೋಕಧರೆಗೆ ಧರ್ಮದವೊಲು
ತಾ ಸಹಜದಿ ನೀಲಗ್ರೀವನೊಳಿಹ ೩

೧೨೨

ರಾಗ : ದೇಶಿ

ಮನ ಮಾರುತನ ಕೂಡಿ ಕೂಡಿ ನಭದಿ ನಡೆದ ಚಂದ ಚಂದಮಾಮಾ
ಮನ ಮಹಾಗುರು ಕರುಣದಿ ಮಾಸದಿರೆ ಚಂದ ಚಂದಮಾಮಾ ॥ ಪಲ್ಲ ॥

ಮನ ಕರಣೇಂದ್ರಿಗಳೊಳು ಮುಚ್ಚಿ ಕುಱುಹು ಚಂದ ಚಂದಮಾಮಾ
ಮನಕಿಱಿದೆಸೆಲಾಶಿನೀ ಚಂದ ಚಂದಮಾಮಾ
ಮನ ಚರ ಪರಕಾಗಿ ಹೋಗಿ ಸಣ್ಣಹ ಚಂದ ಚಂದಮಾಮಾ
ಮನ ಸತ್ಯ ಕಿಡೆಗೆ ಸಂತತ ಹೆಚ್ಚುತಿಹ ಚಂದ ಚಂದಮಾಮಾ ೧

ಮನ ಮಱಹಿಗೆ ಸಂದು ಇರೆ ಇರುಳಿನ ಚಂದ ಚಂದಮಾಮಾ
ಮನವಱುಹೆನೊಳಾಡಲದೆ ಹಗಲಿನ ಚಂದ ಚಂದಮಾಮಾ
ಮನ ಕಪಟವ ಮುಸುಕಿರೆ ಕಳಂಕಿನ ಚಂದ ಚಂದಮಾಮಾ
ಮನ ಕ್ರೂರ ಜನಕೆ ಕಂಪಿಸೆ ಗ್ರಹಣದ ಚಂದ ಚಂದಮಾಮಾ ೨

ಮನವನು ಮನವಾಗಿರಲನುಮತಿ ಚಂದ ಚಂದಮಾಮಾ
ಮನ ಮಹಾಘನ ಪರಿಪೂರ್ಣರಾಕಿನ ಚಂದ ಚಂದಮಾಮಾ
ಮನ ಶಾಂತಿ ಸೈರಣೆಯಾಗೆ ತಣ್ಣನೆ ಚಂದ ಚಂದಮಾಮಾ
ಮನ ನೀಲಗ್ರೀವನೊಳಿರೆ ಧರಿಸಿ ಚಂದ ಚಂದಮಾಮಾ ೩

೧೨೩

ರಾಗ : ಶಂಕರಾಭರಣ

ತನು ಸಹವಾಗಿ ಕೈಲಾಸಕೆ ಶರಣಪ್ರಾಣ ಅತ್ತ
ಮನವಾರ ಹೋಹ ಮಾರ್ಗವಱಿದವ ಮಹಾಜಾ (?) ॥ ಪಲ್ಲ ॥

ಒಂದು ನೆಲ್ಲನು ರಸೆಯೊಳಗುದುರಿಸಲದು ಮಹಾ ಸಲೆ
ಸಂದು ಬೆಳೆದು ಸಾವಿರ ಕಾಳು ಗಣಿಕೆಗೆ ಬಾಹಾ
ಚಂದವಂ ತಂದು ತಾನಾಗಿದೊಂದು ಕಾಯದಿ ಕೋಟಿ ದೇವಾ ನೋಡೆ
ಮುಂದೆ ತೋರುವವ ತನ್ನೊಳಡಗಿ ತಾ ಹೋಹಾ ೧

ಕನಕದ ಕೀಳನುರುಹಿ ಕಡೆಯಾಣಿಯು ಮಾಡಿ ಮತ್ತೆ
ಮನಸಂದು ಹೊಟ್ಟೆಹಿಂಗಿಸಿ ತಿರುಳನೆ ತೀವಿ ಕೂಡಿ
ಇನಿತು ಗಳಿಸಿ ಫಲರುಚಿಯು ಸವಿವನಂತೆ ನೋಡಿ
ತನುವಿಂದ ತನುವನಡರಿ ಮೋಕ್ಷದೆಡೆಗೆ ತಾವೋಡಿ ೨

ಲೋಕದೊಳಾಡಿ ತಮ್ಮಯ ನಿಜವನಡರುವರೊಮ್ಮೆ ಅತ್ತ
ಲೋಕ ನೋಯಿವರೇತಕೆ ಹಾಗೆ ಅದು ಏನು ಹೆಮ್ಮೆ
ಲೋಕವಳಿಯದಾಡಲವರಿಗುತ್ತರಗುಡಲವ್ಮ ಇತ್ತ
ಲೋಕ ಬಲ್ಲುದೆ ನೀಲಗ್ರೀವನವರಾರ ಸೊಮ್ಮೆ ೩

೧೨೪

ರಾಗ : ದೇಶಿ

ಶಿವ ಶಿವ ಮನುಜರಿಗಿನಿತು ಮೈಮರೆದಿಹುದೊಂದು ಬಾಳೆ
ಶಿವ ಶಿವ ನಿಮ್ಮ ನಿಮ್ಮನರಿಯದಜ್ಞ ಜೀವರದೊಂದು ಬಾಳೆ ॥ ಪಲ್ಲ ॥

ಶಿವ ಶಿವ ಸತಿ ಸುತ ಸಿರಿ ನೀರತೆರೆಯೆನ್ನದೊಂದು ಬಾಳೆ
ಶಿವ ಶಿವ ಮಂಜೆನ್ನದೀ ಸಹೋದರ ಮಿತ್ರರೊಂದು ಬಾಳೆ
ಶಿವ ಶಿವ ಕವಿದ ಮೇಘದವೊಲಾ ಬಾಂಧವರೊಂದು ಬಾಳೆ
ಶಿವ ಶಿವ ಸುರಚಾಪವೆನ್ನದೀ ತಾಗಿದೊಂದು ಬಾಳೆ ೧

ಶಿವ ಶಿವ ಸಾವವರನು ಕಂಡು ಸ್ಥಿರವೆಂಬುದೊಂದು ಬಾಳೆ
ಶಿವಶಿವ ಕೆಡುವವರಿದಿರ ಬದುಕ ನಚ್ಚದೊಂದು ಬಾಳೆ
ಶಿವ ಶಿವ ದುಃಖಬಡುವರ ಕಾಣುತ ಸುಖವೊಂದು ಬಾಳೆ
ಶಿವ ಶಿವ ಮಾಯೆಯಣಲೊಳೆಡೆಯಾಡುವದೊಂದು ಬಾಳೆ ೨

ಶಿವ ಶಿವ ಮನಸಿಜ ತರಿದ ತಲೆಯ ಕಾಣರೊಂದು ಬಾಳೆ
ಶಿವ ಶಿವ ಕಾಲನೆಡೆಗೆ ಸಲೆ ಸಂದಿಹುದೊಂದು ಬಾಳೆ
ಶಿವ ಶಿವ ನರಗಂಜಿಗಳ ನೀನೆ ಮರಸುವದೊಂದು ಬಾಳೆ
ಶಿವ ಶಿವ ಸಲಹು ನೀಲಗ್ರೀವನವರದೊಂದು ಬಾಳೆ ೩

೧೨೫

ರಾಗ : ಶಂಕರಾಭರಣ

ಏಕೆ ನಿನಗೆಂಯಾತ್ಮದೊರೆದುದು ಈ ನರದೇಹಾ ಹೋ ಹೋ
ಏಕೆ ಒಂದಂದುರೇತಚಿತ್ತದ ಚೋದ್ಯದ ಜೋಹಾ (?) ॥ ಪಲ್ಲ ॥

ಎಲುವಿನ ಹಂಜರನರದ ಹಣತೆ ಚರ್ಮ ಹೊದಕೆ ನೋಡೆ
ಸಲೆ ರಕ್ತಮಾಂಸ ಕೂಡಿದ ಮೊತ್ತು ಊಳಿಗದೆಯದಕೆ
ಮಲಮೂತ್ರ ಕ್ರಿಮಿಜಂತು ತೀವಿದ ಘಟದ ದುರ್ಮದಕೆ ಬಂದು
ನೆಲಸಿದೆ ನೀ ವಾತ ಪಿತ್ತ ಶ್ಲೇಷ್ಮದ ಹುತ್ತವಿದಕೆ ೧

ಹೊಗ್ಗಲ್ಲವೆಲ್ಲ (?) ಗುಣವೆ ಅವಗುಣ ನೂರು ಕೋಟಿ ಇದ
ಸಾಗಿಸಿ ಸಾಯಸ ಬಡುತಿಹೆ ನೀ ಮನ ನಾಟಿ
ಹಾಗಲ್ಲದೆ ನಿನಗದೆ ಒಂದು ಭ್ರಾಂತಿನ ತೋಟಿ ಹಿಂದೆ
ಲಾಗಿಸಿ ತನು ಸಹ ಶಿವನೆಡೆಗೊಂಡ ಹೋಟಿ ೨

ಹಿಂದೆ ಈ ತನುಸಹ ಹೋದರೆಂಬುದನದ ಮಾಣು ನೀನು
ಇಂದು ಈ ತನುವಿಂದ ನಿಜದೇಹವೊಂದದ ಕಾಣು
ಮುಂದೆ ನೀಲಗ್ರೀವ ನೀನು ತಾನಾಹ ಜಾಣು ಬೇಡ
ಸಂದೇಹ ಮೋಕ್ಷದ ಬಟ್ಟೆಯೆಂಬುದೆಯೊಂದೆ ಗೇಣು ೩

೧೨೬

ರಾಗ : ಒಡ್ಡಿ ಧನ್ಯಾಸಿ

ಏನು ಮಾಡಿದರು ಮಾಡಲೆ ದೇವಾ–ಎನ್ನ
ಮಾನ ನಿಮ್ಮ ಮೆಚ್ಚಿದೆ ದೇವಾ ॥ ಪಲ್ಲ ॥

ತನುವನು ಬಹುರೋಗಗಳಿಂದಾ–ಎನ್ನ
ಮನವನು ಸಿಡಿಲು ಗ್ರಹಗಳಿಂದ
ಮನುಜರು ಕ್ರೂರಮೃಗಗಳಿಂದ–ಎನ್ನ
ಇನಿತು ನೀ ಪ್ರಾಣಬಾಧೆಗಳಿಂದ ೧

ನೋಡಿದವರು ಹೆಡ್ಡ ಇವನೆಂದು–ಎನ್ನ
ಕೂಡೆ ನುಡಿದರು ಹುಚ್ಚನು ಎಂದು
ಬೇಡಿದವರು ಬಚ್ಚ ಬರಡೆಂದು–ನೀನು
ಆಡಿಸೆ ಲೋಕವಾಡಿದರೆಂದು ೨

ನೆನಹಿಂಗೆ ಬಟ್ಟಲ ಬಯಲ ಹಾಗೆ–ನೀನು
ಅನುವಿಡಹರ್ನಿಶದೊಳು ಹಾಗೆ
ಘನ ನೀಲಗ್ರೀವ ತೋಱಲು ಹಾಗೆ–ಎನ್ನ
ಮನ ನೀನೆಂದಱಿದಗಲದ ಹಾಗೆ ೩

೧೨೭

ರಾಗ: ಶಂಕರಾಭರಣ

ಹುಟ್ಟಿದ ಮೇಲೆ ಸಾಯದ ಹಾಗೆ ಸತ್ತರೆ ಮುಂದೆ–ಮತ್ತೆ
ಪುಟ್ಟದ ಹಾಗೆ ಈಹವರ ತೋಱಿಸೆ ತಂದೆ ॥ ಪಲ್ಲ ॥

ತನುವಿರುತಿರೆ ತನುವಿನ ಗುಣಗಳೆ ಇಲ್ಲದಿದ್ದು–ನೋಡೆ
ಮನವಿರೆ ಮಾಯಾಪ್ರಪಂಚಿನ ನಡೆಯಱು ತಾಗೆ ಗೆದ್ದು
ಧನವಿರೆ ದಾಯಬೋಕಿಯನೊಡರಿಸುವಾಸೆಯೊದ್ದು–ಇದ್ದ
ಘನ ಮಹಿಮರ ತೋಱೆ ಎನಗೆ ಏತಕೆ ನೀನು ಕದ್ದು ೧

ಮಾನವರಂತೆ ಮರ್ತ್ಯದೊಳೊಮ್ಮೆ ತಾ ಸುಳಿದಾಡೆ–ಅತ್ತ
ಮಾನವರೆಲ್ಲ ನಮ್ಮವನು ತಮ್ಮನೆನೆ. ಕೂಡೆ
ಏನು ಎನ್ನದೆ ಅವರಿದಿರವರಂತಿಹ ನೋಡೆ–ಮಹಾ
ಮಾನವೇಶ್ವರನ ಎನಗೆ ತೋಱದಿಹುದೊಂದು ಪಾಡೆ ೨

ಒದವಿದ ರೋಗ ಸಿಡಿಲುಗ್ರ ನರಕಕ್ರೂರಮೃಗದ ಬಾಧೆ
ಗದಿರದಂಜದೆ ಇತ್ತ ಲೌಕಿಕವನು ಹೊಣೆ ಹೋಗದ
ಮದನಾರಿ ನೀಲಗ್ರೀವನೆ ನಿಜಮೋಕ್ಷ ನೆಗೆದಾ–ಮಹಾ
ಸದಲಾತ್ಮರ ತೋಱೆ ಎನಗೇಕೆ ನೀನಗೇನುದಗದಾ ೩

೧೨೮

ರಾಗ: ಮೇಚು ಬಹಳಿ

ನಿನಗೆ ನೀನಱುಹ ಪಾಲಿಸಿದರೇನದನೊಮ್ಮೆ
ಮನಸಂದುಮೆವ ಮಱಹಿಯಿರೆ ದೇವಾ ॥ ಪಲ್ಲ ॥

ಬಿಡದೆ ನೀರೊಳಗೆ ಈಸುವದಱಿಹಿಸಿ ಕೂಡೆ
ಕಡಲ ನಡುವೆ ಮುೞುಗಿಸುವನ ಹಾಗೆ
ಒಡನೆ ನೀನಱಿನಿತ್ತೆನಗೆ ಈ ಸಂಸಾರ
ತೊಡರ ತೊಲಗಿಸಿದೆ ತೋಱಿಸಲದಱೊಳಗೆ ೧

ಸಲೆ ಸಾಮಗಳ ಸಾಧನಗಳೆಚ್ಚ ಱಿಸುತಾಗ
ಗೆಲುಂಯೆಂದು ಬಹು ಭೂರಿಗಾಳಗದೊಳಗೆ
ಕಲಿಯಾಗಿ ಕಾದು ನೀನೆಂಬಾಚಾರ್ಯರ್ಜುನ ಹಾಗೆ
ಮಲತಿಹ ಮಾಯಾ ಮೊತ್ತದಿ ಮೋಕ್ಷರತಿಯಾ ೨

ಮನಸಿ ಸಂದು ಸಂಶಯುವ ಹಿಂಗಿಸಿ ಮಾಯಾ
ಇನಿಸುರುವಣಿಯು ನಿಲ್ಲಿಸಿ ನಿಜ ಪದವಾ
ಎನಗೆಱುಹಿಸಿ ಎರಹೊರೆಯ ಮಾಡದೆ ನಿನ್ನಾ
ತನಯನೆಂದಱಿದಲ್ಲದೆ ನೀಲಗ್ರೀವಾ

೧೨೯

ರಾಗ : ಭೈರವಿ

ಇವರಿಗೆ ಶಿವದೀಕ್ಷೆಯ ಗುರುವರ ವಿವರಿಸದಿತ್ತನಲ್ಲಾ
ಇವರು ಸುಮ್ಮನೆ ಎಂದು ಹಳೆಗಾಸ ಪಡೆಯದೆ ಶಿವ ಶಿವ ಕೆಟ್ಟರಲ್ಲಾ ॥ ಪಲ್ಲ ॥

ಹಿಂದಣ ಭವಮಾಲೆಯು ಹಿಂಗದ ಮುಂದಿಹ ಪುೂಮಲವ
ಸಂದು ಹಱಿಯಿಂದ ಸತ್ಯವ ಸಾರಲಱಿಯದ ಕುಂದು ಹೆಚ್ಚಸು ಕೂಡಿದ
ಮಂದಮತಿಯು ಜೀವರು ಗುರುವಿತ್ತಾನಂದದೀಕ್ಷೆಯೊಳಾಡದೆ
ಸಂದಹಿಸುತ್ತಲೊಂದು ಪಡೆದಡಕೆಗೆ ಸಲ್ಲದಂದದಿ ಕೆಟ್ಟರಲ್ಲಾ ೧

ತನು ಗುಣಾಳಿಯ ದಾಳಿಯನಳಿಯದೆ ಮನದ ಸಂಚಲಪ್ರತಿಯ
ಇನಿಸು ನಿಲಿಸದೆ ಪ್ರಾಣನ ಭ್ರಾಂತತಿ ಮಾಣದ ಮನುಜರಿಗೇಕೆ ಹಾಗೆ
ಘನ ಗುರುದೀಕ್ಷೆಯಿತ್ತರವರವನನುಮನದೊಳೆ ಮಱಿದು
ಮನವೆಱಿದೆಯೆಂದು ಹುಲ್ಲಕಡ್ಡಿಗೆ ಸಲ್ಲದನಿತಹೋ ಕೆಟ್ಟರಲ್ಲ ೨

ಲೋಕದಂತಿಹುದಲ್ಲವೆ ಗುರುದೀಕ್ಷೆ ಏಕದೊಳಿಹಂದಾರಯ್ಯನೆ
ಜೋಕೆದಪ್ಪದೆ ಶಿವಶರಣರ ಸೇವೆಯು ಸಾಕಾರವಿಡಿದಿಹುದು
ತಾ ಕರಲೇಸು ನೀಲಗ್ರೀವನಾ ಮೂಕಜೀವರು ನಂಬದೇ
ಕಾಕಾಗಿವೊಂದು ಒಡಕು ಕವಡೆಗೆ ಸಲ್ಲದೆ ಕೆಟ್ಟುಹೋಗಲೇಕೆ ೩

೧೩೦

ರಾಗ : ಆಹರಿ

ನಾನೆಂದರೇನು ನೀನೆಂದರೇನು–ಹಾಗೆ
ಏನೆಂದರೇನು ಪರಿಪೂರ್ಣವಸ್ತುವನೊಮ್ಮೆ ॥ ಪಲ್ಲ ॥

೧೧೩

ತಂದೆಯೆಂದರೆ ತನುಜನು ಅಣ್ಣ ತಮ್ಮ ತಾ
ನೆಂದರೆ ಮಾವನಳಿಯ ಭಾವನು
ಎಂದರೆ ಮೈದುನ ತನ್ನವನನ್ಯ ತಾ
ನೆಂದರದೇನಂ ಎಲ್ಲರು ವಿಶ್ವರೂಪನಾ ೧

ಗುರುವೆಂದರೆ ಶಿಷ್ಯನೆಂದರೆ ಅರಸಾಳು
ಹಿರಿಯ ಕಿಱಿಯನು ಒಳ್ಳಿಹ ಹೊಲ್ಲಹ
ಪುರುಷನೀತನು ಕೆಂಚ ಕರಿಕನೆಂದೆಲ್ಲರು
ಕರೆದರೆದೆ ನಿಂದು ಕಾರಣ ರೂಪನಾ ೨

ತನು ಮನ ಪ್ರಾಣ ಸ್ಥೂಲವು ಸೂಕ್ಷ್ಮ ಕಾರಣ
ನೆನುತಲಾ ವಿಶ್ವತೈಲಸ ಪ್ರಾಜ್ಞನ
ನೆನುತ ಜೀವಾತ್ಮಾಂತರಾತ್ಮ ಪರಮಾತ್ಮನೆಂ
ದೆನಲದೆನದಾಯಿತು ಎಲ್ಲರು ನೀಲಗ್ರೀವನಾ ೩

೧೩೧

ರಾಗ : ಭೈರವಿ

ಈ ಶರೀರವ ನಿನಗೆಯಾತ್ಮ ಸದಾ ಶಿವನೇಕೆ ಇತ್ತಾ
ವಾಸವ ಮಾಡಿ ರಘುರಾಜ್ಯವನು ಭರತೇಶಗೆ ॥ ಪಲ್ಲ ॥

ಒಡಲವಗುಣಗಳೆಂಬ ದುರ್ಜನ ಪಡೆಗಳ ಕೂಡಿಕೊಂಡು
ಒಡನೆ ಸುಗುಣಗಳೆನಿಪ ಬಂಧುವರ್ಗವ ಕೆಡೆಮೆಟ್ಟಿಯಾಳುತಿಹ
ಕಡುಮೂರ್ಖ ನಿನಗೆಯಿಂದು ದೇವ ಕೊಡುವರೆ ಶಿವನು ಹಿಂದೆ
ತಡೆಯದೆ ಧರ್ಮಪುತ್ರನು ದುರ್ಯೋಧನಗೆ ತಾ ಪದವಿಯನಿತ್ತ ಹಾಗೆ ೧

ಹುಸಿ ಹಿಂಸೆ ಜಾರ ಚೋರಗುಣಗಳೆ ಸಪ್ರಧಾನರಾಗಿ
ಕುಸುರಿದಱಿವರೆ ಸತ್ಯವ ಸದಾಚಾರವ ಮಸಿಗಾಣಿಸುವರೆಯೊಮ್ಮೆ
ಸಸಿಧರ ನಿನಗೆ ಇತ್ತಾ ದೇಹವ ಅಸಮವಿಕ್ರಮ ವಂದಿತನು
ಒಸೆದು ಚಂದ್ರಗುಪ್ತಗೆ ಧಾತ್ರಿಯಿತ್ತುರೆ ಜಸಗೆಡಿಸಿದವೊಲು ಹಾಗೆ ೨

ನೆಲೆಗೊಂಡ ಹಮ್ಮಮತೆ ಕ್ರೂರತೆ ಗೆಲವನೆಲ್ಲವ ಜಯಿಸು
ಸಲೆ ಸೈರಣೆ ಶಾಂತಿ ಸುಜ್ಞಾನವೆನಿಸುವ ಬಲವನೀ ಕೂಡಿ ಬೇಗಾ
ನಿಲು ನೀಲಗ್ರೀವನೊಳು ಒಳ್ಳಿತು ಕಲೆವರವಿದ್ದಾಲೆ (?)
ಒಲವಱಿಯದೆ ಹಿಂದೆ ನಳನು ಪುಷ್ಕರನಿಗೆ ನೆಲನಿತ್ತಂತಾಗಬೇಡಾ ೩

೧೩೨

ರಾಗ : ಭೂಪಾಳಿ

ಇಂದೆ ಗುರು ಕರುಣವಂ ಪಡೆದು ಮೋಕ್ಷವ ಕೊಡು
ಮುಂದೆ ನೀನಾರು ತನುವಾರು ಏಕಾಲಸ್ಯ .
ದಿಂದ ಕೆಡಬೇಡ ಭವಹರನ ಗಿರಿಜಾವರನ ಛಂದದಿಂದಾರಾಧಿಸಾ ಮನುಜ ॥ ಪಲ್ಲ ॥

ಬಿಡದೆ ಬಹು ರೋಗ ಬಂದಪೆಯುಲಳಿದರೆ ಹೋಯ್ತು
ಒಡಿವ ತಸ್ಕರರಾಜ ಭಯದಲಾದರೆ ಹೋಯ್ತು
ಸಿಡಿಲು ಗೃಹ ಕ್ರೂರಮೃಗವೆಚಿಗಲಾಗಳೆ ಹೋಯಿತು ಕಡಿಯೆ ಮತಿಪ ಬಾಧೆಗೆ
ಒಡಲು ಸಲೆ ಸಂದು ಓಸರಿಸುವುದು ಬಹುಕಾಲ
ತಡವಿಲ್ಲ ನಿನ್ನ ಬಾಳುವೆ ನಿನಗೆ ತಿಳಿಯದಿದೆ
ಕಡುಮೂರ್ಖ ಕಾಲನೊಳ್ಳಿದನಲ್ಲ ಎಳೆದೊಯಿವಾ ಮೃಡ ನೀನಾರಾಧಿಸಾ
ಮನುಜ ೧

ಹಸಿದಾಗ ನೀರಡಸಿದಾಗ ದ್ರವ್ಯವ ಗಳಿಸ
ಲೊಸೆದು ಕುದಿವಾಗ ವನಿತೆಯರ ರತಿಸುಖಕಾಗ
ಸಸಿನೆ ಹರಿದವಚಿ ವಿಷಯಗಳ ಸಂಗ್ರಹಿಪಾಗ ರಸೆಯುಗಲವಾಗಿ ಹಾಗೆ
ವ್ಯಸನಬಡುವಾಗವೆಳ್ಳೆನಿತು ನಿನಗಾಲಸ್ಯ
ಹೆಸರಿಲ್ಲವಕಟ ಈಶ್ವರನ ಪೂಜೆಗೆ ಬೇಗ
ಮುಸುಕುವದೆ ನಿನಗೆಯಾಲಸ್ಯ ಮೂಢರ ತಾತ ಸಸಿಧರನನಾರಾಧಿಸಾ ಮನುಜ ೨

ತನುವ ತಾಪತ್ರಯಗಳಣೆಯಲಮ್ಮವು ನಿನ್ನ
ಮನವ ಸಂಸಾರಸಾಗರ ಮುಳುಗಿಸದು ಬೆದಚಿ
ಧನವನನ್ಯರು ಪಿಡಿಯರತಿ ಭೀತಿಯಿಂದಲಾ ಘನಗುರುವಿನಡಿಯ ಕೃಪೆಯ
ವಿನಯದಿಂ ನೀನು ಪಡೆದಾಕ್ಷಣವೆ ಇದು ಸಹಜ
ಅನುಮಾನವೇಕೆ ನೀಲಗ್ರೀವನೊಳು ಕೂಡೆ
ತನುವಿಡಿದು ಏಕಾರ್ಥವಾಗುವರೆ ಗುರುಕೃಪೆಯೆ ನಿನಗೆ ನಿಚ್ಚಣಿಕೆ [1]ಮ[1]ನುಜ ೩

೧೩೩

ರಾಗ : ಧನ್ಯಾಸಿ

ತನುವಿಡಿದು ತಾನು ಮರ್ತ್ಯಕೆ ಬಾಹರಾ ಕಾಯ
ತನುವೊಂದು ಮಾರ್ಗವಲ್ಲದೆ ಮಾರ್ಗ ಬೇಚುಂಟೆ
ಅ[2]ನಿ[2]ಮಿಷೇಂದ್ರನುಮಾನವೇಂದ್ರನಹಿಪತಿ ನಿತ್ಯ ತನುವ ತಾ[3][ಳುತಿಹರಾ][3]ತ್ಮ
॥ ಪಲ್ಲ ॥

---

[1] ಕಾಣಾಮ (ಮೂ) [2] ನು (ಮೂ) [3] ಳಿಹರಾದ ಆತ್ಮ (ಮೂ)

ಒಡಲುವಿಡಿದಱಿದು ಮನವನು ನಿಲಿಸಿ ಮುಕ್ತಿಯನು
ತೊಡನೆ ಸಾಧಿಸಿ ಮೋಕ್ಷಪದಕೈದುವರೆ ತನುವ
ಪೊಡವಿಯೊಳು ಸಂಸ್ಕರಿಸಿ ತಾ ಹೋಹಪಥವೊಂದೆ ಬಿಡದೆ ತನುಸಹಿತ ಹೋಹ
ದೃಢಭಕ್ತರಿಗೆ ಮಾರ್ಗ ಬೇಱೆ ಮತ್ತೊಂದುಂಟೆ
ಮೃಡ[ನ] ಕೃಪೆ ಮೃಡಶರಣರೊಂದಲ್ಲದೆರಡುಂಟೆ
ನುಡಿದರೇನಾಯ್ತು ತಮ್ಮಯ ನಿಜವ ಮಱೆದವರು ಕಡೆಗೊಂದೆ
ಮೋಕ್ಷಮಾರ್ಗ–ಆತ್ಮ ೧

ತನು ಸಹಿತ ಶಿವನೆಡೆಗೆ ಹೋಹ ಏಕಾರ್ಥವನು
ತನು ಭಿನ್ನವಾಗಿ ಮತ್ತೆಯಿರುತಿಹ ಭೇದವನು
ಇನಿತು ಸುಜ್ಞಾನ ಬಲದಿಂದ ವಿಚಾರಿಸದಲನುವಱಿಯರದ ಕಾಣದೆ (?)
ತನುಸಹಿತಲಂದು ಹೋದರು ಇಂದು ಇವರೆಲ್ಲ
ತನು ಬಿಟ್ಟಿದ್ದರೆನಬಹುದೆಯಜ್ಞಾನಿಗಳು (?)
ತನುವಿಡಿದು ಮುನ್ನಿನವರಿಂದಾಡಿ ಹೋಗಲದ ಜನವಱಿಯರಲ್ಲಪಕಟ–ಆತ್ಮ ೨

ಪರದೇಹಿಯೆಂಬ ನುಡಿಯನು ಹುಸಿಮಾಡಿ ಗುರು
ಕರುಣದಿಂದಲಿ ಶಿವನ ತನುಜ ತಾನೆಂದಱಿದು
ಹರರೂಪ ತನ್ನ ಮಾನಸದಿಂದ ಧರಿಸಿಯಾ ಹರನೊಳಗೆ ಒಡವೆರೆದಿಹ
ಶರಣಯೋನಿಜನಲ್ಲವಾತ ಜನಿಸಿದ ತಾಣ
ಗುರುವರನ ಕರಕಮಲಸಂಗಮೇಶ್ವರ ಮಹಾ
ವರ ಪ್ರಸಾದಸ್ಥಾನವೆನಿಸುವವು ಇದು ಸಹಜ ನರರಱಿಯರಾ ಮಹಿಮೆಯ
–ಆತ್ಮ ೩

ಇಂತು ನಿಜವಱಿದಂಗಲಿಂಗದ ಸುಖದ
ಸಂತಸದ ಸಮರಸದಿ ಸಮತೆಯಿಂದನುದಿನವು
ಸಂತತಾರಾಧಿಸುವ ಶರಣ ಶಿವ ಶಿವ ಶರಣ ಕಂತುಮರ್ದನಗೆ ಎಂದೆ
ಸಂತು ಮಾಡಿಹ ತನ್ನ ತನುವನಾತಗೆ ಇಂದು
ಎಂತಾದರೇನೈಕ್ಯ ತೋಱಲಾತನು ಸಹಿತ
ಚಿಂತಾಯಕನ ಪುರಕೆ ಚಿಗಿದನೆಂಬುದೆ ಸತ್ಯಭ್ರಾಂತರಿಗೆ ತಿಳಿಯದಲ್ಲ–ಆತ್ಮ ೪

ತಾಗಿಯೇ ತನ್ನ ತನುವ ಶಿವನೊಳಗಿರಿಸಿ (?)
ಹಿಂಚಿ ತಾನಿರ್ದೇಹಿಯಾಗಿ ಶಿವನೊಳಗಾಹ
ಸಂಚಲಿಸನಿರುಳು ಹಗಲೆಂಬ ಲೆಕ್ಕಕೆ ಸಿಕ್ಕ ಪಂಚವಿಂಶತಿ ತತ್ತ್ವದ
ಸಂಚನಱಿದಂದೆ ನೀಲಗ್ರೀವ ತಾನಾದ
ಕಿಂಚಿತನೆಯೆಂದೊಂದು ಪರಿಯೊಂದು ಪರಿ (?)
ಯಂ ಚರಿಪನಲ್ಲ ಒಂದೇ ಮಾರ್ಗಿ ಶರಣಪ್ರಪಂಚರದನಱಿಯರಲ್ಲ–ಆತ್ಮ ೫

೧೩೪

ರಾಗ : ಭೂಪಾಳಿ

ಎನ್ನ ಮನವೀಗ ಸಂಸಾರದಾಸೆ ಹಿಂಗಿ
ನಿನ್ನ ನೆನಹಿಂದಲೆನ್ನನು ಮಾಱಿದೆ ದೇವಾ ॥ ಪಲ್ಲ ॥

ನೋಡಲೆಲ್ಲರಿಗೆನ್ನ ಮನದ ಹಾಗಿರು ಮನವೆ
ಮಾಡಿಕೊಂಡಿಹು[ದು] ನಿನ್ನೊಡನಾಟದ
ಪಾಡು ತನಗದೆ ನಿನ್ನ ಬಲುಹು ಸಂಸಾರವನು
ಗೂಡಲೊಲ್ಲದೆ ಅರಸು ಆಳಾಗಿದೆ ದೇವಾ ೧

ನುಡಿಯಿತಾದರೆ ನಿನ್ನ ಮಂತ್ರ ತನಗನವರತ
ನಡೆಯಿತೆಂದರೆ ನಿನ್ನ ಮೂರ್ತಿಯೆಡೆಗೆ
ಕಡೆಗೆ ತಾ ಬದುಕಿ ಬಾಳುವೆನೆಂದು ನರರಂತೆ
ನಡೆಯಿಲ್ಲ ತೊಲೆಯೂಱುಗೋಲಾಗಿದೆ ದೇವಾ ೨

ಸೋಲದಿನ್ನುಳಿದ ಪದಗಿದ ಮಾಯೆಗೀಯೆಗಾ
ಪಾಲಲ್ಲವೆನ್ನ ಮುನ್ನವೆ ಮಱಿದುದು
ನೀಲಗ್ರೀವನೆ ನಿಮ್ಮ ಒಡವೆರೆದ ಮನ ಕಿಚ್ಚಿ
ಮೇಲೇನು ಹಾಲುಂಡು ಮೇಲುಂಬುದೆ ದೇವಾ ೩

೧೩೫

ರಾಗ : ಒಡ್ಡಿ ಧನ್ಯಾಸಿ

ಏತಕೆ ನೀನುಣ[ದೆ] ಹಿಂದಕೆಯೆದ್ದೆ ಮುಂದೆ
ಜ್ಯೋತಿಸ್ವರೂಪನದೆ ಹೊದ್ದೆ ॥ ಪಲ್ಲ ॥

ಹೆದಱಿಸಿದನೊ ನಿನ್ನನಣ್ಣ ಕಂಡು
ಬೆದಱಿ ನೀ ನೋಡಿ ಹೋದೆಯೊ ಅಣ್ಣಾ
ಎದೆಬಿದ್ದುದೇನು ತಿಣ್ಣಾ ನಿನ್ನಾ
ಒದವಿದ ಚಿಂತೆಯೇನದೆ ಬಣ್ಣಾ ೧

ಮನ ಬಯಸಿತೋ ಮುನ್ನಿನಾಟವ ನಿನ್ನ
ತನು ತಗುಲಿತೊ ಮಾಯೆ ಬೇಟವ
ಧನ ತೆಗೆದುದೊ ನಿನ್ನ ನೋಟವಾ ಬೇಗ
ಎನಗೆಚ್ಚಱಿಸು ನಿನ್ನ ಮಾಟವ ೨

ಬರಹೇಳಿದನೆ ನಿನ್ನ ಶಿವನಾಗ ಬಂದು
ತಿರುಗೊ ಹೋಗೆಂದಾಡಿದೆ ಈಗ
ಮರುಳುಗೊಂಡೆಯು ಬೇಡ ಭವರೋಗವೈದ್ಯ
ವರ ನೀಲಗ್ರೀವನೊಳಿರುಹಾಗ ೩

೧೩೬

ರಾಗ: ಆಹರಿ

ಮಱಿಹಿತಲ್ಲಕಟಾ ಮಾಯಂದಿ ಮನವು ನಿಮ್ಮ
ಕುಱುಹಂ ಕಾಣದಲೇಸು ಕಾಲವೊ ಮಹಾದೇವಾ ॥ ಪಲ್ಲ ॥

ಇವೆ ಪಂಚವದನ ತ್ರಿನೇತ್ರ ದಶಭುಜಗಳಿಂ
ತಿವೆ ದ್ವಿಪಾದವರ್ಧಾಂಗದೊಳು
ಶಿವೆ ಶಿರಮಾಲೆ ಶಿರದ ಗಂಗೆ ಕರದೊಳು
ತವೆ ತಲೆಯೋಡು ನೋಡೆಂದು ತೋಱಿದರೊಮ್ಮೆ ೧

ಓಡಿದ ತ್ರಿಶೂಲವದಱ ಮೇಲೆ ಶ್ರುವದೆ
ಒಡನೆ ಪೊದ್ದಿಹ ಪುಲಿಚರ್ಮವದೆ
ಉಡಿಗೆಯು ಗ[ಜ]ಚರ್ಮವದೆ ಭುಜಗಂಗಳ
ತೊಡಿಗೆಯು ತೋರಹಾರಗಳ ನೋಡೆಂದರೆ ೨

ಮದನನ ದಹಿಸಿ ಪೂಸಿದ ಭಸ್ಮವಂಗದ
ಲದೆ ಮುಂದೆ ಮೋಕ್ಷವಾಹನವದಕೋ
ಪುದಿದ ಕಣ್ದೆಱೆದು ಕುಱುಹ ನೋಡು ಎನೆಯಿಂದು
ಮುದದಿಂದ ನೀಲಗ್ರೀವನ ಕುಂಡುದಲ್ಲದೆ ೩

೧೩೭

ರಾಗ: ಒಡ್ಡಿ ಧನ್ಯಾಸಿ

ನೀ ಹಾಗೆ ಸುಮ್ಮನಿಹುದು ಒಂದೆ ದೇವಾ
ನಾ ಹಾಗೆ ಸುಮ್ಮನಿದ್ದರೆ ಹೊಂದೇ ॥ ಪಲ್ಲ ॥

ಮನ ನೆನೆಯದೆ ನಿಮ್ಮ ನಾವಾಗ ಎನ್ನ
ತನು ನಿಮ್ಮ ಪದಕಮಲವ ಬೇಗ
ಇನಿತುವಾರಾಧಿಸದಿರುವಾಗ ದೇವಾ
ಎನಗೆ ನೀವೆರವಾಗಿರೆ ಈಗ ೧

ವಾಸನೆ ರಸ ರೂಪ ನೋಡಿರೆ ಸೋಂಕ
ಆ ಸುಶಬ್ದಾನಂದಗೂಡಿರೆ
ಲೇಸಾಗಿ ಇವನೆಲ್ಲ ಬೇಡಿರೆ ದೇವಾ
ನಾ ಸಮರ್ಪಿಸದಿರತ್ತೋಡಿರೆ ೨

ತನುವೆ ನಿನ್ನಯ ಮೂರ್ತಿಯಾಗದೆ ಎನ್ನ
ಮನವೆಯಾಱಕ್ಷರವಾಗದೆ
ಅನುದಿನ ನೀ ಸಾಹವಾಗದೆ ನಾನು
ಘನ ನೀಲಗ್ರೀವ ನೀನಾಗದೆ ದೇವಾ* ೩

೧೩೮

ರಾಗ: ಸಾಕ್ಷಿ
ತಿಳಿದುದೇನು ನಿಜವೆನಗಱುಹು ಅಪರಿವರ
ಏತಕಾಡುವೆ ಏನ ತಿಳಿಯದೆಯಾತ್ಮಾ ॥ ಪಲ್ಲ ॥

ಕತ್ತಲೆಯ ಮನೆಯ ಸಾರಿಹೆ ನಿನಗೆ ಬೆಳಗೆಳಸಿಯೆ
ಹೊತ್ತಿಸಿದ ದೀಪವಾವುದು ಹೇಳದ
ಅತ್ತಲಾ ಒಳಗೆ ನೀ ಕಂಡುದನು ಉಂಡುದನು
ಬಿತ್ತರಿಸು ಬಿಡದೆ ಬೇಗೆ ನಗೆಯಾತ್ಮಾ ೧

ಏಡಿಸುವ ದಾರನಾದರೆ ಒಂದು ಕಪಿಯೊಳಗೆ
ಕೂಡೆ ಕಟ್ಟಿಳಿಡಾತಿಹುದೊ ಹೊಱಗೆ
ಆಡುವದೊ ಕಟ್ಟು ಬಿಗಿದದಕೆ ತಲೆಯಿಲ್ಲ ತಲೆ
ಮೂಡಿಹುದೊ ಮುನ್ನಿನಂತಿಹುದೊ ಆತ್ಮಾ ೨

---

* ಈ ಹಾಡನ್ನು ಕರ್ಣಾಟಕ ಕವಿಚರಿತಕಾರರು (ಪಲ್ಲವಿಯನ್ನು ಬಿಟ್ಟು) ಉದಾಹರಿಸಿದ್ದಾರೆ ಸಂ III ಅನು ಪುಟ 28, 29

ಊಟವಾವಾಗಲಾಯಿತು ನಿನಗೆ ಹಗಲಿರುಳೊ
ಪಾಟ ತಲೆಯೊಡಿಲೊ ತಟ್ಟೆಯೊಳಗೆ
ಊಟವಾಹಾಗ ನೀಲಗ್ರೀವಗಾಯಿತೊ
ಊಟಯಿಲ್ಲವೊ ಎನಗೆ ಅಱುಹಿಸಾತ್ಮಾ ೩

೧೩೯

ರಾಗ : ಶಂಕರಾಭರಣ

ಇನ್ನೇನು ಇನ್ನೇನು ಇಂದು ನಾಳೆಗೆ [1][ಎಂ][1]ದು
ಬನ್ನಬಡುತಿಹೆ ಜೀವ ಬಳಲುತ ಭಾವ ॥ ಪಲ್ಲ ॥

ಒಂದಿನಿಸು ದಿನರಸವಾದದಭ್ಯಾಸ
ಬಂದುದೇ ಮತ್ತದನೂದಿ ಬಾಯಿಗೆ ಬಂದಿ
ಹೊಂದಿದೆ ಹಾಳುಗುಳುತ್ತ ಹೊನ್ನಿತ್ತೆಯತ್ತ
ಸಂದೆವೆ ಹಂಚಿನ ಓಡು ಸಾಲವೆ ನೋಡು ೧

ಅದಱೊಳಱಿಸಿ ಕಾಣೆ ಆಸೆಯ ಮಾಣೆ
ಒದವಿದ ವ್ಯವಸಾಯ ಒಯ್ಯನೆನೊಯ್ಯ
ಬೆದಱಿದತ್ತದ ಮಾಡಿ ಬೆಹರವಾಡಿ
ಕುದಿದೆ ಕೋಟಲೆ ವ್ಯರ್ಥ ಕೂಡಿತೇ ಅರ್ಥ ೨

ಹಲವು ದೆಸೆಗೆ ಮಹಾ ಹಾಱಿತಾ ಹೋಹಾ
ಸಲೆ ಮನಸಿನಲಾಗ ಸಾಧಿಸಿ ಬೇಗಾ
ಒಲಿದೊಂದಾಗಿಯೆ ಬಾಳು ವಾಯುವಿನೊಳು
ನಿಲ್ಲಿಸಿ ನಿಂದಿರೆ ಜೀವ ನೀ ನೀಲಗ್ರೀವಾ ೩

೧೪೦

ರಾಗ : ವರಾಳಿ

ಎನ್ನ ಮನವೆ ಆಚೆ ಈಚೆಯ ಮಾತುಕಥೆಯ
ಇನ್ನು ಬಿಡೆಯದೇಕೆನಾಚೆಯ ॥ ಪಲ್ಲ ॥

ಈತ ಬಾಳಬಲ್ಲನೆಂಬುತಾ ಏನನಱಿಯ
ಆತನೆಂದು ಆಳಿಗೊಂಬುತಾ
ಪ್ರೀತಿವಟ್ಟು ಪಲರ ನಂಬುತಾ ಲೋಕದವರ
ಮಾತವಂಹಾ ಹಲವು ಹಂಬುತಾ ೧

---

1 ಇಂ(ಮೂ)

ನೆರೆದ ಜನರು ನಿಲ್ಲದಾಡಿದ ಪಲಪು ನುಡಿಯ
ಹರಹಿ ನೀನು ಹಂತೆಗೂಡಿದಾ
ಪುರದ ಜನರ ಮುಂದೆ ನೋಡಿದ ಆಡಲೇನು
ಮರುಳು ಮನವೆ ಮಾಣು ಬೇಡಿದಾ ೨

ಮಾಲೆಯಾದ ಮಾತಹಾರದೆ ಮರುವೆಯಿಂದ
ಲೋಲರಾದ ಜನರ ಸಾರದೆ
ಮೇಲೆ ದೇಹಗುಣ ಹೋರದೆ ನೀನು ನಿತ್ಯ
ನೀಲಗ್ರೀವಾ ಎನಬಾರದೆ ೩

೧೪೧

ರಾಗ : ಸಾಕ್ಷಿ

ಏನನರುಹಿದಿರಿ ಇಂದು ಏನ ತಿಳಿದಿರಿ ಹಾಗೆ
ಏನ ಬೋಧಿಸುತಿಹಿರಿ ಪರರಿಗಣ್ಣಾ ॥ ಪಲ್ಲ ॥

ಅರುಹಿದುದೇನದು ಜಡೆಯೊ ಮುಡಿಯೊ ಚಿತ್ತವೆ ಬಾಳೊ
ಅರುಹಿದುದೇನದು ಕಾವಿ ಕಣೆಯೊ ಮಣೆಯೋ
ಅರುಹಿದುದೇನದು ದೊಡ್ಡ ರೂಪೊ ಭಸ್ಮಾಂಗವೊ
ಅರುಹಿದುದೇನದು ನೀ ರೂಹಿಂವೋ ಅಣ್ಣಾ ೧

ಇದನರುಹಿವುತಿದನೆ ಸಾಧಿಸುತಲನ್ಯರಿಗತ್ತ
ಒದವಿನೀವೊರೆ ಬೋಧೆಯೊ ಮಾಯೆಯೋ
ಹುದುವೊ ಎಂಟಾ ಏಳೊ ಆರುೊ ಐದೊ ನಾಲ್ಕೋ
ಶ್ರಿದವೊ ಬೋಧೆಯೆನದೆಂಬಿರಣ್ಣಾ ೨

ತನ್ನನರುಹಿಯದೆ ತಾನು ಇದಿರ ಬೋಧಿಸಲೇಕೆ
ತನ್ನನರುಹಿವುದು ತಾನೆ ಇದಿರ ಮರುಹಿದು
ತನ್ನ ತಾನಾಗಿ ನೀಲಗ್ರೀವನೊಳಹೊಱಗೆ
ಭಿನ್ನವಳಿದೊಂದಾಗದೆರಡನಣ್ಣಾ ೩

೧೪೨

ರಾಗ : ಧನ್ಯಾಸಿ

ನಿನಗೆ ಪರಮಾರ್ಥಸಾಧನ ಚಿನ್ನವರದಿಕೆಯು
ಅನುವನರುಹಿದೊಂದು ಸಂಸಾರಸಂತೆಯ ಮಾಡು
ತನುವೆ ಸಂಗಡ ಮಹಾಗುರುಮಾರ್ಗವಿಡಿದತ್ತ ಘನಜೋಕೆ ಕಂಡ ಆತ್ಮ ॥ ಪಲ್ಲ ॥

ಎಸವವೈಭೂತ ಪದಱಿದ ಚೀಲದೊಳು ತತ್ತ್ವ
ಮುಸುಕೆ ಮೂವತ್ತಾಱು ಕಟ್ಟಣೆಗಳವಱೊಳಗೆ
ಮಿಸುಗುತಿಹ ಮನತ್ರಾಸು ಶಿವತತ್ತ್ವ ಹನ್ನೊಂದು ಪಸರಿಸಿದ ಗುಣಗಳೊರ್ವ್ವೆ
ಒಸೆದು ಒರೆಗಲ್ಲಾಗಲಾತ್ಮ ತತ್ತ್ವದಿ ಕೂಡೆ
ಬೆಸುಗೆಯಾದಿರ್ಪಂತು ಐದು ಗುಣಗಳೆ ಮಚ್ಚ
ಸಸಿನೆಯಿವನಱಿವ ಸುಜ್ಞಾನ ಹರದನು ಮಹಾ ದೆಸೆವಂತನುಂಟು ಕಂಡ ಆತ್ಮ ೧

ವೆಂಗಿ ಹುಸಿಯಾಸೆಯೆಡೆವೆಟ್ಟುಮುಱುತರ ಕೊಲೆಯು
ಕಂಗಱುಬುತನ ಚೇತನಗಡುಕರಜಕ ಬಣ್ಣ
ಮುಂಗಟ್ಟು ಸೀಸಗಟ್ಟಿದು ಕಪಟಜ್ಞಾನದಂಗವರಿದಲೆ ತಾಮಸ (?)
ಸಂಗಳಿಸೆ ಮಿಂಚು ಮೊಳೆಯನುಮಾನವನು ಸರಿಯ
ತೊಂಗದಿವು ಮೊದಲಾದ ಕಳ್ಳನಾಣ್ಯವ ಕಳೆದು
ಹಂಗಹರಿ ರಾಜನಾಣ್ಯಗಳೆನಿಪ ಸುರಗುಣ[1][ವ][1] ಸಂಗ್ರಹವ ಮಾಡು ಕಂಡ ಆತ್ಮ ೨

ಕಡೆಯಾಣಿ ನೀನು ಪಂಚೇಂದ್ರಿಯರಿವರ್ಗಗಳ
ಸಡಗರಿಸಲೈದಾಱು ವ್ಯಸನ ಮದಗಳ ಕೂಡೆ
ಪಿಡಿಯಲೇಳುಂಟು ನವದ್ವಾರ ದಶವಾಯುಗಳ ಎಡೆಯಲೊಂಬತ್ತು (?)
ಬಿಡದೆ ಶಿವಶಕ್ತಿಯೆರಡಾಗವಱಿದವನ್ಯದೆ
ಒಡನೆ ಹನ್ನೊಂದು ಹನ್ನೆರಡು ನೀಲಗ್ರೀವ
ನೋಡುವೆರೆಯೆ ಹದಿಮೂಱು ಬಣ್ಣವಪರಂಜಿ ಕಡೆನೀ ಹಾಗೆ ಕಂಡ ಆತ್ಮ ೩

೧೪೩

ರಾಗ : ಮಲಹರಿ

ನುಡಿದಿರಿ ನೀವೊಂದೆರಡ ಮಾತನವರಿಗೆ
ಹಿಡಿದರೊಂದವರೊಂದೆತ್ತೋಡಿತೋ ದೇವಾ ‖ ಪಲ್ಲ ‖

ಮಲತ್ರಯಂಗಳ ಮಾಹೇಶ್ವರರಿಗೀವುತ ನೀವು
ಸಲೆವುಂಡು ಉಟ್ಟುಹಾಗಿರಿ ಎಂದಿರಂದೆ
ನೆಲೆಯಾದುದಿಂದ ತಮ್ಮೂಟವ ಶರಣರ್ಗೆ
ಒಲಿದೀವ ಮಾತು ಓಸರಿಸಿತೋ ದೇವಾ ೧

---

1 ಗಳ (ಮೂ)

ಹುಸಿಯೊಂದ ಬಿಡಿ ಸತ್ಯವನು ಒಂದ ಹಿಡಿಯೆಂದು
ಒಸೆದು ನಿರೂಪ ನಿಮ್ಮಿಂದಾದುದಂದೆ
ಹುಸಿಯೊಂದ ಹಿಡಿದರವರು ಸತ್ಯ ತಾನಾವ
ದೆಸೆಯಲಿಹುದೊ ವೇಷವಾಯಿತೋ ದೇವಾ ೨

ಕರಕಮಲದಿ ನಿಮ್ಮ ಬಿಡದೆ ಕಂಡೊಳಗಾಗ
ಬೆರೆದಿರೆಂದಿರಿ ನೀಲಗ್ರೀವ ನೀವಂದೆ
ಕರಕಮಲದೊಳಿರಿಸಿದರು ಮತ್ತೊಳಿಯಿಕೆ
ಕರೆದರೊಲ್ಲಿರೊ ಕರೆಯರೊ ತಾವು ದೇವಾ

೧೪೪

ರಾಗ: ಧನ್ಯಾಸಿ

ಮನ ನಿಮ್ಮ ತಾಳಿಕೊಂಡಿಹುದತ್ತ ಶಿರದೊಳು
ಮಾನ ನಿಮ್ಮನೆತ್ತಿಳುಹುತ್ತಿಹುದು ಕರಕಮಲದೊಳು
ಮನ ನಿಮ್ಮನಾಡಿಸುತ್ತಿಹುದು ಸರ್ವಾಂಗದೊಳು ಮನ ನಿಮಗೆ ತಾಯೆ ಹೇಳು
–ದೇವಾ ॥ ಪಲ್ಲ ॥

ಮನದಿಂದ ನೀವು ಜನಿಸಿದಿರಾಗಬೇಕದಕೆ
ಮನ ನಿಮ್ಮ ಹೆರಿ ಹಿಂಗದಿಹುದು ಮರುಕದಲದಕೆ
ಮನ ತೊಟ್ಟಿಲಾಗಿ ಮನಸಿಗೆ ಶಿಶುವು ನೀವದಕೆ ಮನಮೆಲ್ಲ ನಿಲ್ಲದಕೆ
ಮನದಿಷ್ಟರೂಪು ನೀವಾಗಿ ತೋರುವಿರಾಗ
ಮನವಿದ್ದರಲ್ಲಿ ನೀವಿಹಿರಿ ನೀವಿದ್ದಾಗ
ಮನವಿಹುದು ಸಹಜವಾ ಸೂಜಿದಾರದ ಹಾಗೆ ಮನ ನಿಮ್ಮ ಕೂಡ ಬೇಗ–
ದೇವಾ ೧

ಮನ ನಿಮಗೆ ದಿವ್ಯಗಂಧವನರಿಕೆ ಮಾಡುವುದು
ಮನ ನಿಮಗೆ ಷಡುರಸದ ಸವಿಯರುಣಿಸುವುದು
ಮನ ನಿಮಗೆ ಲೇಸಾದ ರೂಪು ನೆರಿ ತೋರುವುದು ಮನಸೋಂಕು ತಾಗಿಹುದು
ಮನ ನಿಮಗೆ ಒಳ್ಳಿತಹ ಶಬ್ದವದು ಕೇಳಿಸುತ
ಮನ ನಿಮ್ಮ ಪರಮ ಸುಖದೊಳಗೆ ಓಲಾಡಿಸುತ
ಮನವೆರಿಯ ಮರುವಕ್ಕ ನೀಮಂತೆ ಊಡಿಸುತ ಮನ ನಿಮಗೆ ಇವ ನಡೆಸುತಾ–
ದೇವಾ ೨

ಮನ ಹೆಚ್ಚುವುದು ನಿಮ್ಮ ಮೂರ್ತಿಯಂ ನೋಡುತ್ತ
ಮನ ಮುಚ್ಚುವುದು ನಿಮ್ಮ ಧ್ಯಾನವಂ ಮಾಡುತ್ತ
ಮನ ಸೂಜಿಕಲ್ಲಿದಿರ ಸೂಜಿಯಂತಾಡುತ್ತ ಮನ ಮಹಾ ನಲಿದಾಡುತ
ಮನ ನಿಮಗೆ ಹೆತ್ತತಾಯಾಗಿ ನಿಂದಿಹ ಭಾವ
ಮನಸಿಜನೆ ನೀನೆಯಹುದಹುದು ನೀಲಗ್ರೀವ
ಮನಸಿಜನು ಮನಸಿಜನೆಯಲ್ಲ ತಾನವ ಕಾವ ಮನಸಿಜನು ನೀವೆ-ದೇವಾ ೩

೧೪೫

ರಾಗ : ಆಹರಿ

ಕಳೆಯಲಾವುದು ಕಾಲವ ಶಿವ ನಿಮ್ಮ
ತಿಳಿಯದತಿವಿಧಜ್ಞಾನ ಮಾನವರೊಳು ॥ ಪಲ್ಲ ॥

ತಲೆಯ ತಾವೀವರಾ ಮಾರಗೆ ಮುಂಡವ
ಸಲೆ ನಡೆಸುವರು ಕಾಲನ ಪುರದೆಡೆಗೆ
ಹಲವು ಕಾಲವು ಇದೆ ಬದುಕ ಮಾಡುವ
ತಲೆ ಹೋಕರಾದ ತಾಮಸ ಜನರಿದಿರೊಳು ೧

ಹಗಲುಗತ್ತಲೆಯಾಗಿ ರಾತ್ರೆಯಂ ಹಾದಿಯ
ಹಗಲಾಗಿ ಹಿಡಿದು ಹರಿದು ನಿಮ್ಮ ದೇವಾ
ಬಗೆಯ ಭಕ್ತರದೊಂದು ಪರಿಯ ಕಾಣದೆ
ನಗುತ ನಾಚಿಸುತ ನಿಂದಿಪ ನಿಶಾಚರರೊಳು ೨

ಒಂದೆ ಎರಡೆ ಮೂಱು ನಾಲುಕೆ ಮಾಯೆಯ
ಕೊಂದಾಟ ಕೊಸಱು ಕೋಪವು ಕೊಬ್ಬು ಬಹಳ
ತಂದೆ ನೀಲಗ್ರೀವ ಈಕೆಯ ಮಾಟವ
ಕುಂದಿಸಿ ಕೂಡೆ ನಿಮ್ಮವರ ರಕ್ಷಿಸು ಬೇಗಾ ೩

೧೪೬

ರಾಗ : ಧನ್ಯಾಸಿ

ಕೆಱೆಯೊಡೆದುದಾಗರ ಸಂಸಾರ ಕಟ್ಟಳಿದೊಮ್ಮೆ
ಅಱಿದ ಶಿವಜ್ಞಾನಿ ಸಂಸಾರವಿರಹಿತನಾಗೆ
ಕೆಱೆಯೊಡೆಯಿತೆಂದು ಎನಬಹುದು ಮನುಜರ ಕಟ್ಟುಗೆಱೆಯೊಡೆದರೇನು
ಕಂಡಾ-ಆತ್ಮ ॥ ಪಲ್ಲ ॥

ಕಟ್ಟಿ ಸಂಸಾರ ಕೆಱೆಯಿರಲು ಸುಜ್ಞಾನ ತಾ
ನಟ್ಟನಡುವಾಗಡುಂಬೆದ್ದು ಕೋಱೆಯಲು ಏರಿ
ಒಟ್ಟಬಯಲಾಗೆ ವೈರಾಗ್ಯಜಲ ಹರಿದೈದೆ ಒಟ್ಟೈಸಿ ಒಡಲುವಿಡಿದ
ಕೆಟ್ಟಗುಣವೆಂಬ ಜಲಚರನಿವಹ ಕಡೆಗಾಗೆ
ನಿಟ್ಟಿಸಲು ಸತಿಸುತರು ಮಿತ್ರಬಾಂಧವರೆಂಬ
ತಟ್ಟಿ ಮುಟ್ಟುವ ಮೊಸಳೆ ಬಸವಳಿಯಲವು ಬೇಗ ಕಟ್ಟು ಹೀಗಳೆಯಲರಿದು–
ಆತ್ಮ ೧

ಹರಿಯಲಾ ಜಲ ಮಹಾಲೀಲಾ ವಿಗ್ರಹವೆಂಬ
ವರನದಿಯ ಬೆರೆದು ಭೋರೆನುತಾಗಲಾ ಜನನ
ಮರಣವೆನಿಸುವವೆರಡು ತಡಿಯು ಸವರುತ ಕೂಡೆ ಇರದೆ ಅಜ್ಞಾನವೆಂಬ
ನೆರೆದ ಪಂಕವ ಕದಡಿಯುಱುಹು ಮಱಹೆಗಳೆಂಬ
ಪಿರಿದಾದ ಕಮಠ ಮಂಡೂಕಗಳ ಕೆಡೆಯೊಡೆದು
ಹರಿವುದರಿಂದಿಂತು ಕಟ್ಟಳಿದು ಇಂತಲ್ಲದಾ ನರರ ಕಟ್ಟಳಿವುದರಿದೆ ೨

ಬಿಡದೆ ಸಂಕಲ್ಪ ವಿಕಲ್ಪವೆನಿಸುವತ್ತೊಳಿ
ವಡೆ ವಾರಿಜಾಯಿಲಗಳವುಕಿಯಟ್ಟು[ತ]ಲತ್ತಾ
ಮೃಡನೊಳೊಡವೆರೆದ ಮೂಲ ಶರಣರೆನಿಸುವ ನಾನಾ ಗಡಣವಾಗಿಹ ನದಿಗಳ
ತಡೆಯಂದೊಡಗೂಡಿಯುಱುರುವಣಿಸಿ ಅಘತರುಕುಲವ
ಒಡನೆ ಕೆಡಹುತ ಮೂಲ ಸಹಿತ ಕಿತ್ತಡಿ ಮಾಡಿ
ಕಡೆಗೆ ನೀಲಗ್ರೀವನೆಂದೆನಿಸುತಿಹ ಕಡಲನತ್ತದೆ ಕೂಡಲು ಆತ್ಮ ೩

೧೪೭

ರಾಗ: ಮಲಹರಿ

ನೆರೆದು ಮುತ್ತಿದವೇತಕೆ ಶಿವ ಶಿವಾ
ನರೆಗುಱಿಯೆನಿಸುವ ನಾನಾ ಜೀವಿಗಳಿಗೆಲ್ಲಾ ॥ ಪಲ್ಲ ॥

ಕರಿದು ಬಿಳಿದು ಧೂಮ್ರವರ್ಣವ ನೋಡಲು
ಪರಿಯಿಂದ ಬಾಹಿರ ದೋಷ ಮೂಱು
ಬೆರೆದ ಬಣ್ಣದ ಬಹುಜ್ಞಾನವ ಮುಸುಕಿಹ
ಹೊರೆಯದ ಹೊಸ ತುಪ್ಪುಳದ ತುಟ್ಟಗುಱಿಗಳು ೧

ತುಡುಕಿ ತಡೆದು ಕಚ್ಚಿ ಕೂಗುವ ನಾಯ್ಗಳು
ಎಡೆಯಾಡುತಿಹವು ಕಾತರ ಪಂಥವಾಸಿ
ಹಿಡಿದುರುವಣಿಗಾಟಿರೆಂಬಾ ತಗರಾಗ
ಬಿಡದೆ ಹಾಯ್ದುತ ಭೀತಿದೋಟಿ ಕುಟಿಗಳೊಳು ೨

ಹಿಂದಣಾಯುಸ ಮುಂದುಗಾಣದ ಕುಬುಬರೆ
ಕುಂದದ ಕುಟಿಗಳೊಡೆಯರು ಆ ಪಡೆಯ
ತಂದು ತಲೆಯ ಕಡಿಯಲು ಕಾವ ಕಾಲನು
ಸಂದಿಲ್ಲದೆಳಸೆ ಸಾಗದೆ ನೀಲಗ್ರೀವಾ ೩

೧೪೮

ರಾಗ : ಭೈರವಿ ಪಂತು

ಈತ ತಾನೀಗ ಜಿತೇಂದ್ರಿಯ ನಮ್ಮ
ಈತನಾಚರಣೆಯೆಂಬುದೆ ಪರ ಬೊಮ್ಮ ॥ ಪಲ್ಲ ॥

ವಿಾಸಲಾಗಿಯೆ ಗಂಧ ರಸ ರೂಪುಗಳನು
ಹೊಗದೆ ಸೋಂಕು ಶಬ್ದಾದಿಗಳನು
ಲೇಸಿನಿಂದೀಶಗಿತ್ತಾನಂದಗಳನು
ಆ ಸದಾಶಿವನೊಳಡಗಿದಗ್ಗಳನು ೧

ಹರಿಯಜಸುರರ ಚಿತ್ತವ ಸೆಳೆಕೊಂಬ
ಪರಸಿದ್ಧ ಮುನಿಗಳೆಲ್ಲರ ಬುದ್ಧಿಗೊಂಬ
ನರ ನಾಗ ದನುಂಜರಧಟ ಕೊಳುಗೊಂಬ
ಸ್ಮರನ ಜಯಿಸಿದ ಶಿವನ ಪ್ರೀತಿಗೊಂಬ ೨

ನಾದವಿಡಿದು ಬಿಂದು ತಾನೆಯಾದ
ಸಾಧಿಸಿ ಕಳೆಯ ಕಾರಣ ರೂಪನಾದ
ಮೂದೇವರೆನಿಸಿ ನವವಿಧ ದೇವರಾದ
ಆದಿಮೂರುತಿ ನೀಲಗ್ರೀವ ತಾನಾದ ೩

೧೪೯

ರಾಗ : ಮೇಚ ಬಹುಳಿ

ಹಿಂದೆ ನಾಮುದ ಮುಖತನದಿ ತಪ್ಪಿದೆ ತಪ್ಪ
ಇಂದದ ಮುಟಿದು ರಕ್ಷಿಸು ಗುರು ತಂದೆ ॥ ಪಲ್ಲ ॥

೧೨೬

ನಡೆಯಬಾರದ ನಡತೆ ನಡೆವುತ ಎಂದು
ನುಡಿಯಬಾರದ ನುಡಿಗಳ ನುಡಿದಕಟಾ
ಹಿಡಿಯಬಾರದಕೃತ್ಯಗಳ ಹಿಡಿದಾಡಿದ
ಕಡುಮೂರ್ಖನೆನ್ನ ಕೊಲ್ಲದೆ ಕಾಯೆನ್ನಾಳ್ದಾ ೧

ಕಾತರ ಕಲ[1][ಹ][1] ಕಪಟ ಕಡು ನಿಷ್ಠೂರ
ಘಾತಕ ಗರ್ವಿ ಗಾರುಡ ಗಜಬಜೆಯು
ಮಾತಿನ ಮತ್ತಮನುಜಮದಡನು ಎಂದು
ನೀತಪೇಚಿದು ರಕ್ಷಿಸು ಎನ್ನ ಒಡೆಯಾ ೨

ಕಂದನಿಗಳುಗಂಧ ಬೇಡ ಬಾಲ್ಯದೊಳತ್ತ
ಹಿಂದೆ ನೀನಾಡಿದಾಟಗಳೆಲ್ಲವೆಮ್ಮ
ಛಂದದ ಲೀಲೆಯೆಂದವನು ಇಲ್ಲವ ಮಾಡಿ
ತಂದೆ ನೀನೇ ರಕ್ಷಿಪೆ ಚೆನ್ನಬಸವಾ ೩

೧೩೦

ರಾಗ : ತೆಲುಗ ಕಾಂಬೋಧಿ

ಇಲ್ಲಿದ್ದರೇನು ನಾನಲ್ಲಿದ್ದರೇನು ಮ
ತ್ತೆಲ್ಲಿದ್ದರೇನು ಮಹಾದೇವ ನಿಮ್ಮವರೊಳು ॥ ಪಲ್ಲ ॥

ಪರದೆಡೆಯೊಳು ಪ್ರಭುಸಂಗನ ಬಸವಣ್ಣ
ವರ ಚೆನ್ನಬಸವನಾ ಸಿದ್ಧರಾಮ
ಕರುಣಾಬ್ಧಿ ಹಡಪದಪ್ಪಣ್ಣ ಮರುಳಶಂ
ಕರದೇವ ಮಡಿವಳರವರುಘ್ರ್ರ ಎನಗಿರೆ ೧

ಇಹದೊಳಗಾ ಮೂರ್ತಿಗಳೆ ಶಿವತತ್ತ್ವದ
ರಹಸ್ಯಾರ್ಥವ ಮೋಕ್ಷಸಾಧಕರಿಗೆ
ಸಹಜವಾಗಿಯರುಹಲೋಸುಗ ರೂಪುವಿಡಿದಿಹ
ಮಹಾ ಮಹಿಮರ ಪದಯುಗವೆನಗಿರುತಿರೆ ೨

ಬಿಡದಿಹ ಪರದೆಡೆಯೊಳು ನಿಮ್ಮ ಶರಣ
ಪಡುಗ ಪಾವುಗೆ ಪಾದುಕೆಗಳ ಬೇಗ
ಪಿಡಿದು ನಿಂದಿಹವೂಳಿಗವೆನಗಿರಲೊಮ್ಮೆ
ಒಡನೆ ಮತ್ತೆನಗಿಲ್ಲಿಯಲ್ಲಿ ನೀಲಗ್ರೀವಾ

[1] ಹಿ (ಮೂ)

೧೫೧

ರಾಗ : ಮಲಹರಿ

ಬಲ್ಲವರೆನಿಸಿಕೊಂಬರು ಬಹುಮುಖರೆಲ್ಲಾ
ಬಲ್ಲವರಹರೆ ಭಕ್ತಿಗೆ ದೂರರೆಲೆ ದೇವಾ ॥ ಪಲ್ಲ ॥

ಬರದೆ ಓದಿದೆವು ಪಠಿಸಿದೆವೆಲ್ಲ ಛಂದದ
ವರ ಶಾಸ್ತ್ರಾಗಮಗಳ ನೋಡಿದೆವೆಂದು
ಹೊರೆಯೇಱಿ ಹಮ್ಮುದಿಮ್ಮಿಯೆ ಹೊಲಬಱಿಯದೆ
ಪರರ ನಿಂದಿಸಿ ಪಲುಂಬುತ ಪಲರೇತಕೆ

ಬಿಡದೈದಾಱಿಯೇಳೆಂಟಱ ಮಾಟಕೆ
ದೃಢಚಿತ್ತ ಬುದ್ಧಿ ನಿರಹಂಕಾರ ಮಾನಸ
ಒಡಲಱಿಯದೆ ಮೂಱುಗೊಟ್ಟಧಮರು ಬಾಯ
ಬಡಿವುತ ಬಯಲ ವಾಗ್ಜಾಲದಿಂದೇತಕೆ ೨

ಮುಱಿದೊತ್ತಿ ಹಮ್ಮವೆಂಬುದನು ಸದ್ಭಕ್ತರ
ನೆಱೆ ನಂಬಿ ಭಕ್ತಿವಿಡಿದು ತಮ್ಮ ನಿಜವ
ನಱಿದವರುಗಳೆ ಬಲ್ಲವರಲ್ಲದೆ ಬೇಱೆ
ಬಱಿಮುಖರೆಲ್ಲ ಬಲ್ಲಹರೆ ನೀಲಗ್ರೀವಾ ೩

೧೫೨

ರಾಗ : ಭೈರವಿ ಪಂತು

ಅಕ್ಕಟ ಭಕ್ತ ಭವಿಯ ಕೂಡಬಹುದೆ
ಮಕ್ಕಳಾಟಿಕೆಯ ಮಾರ್ಗವ ನೋಡಬಹುದೆ ॥ ಪಲ್ಲ ॥

ಮಾರುತನೆಡೆಯು ಜ್ಯೋತಿಯ ನೀಡಲುಂಟೆ
ಪಾರದ ವಹ್ನಿಯೊಳಗೆ ನಿಲಲುಂಟೆ
ವಾರಿಯೊಳಗೆ ಮಧುವಿಗೆ ಇರಲುಂಟೆ
ಪಾರಮಾರ್ಥಿಗೆ ಯಜ್ಞರ ಯೋಗವುಂಟೆ ೧

ಮುಸುಂಕಿದ ಮೂಱು ಮಲಕೆ ಮಾಱುಹೋದ
ಎಸಗಿದ ತನುಗುಣಗಳಿಗೊಳಗಾದ
ಹುಸಿಯೊಂದು ರೂಪುವಿಡಿದು ದೇಹವಾದ
ಅಸಮಾನ ಭವಿಯೆ ಭಕ್ತರಿಗೆ ಪ್ರಮಾದ ೨

ಇಂತು ಭಕ್ತರು ಭವಿಗಳ ಕೂಡರಲ್ಲ
ಎಂತಾದರೆ ಕೂಡಲು ನೋಡರಲ್ಲಾ
[1][ಮುಂ][1]ತವರನು ನೋಡೆ ಮಾತಾಡರಲ್ಲ
ಚಿಂತಾಯಕ ನೀಲಗ್ರೀವನೆ ಬಲ್ಲ ೩

೧೫೩

ರಾಗ : ದೇಶಿ

ನಿನ್ನ ಕರುಣದಿಂದ ನೀನೆ ರಕ್ಷಿಸುತಿಹೆ
ಎನ್ನವಗುಣವ ನೋಡದೆ ಮಹಾದೇವಾ ॥ ಪಲ್ಲ ॥

ಪಿಡಿದು ಬಿಡದೆ ಕೀಟವ ತಂದು ಭ್ರಮರ ತಾ
ನೊಡನೆ ತನ್ನಂತೆ ಮಾಡುವ ತೆಱದಿ
ಮೃಡನೆ ನೀನೆನ್ನ ಮೂರ್ಖನು ಮೂಢನೆಂದೊಮ್ಮೆ
ಕಡೆಗೆ ನೂಕದೆ ಕೊಂದ ಎಂದು ಮನಸು ಸಂದು ೧

ನೆಟ್ಟನೆ ಪರುಷವೆಂಬುದು ನೆಱೆ ಲೋಹವ
ಮುಟ್ಟಲಾಕ್ಷಣ ಹಿಮವಹ ಪರಿಯ
ಕಟ್ಟೊಡೆಯ ನೀನೆನ್ನ ಕಪಟ ಕ್ಷುದ್ರನು ಎಂದು
ಬಿಟ್ಟಿಮಾಡದೆ ಬಾಲಕನೆ ಬಾ ಬಾ ಬಾಯೆಂದು ೨

ನೋಡಲಾ ಕೀಟ ಲೋಹವು ತುಂಬಿ ಪರುಷವ
ಬೇಡಿಕೊಂಡವೆ ತಮ್ಮನತಿಶಯವ
ಮಾಡೆಂದು ಎನ್ನ ನಂಬುಗೆಯೇನು ದೃಢವೇನು
ಕೂಡೆ ನಿನ್ನಣುಗನೆಂದಱಿದು ನೀಲಗ್ರೀವಾ ೩

೧೫೪

ರಾಗ : ಭೈರವಿ ಪಂತು

ಏತಕೆ ಹೊತ್ತುಗಳೆವುತಿಹರಣ್ಣಾ
ಭೂತೇಶ್ವರನಡಿವಿಡಿಯಲದಣ್ಣಾ ॥ ಪಲ್ಲ ॥

ಬೇಸಾಯ ಒರ್ದುಕು ಬೇಹಾರವೆನುತೊಮ್ಮೆ
ಮೋಸದಿಂ ಸಕಲ ಉದ್ಯೋಗದಿಂದೊಮ್ಮೆ
ಹೇಸದೆ ಪರರ ಚಾಕರಿಯಿಂದವೊಮ್ಮೆ
ಆ ಸಸಿಧರನನರ್ಚಿಸಲೊಲ್ಲದೊಮ್ಮೆ ೧

[1] ಮುಂತವರನ್ನೂ ನೋಡೇರಲ್ಲ ಮುಂ (ಮೂ)

ಸತಿ ಪುತ್ರ ಮಿತ್ರ ಬಾಂಧವರುಗಳೆಂದು
ಮತಿಯನವರಿಗೆ ಮಾಣದೆ ಮಾಱಿಯೊಂದು
ಗತಿಯ ಕಾಣದೆ ಗಾತ್ರವು ನೆಲೆಯೆಂದು
ಜತನದಪ್ಪುವರೆ ದೇವ ಮಱಿದಿಂದು ೨

ಹಲವು ವ್ಯಾಪ್ತಿಯ ಹರಾವರಿಯಿಂದ ಬೇಗ
ಹೊಲಬುಗೆಡದೆ ನಿಮ್ಮ ನಿಜವನು ಬೇಗ
ನೆಲೆಯನಱಿದು ನೀಲಗ್ರೀವನ ಬೇಗ
ಒಲಿದೊಡಗೂಡಿ ಬಲ್ಲರೆ ನೀವು ಬೇಗ ೩

೧೫೫

ರಾಗ : ಮೇಚ ಬಹುಳಿ

ಏನೇನ್ನಬಹುದಿನ್ನು ಈ ಮೂರ್ಖ ಮನುಜರ
ಏನೆಂಬುದಕಸದಳ ಮಹಾದೇವಾ ॥ ಪಲ್ಲ ॥

ಅಱಿಯರು ಸಹಜವಿಡಿದು ನಿಮ್ಮ ಮಹಿಮೆಯ
ಅಱಿಯದರೆನಱುಹಿದರೊಡಂಬಡರು
ಅಱಿಯುದಿರವು ಒಡಂಬಡದಿರಲೆನೊಮ್ಮೆ
ಅಱಿಯುದವರುಗಳ ನಿಂದಿಸುವದ ಬಿಡರು ೧

ನೆಲೆಯನಾಡಿದರೆ ನಿಷ್ಠುರವ ತಾಳ್ವರು ತಮ್ಮ
ನೆಲೆಯನೇನೆಂದಱಿಯರು ಶಿವ ನಿಮ್ಮ
ನೆಲೆಯನುತ್ತವರಱಿಯರು ನಿಮ್ಮವರುಗಳ
ನೆಲೆಯನಱಿಯದೆ ನಿಂದಿಸುವರೇಕಕಟಾ ೨

ಏತಕೆ ನಿಮ್ಮ ಮೂರ್ತಿಯ ನೆನೆಯದೆ ಮತ್ತೆ
ಏತಕೆ ನಿಮ್ಮ ಮಂತ್ರವನುಚ್ಚರಿಸದೆ
ಏತಕೆ ನಿಮ್ಮನರ್ಚಿಸಲೊಲ್ಲದನುದಿನ
ಏತಕೀ ಲೋಕ ಬಱಿದೆ ನೀಲಗ್ರೀವಾ ೩

೧೫೬

ರಾಗ : ಮೇಚ ಬವುಳಿ

ಬಿಡದಿರಿದೊಂದು ಶೀಲವ ಮಿಕ್ಕ ಶೀಲವ
ನಡೆಸು ನಡೆಸದೆ ಮಾಣಲೆ ನೀನು ಆತ್ಮಾ ॥ ಪಲ್ಲ ॥

ಹುಸಿಯು ನುಡಿಯದೆ ಹಿಂಸೆಯನು ಮಾಡದೆ ಮನ
ಮುಸುಕದೆ ಪರಸುಂದರಿಗೆ ಪರಧನಕೆ
ಗಸಣಿಗೊಳ್ಳದೆ ಗರ್ವ ಪರ್ವತಕಡರದೆ
ಸಸಿನೆ ಸತ್ಯವನೆ ಸಾಧಿಸು ಸಂತತಾತ್ಮಾ ೧

ವಿರಸ ನಿಷ್ಠುರನು ಎಂದರೆ ಸರಸನು ಮಹಾ
ಕರುಣೆಯೆಂದರೆ ನೆರವಿಯು ಜನರೊಮ್ಮೆ
ಇರದದ ನೀನು ಲಾಲಿಸಿ ಹಿಗ್ಗಿತಗ್ಗದೆ
ತರಹರಿಸಿಯೇ ತಣ್ಣಗಿರು ಕಂಡ ಆತ್ಮಾ ೨

ಒಡನೆ ಸುಜ್ಞಾನಾಂಬು ತುಂಬಿದ ಮನವೆಂಬ
ಕೊಡನ ಬಾಯನು ಕಾಣಗೊಡದೆ ಈ ದೇಹ
ಹಿಡಿದವಗುಣಗಳೆನಿಪ ಭವಿನಿವಹಕೆ
ಕಡೆಯಾಗಿ ನೀಲಗ್ರೀವನೊಳಿರು ಆತ್ಮಾ ೩

೧೫೭

ರಾಗ : ತೆಲುಗ ಕಾಂಭೋದಿ

ಮಾಡುವ ಕಜ್ಜವಾವುದು ಬೇಡಿ ನೀನೆನ್ನ
ಮೂಢ ಮನವೆ ಓಂ ನಮಃ ಶಿವಾ ಶಿವಾಯೆನ್ನು ॥ ಪಲ್ಲ ॥

ಸಾಧಿಸಿ ಸಕಲ ರಾಜ್ಯವನೆಲ್ಲ ಸರಿಮಿಗಿ
ಲಾದ ನೃಪರ ನಿವಹದೊಳೊಡನೆ
ಕಾದಿ ಜಯಿಸಿಯಾಣವಮಲಕ್ಕೊಮ್ಮುಖ
ವಾದ ಭೂಭುಜರಂತೆ ನಿನಗೆ ತೊಡರುಂಟೇ ೧

ನುಡಿದಂತೆ ನೂತನ ಕೆಲಸದಾಭರಣವ
ತೊಡಿಸಿ ತರುಣಿಯರ ಸಂಭ್ರಮದೊಳೊಮ್ಮೆ
ಬಿಡದೆ ಬಾಳುವ ಮಾಯಾ ಮಲದ ಬಿತ್ತುಗಳಂತೆ
ತೊಡರು ತೊಡಕು ತೊಳಸೆನು ನಿನಗುಂಟೇ ೨

ಹತ್ತಕ್ಕೆಪ್ಪಣ ಹಾರ ವಡ್ಡಿದ್ರವ್ಯಕೆ ನೆಲ್ಲಂ
ಹತ್ತಕ್ಕೀರೆಂಟ ಹದಿನೆಂಟು ಎಂದು
ವಿತ್ತ ಗಳಿಸಿ ಕಾರ್ಮಿಕಮಲಕತಿ ಸಂದ
ವಿತ್ತೇಶರಂತೆ ನಿನಗೇನು ಜಂಬರವುಂಟೇ ೩

ಒಪ್ಪುವಾಣವ ಮಾಯ ಕಾರ್ಮಿಕಮಲ ಮೂಱ
ತಪ್ಪಿಯಗಲದೆ ನಾನಾ ಪರಿಯ
ಸೊಪ್ಪುಳಾಗುತ ಸರ್ವ ಉದ್ಯೋಗವಿಡಿದಿಹ
ಅಪ್ಪುಗಳಂತಾವ ಆಯಾಸ ನಿನಗುಂಟೇ ೪

೧೩೮

ರಾಗ : ?

ಎಲೆ ದೇವ ನಿಮ್ಮ ನಾನೇನ ಬೇಡುವನಲ್ಲ
ನೆಲೆಗೊಳಿಸೆನ್ನ ಮನಸ ನಿಮ್ಮಂಘ್ರಿಯೊಳು ॥ ಪಲ್ಲ ॥

ಸುರಪತಿಯ ಭೋಗ ಸುವರ್ಣಗರ್ಭನದೊಂದು
ಹಿರಿಯತನವು ಪೀತಾಂಬರನೈಶ್ವರ್ಯ
ವರ ರುದ್ರಪದಗಳೆಲ್ಲವನು ಇತ್ತವನೆನ್ನ
ಹರಿವ ಮನಸ ನಿಮ್ಮ ಪದದೊಳಿಟ್ಟರೆ ಸಾಕು ೧

ಹಲವು ಪರಿಯ ವ್ರತ ಜಪ ನೇಮ ನಿತ್ಯವ
ಸಲೆಯಾ[ರಾ]ಧಿಸಿ ಬಯಸಿದರಾರಿಗೊಮ್ಮೆ
ಒಲಿಯದ ಮೋಕ್ಷಾಂಗನೆಯನಿತ್ತವನೆನ್ನ
ಚಲಿಪ ಮನ ನಿಮ್ಮ ಚರಣದೊಳಿಡೆ ಸಾಕು ೨

ತನುಗುಣಗಳ ನಿವಹದೊಳಾಡಲೀಯದೆ
ಮನುಜರ ಬಱಿಯ ಮಾತಿನ ಮಾಲೆಯೊಳಗೆ
ಇನಿಸು ನಿಲ್ಲಿಸದೆನ್ನ ಮನಸ ನೀಲಗ್ರೀವಾ
ವಿನಯದಿ ನಿಮ್ಮ ಪಾದದೊಳು ನಿಲಿಸಲು ಸಾಕು ೩

೧೩೯

ರಾಗ : ಆಹರಿ

ಎಂದಿಗಾದರೆ ಯಾವ ಕಾಲಕಾದರೆಯೊಮ್ಮೆ
ಹೊಂದಲಱಿಯದು ಮೂರ್ಖರಿಗೆ ಮೋಕ್ಷವು ಆತ್ಮಾ ॥ ಪಲ್ಲ ॥

ಸ್ಥಿರವಲ್ಲ ಈ ಕಾಯ ಈ ಲೋಕ ಸಿರಿಯೆಂದು
ಗುರುವರ ಮೂಱು ಮಲವ ಹಿಂಗಿಸಿ
ಇರದೆ ಬೋಧಿಸಿ ನಿಜಪದ[ವ]ನಱುಹಲದು
ಸರಕುಮಾಡದೆ ಸಲೆ ಮಱೆದ ಮಂಗಲಗಳಿಗೆ ೧

ಮುಸುಕಿದ ತನುಗುಣಗಳ ಜಯಿಸುತ ನಾನಾ
ದೆಸೆಗೆ ಸಂಚರಿಪ ಮನಸ ನಿಲ್ಲಿಸಿ
ಬಿಸಿಗಣ್ಣ ಪೂಜೆ[ಯ] ಮಾಡೆಂದು ಸದ್ಗುರು
ಉಸುರಿದ ವಚನವ ಮೀಟಿದಜ್ಞರುಗಳಿಗೆ ೨

ಹರಶರಣರ ಸೇವೆಯ ಮಾಡುತಾವಾಗ
ಕರುಣವಾರುಧಿ ನೀಲಗ್ರೀವನೊಳು
ಬೆರದೇಕಾರ್ಥವಾದರಿಗಲ್ಲದೆ ಮೋಕ್ಷ
ಗುರುವಾಕ್ಯವನು ಮಿಕ್ಕ ಭ್ರಷ್ಟಭ್ರಾಂತರಿಗುಂಟೆ ೩

೧೩೦

ರಾಗ : ಮಲಹರಿ

ನಿಲ್ಲದೀ ನೀಚ ಮನಸು ಮಂತ್ರದೊಳಗೊಮ್ಮೆ
ಎಲ್ಲಿಗಾದರು ಹರಿವುತಲಿದೆ ಮಹಾದೇವಾ ॥ ಪಲ್ಲ ॥

ಎಡೆವಿಡಿದೆಲ್ಲ ಕಾಲವು ನಿಮ್ಮ ಸ್ಮರಣೆಯ
ಒಡನೆ ಮಾಡಲೊಲ್ಲದು ನಾಡ
ನುಡಿಯಲೊಂದು ನೂರು ನಾಲಗೆಯಾಗಿ
ಬಿಡದೆ ಬಳ್ಕುಡಿಗುಟ್ಟುತಿಹುದೆನ್ನ ಮನಸೊಮ್ಮೆ ೧

ಜಗದಗಲಕೆ ಜಾರಿ ಹೋಹದು ಲೆಂಗಿಸಿ
ಮುಗಿಲುದ್ದಕೆ ಮುಟ್ಟುತಿಹುದು ತಾ ಹಾರಿ
ಜಗದಾದಿ ದೇವ ನಿಮ್ಮರಿಯ ದಿವ್ಯಮಂತ್ರವಾ
ಬಗೆಯಂದಿಹುದು ಭಂಡ ಬಕುಳಿ ಮನಸೊಮ್ಮೆ ೨

ಕದಡುತಿಹುದು ಕಾಯಗುಣಗಳೆಲ್ಲವ
ಮುದುಡುತಿಹುದು ಸುಜ್ಞಾನದಂಬರವ
ಮದನಾರಿ ನೀಲಗ್ರೀವನೆ ನಿಮ್ಮ ಮಂತ್ರವ
ಮುದದಿಂದ ನಿಮ್ಮ ನೆನೆಯಲೊಲ್ಲರು ಮೂರ್ಖ ಮನಸೊಮ್ಮೆ ೩

೧೩೧

ರಾಗ : ಆಹರಿ

ಇನ್ನೇನು ಬೇಡಿ ಬಯಸಲುಂಟೆ ನಿತ್ಯಾ
ನಿನ್ನ ಮೂರ್ತಿಯ ಎನ್ನೊಳಗಲದಿರಲಿ ದೇವಾ ॥ ಪಲ್ಲ ॥

ಘ್ರಾಣಕಾಚಾರ ಜಿಹ್ವೆಗೆ ಗುರುನೇತ್ರದ
ತಾಣಕೆ ಶಿವ ತ್ವಕ್ಕಿಗೆ ಜಂಗಮ
ಮಾಣದೆ ಶ್ರೋತ್ರಕೆ ಪ್ರಸಾದ ಹೃದಯದೊಳು
ಪ್ರಾಣವಾಗಿಹ ಮಹಾಲಿಂಗ ನೀನಾದ ಮೇಲೆ ೧

ಇಂತು ನೀನೆನ್ನ ಜ್ಞಾನೇಂದ್ರಿ ಕರ್ಮೇಂದ್ರಿಯ
ಮುಂತಾಗಿ ಏಳು ಧಾತುಗಳೊಳಗೆ
ನಿಂತಗಲದೆ ಗಂಧ ರಸ ರೂಪು ಸ್ಪರ್ಶನ
ಪಂತವೆ ಶಬ್ದದಿಂದಾನಂದವೆಯ್ದಿರೆ ೨

ಪಿಡಿದು ಪೂಜಿಸಲು ಹಸ್ತಕೆ ಇಷ್ಟಮೂರ್ತಿ ನೀ
ನೊಡನೆ ವಾಕಿಗೆ ಮಂತ್ರರೂಪವಾಗಿ
ಬಿಡದೆ ತುತ್ತಿಡುವ ಜಿಹ್ವೆಗೆ ಸುಪ್ರಸಾದವಾಗಿ
ಮೃಡ ನೀಲಗ್ರೀವ ನೀನೆನ್ನೊಳಗಿಂತಿರೆ ೩

೧೩.೨

ರಾಗ: ಮಲಹರಿ

ಅಕ್ಕಟಕ್ಕಟ ಮತ್ತಮನುಜ ಮುಂದಱಿಯದೆ
ಮುಕ್ಕಣ್ಣನವರೊಡನೇಕೆ ಗರ್ವಿಸುತಿಹೆ ॥ಪಲ್ಲ॥

ಕುಲ ಛಲ ಧನ ರೂಪು ಯೌವನ ವಿದ್ಯ ಭೂ
ಲಲನೆ ತಪಸುಗಳೆನಿಪವೆಂಟು ಮದವ
ಸಲೆಯುಂಡುಗೊಂಡೆನಗಾರೆಣೆಯೆಂದುಬ್ಬಿ
ಮಲಹರನವರೊಳಗೇಕೆ ಮೈಮಱೆದಿಹೆ ೧

ಮುಚ್ಚಿ ಮುಸುಕಿದ ಕಾಮ ಕ್ರೋಧ ಲೋಭವು ಮೋಹ
ಕೆಚ್ಚುವರಿದ ಮದ ಮತ್ಸರವೆಂಬ
ಹೆಚ್ಚಿದ ಅರಿಷಡುವರ್ಗಕೆ ಸಲೆ ಸಂದು
ಕಿಚ್ಚುಗಣ್ಣನ ಶರಣರೊಳೇಕೆ ಬೆಱೆತಿಹೆ ೨

ಭ್ರಷ್ಟಮಾನವ ಭವರೋಗಕಂಜದೆ ಬಹು
ಕಷ್ಟ ಕಪಟ ಕಾಯಗುಣಗಳೊಳಾಡಿ
ನಷ್ಟವಾಗದೆ ನೀಲಗ್ರೀವನಂಘ್ರಿಯ
ನಿಷ್ಠೆಯಿಂದೊಡವೆರೆದವರ ಪಾದವ ನಂಬು

೧೩೩

ರಾಗ : ತೆಲುಗ ಕಾಂಭೋದಿ

ಓಂ ನಮಃ ಶಿವಾಯೆನ್ನು ಓಂ ನಮಃ ಶಿವಾಯೆನ್ನು
ಓಂ ನಮಃ ಶಿವಾಯೆನ್ನು ಎಲೆ ಮೂಢ ಮನವೇ ॥ ಪಲ್ಲ ॥

ಹಸಿವಡಸಲು ತೃಷೆದೋಱಲು ಪಂಚೇಂದ್ರೀ
ವಿಷಯಂ ಮುಸುಕಲು ವ್ಯಸನವೇಳು
ಗಸಣಿಗೊಳಿಸಿ ಮುಂದುಗೆಡದೆ ನೀನತಿ ಬೇಗ
ಸಸಿನೆ ಓಂ ನಮಃ ಶಿವಾ ಶಿವಾಯೆನ್ನು ಮನವೇ ೧

ಉದರ ಮಸ್ತಕ ನೇತ್ರಕೊದಗಲು ಬಹುವ್ಯಾಧಿ
ಮದಮುಖ ಜನರು ನಿಂದಿಸಿ ಕಂದಿಸಿ
ಮುದವಳಿಯದೆ ಹಲವನು ಹಂಬಲಿಸದೆ
ಪದುಳದಿಂದೋಂ ನಮಃ ಶಿವಾ ಎನ್ನ ಮನವೇ ೨

ಎಡೆಗೊಂಡ ಎಡರು ಬಡತನ ಬಿಡದಿರಲೊಮ್ಮೆ
ಕಡುದೈನ್ಯ ಬಡದನ್ಯ ಸಮೂಹಗಳಿಗೆ
ಮೃಡ ನೀಲಗ್ರೀವದೇವನ ಒಡವೆರೆವರೆ
ಒಡನೆ ಓಂ ನಮಃ ಶಿವಾ ಶಿವಾಯೆನ್ನು ಮನವೇ ೩

ಅಂತು ಪದ್ಧತಿ ೩ಕ್ಕಂ ವಚನ [1][೧೩೩ಕ್ಕಂ][1] ಮಂಗಳ ಮಹಾ ಶ್ರೀ

---

[1] ಜೋಡು ಉಭಯಂ ೨೧೮ಕ್ಕಂ ಮಂಗಳ ಮಹಾ ಶ್ರೀ ನೀಲಗ್ರೀವನ ವಚನ ಕಂ ಸಂಪೂರ್ಣಂ ಮಂಗಲ ಮಹಾ ಶ್ರೀ (ಮೂ)

ಪದ್ಧತಿ : ನಾಲ್ಕು

೧[ನೀಲಗ್ರೀವನ ವಚನ]೧

೧

ರಾಗ: ಆಹರಿ

ಆಱಿವದಿನ್ನೆಂತಂಧಕಾರ ಅಜ್ಞಾನ
ತುಱುಗಿ ತುಂಬಿಹ ತನುವಿಡಿದು ಶ್ರೀಗುರುವೇ ॥ ಪಲ್ಲ ॥

ಆಸೆಯೊಱತೆ ಅಹಮ್ಮೃತೆ ನೆಱತೆ – ಮಹಾ ನಿ
ರಾಸೆಯು ಬಚ್ಚಿ ರೋಷವದೊಂದು ತರ್ಚಿ
ದೋಷದ ಮನೆ ರೋಷದ ಮೊನೆ ನಾನಾ
ವೇಷದ ಲಿಂಗ ಮೋಕ್ಷಕೆ ಮಹಾಭಂಗ ೧

ಭ್ರಮೆಗೊತ್ತು ಭಾವಶುದ್ಧಿಯ ಮೃತ್ಯು – ನಾನಾ
ಕ್ರಿಮೆಗೊತ್ತು ಶುಚಿ ಶೀಲಗಳಿಗಿದೆ ಶತ್ರು
ಕ್ರಮದೇಡು ಕಾಮಶಾಮನ ಬೀಡು ನಿರ್ವಾಣ
ತಮದೇಡು ಭವಬಾಧೆಗಳಿಗೆ ತಾ ನೀಡು ೨

ಮಱಹೆಂಬ ಮಾಯೆ ನೆಗ್ಗೊತ್ತಿ ನುಗ್ಗಿ
ನುಱಿಗೈವೈದಾಱೇಳೆಂಟೆಡೆಗೊತ್ತಿ
ಬರಿಕೈಸಿ ನೀಲಗ್ರೀವನ ಭಕ್ತಿ ಕರಿಗಟ್ಟಿಯೆ
ನ್ನರೆಯ ಚೆನ್ನಿಗನಿತ್ತ ಎನಗಿತ್ತ ಮುಕ್ತಿ ೩

೨

ರಾಗ: ?

ಆವ ತೆಱಕೆ ಬಂದೆ ಆತ್ಮಳವಧಿಯ ಕಳೆದು
ಆ ವಿಧಿಯ ಬಲು ಮೋಕ್ಷದೊಲವೊ ಕ್ಷೇತ್ರಜ್ಞಾ ॥ ಪಲ್ಲ ॥

---

೧ 'ಶ್ರೀಗುರುವೆ ತೋಂಟದ ಸಿದ್ಧಲಿಂಗಾಯನಮಃ ॥ ಶ್ರೀಗುರು ನೀಲಗ್ರೀವನ ವಚನ ಬರವುದಕ್ಕೆ ಶುಭಮಸ್ತು. ಶೋಭನಮಸ್ತು. ಆಯುರಾರೋಗ್ಯಮಸ್ತು. ಐಶ್ವರ್ಯಮಸ್ತು'. (ಮೂ)

ಇಂದೆ ಬಂದೆಯೊ ಪಿಂದೆ ಬಹ ಪರಿಜೆಯ
ದಿಂದೆ ಬಂದೆಯೊ ತೀರಿತಿರದುಳಿದ
ಸಂದಿರ್ದ ಸಂಸ್ಕಾರ ಸರಿದೊರೆಗಾಣಿಸುವ
ದಿಂದ ಬಂದೆಯೊ ನಿನ್ನ ಬಗೆ ತಿಳಿಯದೆಂತೋ ೧

ಅಂಗದಿಚ್ಛೆಯ ಬಗೆಯೊ ಅಲರಸರಲಿನ ಜಾಲ
ದಿಂಗಿತಕೆ ಸಿಕ್ಕಿ ಸಂಚಲಿಪ ಬಗೆಯೊ
ತೊಂಗಿ ಲಲನೆಯರ ಲಲನದಕ್ಕರಿನ ಬಗೆಯೊ
ಮುಂಗಂಡು ಪರಮಾತ್ಮನೊಡವೆರೆವ ಬಗೆಯೋ ೨

ಕಾಯ ಕುಟಿಲವ ತೀರ್ಚಿ ಕರಣಾದಿಗಳ ಮುಚ್ಚಿ
ಜೀವ ಭವಬಂಧವನು ಕಂದಕರ್ಚಿ
ದೇವ ನೀಲಗ್ರೀವನಡಿಗಾಣಿಸಿದ ಚೆನ್ನ
ರಾಯನಂಘ್ರಿಯ ನಚ್ಚಿ ಮುಚ್ಚಿದಿರವೋ ೩

೩

ರಾಗ: ತೆಲುಗ ಕಾಂಭೋದಿ

ಅಯ್ಯೋ ಈ ನಾಡಿಗೆ ಅರಿಯದೆಬಗಿ ಬಂದೆ
ಕಯ್ಯ ಬಿಡದೆ ಕಡೆಮಾಡೆನ್ನ ತಂದೆ ॥ ಪಲ್ಲ ॥

ಒಂದೂರಿಗೊಂಬತ್ತು ಬಾಗಿಲಾಗಿವೆ ನೋಡೆ
ಒಂದರ ಹಾದಿ ಒಂದಕೆ ಕಾಣದೆ
ಬಂದು ಹೋಗುವವರನು ಬೋಧಿಸುವರಾರು
ಮಂದಿಯ ಕಾಟ ಮಾಣಿಸುವ ಜೂಟಾ ೧

ನಾ ಬಂದದು ಮೊದಲು ಈ ಮನೆಯೊಳಗೈವರು
ಕಂದಿ ಕುಂದಿಸಿ ಅಲಿ ಪರಿಸುವರು
ಥಂದಗೇಡಿಪರೇಳೆಂಟು ಹತ್ತರದೊಂದು
ಸಂದಣಿಯೊಳಗಾಡಿ ಬಳಲಿದೆ ನೋಡಿ ೨

ಉಸುರುವದಿದು ಉಪಚರವೆಂದು ತಿಳಿಯದೆ
ದೆಸೆಗೇಡಿ ಹಸುಳೆಯ ಹೆಚ್ಚಿ ಸಾರದೆ
ಮುಸುಕಿ ಮೋಹಿಪ ಮಾಯ ಹಸರದ ಲೋಕವ
ಕುಸುರಿದರಿದು ಕಾಯೊ ಗುರು ನೀಲಗ್ರೀವಾ ೩

೪

ರಾಗ : ಸಾಳಂಗ

ನಾನಾಜಿ ನಾನಾಜಿ ನೊಂದೆ ಹೀನ
ನಾನಾ ಯೋನಿಯೊಳಿಂತು ಬರುವದರಿಂ[1][ದೆ][1] ॥ ಪಲ್ಲ ॥

ಮೊತ್ತ ತಾಯೊಡಲೆಂಬಕೊಂಡ ಆದ
ರೊತ್ತಿಲಿ ಮಲಮೂತ್ರ ಕ್ರಿಮಿಗಳ ತಂಡ
ತತ್ತಮಾಂಸ ಕರುಳ್ಕಂಡ ತಲೆ
ಎತ್ತಲೀಸದ ಹೇಹದೊಂದು ಹೊಂಡ ೧

ನೆತ್ತರು ನೆರತೆಯು ಮಂಜ್ಜೆ ಬೆಳ
ದಸ್ತಿಗಳಿಬುಬಿನೊಳುರಿವ ನೋವ ಲಜ್ಜೆ
ಸತ್ತರು ಸಡಿಲದಿ ಬಳ್ಳಿಯಿಂದಾ
ಮುತ್ತಿಗೆಯೊಳಗಾಳುತೇಳುವ ತಳ್ಳಿ ೨

ಆಗುಹೋಗಿನ ಅಂಗದೊಳಗೆ ಬಂದು
ತಾಗು ನಿರೋಧ ತಾಪತ್ರಯಂಗಳಿಗೆ
ಡಾಗಿನ ತನುವಿನೊಳಿಡದೆ ನಿಮ್ಮೊ
ಳಾಗು ಮಹಾಡೆಲೆ ಗುರು ನೀಲಗ್ರೀವ ಬಿಡೆ ೩

೫

ರಾಗ : ಕಂನಡ ಕಾಂಭೋದಿ

ನೀನಿರ್ದು ಎನ್ನ ಭವಕೆ ಬಡಿಪ ಮನ
ಆನೀಗ ಸಾಕೆ ಮಾಣಿಸದಿಹದೇಕೆ ॥ ಪಲ್ಲ ॥

ದೀವಿಗೆಯಿರ್ದು ತಾಣಗಳಲ್ಲಿ ತಮದ
ನೂವಹ ಚಿತ್ರಭಾಗ್ಯನ ಬಸುರ (?)
ಕೋವಿದನಾತ್ಮಜನಾಗಿ ಕೋಟಲೆಗೊಳಿ
ದೀ ವಿಧಿ ಎನಗೆ ನೀನಿರೆ ಬರಬೇಕೆ ೧

ಪುರುಷ ಸೋಂಕಿರ್ದು ಕರ್ಬುನವು ಹೊನ್ನಾಗ
ದಿರುವದು ಚೋದ್ಯವು ಸಂಸಾರ
ಶರಧಿಗೆನ್ನ ನೂಂಕಿ ಸಾರಿರ್ದು ನೀ ಸುಮ್ಮ
ನಿರುತಿರೆ ಭವವೆಲ್ಲಿ ಪರಿವುದಿನ್ನೆಲ್ಲಿ ೨

---

[1] ದೆ ನಾನಾಜಿ ನಾನಾಜಿ ನೊಂದೆ (ಮೂ)

ಒಡಲೆಂಬ ಹುತ್ತಿನೊಳಡಗಿಕೊಂಡಿಹ ಸರ್ಪ
ಕಡೆಗೆನ್ನ ಪಿಡಿದು ಮೂವಿಧಿಗಾಣಿಸಿ
ಅಡಸಿ ರುಜಿನದ ಕಡಲೊಳಿಹನ ಕಯ್ಯ
ಪಿಡಿದೆತ್ತು ಬೇಗ ಗುರು ನೀಲಗ್ರೀವಾ ೩

೬

ರಾಗ : ಸಾಳಂಗ

ಹಾದಿಗಾಣಿಸುವ ಹಬ್ಬಿ ಹರಿವ ಮಾಯೆ
ಭೇದಿಸೆ ಬಗೆಗಾಣದಿಹ ಬಿದಿದೊರಿವ ॥ ಪಲ್ಲ ॥

ತಿರುಗುವ ತ್ರಿಪುರದೊಳಿರುವ ಕಷ್ಟ
ದುರುಳ ರಕ್ಕಸಲೆಯೊಳು ಬೀಳದಿರವ
ಮರಳಿ ಮರಳಿ ಮತ್ತೆ ಬರುವ ಮಾರ್ಗ
ದಿರದಪ್ಪಿ ನಿಮ್ಮಂಘ್ರಿಯೊಳಗಡಗಿರುವಾ ೧

ಸಾಗುದುರೆಗೆ ಹುಲ್ಲು ಹೊರಿಸಿ ದುಷ್ಟ
ಜೋಗುತಿ ಕಾಡಿ ಲೋಕವ ಭಂಗ ಬರಿಸಿ
ಯೋಗಿಗಳನು ಉಣ್ಣದುರಿಸಿ ತಲೆ
ವಾಗಿಸುವವಳ ತಳ್ಳಿಯನೆಲ್ಲ ಮರಸೀ ೨

ಭ್ರಾಂತಿನ ಬಹಿರಂಗದಿರವಾ ಮಾಣಿ
ಸಂತರಾತ್ಮಕನ ಸಾಧಿಪದೊಂದು ಕುರವ
ಸಂತತ ಸಲೆ ತೋಱಿ ನೆರವಾ ಗುರು ನಿ
ಶ್ಚಿಂತ ನೀಲಗ್ರೀವ ಬಿಡದೆನ್ನ ಹೊರೆವಾ ೩

೭

ರಾಗ : ದೇಶಿ

ಸಾರಿ ಬರುತಿದೆ ಶರೀರ ಸಂಗ ಸುಖ ತೀವ್ರದಲ್ಲಿ
ತೀರುತದೆ ದಿವದಂತೆ ತಿಳಿ ಬೇಗಲಾತ್ಮಾ ॥ ಪಲ್ಲ ॥

ನೆಚ್ಚಿ ನಂಬಲೆ ಬೇಡ ಕಾಯದನುತಾಪವನು
ಬಿಚ್ಚಿ ಬಿಸಾಡು ತಿಳಿ ನಿನ್ನೊಳಗನು
ಮೆಚ್ಚಿ ಮನವಿಡು ನೀನು ಮೊದಲ ಭವಬಾಧೆಗಳ
ಹೆಚ್ಚಿಸುವ ತನುವಿನೊಳಗೆಚ್ಚರಲೆಯಾತ್ಮಾ ೧

ಮುಂಗಲಕಿತೋರ್ವ ಮೇಘದ ಚಾಪದೊಲ
ಎಂಗೆ ಸಮನಾದ ಸತಿ ಸುತರರ್ಥಕೆ
ಹಿಂಗದ ಪ[ರಿ]ಹರಿಪಂಗನದಿ ಇರ್ದು ತಂಬಿರ್ದ
ತಿಂಗಳಿನ ಬಡತನದ ಭಂಗಿಯೆಲೆಯಾತ್ಮಾ ೨

ಭೋರೆಂದು ವೃಷ್ಟಿಗಳಿಯಲು ತುಂಬಿ ಕೆಱೆ
ಮೇರೆದಪ್ಪಿರೆ ಧರ್ಮಗಾಲದಲಿ
ತೀರಿನ ಶಿವನ ಪರಿಯತಾ ಗಾತ್ರವನು ತಿಳಿದು ಗುರು
ನೀರೆ ನೀಲಗ್ರೀವನ ಭಜಿಪುದೆಲೆಯಾತ್ಮಾ ೩

೮

ರಾಗ : ಆಹರಿ

ಸಾಕಿನ್ನು ತಡಿಗೆ ಸಾ[1][ಗಿ][1]ಸು ಗುರುವೆ ಈ ಭವದ ತ
ಟಾಕದಿ ಬಿದ್ದ ತರಳನ ನೋಡತರವೇ ॥ ಪಲ್ಲ ॥

ತಲೆಗೆಟ್ಟ ನೂಲಿನಂದದಿ ನಾನು ಲೋಕದಿ
ನೆಲೆದಿಳಿಯದೀ ಮಾಯೆ ಬಾಲೆಗೆನ್ನ ನೀನು
ಸಿಲುಕಿಸಿ ಸಿಡಿದು ಹೋಗುವದದನು ತಪ್ಪಿಸಿ
ಸಲಹೆನ್ನ ಸಕಲ ರೂಪಿನ ಪುಣ್ಯಧೇನು ೧

ಕುಱುಹಿಲ್ಲ ಕುಟಿಲ ಕೊಟ್ಟವೆಂಬ ಭ್ರಾಂತಿನ
ತೊಱೆಯೊಳು ತೊಳಲಿ ನೋಡಿದೆನು
ಊಱುಂಬ ಕೆಱೆಯೊಂದೆ ಕೆಲರೆಮ್ಮದೆಂಬ ಮಾತಿನ
ಮಱಲುವೆ ನಿನ್ನ ಮುಕ್ತಿಗೆ ಮೂಲಸ್ಥಂಭಾ ೨

ಕ್ಷಣ ಭಂಗುರದ ಬಾಳಿನ ದೇಹವೆಂಬುದ
ನೆಣಿಸದೆ ಹಲಜನ್ಮಕೆ ಬಿರ್ದು ಹೋಹ
ಘನವನಳಿಸಿ ಗಮ್ಮನೆ ಮಹಮೋಕ್ಷವ
ತ್ರಿಣೆಯ ಪಾಲಿಸು ಬೇಗ ಗುರು ನೀಲಗ್ರೀವಾ ೩

೯

ರಾಗ : ಪಹಡಿ

ಇದಿರಿಡಬಹುದೆ ಇಂಗಿತವಱಿಯದ ಮತ್ತಾ
ಮಂದಮುಖಮೂರ್ಖಚೇತನಕೆನ್ನ ಬಲಿಯಾಗಿ ॥ ಪಲ್ಲ ॥

---
[1] ರ (ಮೂ)

ಸಕ್ಕರೆ ಮಧು ಘೃತ ಶಾಲ್ಯಾನ್ನ ಪೀಯೂಷ
ವಿಕ್ಕಿದೆಡೆಯನು ವಿಚಾರಿಸದೆ
ಕಂಕ್ಕುಟ ನಿಚಯುವ ಕೂಡಿರಿಸಿದ
ಡೊಕ್ಕಿಲಿಕ್ಕು ಹಾಗೆ ಲೆಕ್ಕಿದೆನ್ನ ಹೀಗೆ ೧

ವಾರಣದಿಂದ ಒಲಿದ ರತ್ನ ಮೌಕ್ತಿಕ
ಹಾರವ ವಾನರನಿಗೆ ಹಾಕಿರೆ
ಸೇರುವೆಗೆಡಿಸನಿದು ನೀವಂತೆನಗೆ ಭೂಮಿ
ಭಾರಕ ಚಿತ್ರದ ಬಲಕೆ ನಿಷ್ಕಾಮಿ ೨

ಅತಿಶಯುದ ಪದವನಂಗೀಕರಿಸದಲೆನ್ನ
ಶತಮುಖದಲಿ ಸಾಧಿಸಿ ಕಾಡುವ
ಹಿತಶತ್ರುಮನದ ಸಂಶಯು ಮಾಣಿದಲೆ ತಂದೆ
ಗತಿಮತಿ [ಎ]ನಗೀವ ಗುರು ನೀಲಗ್ರೀವಾ ೩

೧೦

ರಾಗ : ಬಹುಳಿ

ಗಂಡನಿರ್ದಂತೆ ಘಾಸಿ ಮಾಡುತಲಿಹ
ಪುಂಡರನೊಳಗಿಟ್ಟು ಪುರಮಾನಿಸುವರೆ ॥ ಪಲ್ಲ ॥

ಪತಿಯೊರ್ಬನೆಂದು ಪರಸಿ ಪಲಂಬರು ಬಂದು
ಅತಿಶಯುದಿಂದಾಗು ಮಾಡಿ ಮುನ್ನ
ಹಿತದಿಂದ ಕೂಡಿರ್ದು ಹಿರಿದಾಗಿ ಹಿಂಸಗಾತಕರಿಗೆ
ಸೆದಿರಿಟ್ಟುಗಿದುದೊಡನುಟ್ಟು ೧

ಸತ್ತ್ವವಿಲ್ಲದನು ಸತಿಯುನಾಳಲಾಚಿನೆಂ
ಬುತ್ತರವುಂಟು ಉರಗ ನರರಾ
ನಿತ್ಯರ ನಿಚಯುಕ್ಕೆ ನೀ ರಾಜನೆಂದೆನ್ನ
ನಿತ್ತುದಾನಚಿದು ನೀಚರಿಗೀವುದರಿದು ೨

ಕಾಡಬೇಡನು ಕಣ್ಣಟ್ಟು ಬಂದಿಲ್ಲ ನೀ
ನೋಡಿ ತಂದೆನ್ನ ನೋಯಿಸಲೇತಕ್ಕೆ
ಪಾಡಗೆಡದೆ ಪಂಥ ಪರಿಣಾಮದಿಂದೊಡ
ಗೂಡಿ ಕಾಂಬದದೆನ್ನ ಗುರು ನೀಲಗ್ರೀವಾ ೩

೧೧

ರಾಗ: ನಾಟಿ

ಏಕೆ ವೈವಂಜಿಯರವಿನ ಸಿರಿಯು ಸಡಗರಕೆ
ಸಾಕು ಸಾರಿಹ ವಾಸಸಲೆಯು ಹಂಸಾ ॥ ಪಲ್ಲ ॥

ಬಾಲಲೀಲೆಯು ದಾರಿ ಬಸಿವಹರವಿವಾರಿ
ಮೇಲಡರುತಿಹ ಹೃದಯ ವ್ಯಾಪ್ಯದಭಿಪ್ರಾಯು
ಪಾಲಿಪ್ಪ ಸುಖಸಿರಿಯು ಪಾಲೆಯುರಪನಿಗೊನೆಯು
ಸೋಲಲಿದನಱಿತಱಿತು ಸೊಕ್ಕುತಿಹೆ ಬೆಱೆತು ೧

ವಾಯುುದಂಗವ ನಚ್ಚಿ ಒಳಗ ಬೆಳಗನು ಮುಚ್ಚಿ
ಮಾಯು ಮೋಹಕೆ ಹೆಚ್ಚಿ ಮಲವುತಿಹೆ ಮೆಚ್ಚಿ
ಹೇಹ ವೇಷವ ತೊಟ್ಟು ಹೇವರಿಸದಿಷ್ಟ
ಕಾಯುಂಜನ ಕಾಲಾಟಕೆ ಕೆಡುಹು ನಿನ್ನಾಟ ೨

ಎಚ್ಚರನುವಿಡಿದು ಅರೆಹೊರೆಗಳೆರಡನು ಒಡಿದು
ಬಚ್ಚಿಮಾಡಿಹಲಾವ ಭಯದಪಮಾನದೊಲವ
ನಿಶ್ಚೈಸಿ ಗುರು ನೀಲಗ್ರೀವನ ಸಾರು ಸು
ಚಿತ್ತ ಪದವೀವ ಸುಗುಣನಿಧಿ ಜೀವಾ ೩

೧೨

ರಾಗ: ಆಹರಿ

ಸಾಧಿಸವದಿರಿಸಿದ ದ್ರವ್ಯವಿದು ಹಾದಿ
ಬೀದಿ ಶ್ರವಮಾನ್ನ ತಿಳಿಯುದಪಸವ್ಯಾ ॥ ಪಲ್ಲ ॥

ಒಡಲಾಸೆಗೆಯೆಂದು ವಾಸಿಯಲಿಂದು ರಾಜರ
ಅಡಿಗಂಡು ಅಸಣಪಿಸುಣವೆಡೆಗೊಂಡು
ಒಡವರ ಕಾಡಿ ಬಾಳ್ಪರ ನೋಡಿ ಕಾವಿುಸಿ
ಪಡೆದರ್ಥ ಪರವಿಯೊಡೆದ ಸಂಚು ವ್ಯರ್ಥ ೧

ಹಿರಿದಹೆನೆಂದು ಹೇಸದಲೊಂದು ವಣಿಹವಾ
ತುರದಿಂದ ಪೊತ್ತುವಕ್ಕಲ ಬೇರಕಿತ್ತು
ತುರತದಲ್ಲಿನ್ನು ತುಂಬಿದ ಹೊನ್ನು
ಊರಿಟ್ಟಿಯು ತಿಂದು ವರಾಹ ಸೊಕ್ಕಿವಡೆಯುನದೆಂಬ ಹಾಗೆ ೨

ವಿತ್ತದ ಲೋಭ ವಿಷಯದ ಲಾಭವಜಿಲೆ ತಾ
ಹುತ್ತವ ಕಟ್ಟಿ ಹಾವೆಡೆಗೊಂಡ ಒಟ್ಟೆ
ನಿತ್ಯಾನಿತ್ಯ ನಿರ್ಜರರು ನಮಿತ ಗುರು ನೀಲಗ್ರೀವ
ನಿತ್ತುದನುಣ್ಣದುರಿವ ನೀವೆಯಣ್ಣಾ ೩

೧೩

ರಾಗ : ಸಾಳಂಗ

ತಡವೇಕೆ ತವಕದಿ ನೋಡು ನಿನ್ನೊ
ಳಡಗಿರ್ದ ಆನಂದಮಯನೊಡಗೂಡು ॥ ಪಲ್ಲ ॥

ಕತ್ತಲೆಯನು ಕಡೆಮಾಡು ಸುತ್ತ
ಮುತ್ತಿಹವಾಜೀಳೆಂಟನು ಹೋಗಲಾಡು
ಚಿತ್ತವಾಯುವನೊಡಗೂಡು
ಬಿಡದೊತ್ತಿ ಸಾಧಿಸಿ ಮಸ್ತಕದಲಿಂಬುಮಾಡು ೧

ಕಣ್ಣನೆರಡ ಮುಚ್ಚಿ ನೀನು ಒಂದು
ಕಣ್ಣದೆಱೆದು ಕರುಣದ ಕಡಲ್ಗಾಣು
ತಿಣ್ಣವಲ್ಲಿದು ತಿಳಿ ಜಾಣು ಅಗ್ನಿ
ಗಣ್ಣ ಬೇಱುಂಟೆಂಬರದು ಸಟೆ ಮಾಣು ೨

ಲೋಕದ ನಡೆ ನುಡಿ ಚಂದ ಮೂಗ
ಹೋಕ ಕನ್ನಡಿವಿಡಿವಿಪರೀತದಂದ
ಈ ಕಷ್ಟವಿದ ಬಿಸುಟೆಂದು ಮೂಱು
ಲೋಕದ ಗುರು ನೀಲಗ್ರೀವನ ಹೊಂದು ೩

೧೪

ರಾಗ :

ಹರನ ಪೂಜೆಯ ಮಾಡು ಘನವೆ ಮುಕ್ತಿ
ದೊರಕುವದು ದೂರವಲ್ಲಿದಕೋ ಜೀವನವೇ ॥ ಪಲ್ಲ ॥

[1]ಮೂ[1]ಱುಱಿಂದತ್ತಲಿಹ ಮೂಲನಾಥನ ತಿಳಿದು
ಜಾಱುವಂದದಿ ಕರದಿ ಜಾಣನಿಂದಲಿ ಪಿಡಿದ
ಆರು ನೆಲೆಯೊಳಗಂಗೀಕರಿಸಿ ಚಿತ್ತ
ಬೇಱಾಗದಂತೆ ಬಲಿದೊಲಿದು ನಿಲಿಸಿ ೧

[1]ಆಱು ಗ್ರಂಥಗಳಾಱು ರಸವು ರೂಪುಗಳಾಱು ಮೂ (ಮೂ)

ಆಱು ಗಂಧಗಳಾಱು ರಸವು ರೂಪುಗಳಾಱು
ಆಱು ಪರುಷನವಾಱು ಶಬ್ದನಾದಗಳಾಱು
ಆಱು ಮುಖದೊಳಗೆಚ್ಚರೆಂದು ಇವನು
ತೋಱಿ ತೃಪ್ತಿಯ ಕಾಣುತೊಳಗೆ ಸಲೆ ಸಂದು ೨

ಇಷ್ಟರೊಡಲನು ತಿಳಿದು ಉಳಿದ ಭ್ರಾಂತನು ಹಳಿದು
ಭ್ರಷ್ಟಮನಗಳನಱಿದು ಭವದ ಬೀಜವ ಹುರಿದು
ನಿಟ್ಟೊರೆಸಿ ನಿಜವ ತಿಳಿದೀಗ ಬೇಡಿ
ದಿಷ್ಟಾರ್ಥವೀವ ಗುರು ನೀಲಗ್ರೀವ ದೇವಾ ೩

೧೪೪

ರಾಗ : ಆಹರಿ

ಕೆಡುತಲಿದೆ ಲೋಕವಿನಿತೆಲ್ಲಾ ತಮ್ಮ
ಒಡಲೆಂದು ಹೊರದುದೊಳಗನು ತಿಳಿಯರಲ್ಲಾ ॥ ಪಲ್ಲ ॥

ತುಂಬಿ ತುಳುಕಾಡುತಲಿ ತೊಳಗಿ ಬೆಳಗುತಲಿರುವ
ಅಂಬುಜಾಕ್ಷನ ನಯನವಧಿಗಳೊಳೆ ತಳೆದಿರುವ
ಶಂಭುವಾರೆಂದಱಿಯದೆ ಬಱಿದೆ
ಹಂಬಲಿಸಿ ಭ್ರಮೆಗೊಳಲಿ ಹೋಗುತದೆ ಹಳಸಿ ೧

ಉಂಬು ತೊಡು ತೊಡುಲಿಹ ಉರಗನಾಭರಣನು ನರರ
ಇಂಬಿನತಿಹನೆಂಬ ಇರವ ಕಾಣದೆ ನೋವೆ
ಡಂಬಕದ ಜಡನರರು ಪಿಡಿದು ಹಲವು
ಕುಂಭ ಪಾಷಾಣ ಕಾಷ್ಠಗಳಿಗೆ ಹೊಡಗೆಡದು ೨

ತಾನು ತಾನಾಗಿರುವ ತಾಪರೆಯೆಲೆಯ
ಪಾನೀಯದಂತೋರ್ಪ ಪರಮನೆಲೆಯ
ಕಾನನದಲರಸಿ ಕಡುನೋವ ಹೀನ
ಮಾನವರು ಕಾಣರೆಲೆ ಗುರು ನೀಲಗ್ರೀವಾ ೩

೧೪೫

ರಾಗ : ಕಾನಾಡ ಕಾಂಭೋದಿ

ಆವ ತೆಱನಿದೆನ್ನ ಆಗಲಿ ಬಿಡದು ಬೆನ್ನ
ದಾವತಿಯಿರುವೊ ದಯದೊಂದು ನೆರವೋ ॥ ಪಲ್ಲ ॥

ಒಲ್ಲೆನಿಂದದಕೆ ವಾಯುದ ಸಂಸಾರಕೆ
ಸಲ್ಲದೀ ಬದುಕು ಸಡಿಲ ಬಿಟ್ಟರಿದಕೂ
ನಿಲ್ಲಗೊಡದೆ ತಂದು ಇದಿರಿಡುವದೆ ನಿಂದು
ಕೊಲ್ಲುವಾ ಭರವೊ ಹೊರವ ಖೇದದಿರವೊ ೧

ಹಲವು ಮನದ ಹೊಮ್ಮ ಹರಿಯುಂಗಡಿದು ನಿಮ್ಮ
ಒಲುಮೆಯೊಳಿಟ್ಟು ವಂದಿಸದೆ ಬಿಟ್ಟು
ಹಲವು ಲೋಕದೊಳೆನ್ನ ಹಗುರಮಾಳ್ಪದು ನಿನ್ನ
ಚಲವಾದಿತನವೊ ಸಲಹು ಸಾಧನವೋ ೨

ಮಱು ಲೋಕವನು ಮುಮ್ಮೊನೆಗಳಿಂದಲಿ ನೀನು
ಗಾಱುಮಾಡುವ ಗನ್ನಘಾತಕವನು
ತೋರಲಳವೆ ಚಿಕ್ಕ ತರಳನ ಸುಖದುಃಖ
ಸೂಱಿ ನಿನ್ನದು ದೇವ ಗುರು ನೀಲಗ್ರೀವಾ ೩

೧೭

ರಾಗ : ದೇಶಿ

ಬಚ್ಚಿಡು ಬಯಸಿ ಬೇಡಿದುದೀ ವಸ್ತುವ
ವೆಚ್ಚಿಸಬೇಡ ಎಳ್ಳನಿತೆಲೆಯಾತ್ಮಾ ॥ ಪಲ್ಲ ॥

ಕೆಲವು ಕಾಲದಿ ಕೇಡಾಳಿಗಳೊಡನಾಡಿ
ಹಲವು ತೆಱದಿ ಹರವರಿ ಮಾಡುವಾ
ಗೆಲವ ಮಱದು ತಮ್ಮ ಗಳಿಸಿದರ್ಥವ ನಿಂದು
ಕಲೆಧರನಲ್ಲದೆ ಆರಿಗೂ ಕಾಣದಂತೆ ೧

ಹೆಜ್ಜೆವಿಡಿದು ಬಂದುತ್ತೇರೊಡಲವಳದೊಂದು
ಉಜ್ಜುಗದೋಱ ಉನ್ನತದ್ರವ್ಯ
ಲಜ್ಜೆಗೆಡಿಸಿ ತಿಂಬಲಯುಕೀಡು ಮಾಡದೆ
ಸಜ್ಜನ ಹೃದಯುಗೆಸೆವೆ ಕಂಡಬಿಡದೆ ೨

ಜೋಕೆವಶಾದಿನ್ನು ಜತನದಿಂದಲಿದಱಂದ ಅ
ನೇಕ ಕಾಲದ ಭವಬಾಧೆಗಳಾ
ನೂಕುವದಿದೆ ಮೂಲ ಗುರು ನೀಲಗ್ರೀವನೊ
ಳೇಕವಾಗುದಿತ್ತ ಬಿಡದಿರತ್ತಾ ೩

೧೮
ರಾಗ : ಮೇಚ ಬಹುಳಿ

ಆತ್ಮದಿನಗಳಿದೆ ಬಯಲ್ಪನೆಯಾ ದೀಪದುರಿಯಿಹ
ಕೊನೆಯುಶನವ ಕಾಣದೆ ಬಳಿದೆಯಾತ್ಮಾ ॥ ಪಲ್ಲ ॥

ಕನಕ ಸತಿ ಸುತರೆಂಬ ಕಾನನದಿ ಹುಲಿ ತಿಂಬ
ದೆನುತಲಳಿಯದೆ ಬೆರೆದು ಆತ್ಮಾ
ಮನಹೀನತನದಿಂದ ಮಜ್ಜೀವಕೆ ಸಲೆ ಸಂದ
ಬಿನುಗು ಬುದ್ಧಿಗಳಿಂದಲಾತ್ಮಾ ೧

ಆತ್ಮ ಬಹು ಯೋನಿಗಳ ಕಂಡು ಬಂದು ನರಕವ
ನುಂಡು ಮೋಹದೊಲೆ ಮಾಳಿಹಿಂದ ಹಿಂದೆ
ಆತ್ಮ ಇಹಪರದ ನೆಲೆಯರಿವು ಇರವ ದೇಹದ
ನೆರವು ಬಹದೆಂದು ಭಾವಿಸದೆಯಾತ್ಮಾ ೨

ಆತ್ಮ ಮತ್ತನಗಳ ಬಿಟ್ಟು ಮಲತ್ರಯಗಳನಟ್ಟಿ
ತತ್ತ್ವವಸ್ತುವ ತಲೆಯೊಳಿಟ್ಟು
ಆತ್ಮ ನಿತ್ಯ ನಿರ್ಮಳ ಗುರುವು ನೀಲಗ್ರೀವನ
ಬೆರವುದತ್ಯಂತವಧಿಕವಾತ್ಮಾ ೩

೧೯
ರಾಗ : ಶಂಕರಾಭರಣ

ಕಂಡೆ ನಾನೊಂದು ಕೌತುಕವನೀ ಲೋಕದಿ ಕಾಯವಿಡಿದು ಬಂದು
ಉಂಡವರೈವರುಪವಾಸವೆನುತಿರೆ ಮೌನವಿಡಿದು ॥ ಪಲ್ಲ ॥

ಸವದಿರಿಸಿದ ಷಡುರಸ ಪರಮಾನ್ನವನೊಲವಿನಿಂದಾ ತಾವು
ಸವಿದಿಂತು ಸರಸದಿ ತಾವಲ್ಲವೆಂಬರು ಬಲುಮೆಯಿಂದಾ
ಹವಣಿಗೆ ಸಿಲುಕದು ಹೌದಲ್ಲವೆಂದೆಂಬ ಹಾದಿ ಇರವಾ
ತ್ರಿಭುವನದಿ ತಿಳಿವರೆ ತ್ರಿಪುರ ನಿರ್ಮೂಲಿಯ ಊಟದಿರವಾ ೧

ನೋಡಿ ಕಂಡವನೂರ್ವನೊಲದಿಂದೇಳನು ಕರೆದುಕೊಂಡು ಅಂತು
ಕೂಡಿದರೇಳೆಂಟು ಕುಲಸತಿಗಳ ಕೂಡಿಕೊಂಡು
ಗಾಡಿಯಿಂದತಿ ಲೀಲೆಯಿಂದಲಿ ನಂದವನಾಡಿ ನಿಂದು ತಮ್ಮೊ
ಳಾಡು[ತ]ಲಿರೆ ಕೇಳ್ದ ಬ್ರಹ್ಮಚಾರಿಗಳೆಂಬ ಧ್ವನಿಯು ನಿಂದು ೨

ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಗಳ ತಂಡದಿರವಾ ಬಳಿ
ಗೊಂಡೊಳಗಿಹನೊಬ್ಬ ಬಯಲೊಡಲು ವಾಕಿನಿರವಾ
ಮಂಡಲತ್ರಯದೊಳು ಮನೆಯುಂಟು ತನಗೆಂಬ ವಾಸದಿರವಾ ಜಗ
ಭಂಡರು ಕಾಣ್ಬರೆ ಗುರುನೀಲಗ್ರೀವನ ಬೆಡಗಿನಿರವಾ ೩

೨೦

ರಾಗ: ಭೈರವಿ

ನಾಚಿನ್ನು ನಾನೆಂಬ ಚಿಂತೆ ಇನ್ನೇಕೆ
ನೀಚ ಮನವೆ ನಿನಗೆಡೆ ಇಲ್ಲ ಜೋಕೆ ॥ ಪಲ್ಲ ॥

ಮೂಗಿರ್ದರೆಡೆಯಾಡುವದು ಚಂದ ನಿನಗೆ
ಹೋಗಾಡಿ ಬಳಿಕಲೆತಹೆಮ್ಮೆ ಬಿನುಗೆ (?)
ಸಾಗದು ನಿನ್ನಾಟ ಸಲೆಯಲ್ಲ ಕೇಳು
ತಾಗಿದಲ್ಲದೆ ಬಾಗಿ ನಡೆವರೆ ಪೇಳು ೧

ನಾಲಗೆ ನಯನ ಚರ್ಮವು ಕರ್ಣ ಮೊದಲು
ಮೇಲಾದ ಶಿರಕರ ಚರಣಗಳೊಡಲು
ಕಾಲವ ಕಂಡ ಬಳಿಕಲಿರ ಸಲ್ಲಾ
ಆಲಿಗೆಟ್ಟವನಾಗಿ ಬದುಕುವನಲ್ಲಾ ೨

ಹಮ್ಮೆಂಬವರ ಶಿರವರಿದವನೊಲವ
ತಮ್ಮ ತಮ್ಮೊಳು ತಿಳಿಯದವರ ಕೇಡಿನಿರವ
ಗಮ್ಮನೆ ಕಡೆಗೆ ಸಾರೋ ಸಲ್ಲ
ನಿರ್ಮಳ ಗುರುನೀಲಗ್ರೀವನ ಸೊಮ್ಮದೆಲ್ಲಾ ೩

೨೧

ರಾಗ: ?

ನುಡಿಯಿಂದ ಚಂದ ನೂತನವೆಂದು ಕಂಡು
ಬಿಡದುಂಬ ಯೋಗಿ ಬಿಟ್ಟವ ಭವರೋಗಿ ॥ ಪಲ್ಲ ॥

ಶಿಶುಬಾಲ ವೃದ್ಧರುಗಳ ಕಂಡ ಹಾಗೆ
ಹಸಗೆಟ್ಟು ಮಾತನಾಡುವರೆಲ್ಲ ಹೀಗೆ
ವಿಷವಾಗಿ ಸುಡುತಿರವುದಕಿದಿರಾಗಿ
ಸಸಿನೆ ಪಿಡಿದ ಯೋಗಿ ಬಿಡೆ ಭವರೋಗಿ ೧

ಆದಿಯಕ್ಕಱವಂದರಿಂದಲಾದವನ
ವೇದಗಳಱಸಿ ಕಾಣದಲಿರುತಿಹನ
ಪಾದವಿಡಿಯೆ ಪಾಣಿತಳಕ್ಕೆ ಬರ್ಪವನ
ಸೇದಿದ ರೋಗಿ ಸೆಡೆಯೆ ಜಡರೋಗಿ ೨

ಅಚ್ಚರಿಯಹಾದೈದಱ ವರ್ಣವನು
ಮೆಚ್ಚಿದವರ ಮಾಯೆ ಬಲೆಗೆ ನೂಕುವನು
ನಿಚ್ಚ ಪ್ರಸಾದವನುಂಡಿರುವರನು
ಮೆಚ್ಚಿ ಮರಳಲಿ ಗುರುನೀಲಗ್ರೀವನೂ ೩

೨೨

ರಾಗ : ?

ಎಡೆಯಹಾಡಬೇಡ ಎಂದಿನ ಹಾಗೆ ಮಂದನ
ಕಡು ಮೂರ್ಖ ನೀನು ಕಂಡದ ಪೇಳೆ ನಾನು ॥ ಪಲ್ಲ ॥

ಒಡೆಯನಿಲ್ಲದೆ ಒಳಗಿರ್ದ ಹಾಗೆಂದು
ನುಡಿದಾಡಬೇಡ ನೂತನ ಮಾತನಿಂದು
ಕೆಡುವೆ ನೀನಿದಱಿಂದ ಕೇಳೊಂದು ತಪ್ಪಾ
ತಡದೆ ನೀನೇಕಿನ್ನು ತೆರಳು ಕಂದರ್ಪಾ ೧

ಸತಿ ಸುತರರ್ಥದಾಸೆಗೆ ಬಾಹೆ ಹಿಂದೆ
ಮೃತಮಾಡಿ ನುಂಗಿ ನೀಗುಡಿದೆ ನಾನಂದೆ
ಅತಿಶಯದುರಿಯನುಂಬುದ ನೀನು ಕಂಡು
ಮತಿಹೀನ ಮಾರ ಬಾಹರೆ ಬಳಿಗೊಂಡು ೨

ವ್ರತನೀತ ನಿತ್ಯ ನೇಮವನೆಲ್ಲ ಮಱಿದು
ಗತಿಹೀನ ಕುಲ ಚಲದತಿ ಹಂಗ ಹಱಿದು
ಮತಿಯಿಂದೆ ಜನನ ಮರಣವೆರತಱಿದು
ಸತಿಯಾದೆ ಗುರುನೀಲಗ್ರೀವಗೆ ಸೋತುದಱಿದು ^

೨೩

ರಾಗ : ಕಲ್ಯಾಣಿ

ಭವಗೆಟ್ಟವರ ಸಂಗಬೇಡ ನಿನಗೆ ಭಂಗ
ತವೆ ತೋಱಿಸಲೆ ನೋವೆ ನೀ ಸಾರು ಕಡೆಗೆ ಮಾಯೆ ॥ ಪಲ್ಲ ॥

ನಾನೆಂದಾಗಲೆ ನೀನು ನೀನೆಂಬುದೆ ನಾನು
ನಾನು ನೀನೆರಡಂದೆ ನಾಶವಾದದು ಹಿಂದೆ
ಶೂನ್ಯದಂಗವ ನೋಡಿ ನೀ ಸುಳಿದಾಡುವರೆ ಹೇಡಿ ಹೇಡಿ
ಮಾನವರೊಳಗೆಲ್ಲ ನೀನು ಚಿದಶೌಳಿ ಸಲ್ಲ ೧

ಎರಡಳಿದವರೊಳು ಎರಕವಹುದೆ ಪೇಳು
ಬರಡಾದವರೊಳಗೆ ಬಾಹದೆ ನಿನ್ನ ಬೆಳಗೆ
ಪರಮಾಮೃತವನುಂಡು ಪರಶಿವನೊಳಾಡುದ ಕಂಡು
ಪುರಳುಂತನದ ಗಾಡಿ ಮಾಣ್ದು ಮರಳಿ ನೋಡಿ ೨

ಉರಿ ಕರ್ಪೂರದ ರೀತಿ ಉಳಿಯಲಾವುದು ಜ್ಯೋತಿ
ವೆರದ ಪತಂಗದ ಪಾಟಿಬಹುದು ಬೇಡೆಲೆ ತೋಟಿ
ಗುರುನೀಲಗ್ರೀವನೊಳು ಕೂಡಿ ಬಾಳುವೆ ಕೇಳು
ತರಹರಗೂಡದಿನ್ನು ತೆರಳುವದತಿ ಚೆನ್ನು ೩

೨೪

ರಾಗ : ಆಹರಿ

ದೇಹವುಳ್ಳಲ್ಲಿ ದೇಹಿಯು ಕಂಡು ಬದುಕುವ
ದೀ ಹೊತ್ತು ನಾಳೆ ಎಂದೆನಬೇಡ ಮನುಜಾ ॥ ಪಲ್ಲ ॥

ನಿಲ್ಲುವುದಲ್ಲ ನಿನ್ನಿಚ್ಛೆಗೆ ಭಾವಿಸೆ
ಹಲ್ಲಿನಿಂದತಿ ತನುವನು
ಮೆಲ್ಲನೆ ಕುಣಿಸಿ ಮೋಸವ ಮಾಡಿ ಕೆಡಹುವ
ವಲ್ಲಭನಡಿವಿಡಿವುದು ಲೇಸು ಮನುಜಾ ೧

ಬಯಲ ಗಾಳಿಯು ವಹ್ನಿಯುವನೆ ರಸಗಳ
ಮಯದಿಂದಲಾದ ಮಾಯದ ಕಾಯದಿ
ಶಯನವ ಮಾಡಿದ ಸಕಲಾದಿ ವಸ್ತುವ
ಶಯವೆಂದು ನಂಬು ಸಾಜದೆ ಕೇಳು ಮನುಜಾ ೨

ಜ್ಯೋತಿರ್ಮಯನ ರೀತಿಯರಿಯದೆ ಜಗವೆಲ್ಲ
ಪಾತಕವೆಂಬ ಪಯಣಕೆ ಬಿದ್ದು
ಧಾ[1][ತು][1]ಗೆಡದೆ ಧರ್ಮ ಗುರುನೀಲಗ್ರೀವನೊಳೊ
ಳೊತ್ತೊಡವೆಡವುದೊಳ್ಳಿತು ಕಂಡ ಮನುಜಾ ೩

[1] ಡು (ಮೂ)

೨೫

ರಾಗ : ?

ಒಡವಾದೆನಿದಕೆ ಭವದಿರ್ದು ಲೋಕ
ಕೆಡುತಿಹರಿಂದು ಕೆಮ್ಮನೆ ವ್ಯರ್ಥವೆಂದು ॥ ಪಲ್ಲ ॥

ಕಾರಣವಾಗಿ ಬಂದುದ ನೋಡಿ ಕರ್ಮದ
ಬೇರ ಕಿತ್ತಿಕ್ಕಿ ಬಿಸಾಡದೆ ಎಡೆಯಾಡಿ
ಭೂರಿಜನ್ಮದ ಬಾಧೆಗಳನುಂಡು ಕೆಡುತಿಹ
ಕ್ರೂರರ ಕಂಡು ಕಂದಿದೆನೆರ್ದೆಗೊಂಡು ೧

ತಮ್ಮೊಡಲೊಳಗೆ ತಾ ತಿಳಿಯದೆ ಮಾಟದ
ಹೆಮ್ಮೆಗೆ ಮೆಚ್ಚಿ ಹೇವರಿಸದೆ ಮುಚ್ಚಿ
ನಿರ್ಮಳ ನಿಜದ ಗಾಳಿಯ ಸೂಸಿ ನರಕದೊ
ಳುಮ್ಮಾಡಿ ಉರುಳಿ ಹೊರಳುವರ ನೋಡಿ ೨

ಪೂಸಿ ಮಲತ್ರಯವೆಂಬುದರಿಯದಲೆ ಮೆಚ್ಚಿ
ಬಿಸಿಲವಾಜಿಗೆ ಬೆರಸುವನಂತೆ ಬರಿದೆ
ಕುಸಿದಿಂತು ಗುರುನೀಲಗ್ರೀವನ ಕಾಣದೆ ನರ
ಪಶುಗಳೀಪಾಟಿ ಬೀಳ್ವುದಕೆ ಕೇಳುತಿರ್ದು ೩

೨೬

ರಾಗ: ?

ಸಾಕಿನ್ನು ತಡಿಗೆ ಸಾ[1][ಗಿ][1]ಸು ಗುರುವೆ ಭವದ ತ
ಟಾಕದಿ ಬಿರ್ದ ತರಳನ ನೋಡ ತರವೇ ॥ ಪಲ್ಲ ॥

ತಲೆಗೆಟ್ಟು ನೂಲಿನಂದದಿ ನಾನು ಲೋಕದ
ನೆಲೆದಿಳಿಯದ ಮಾಯ ಬಲೆಗೆನ್ನ ನೀನು
ಸಿಲುಕಿಸಿ ಸಿಡಿದು ಹೋಗುವದದನು ತಪ್ಪಿಸಿ
ಸಲಹೆನ್ನ ಸಕಲ ರೂಪಿನ ಪುಣ್ಯವೇನು ೧

ಕುಲುಹಿಲ್ಲ ಕುಲಕೋಟಿಯೆಂಬ ಭ್ರಾಂತಿನ
ತೊಟ್ಟಿಯೊಳು ತೊಳಲಿ ನೋಡಿದೆನು ಊರುಂಬ
ಕೆಟ್ಟಿಯೊಂದೆ ಕೆಲರೆಮ್ಮದೆಂಬಾ ಮಾತಿನ
ಮಟ್ಟವೆನಿನ್ನಾಳ್ಗೆ ಮುಕ್ತಿಗೆ ಮೂಲಸ್ತಂಭ ೨

---

[1] ೦ (ಮೂ)

ಕ್ಷಣಭಂಗುರದ ಬಾಳಿನ ದೇಹವೆಂಬುದ
ನೆಣಿಸದೆ ಹಲಜನ್ಮಕೆ ಬಿದ್ದುಹೋಹ
ಘನವನಳಿಸಿ ಘಮ್ಮನೆ ಮಹಾಮೋಕ್ಷವ
ತ್ರಿಣೆಯು ಪಾಲಿಸು ಬೇಗ ಗುರುನೀಲಗ್ರೀವಾ* ೬

೨೭

ರಾಗ : ಆಹರಿ

ಒಡವನೀ ನಿನ್ನ ಸಾರಿದರಾ ಲೋಕ
ಎಡಹಿ ಕಾಣರು ದೇವ ಏನೆಂಬೆನಿವರಾ ॥ ಪಲ್ಲ ॥

ಭಾಗ್ಯವುಳ್ಳವನ ಬಾಗಿಲ ಕಾಯುವ ನರರೆಲ್ಲ
ಉಗ್ರಕೋಪವ ತಾಳಿ ಕೊಲುವ ಕೊಲೆಗಳನೆಲ್ಲ
ಹಿಗ್ಗಿ ನೋಡುವದು ಜಗವೆಲ್ಲ ಬೇಡೆಂಬ
ಮಾರ್ಗಿಗಳ ಕಾಣೆನಿದಕೆಂತು ನಿಮ್ಮಾಣೆ ೧

ನಿನ್ನನರಿಯರು ನೀನವರ್ಗೆ ಮುನ್ನವೆ ಪೇಳ್ವೆ
ಹೊನ್ನು ಹೆಣ್ಣು ಮಣ್ಣ ಮಲತು ಕಾದುವ ಬೇಳ್ವೆ
ಗೆನ್ನ ನೀನಿರದಲ್ಲಿ ಹೊಳ್ವೆಯೇಳ್ವ
ದಿನ್ನೆಂತು ಎಲೆ ದೇವ ಎನಗೇನ ಪೇಳ್ವೆ ೨

ಒಡವೆ ವಸ್ತುಗಳಿಲ್ಲ ಓಲೈಪ ದಳವಿಲ್ಲ
ಪೊಡವಿಯೊಡೆತನವೆಲ್ಲ ಕಾಮಕಾಲರದೆಲ್ಲ
ಬಿಡದಿತ್ತ ನಿನ್ನವರನೆಲ್ಲ ನಿ
ನ್ನಡಿಗಾಣಿಸು ಬೇಗ ಗುರುನೀಲಗ್ರೀವ ನೀನಲ್ಲದಿಲ್ಲ ೩

೨೮

ರಾಗ : ಪಾಹಡಿ

ಹಾಲುಳ್ಳ ದಿನದಿ ಹಬ್ಬವ ಮಾಡದೆ
ಆಲಸ್ಯವನು ಮಾಡಲಮೃತ ವಿಷವಣ್ಣಾ ॥ ಪಲ್ಲ ॥

ಒಕ್ಕ ಹಾಲಿಂದಾದ ವಾಯುದ ಪಶುವಿನ
ತೆಕ್ಕೆಯಹಾಗಿಹ ತನುತ್ರಯದೊಳಗೆ
ಉಕ್ಕು ವಸುಧೆಗರದುರುತರವಾಗಿಹ
ಮುಕ್ಕಣ್ಣ ಸಿಕ್ಕಿ ಮುಕ್ತಿಯು ಕಾಬುದಣ್ಣಾ ೧

---

* ಇದೇ ಸ್ವರವಚನ ಈ ಪ್ರಕರಣದ ೮ನೆಯ ಕ್ರಮಾಂಕದಲ್ಲಿ ಬಂದಿದೆ.

ಪೀಯೂಷದೊಳು ಪಿರಿದಾಗಿಹ ಘೃತವನು
ಸಾಯಸದಿಂದ ಸಾಧಿಪ ತೆಱನಾ
ಕಾಯಜರಿಪು ಗುರು ಕರುಣದಿ ಸವಿದುಂಡು
ಮಾಯ ಗೆಲುವ ಮಾರ್ಗವಿದೆ ಕಾಣಿರಣ್ಣಾ

ಒಂದ ತಿಳಿದು ಎರಡಳಿದು ಮೂಱಱ ಮೇಲೆ
ನಿಂದಿಹವಾಱನಿಟ್ಟಿಸಿ ನೋಡುತ
ಬಂದ ಸುದ್ರವ್ಯವ ಗುರುನೀಲಗ್ರೀವಗೆ
ಸಂದೇಹವಳಿದು ಅರ್ಪಿಸುವದೆ ಮೋಕ್ಷವಣ್ಣಾ ೩

೨೯

ರಾಗ : ಒಡ್ಡಿ ಧನ್ಯಾಸಿ

ಬಳಲಬೇಡ ಬರಿದೆ ಭ್ರಾಂತು ಕಾಕಗಳಿರಾ ಬಯಲ
ಕಳಿತ ಹಣ್ಣುಕಾಲ ಹರಗೆ ಕರ್ಮಿಗಳಿರಾ ॥ ಪಲ್ಲ ॥

ಬೀಜವಲ್ಲದೆ ಬಿತ್ತಿ ಬೆಳೆದ ವೃಕ್ಷದ ಫಲವ
ಓಜೆಗೆಟ್ಟು ನೀವು ಬಂದು ತಿಂಬ ಗೆಲವ
ಮಾಜಮಾಣ್ದುದೊಳತಿನ್ನು ನಿಮ್ಮ ಚಲವ ಈಗ
ರಾಜಶೇಖರನ ಹಣ್ಣಗಾಡಿ ಕೊಲುವಾ ೧

ಒಂದು ಕಣ್ಣಿನಿಂದಲಿಷ್ಟು ವಾಸಿ ಏತಕೆ ನೀವು
ಬಂದ ಹಾದಿಯನು ಹತ್ತಿ ಬಯಸಲೇತಕೆ
ಹಿಂದು ಮುಂದೆ ನೋಡಿಕೊಳ್ಳಿ ಹೇಳಲೇತಕೆ ಈಗ
ಇಂದುಧರನ ಹಣ್ಣಿಗಾಗಿ ಸಾಯಲೇತಕೆ ೨

ಹೊಟ್ಟೆ ತುಂಬದಿದು ಪಾತವಾಱಸಲ್ಲ ಕಣ್ಣು
ಗೆಟ್ಟು ಬಂದು ಬೀಳೆ ನಿಮಗೆ ದೊರೆವುದಲ್ಲ
ದಿಟ್ಟ ಮೂಱ ಗುರುನೀಲಗ್ರೀವನಲ್ಲದಿದನು
ಮುಟ್ಟುವರ ಕಾಣೆ ಮಾತನಾಡ ಸಲ್ಲಾ ೩

೩೦

ರಾಗ : ಕಲ್ಯಾಣ

ಅಕ್ಕ ಕಂಡೆ ನೋಡೆ ಒಂದು ಅತಿ ಸೋಜಿಗವ ನಿಂದು
ಬಕ್ಕಟ ಬಯಲೆಂದು ಬಹುರೂಪಾದುದೊಂದು ॥ ಪಲ್ಲ ॥

ಕಾಮನಾಗಿ ಕಾಲನಾಗಿ ಕಾಡುವ ಕರ್ಮ ತಾನಾಗಿ
ನಾಮವಾಗಿ ಸೀಮೆಯಾಗಿ ಸಾಧಿಸಲಾಗಿ
ಭೂಮಿಯಾಗಿ ಭೂತವಾಗಿ ಭುಂಜಿಸುವಾತ ತಾನಾಗಿ
ಈ ಮಹಿಮೆಯಲಾಡಿ ವಿಶ್ವವ ಮಾಡಿ ೧

ಒಕ್ಕಲಾಗಿ ಊರಾಗಿ ಒಲುಮೆಯ ಸತಿಯಾಗಿ
ಅಕ್ಕರುಳ್ಳ ಪತಿಯಾಗಿ ಭೋಗಿಸಲಾಗಿ
ಮಕ್ಕಳೆಂಬ ಮನೆಯೆಂಬ ಮಾಯಕತೀತನೆಂಬ
ವಕ್ಕಣೆಗೆ ಸಲೆ ಸಂದು ವಾಸೆಗಿದೊಂದ ೨

ರೂಹಿಲ್ಲ ರುಚಿ ಮೋಹಿತನಲ್ಲ ಸಾಹಿತ್ಯವಲ್ಲ
ಸಾಹಿತ್ಯಗಾರನಲ್ಲ ಸಂಸಾರಿಯಲ್ಲಾ
ಊಹಿಸಲಾರಿದೆನ್ನ ಗುರುನೀಲಗ್ರೀವ ತನ್ನ
ಈ ಹೊತ್ತು ಕಂಡೆ ಕಾಣೆ ನಿನ್ನಾಣೆ ೩

೩೧

ರಾಗ : ಶಂಕರಾಭರಣ

ಲಿಂಗವ ನಂಬಿರೋ ಪ್ರಾಣಲಿಂಗವ ನಚ್ಚಿರೋ ನೀವು
ಭಂಗಬಡುವ ಭವದ ತೊಡಕ ಹಿಂಗಿ ಹೋಗಬಲ್ಲರೆ ॥ ಪಲ್ಲ ॥

ನಾಡ ತಿರುಗಿ ನರಳಲೇಕೆ ಕಾಡ ಹೊಕ್ಕು ಕೊರಗಲೇಕೆ
ಓಡಿಯಾಡಿ ಹಲವು ದೈವಕೆ ಒಡಲನೊಪ್ಪಿಸಲೇತಕೆ
ಬೇಡವಿನ್ನು ಬಯಲಸೊಮ್ಮು ನೋಡಿ ನಂಬಿ ಪಾಪವೆಂಬ
ಈಡಿನೊಳಗೆ ಇರುಳು ಹಗಲು ಮೂಡಿ ಮುಳುಗಲೇತಕೆ ೧

ಹಾತವಾರಿ[?] ಹಲವು ಶಠೆಯ ಮಾತ ಕೇಳಿ ನಂಬಿ ನಚ್ಚಿ
ಧಾತುಗೆಡಿಪ ಕಾಲನವರ ಭೀತಿ ನಿಮಗೆ ಬಿಡುವುದೆ
ಯಾತಕಿಷ್ಟು ಬರಿದೆ ಚಿಂತೆ ನೀತಿವಿದರ ನುಡಿಯ ಕೇಳಿ
ಭೂತ ಪ್ರಾಣಿಯಾಗಿ ನೋವ ರೀತಿಗೆಡಿಪಲಾಪರೆ ೨

ಹೊತ್ತು ಹೋಕ ಮಾಡಬೇಡ ಸತ್ತು ಹುಟ್ಟು ಕರ್ಮ ಬೇಡ
ವೊತ್ತಿ ಮುಚ್ಚಿದು ಒಳಗ ತಿಳಿಯೆ ನಿತ್ಯ ನಿಮ್ಮೊಳು ತೋರುವ
ವಸ್ತು ಸದ್ಗುರು ನೀಲಗ್ರೀವನ ಭಕ್ತಿವಿಡಿದು ಭಜಿಸಿಬಿಡದೆ
ಮುಕ್ತಿಪಥವು ದೊರೆವುದೀಗ ಸತ್ಯವಿದಕೊ ಸಾರಿದೆ ೩

೩೨

ರಾಗ : ಶಂಕರಾಭರಣ

ಕಷ್ಟ ಕಾಣಿರೋ ದೊಡ್ಡ ಕಷ್ಟ ಕಾಣಿರೋ
ನಷ್ಟದೇಹವಿಡಿದು ನೀವು ದೃಷ್ಟಿಮೂಱಿ ಕಾಣ್ಬುದು ॥ ಪಲ್ಲ ॥

ಮುಂದುಗಾಣದಿಂದು ನಡೆದು ಬಂದು ಭವದ ಮುಖದಿ ಕೆಡದು
ತಂದೆ ತಾಯಿ ಸತಿ ಸುತರು ಬಂಧು ಬಳಗವೆಂಬುದು
ಚಂದದೋಱುವಿಂದ್ರಚಾಪವೆಂದು ಬಗೆಯ ದಿವಕೆ ಬೆರೆದು
ನಿಂದ ನಿಜದ ಸುಧೆಯ ಮಱೆದು ಇಂದುಧರನನಱಿವುದು ೧

ಆಸೆ ಪಾಶ ರೋಷವೆಂಬ ಲೇಸು ನಿಮ್ಮ ಮಱಿಸಿ ಮೆಱಿಸಿ
ಘಾಸಿ ಮಾಡಿ ದೋಷವೆಂಬ ರಾಶಿಯೊಳಗೆ ರಾಜಿಸಿ
ಈಸಿಯಾಡಿ ಇರುಳು ಹಗಲು ಮೋಸದಿಂದ ಹದಿದು ಕುದಿದು
ಕಲಶನಡಿಯ ಪಿಡಿದು ಭಜಿಪ ವಾಸಿ ನಿಮಗೆ ದೊರೆವುದು ೨

ನಡೆಯಬೇಕು ನಂಬಿ ದೃಢವ ಪಿಡಿಯಬೇಕು ಹೀನಜನ್ಮವ
ಕಡಿಯಬೇಕು ಕಾಯ ಕಾಲರಡಗಿ ತೋಱುವ ಮಾಟವ
ಬಡಿಯಬೇಕು ಬಂಧನಗಳ ತೊಡಕುಗೆಡದೆ ಬರಿದೆ ಬಂದು
ಒಡೆಯ ಗುರುನೀಲಗ್ರೀವನ ಅಡಿಯ ಕಂಡೆನೆಂಬುದು ೩

೩೩

ರಾಗ : ದೇಶಿ

ಏನ ಪೇಳುವೆನಕ್ಕ ಎನ್ನ ಪತಿಯ ವಿಪರೀತವಾ
ತಾನೊಬ್ಬ ಹಲವು ಮುಖದಲಿ ಕಾಡುವದು ॥ ಪಲ್ಲ ॥

ಮಾನಿ ಇವಳೆಂದೆನ್ನ ಮನವನಾರೈಯದೆ
ನಾನಾ ಕಲೆಗಳ ತೋಱಿ ಎನ್ನ ಕೇಳಿದರೆ
ನಾನು ಬಲ್ಲೆನೆ ಮಱನ್ನ ನಾಚಿಸುವದೇಕೆನ್ನ
ಹಾನಿ ತನ್ನದಾದ ಮೇಲೆ ೧

ಪರಿಪರಿಯ ಗಂಧ ರುಚಿ ರೂಪು ಸೋಂಕಿನ ತೆಱನ
ಪರಿಪರಿಯ ಶಬ್ದಾದಿ ಭೇದದಿರವ
ಪರಿಪರಿಗಳಿಂದೆಮಗೆ ಪರಾಂಬರಿಸಿ ನೀಡೆಂದು
ಕರಕರಿಪರೈವರಿಗೆ ಕರೆದಿತ್ತನಲ್ತೆ ೨

ತಿರುಹು ಮುರುಹುಗಳಿಂದ ತಳ್ಳಂಕಗೊಳಿಸಿದರೆ
ಮರುಳುತನವೆನಗಿಲ್ಲ ಮೊದಲಂದದಿ
ದೊರೆದ ಸುಖದುಃಖವನು ಗುರುನೀಲಗ್ರೀವನಿಗೆ
ಯರವಳಿದು ನೀಡಿ ಸುಖಿಸುವೆನು ನಿನ್ನಾಣೆ ೩

೩೪

ರಾಗ : ಸಾಳಂಗ

ಹವಣುಗಾಣದೆ ಹೀಗೆ ನಡೆದು ಲೋಕ
ಜವನ ಕಾಲಲಿ ಬಿದ್ದು ಕೆಡುತಿದೆ ಮಡಿದು ॥ ಪಲ್ಲ ॥

ಬಯಲ ದೇಹವು ತನ್ನದೆನ್ನದು ಮೆಚ್ಚಿ
ಸಯುವೆಂದು ಸಕಲದೋಷವ ನೆಮ್ಮಿ
ನಿಂದು ಜಯುವಪಜಯು ಗಾಣ
ದಿಂದು ಮಾಯು ಹೊಯಿಗುರಿಯುಂತೆ ಹೋಗುತಲಿ ಬಂದು ೧

ಪ್ರಾಣಲಿಂಗವ ಹೋಗಲಾಡಿ ಬಂದು
ಕೇಣಿಯುಪಸರದೊಳಿಹ ಕಲ್ಲ
ನೋಡಿಯುನಿತ್ತೊಂದ ಬೇಡಿತಂದು
ಮಾಣದೆ ಕಟ್ಟಿ ಮೋಕ್ಷವ ಕಡೆ ಮಾಡಿ ೨

ಗುರು ಲಿಂಗ ಜಂಗಮುವೆಂಬ ಗುಪ್ತ
ದಿರವನರಿಯದೆ ಬೆರಿದರಿಟ್ಟುಕೊಂಬ
ನರಮನುಜರ ನೋಡ ನಂಬ ಎನ್ನ
ಗುರುನೀಲಗ್ರೀವ ತನ್ನವರ ತಾನೆಂಬ ೩

೩೫

ರಾಗ : ?

ಕಾಣಬಾರನು ಕಾಣಿರಣ್ಣಾ ಮಾಯು
ಕೇಣಿವಿಡಿದು ಕೇಡುಗರಿಗೆ ಮುಕ್ಕಣ್ಣಾ ॥ ಪಲ್ಲ ॥

ಮತಿ ಮಂದವಾದುದಱಿಂದ ಮುಂ
ದತಿಶಯುಗೆಡಿಸಿ ಮತ್ಸರ ಮದದಿಂದ
ಸತಿ ಸುತ ಸಲೆಯರ್ಥದಿಂದ ನಂಬಿ
ಕೃತಕ ದೇಹಿಗಳು ಮೆಚ್ಚಿದ ಮಾಟದಿಂದ ೧

ವೇದಶಾಸ್ತ್ರವ ಬಲ್ಲೆವೆಂದು ನಾನಾ
ವಾದದ ವಾಸಿಗಳಿಗೆ ಸಲೆ ಸಂದು
ಭೇದಬುದ್ಧಿಗಳಿಂದಲಿಂದು ತಮ್ಮ
ಹಾದಿಯ ತಾವಱಿಯದರಿಗೆಂದೆಂದು ೨

ತನುವಿನೊಳಗ ಕಾಣದನಕಾ ತಮ್ಮ
ಜಿನುಗುವ ಕುಲಗೋತ್ರವ ಹಿಂಗದನಕಾ
ಮನದ ಮಾನ ಮಾಜದನಕಾ ಎನ್ನ
ಗುರುನೀಲಗ್ರೀವನ ಕೂಡದನಕಾ ೩

೩೬

ರಾಗ : ಭೈರವಿ

ಅಂದಿಂದ ಎಂದೆಂಬ ಸಂದೇಹದೊಳಗೆ
ಹೊಂದಿ ಹೊರಳುತಿಹ ಜಡಜೀವಿಗಳಿಗೆ ಅಂದಿಂದು ॥ ಪಲ್ಲ ॥

ಹಿಂದಣ ವಸ್ತು ತಾನಿಂದೊಂದು ಪರಿಯೆ
ಹಿಂದಣ ದೇಹ ತಾನಿಂದೊಂದು ಪರಿಯೆ
ಹಿಂದಣ ಭೂತಗಳಿಂದೊಂದು ಪರಿಯೆ
ಹಿಂದುಗಾಣದಲಿಂದು ನುಡಿದರೆ ಸರಿಯೆ ೧

ಹೀಗೆಂಬ ನುಡಿಗೆ ಹೇಸದೆ ಸೊಕ್ಕಿ ಬೆರೆದು
ಹೋಗಾಡಿ ಪ್ರಾಣವ ತಾವು ಮಱೆದು
ಆಗುಹೋಗಿನ ನರಕವನುಂಡು ದಣಿದು
ಲಾಗನರಿಯದ ನೀಚರು ಹಲುಗಿರಿದು ೨

ಬೇಡವೀ ಮಾತು ಬೇಕಾದರೆ ನೋಡಿ
ಆಡಲೇತಕೆ ಅಂಗವಿಡಿದಿಹ ಗಾಡಿ
ರೂಢೀಶ ಗುರುನೀಲಗ್ರೀವನ ತಾ ಕೂಡಿ
ಈಡಿನ್ನು ನಿಮ್ಮ ಕರ್ಮವ ಹೋಗಲಾಡಿ ೩

೩೭

ರಾಗ : ?

ನೋಡುವ ನಡೆ ನಾಡ ಬಹುರೂಪಿನವನಾ
ಗಾಡಿಯುಂದಾವರ ಕಾಡುತಿಹನಾ ॥ ಪಲ್ಲ ॥

ಗಂಡೂ ಹೆಣ್ಣಾಗಿ ಬಂದಿರುವನ ನೆಲೆಯು
ಕಂಡವರಿಲ್ಲ ಕರ್ಮದದೊಂದೂ ಕಲೆಯು
ಮಂಡಲದೊಳರಿ ಮರಹಿನ ಬಲೆಯ
ಉಂಡು ಕೊಬ್ಬಿಸಿ ಉರುಳಿಸುವ ನೆಲೆಯು ೧

ತಾನೊಬ್ಬ ಹಲವು ರೂಪಿನ [1][ವೇಷ][1]ದೊಟ್ಟು
ನಾನಾ ವಿಧದ ಕುಟಿಲಕೆ ಮನವಿಟ್ಟು
ಮಾನವ ಜನಕೆ ಮಾಡಿದ ತಿಟ್ಟವಿಟ್ಟು
ಧ್ಯಾನಿಸಿ ತಿಳಿಯ ದೇವನ ಗುರುತಿಟ್ಟು ೨

ಕಣ್ಣುಗೆಡಿಸಿ ಕಾಡುತಿಹ ಕಾಣೆ ನೆರೆದ
ಬಣ್ಣದ ಹಿರಿಯರ ಬಗೆಗೆ ಸಿಕ್ಕಿರದ
ಉಣ್ಣದೂಟವನುಂಡು ಉರಿಯೊಡವೆರೆದ
ಚಿಣ್ಣರ ಗುರುನೀಲಗ್ರೀವ ತಾ ಹೊರೆದ ೩

೩೮

ರಾಗ: ದೇಶಿ

ಎನ್ನನೇಕೆ ಕಾಡುವಿರಿ ಎನ್ನನೇಕೆ ಬೇಡುವಿರಿ
ಎನ್ನ ನೀವು ಕರಕರಿಸದಿರಿ ಕರ್ಮಗಳಿರುವ ॥ ಪಲ್ಲ ॥

ಉಣ್ಣದೂಟವನುಂಡು ಉರಿಯ ತೆಕ್ಕಿಸಿಕೊಂಡು
ಹುಣ್ಣೊಡಲ ನೆಱೆ ಸುಟ್ಟು ಹುರುಳುಗೆಟ್ಟು
ಬಣ್ಣವಳಿದುಂದೆ ನೋಡಿ ಬಯಸಿ ಬೋಧಿಪನಾಡಿ
ತಣ್ಣಗಾಗಿ ನೀವಿನ್ನು ತೆರಳುವದೆ ಚೆನ್ನು ೧

ನಿಮ್ಮೊಡೆಯನಿರ್ದಾಗ ನಿಮ್ಮರಸುತನವೀಗ
ನಿಮ್ಮೊಡೆಯನುಂಟೆ ನೀವು ಬರಿಯ ಬಂಟೆ [?]
ಎಮ್ಮ ರಾಯನ ರೀತಿ ಎನಗೆ ಪೇಳಲು ಭೀತಿ
ಕಮ್ಮಸೋಲನ ಸುಟ್ಟು ಕರ್ಮಹರನ ಕೊಟ್ಟೆ ೨

ನೀಡುವರೆ ಕೈಯಿಲ್ಲ ನೋಡುವರೆ ಕಣ್ಣಿಲ್ಲ
ಬೇಡಿ ಬಾಯಾಱಿ ಶ್ರಮಗೊಳಲಿ ಸಲ್ಲ
ರೂಢಿಗಧಿಪತಿ ಗುರುನೀಲಗ್ರೀವನ ಬೆರೆದು
ಕೂಡಿದವರೊಳು ಕುಟಿಲದ ಬೀಜವಿರದು ೩

[1] ವೇರ(ಮೂ)

೩೯

ರಾಗ : ಸಾಳಂಗ

ಏನ ಹೇಳಲಿ ಎನ್ನ ಮನವೆ ನಿನ್ನ
ಧ್ಯಾನದ ಫಲವು ಅನುವಶಾನವೇ ॥ ಪಲ್ಲ ॥

ಮಾಯ ಮೋಹಕ್ಕೆ ಮುಂದುವರಿದೆ ಬಂದು
ಕಾಯವಿಡಿದ ಕೆಡಿಸಿರದೆ
ಬಾಯ ಬಿಡುವೆ ಭಂಗಕಿಙದೆ ಬಂದ
ಸಾಯುಸವನುಂಡು ಸುಮ್ಮನಿರದೆ ೧

ಹಲಬರೆಲ್ಲರು ಹಾಲ ಕುಡಿಸಿ ದೊಡ್ಡ
ಬಲೆಯ ಬಾಯಲಿ ಕುಳ್ಳಿರಿಸಿ
ಛಲವನಳಿಸಿ ಛಂದವೆರಸಿ ಮೂಙ
ಮಲವ ಮಾಟ ಕೊರಗಿ ೨

ಎಚ್ಚೆಙಾಗಿರು ಎರಡಳಿದು ವಂದ
ನಿಶ್ಚೈಸು ನಿಜದಿ ದೃಢವಿಡಿದು
ಬಚ್ಚೆಮಾತು ಬಯಲ ಸೊಮ್ಮ ತಿಳಿದು ನಂಬಿ
ನಚ್ಚಿ ಗುರುನೀಲಗ್ರೀವನಡಿವಿಡಿದು ೩

೪೦

ರಾಗ : ಬಹುಳಿ

ಮನವೇ– ಹೆದ್ದಾರಿಯನು ಬಿಟ್ಟು ಹೆರೆ ಸಾರುವ ಕಡೆಗೆ
ಕ್ಷುದ್ರಹಾದಿಗೆ ಹರಿದು ಮನವೇ ॥ ಪಲ್ಲ ॥

ಮನವೇ– ಬುದ್ಧಿಗಾಣದೆ ನಿನಗೆ ಭವದ ಮಾರ್ಗಗಳೊಳಗೆ
ಬಿದ್ದು ಸಕಲವನುಂಡು ಮನವೇ
ಹೊದ್ದಿ ಹೋರಟೆಯೊಳಗೆ ಹೊದ್ದದಿರು ಇದ್ದ ಕಡೆ
ಗೊದ್ದು ನೂಕುವದೊಳ್ಳಿತು ಮನವೇ ೧

ಮನವೇ– ಪಶು ನೀನು ಪಾಪಿಗಳ ಪರಿಣಾಮಕೆಳಸಿ ನಿನ್ನ
ಅಸುವ ನೀಗುವದೇನು ನೀನು ಮನವೇ
ಪಿಸುಣರುಗಳೊಡನಾಡಿ ಪಿರಿದು ಬಳಲಿದೆ ನೋಡಿ
ಶಶಿಧರನ ಶರಣುವಿಡಿ ಮನವೇ ೨

ಮನವೇ– ಇನ್ನಿತ್ತ ಬಾರದಿರು ಗನ್ನಗತಕವನುಳಿದು
ನಿನ್ನ ತಾ ಸಾರು ನೀ ಸೇರು ಮನವೇ
ಎನ್ನಾಳ್ದ ಎನ್ನ ಗುರುನೀಲಗ್ರೀವನ ನೆರವು
ದುನ್ನತದ ಪಥವಿದಕೊ ಮನವೇ ೩

೪೧

ರಾಗ : ?

ಇವರು ನಿಮ್ಮೊಡವೆರವ ವಿವರವಾವುದು ದೇವ
ಭವರೋಗದೊಳು ಬಳಲುವ ಜೀವರುಗಳು ॥ ಪಲ್ಲ ॥

ಪಡೆದರ್ಥವನು ಬಚ್ಚಿದೆ ಪರಸಿ ಕೆಡಿಸುವರಿರದೆ
ಕಡೆ ಮೊದಲು ಗಾಣದಲಿ ಕಪಟದಲಿ ತೊಳಲಿ
ಎಡೆವಿಡದೆ ವೇದಿಗಳು ಎಡೆಗೊಂಡ ತನುವಿನೊಳು
ಕಡೆಹಾಯಲಿಂತು ಕರ್ಮರ ನಡತೆಯಿಂತು ೧

ಕ್ಷಣದಲ್ಪಸುಖವುಂಡು ಕಷ್ಟಕೋಟಿಯು ಕಂಡು
ಎಣಿಸದಧಮರು ಹೆಚ್ಚಿ ವೇಷಧರರು ಮುಚ್ಚಿ
ಅಣುಕೆಂದು ಅಲವತೆಗೆ ಆಸೆಯೆನಿಸುವ ಬಲೆಗೆ
ಮಣಿದು ಬಿದ್ದರು ಉರುಳಿ ಮಲದಲಿ ಹೊರಳಿ ೨

ಕಾಲುಲಿಲುಗಳಿಡಿದು (?) ಕಾಲಸರ್ಪನ ಬಡಿದು
ಹಾಲನುಣ್ಣದೆ ಬಿಟ್ಟು ಹಮ್ಮಿ ನಲಿಯೆ ಕೆಟ್ಟು
ಕಾಲನಲೆಯೊಳಗಿರುವರು ಕೆಡೆದು ಬಿದ್ದರು ಗುರು
ನೀಲಗ್ರೀವನದೊಂದು ನಿಜವಱಿವದೆಂದು ೩

೪೨

ರಾಗ : ಭೈರವಿ

ಇದಕೇನು ಗತಿಮತಿಯೆ ಎನ್ನ ತಂದೆ
ಮದಮುಖರೊಡನಾಡಿ ಬಹಳ ನಾನು ನೊಂದೆ ॥ ಪಲ್ಲ ॥

ಬಲ್ಲವರಂತೆ ಬಾಗಿಲ ಕಾಯಿದು ಬಂದು
ಬೆಲ್ಲವ ಮೆಲಿಸಿ ಬೆವಗಿಸೀಗ[?] ತಾವು ನಿಂದು
ನಿಲ್ಲಲಿ ಸಡಲೊಂದು ನೀದೋಱಿಸೆಂದು
ಖುಲ್ಲ ಮನುಜರಾಡಲು ಸುರಿದೆ ಸುರಿದೆ ನಿಂದು ೧

ಆಡಿದೆನು ಕಾಲು ಮೊದಲಾಗಿ ತೋಳಿ
ಬೇಡ ನಿಮಗೆ ಸಾಧ್ಯವಲ್ಲೆಂದು ಸಾಚಿ
ಮೂಢತನದಿ ಮುಂದುಗಾಣದೆ ಮೀಟಿ
ಪಾಡುಗೆಡಿಸ ಪಾತಕರಿಂತು ದೂರಿ ೨

ಜಾರೆಯರಿರವ ನಂಬಿದ ಜಾಣರೆಲ್ಲ
ಬಾರದ ಭವದಿ ಬರ್ಪುದು ತಪ್ಪದೆಲ್ಲ
ಕ್ರೂರ ಕುಟಿಲ ವಿದ್ಯದ ಕುಂದನೆಲ್ಲ
ಮಾರಾರಿ ಗುರುನೀಲಗ್ರೀವ ತಾ ಬಲ್ಲ ೩

೪೩

ರಾಗ : ?

ಭಕ್ತಿವಟಿಯದ ಭವರೋಗರೆಲ್ಲ
ಮುಕ್ತಿಯ ಮುಖಕೆ ಕಂಟಕರಾದರೆಲ್ಲ ॥ ಪಲ್ಲ ॥

ಪಶುವಿನಂದದಿ ಬಂದು ಪಸರಿಸಿ ನಿಂದು
ಹುಸಿ ತನು ಮನ ಧನ ಹುರುಳಿಲ್ಲವೆಂದು
ಬಿಸುಟು ಬಿಟ್ಟವರಂತೆ ಬರಿಮಾತನಂದು
ಉಸುರಿದರದರಿಂದಲಾದುದೇನಿಂದು ೧

ಬೆಕ್ಕು ಶೀಲವ ಕಟ್ಟಿ ಭವಗೆಟ್ಟುದುಂಟೆ
ಕುಕ್ಕುಟ ಸುಧೆಯ ಸೂಪದಲುಂಟೆ
ಸೊಕ್ಕಿದ ನರನಿಗೆ ಹರಪೂಜೆಯುಂಟೆ
ಮುಕ್ಕಣ್ಣನೊಲವಿಲ್ಲದವಗೆಚ್ಚರುಂಟೆ ೨

ಸಾಧನೆಯನು ಮಾಡಿ ಫಲವೇನು ಹಂದೆ
ಕಾದ ಬಲ್ಲರೆ ರಣದಲಿ ನಿಂತು ಮುಂದೆ
ವಾದಿಸುತಿಹ ಮಾಯನೊ ರಸದ ಹಿಂದೆ
ಹಾದಿಗಾಣರು ನಿಮ್ಮ ಗುರುನೀಲಗ್ರೀವ.ತಂದೆ ೩

೪೪

ರಾಗ : ಪಾಹಡಿ

ಇದಕಾಗಿ ಸಾರಿದೆ ನಿಮ್ಮ ಪಾದವ ಎನ್ನ
ಎದೆಗೆಡಿಸುವ ಮಾಯು ಸದೆವ ಮಹಿಮನೆಂದು ॥ ಪಲ್ಲ ॥

ಹಿಂದೆ ಕೆಲವು ದಿನ ಹಿತವಂತೆಯಳ ಹಾಗೆ
ತಂದೆ ತಾಯಿ ಸತಿ ಸುತರೆಂದು ತೋಱಿಸೆ ಇದು
ತಿಂದು ತೇಗುವ ಮಾರಿಯೆಂಬುದ ತಿಳಿದು ನಾನು
ಬಂದು ಮಱೆವೊಕ್ಕೆನಿಂದುಧರ ಪಾಲಿಸೋ ೧

ಹೆದಱಿದೆ ನೋಡಿ ಹೇರೊಡಲದೈತೆಯದೊಂದು
ಅದಟಗಾಱದೆ ಆಪೇಯು ತನುವ
ಮೆದೆಗೆಡಹಿದೆ ನಿಮ್ಮ ಹೃದಯ ಕಮಲದಲಿ ಉದಿ
ಸಿದೆನಾಗಿ ನಿಮ್ಮ ಮದನಹರ ರಕ್ಷಿಸಾ ೨

ಕಂಡೆ ನೀ ಮರುಳುಯಾಟವ ಕಾಲು ಮೊದಲಾಗಿ
ಲೆಂಡೆಯಿವಳು ಮೂಱು ಲೋಕವನು
ಭಂಡುಮಾಡಿ ಭವಮುಖದಿ ತಿಂದುಗುಳುವ
ಮಂಡೆಯು ಕಡೆಮಾಡು ಗುರುನೀಲಗ್ರೀವಾ ೩

೪೫

ರಾಗ: ?

ದೇವ ನಿನ್ನ ಕಾಣದೆ ಲೋಕವೆಲ್ಲ ನೋಡು
ಬನ್ನಬಟ್ಟು ಹೋಗುತಿದೆಯಲ್ಲಾ ॥ ಪಲ್ಲ ॥

ಹೆಣ್ಣು ಹೊನ್ನು ಮಣ್ಣು ಪ್ರಾಣವೆಂದು ತೋಱಿ
ಕಣ್ಣು ಕಟ್ಟಿ ಕಾಡುವದಿದೆಂದು
ಹಣ್ಣ ಬಿಟ್ಟು ಜಗಕೆ ಒಲಿಯು ತಂದು ಕಾಣ
ದಣ್ಣಗಳಿಗೇನ ಮಾಡಲಿಂದು ೧

ಬಿರ್ದ ಬಳಿಯುಲಱಿಸಿಕೊಳ್ಳಲಾಱದೆ ದೂರ
ಎದ್ದು ಹೋಗಿ ನೋಡೆ ಕೈಗೆ ಬಾಹದೆ
ಕದ್ದು ಕೋಟಲೆಗೊಂಡರಹದೆ ತಮ್ಮೊ
ಳಿರ್ದ ವಸ್ತುವ ಕಂಡು ಕಾಣದೆ ೨

ಮೇಲಗಾಣದೆ ಮದವುಕ್ಕಿ ತಾವು
ಕಾಲನ ಕಾಲಲಿ ಬಂದು ಸಿಕ್ಕಿ
ಆಲಿಪರಿದು ನರಕದಿ ಮೈಯಿಕ್ಕಿ ಗುರು
ನೀಲಗ್ರೀವನ ಮಱೆದು ಸೊಕ್ಕಿ ೩

೪೩

ರಾಗ : ದೇಶಿ

ಸಾಕಿನ್ನು ಸಂಸಾರ ಸಕಲಕರ್ಮಕೆ ದೂರ
ನಾ ಕಷ್ಟ ಬಡಲಾರೆ ಈ ಕಪಟ ಲೋಕವನು
ನಾ ಕಳಿಯಲೆಂತು– ದೇವಾ ॥ ಪಲ್ಲ ॥

ಕಂಡೆ ನಾನಿನ್ನ ಮಹಿಮೆಯಂದೊಂದು ಲೀಲೆಯನು
ಅಂಡಲೆವುತಿಹ ಮಾಯ ಅಸಮಾನದ ಗಾಡಿಯನು
ಮಂಡಲುಗಳ ಮೂಱುಮಾ ವಿಧಿಗಳಲಿ ನೊಂದು ಭಂಡಾಗಿ ಹೋಗಲಿಂದು
ಮಂಡೆದೊನದೀವ ನೋಡಿ ಮಹದೈನ್ಯದಲಿ ಬೇಡಿ
ಕೊಂಡಡಿಯನು ಸಾರಿದೆನು ಕೋಟಿ ಭವಭಾರವನು
ಖಂಡಿಸುವ ಕಾಲಹರ ಕಾಮಾರಿ ನೀನೆಂದು ಹಿಂಡಗಲಿ ಬಂದೆ ಕಾಯೋ–ದೇವಾ ೧

ಆರೈದು ನೋಡಿದೊಡೆ ಅಷ್ಟು ಭಾಗ್ಯಗಳೊಳಗೆ
ಸಾರಿದರೆ ಸುಖವಿಲ್ಲ ಸಕಲ ಪಾಪದ ಬಲೆಗೆ
ದಾರಿಯಿದು ತಾನೆಂದು ದಾಟಿ ಬಂದೆನು ಕಡೆಗೆ ಪಾರವೇದಿಸು ಪಾಹಿಮಾಂ
ಕ್ರೂರರುಗಳೆಡೆಯಾಟ ಕುಟಿಲ ಕೂಳರ ಕಾಟ
ಬೇರು ಬಿಟ್ಟಿದೆ ಜಗಕೆ ಮಾರಿ ಮಂಡಿಸಿಕೊಂಡು
ಹೀರಿ ಹಿಪ್ಪೆಯ ಮಾಡಿ ಹಿಡಿದುಗುಳುವದ ಕಂಡು ಮಾರಾರಿ
ನಿಮ್ಮ ಮಱೆಹೊಕ್ಕೆನು–ದೇವಾ ೨

ಕಾಲುಗೆಟ್ಟೆನು ಹೋಗಿ ಬರುವ ಬಟ್ಟೆಯ ನೆನೆದು
ಆಲಿಗಾಣದ ಅಘದ ಬೀಡಿನೊಳು ಮೈಮಱೆದು
ಬಾಲಯೌವನ ವೃದ್ಧರೆಂಬ ಮೂಱುರವಸ್ಥೆಯಲಿ ಆಲಿಪರಿದಳಲಿ ಬಳಲಿ
ಕಾಲವನು ಕಳಿದಿಂತು ಕಡೆಹಾದ ಮೇಲಿನ್ನು
ಆಲಸ್ಯವನು ಮಾಡಲಧಮತನ ನೀನಿದನಿನ್ನು
ಪಾಲಿಸು ನಿರ್ಮಲಯ ಪದಗತಿಯನೆನಗೆ ಗುರುನೀಲಗ್ರೀವನೆ
ನಂಬಿದೆ– ದೇವಾ ೩

೪೭

ರಾಗ : ಸಾಳಂಗ

ತಾಯ ಕಂಡೆನು ಎನ್ನ ಪೊರೆವಾ ಉ
ಪಾಯದಿಂದೆನ್ನ ತನ್ನೊಳಗಿಟ್ಟು ನೆರೆವಾ ॥ ಪಲ್ಲ ॥

ತಂದೆಗೆ ವಧುವಾಗಿ ಬಂದು ಸಲೆ
ಸಂದು ಮಗನಿಗೆ ಮಾನಿನಿಯಾಗಿ ನಿಂದು
ಮುಂದೆ ಮೋಕ್ಷವನೀವರೆಂದು ಸಲೆ
ಸಂದು ಜನನಿಯಾಗಿ ಸಲಹುವಳಿಂದು ೧

ಇವರಿಗೆ ಅನುಕೂಲೆಯಾಗಿ ಎನ್ನ ನೋಯಿ
ದವರೊಳಗಿಟ್ಟು ನೆಲೆದೋಱಲಾಗಿ ಮೈ
ಮಱೆಯದೆ ಕೂಡಲಾಗಿ ಕಡೆ
ಕೈವಲ್ಯದೊಳಗೆ ನಿರ್ವಯಲ ನಾ ಹೋಗಿ ೨

ಮೂಱು ಲೋಕವ ತಾನೆ ಮಾಡಿ ತಮ್ಮ
ತಾವಱಿಯದ ಹಾಗೆ ಮಱವೆಯ ಮಾಡಿ
ಗಾಱು ಮಾಡುವರ ನಾ ನೋಡಿ ಆಱು
ಮೂಱರ ಗುರುನೀಲಗ್ರೀವನ ಕೂಡಿ ೩

೪೮

ರಾಗ : ?

ಹೀಗಾಗಬೇಕು ನಿನ್ನೊಲವು ಜಗದಾಗು
ಹೋಗಿಗೆ ನೂಕದಿರಲೆನ್ನ ಗೆಲವು ॥ ಪಲ್ಲ ॥

ಲೋಕದ ನೆರವಿಗೆ ತರದೆ ಎನ್ನ
ಈ ಕಪಟರ ಮಾಯಕೆ ಇದಿರಿಡುವರೆ
ಜೋಕೆದಪ್ಪದೆ ಜಾಣುಗೆಡದೆ ನಿನ್ನೊ
ಳೇಕವಾಗುವ ಮಚ್ಚರನು ಕುಂದುಗೊಡದೆ ೧

ಬೂದಿ ಮುಚ್ಚಿದ ಕೆಂಡದಂತೆ ಮೇಘ
ದಾದಿಯೊಳಡಗಿ ತೋಱುವ ಮಿಂಚಿನಂತೆ
ಮೂದೇವರೊಡನಾದಂತೆ ಮಹ
ದಾದಿ ವಸ್ತುವೆ ನಿಮ್ಮ ಪದದೊಳಿರ್ಪಂತೆ ೨

ಇಹಪರವನು ಹೊಂದಗೊಡದೆ ನಿಮ್ಮ
ತರಳನ ತಾಪತ್ರಯದಿ ನೋಯಗೊಡದೆ
ನೆರಡು ಮನ್ನಿಸಿ ಕಾಯೋ ಬಿಡದೆ ಎನ್ನ
ಗುರುನೀಲಗ್ರೀವ ನಿನ್ನೊಳಗೊಡವೆರೆದೆ ೩

೪೯

ರಾಗ : ಭೂಪಾಳಿ

ಎಚ್ಚರಾಗಿರು ನೀನು ಒಚ್ಚಿ ಹೊತ್ತಿನ ಭೋಗಾ
ಕಿಚ್ಚು ಹಾಯ್ವಳೆ ಸುಖವ ನೆಚ್ಚದಿರೆಲೆ ಮನುಜಾ || ಪಲ್ಲ ||

ಕರಿಯ ಸೀರೆಯನುಟ್ಟು ತರುಣಿ ಶೃಂ[1][ಗ][1]ರವಾಗಿ
ಇರುಳು ಹಗಲರಿಯುದರ ಮರುಳುಮಾಡಿ
ಎರಡು ನೇಹದಿ ನಿನ್ನ ಶರೀರವನು ಹೊರೆವುತಿಹ
ದುರುಳೆಯಾಟಕೆ ಸಿಕ್ಕಿ ಮರುಳಾಗದೆ ಮನುಜಾ ೧

ನಾಡ ಹಲವನು ಹಿಡಿದು ಕೋಡಗವನೇರುತಲಿ
ನಾಡನಾಯಿಗಳ ಕರೆದು ಬೆಸನೀವುತಾ
ನಾಡ ನುಂಗುವರಾರು ಏಳೆಂಟು ಬರಲಪೆರಸಿ
ಗಾಡಿಕಾರ್ತಿಯು ಬೇಂಟೆಯಾಡ ಬಂದಹಳೇ ೨

ಅಚ್ಚು ಕೆಡಹುವನೊಬ್ಬ ಹೊತ್ತು ಹೋಗುವನೊಬ್ಬ
ಕೊಚ್ಚಿ ಬಾಣಸವ ಮಾಡುವಳೊರ್ಬಳು
ನಿಚ್ಚಲುಂಬುವರೈವರಿಚ್ಚೆಯನು ಮುರಿದು ಗುರು
ಕಿಚ್ಚುಗಣ್ಣ ನೀಲಗ್ರೀವನ ನಂಬು ಮನುಜಾ ೩

೫೦

ರಾಗ: ಮಲಹರಿ

ಉಂಬುವರಾರು ಉಣ್ಣಬಡಿಪರಾದ ತೃಪ್ತಿ
ಗೊಂಬವರಾರು ಆನಂದಿಪರಾರು ದೇವಾ || ಪಲ್ಲ ||

ಅಂಗವಾದವರಾರು ಲಿಂಗವಾದ[ವ]ರಾರು
ಸಂಗಸಂಯೋಗವಾದವರಾರು ಇದ್ದಱೊಳು
ಮಂಗಲಮಯ ಪ್ರಾಣವೆಂದಱಿದವರಾರು
ಹಿಂಗದೆ ಸುಖ ದುಃಖಗೊಂಬ[ವ]ರಾರೆಲೆ ದೇವಾ ೧

ಲೋಕವಾದವರಾರು ನಾಕವಾದವರಾರು
ನೂಕಿ ಎಂಬತ್ತುನಾಲುಕುಲಕ್ಷ ಜೀವವ
ಜೋಕೆದಪ್ಪದ ಹಾಗೆ ಜೋಗೈಸುವರಾರು
ಈ ಕಪಟದಿ ಬಳಲುವರಾರು ಗುರುದೇವಾ ೨

[1] ಗಾ (ಮೂ)

ಅಱುಹಿಗೊಬ್ಬನೆಯಾಗಿ ತೆಱಹಿಲ್ಲದಿರುತಿಹ
ಮರಹಿಗೆ ಲೆಕ್ಕವಿಲ್ಲದೆ ರೂಪುದೋಱುವ
ಪೆರೆದಲೆಯನ ಗಾಡಿಯಱಿಯದರೀ ನರ
ಗುಱಿಗಳು ಕಾಣ್ಬರೆ ಗುರುನೀಲಗ್ರೀವಾ ೩

೫೧

ರಾಗ : ದೇಶಾಕ್ಷಿ

ದೇಹವಿಡಿದು ನೀನು ದೇವನ ಬೇರರಸುತಿಹೆವೋ
ಹೋ ಹೋ ಹೋ ನೀನಾರು ತಿಳಿದು ನೋಡಾತ್ಮಾ ॥ ಪಲ್ಲ ॥

ಕಬ್ಬು ಕೈಯೊಳಗಿರ್ದು ಕಾಣದಲಿ ಮಧುರಸವ
ತಬ್ಬಿಬ್ಬಿಗೊಂಬ ತರಳರ ತೆಱದಲಿ
ಹಬ್ಬಿ ಹರವರಿಯಿಂದ ಹಗಲು ಮಱಸುಕಿಹದೊಂದು
ಮಬ್ಬುಗವಿದು ಮಾಣಿಕವ ಮಱೆವರೆ. ಆತ್ಮಾ ೧

ಪೀಯೂಷದೊಳಗೆ ಪಿರಿದಾಗಿ ತೋಱುವ ರುಚಿ
ಆಯತದವಾಗೆ ಸ್ವಾಯತವ ಕಂಡರಿಯದಿಹ
ಮಾಯವ ಸರಳಂತೆ ಮರುಳುಗೊಂಬರೆ ಭ್ರಾಂತೆ
ಕಾಯಜರಿಪು ಕಡೆಯಲುಂಟೆ ಸಲೆಯಾತ್ಮಾ ೨

ಲೋಕವಾದಾಗ ನೀನೆನಿಸಿಕೊಂಬವ ತಾನೆ
ಈ ಕಪಟನಾಟಕವ ನಟಿಸಿ ತೋಱುವ ತಾನೆ
ಸಾಕುಮಾಡಿಯೆ ಸಕಲವಳಿದು ನಿನ್ನವ ತಾನೆ
ಏಕೈಕ ಗುರುನೀಲಗ್ರೀವ ತಾನಾತ್ಮಾ ೩

೫೨

ರಾಗ : ಮಲಹರಿ

ನಿಮ್ಮವರಾಟ ನಿನಗೆ ಛಂದವಲ್ಲದೆ
ಅನ್ಯರುಗಳಿಗೆ ಅಘೋಚರವಯ್ಯ ದೇವಾ ॥ ಪಲ್ಲ ॥

ಸತಿ ಮಾತೆ ಪಿತ ಸುತರೆಂದು ಭೇದವ ಮಾಡಿ
ಗತಿಗೇಡಿ ಕೃತಕದೇಹಿಗಳಾಡಲದ ಕೇಳಿ
ಮತಿವಂತರಿರದೇಕವ ಮಾಡಿ ಮಱ
ಕುತಿಯ ಸಮ್ಮೇಳದಿ ಸುಖಬಡುತಿರುವರು ೧

ತನು ಮನ ಧನವಿದ್ದು ಧರ್ಮ ಕರ್ಮಗಳಿಗೆ ತಾನಲ್ಲದೆ
[1][ಕೊನೆ][1]ಮಾಡಿ ಕಾಮಕಾಲರಗಾಹಿ
ನೆನಹಿಗಿಲ್ಲವ ಮಾಡಿ ನಿಜವರಿದರ ಮಾಯದಿ
ನಿನಗೆ ಗುರಿಯುಪ್ಪ ಜೀವರರಿಯಲುಂಟೆ ೮

ಆದಿಯ ಹಿಡಿದನಾದಿಯ ಕೂಡಿ ಕರತಳ
ದಾರಿಯೊಳಿಟ್ಟು ಅಡಗಿಸಿಕೊಂಬ ಮಹಿಮರ
ಹಾದಿಯ ಕಾಣ್ಬರೆ ಹಗಲಿರುಳರಿಯದೆ
ಗಾದೆಗಳಿಗೆ ದೂರ ಗುರುನೀಲಗ್ರೀವಾ ೩

೫೩

ರಾಗ : ಮೊಡ್ಡಿ ಧನ್ಯಾಸಿ

ಎನ್ನಿತ್ತಳಾಸೆ ಎನಗಿಲ್ಲವಯ್ಯಾ ದೇವಾ
ಎನ್ನ ಮನೋರಥ ಕೈಸಾರಿತಯ್ಯಾ ॥ ಪಲ್ಲ ॥

ಉಂಬು ಉಡುವ ಚಿಂತೆ ಬಿಟ್ಟುಹೋಯಿತಯ್ಯಾ ಮುಂದೆ
ಕೊಂಬ ಕೊಡುವ ಕಷ್ಟಕೆಡೆಯಾಯಿತಯ್ಯಾ
ಇಂಬುಗೊಂಡ ಕಪಟಕರ್ಮವಾಜಿತಯ್ಯಾ ನಿಮ್ಮ
ಹಂಬಲಿಂದ ಹಲವನೆಲ್ಲ ಮುಚಿದೆನಯ್ಯಾ ೧

ಊರ ತಿರಿಗಿ ಬಹಳ ನಡೆಗೆಟ್ಟಿತಯ್ಯಾ ಸಂತೆ
ಸಾರಿಗೆಯ ಮಾಡಿ ಲಾಭಗಾಣೆನಯ್ಯಾ
ತೀ[ರಿ]ತಿನ್ನು ಭಂಡ ಮೊದಲಿಲ್ಲವಯ್ಯ ವ್ಯವ
ಹಾರಿಸಿ[ದೆ]ನೆಂದರೆ ಬಡ್ಡಿ ಬಾಳವಯ್ಯಾ ೨

ಈ ಲೋಕದಾಟವಿತ್ತ ಸಂದಿತಯ್ಯ ಇನ್ನು
ಆ ಲೋಕದತ್ತ ಬಯಕೆ ಇಲ್ಲವಯ್ಯಾ
ಪಾಲಿಸಿ ನಿಮ್ಮೊಳಗೈಕ್ಯವೀವುದಯ್ಯಾ ನಿಮ್ಮ
ಬಾಲಕಂಗೆ ಗುರುನೀಲಗ್ರೀವಯ್ಯಾ ೩

೫೪

ರಾಗ : ಮೊಡ್ಡಿ ಧನ್ಯಾಸಿ

ಎನ್ನದೊಂದು ಬಿನ್ನಪವ ಕೇಳಯ್ಯಾ ದೇವಾ
ಮನ್ನಿಸಿ ಕೃಪೆಯಿತ್ತು ಕಾಯಯ್ಯಾ ॥ ಪಲ್ಲ ॥

---

[1] ಕಡೆ (ಮೂ)

ಮೋಸಹೋಗಿ ಮುಂದುಗೆಟ್ಟು ಬಂದೆನಯ್ಯಾ ಇಲ್ಲಿ
ದೋಷ ದುರ್ಗುಣರಲೆ ಬಾಳವಯ್ಯ
ಏಸುದಿನವೆಂದು ನಾನು ಕಳಿಯುಲಯ್ಯ ಮಹಾ
ಘಾಸಿಯಾದೆ ನಿನ್ನ ಈಸಲಾರೆನಯ್ಯಾ ೧

ಒಂದು ನಿಮಿಷವೊಂದು ಘಳಿಗೆಯಾದುದಯ್ಯಾ ನೋಡೆ
ಒಂದು ದಿನವಂದು ವರುಷವಾದುದಯ್ಯ
ಒಂದು ತಿಂಗಳೊಂದು ಕೋಟಿಯಾಯಿತಯ್ಯಾ ಸಲೆ
ಸಂದುದೆನ್ನ ತಂದೆ ಕಡೆಹಾಯಿಸಯ್ಯಾ ೨

ಹಲವು ಜನ್ಮದಲ್ಲಿ ಬಂದು ನೊಂದೆನಯ್ಯಾ ಇದ
ಹೊಲಬುಂದಪ್ಪಿಸಿ ಹೋಗಲಾಡಿಸಯ್ಯ
ಒಲಿದು ಕೈವಿಡಿದೊಡಗೂಡಯ್ಯ ಎನ್ನ
ಸಲಹಿಕೋ ಗುರುನೀಲಗ್ರೀವಯ್ಯಾ ೩

೫೫

ರಾಗ : ?

ಬಸವ ಬಸವನೆಂಬ ಹೆಸರಿನ ಬರಿ ಸೆಲೆಯಲ್ಲ ಕಾಣಿರೋ ನಾನಾ
ಮಿಸುಕ ಮಿಸುಕಲಿಲ್ಲ ಎರಡಕೆ ಮಿಗೆ ಕರ್ತೃ ಬಸವ ಕಾಣಿರೋ ॥ ಪಲ್ಲ ॥

ಆದಿಯಾಧಾರವ ವೇದಿಸಿಕೊಂಡಿಹನೀತ ಕಾಣಿರೋ ಬ್ರಹ್ಮ
ಮಾಧವಸುರರಿಗೆ ಅಡಿವುಡಿದೊರೆದ ದೇವ ಕಾಣಿರೋ
ವೇದಕೆ ಸಿಲುಕದ ವಾದಕೆ ನಿಲುಕದ ಮಹಿಮ ಕಾಣಿರೋ ಹಿಂದೆ
ಹೋದ ಬಂದನೆಂಬ ಸಂದೇಹಕೊಳಗಾಡಿ ತೋರ್ಪ ಕಾಣಿರೋ ೧

ಶಕ್ತಿ ಭಕ್ತಿಯು ರೂಪವೇಕೀಕರಿಸಿ ತೋರುವಾತ ಕಾಣಿರೋ ಆರು
ಮೂರ್ತಿಗೆ ಮುಖವಾಗಿ ಸಲೆ ಸಂದು ನಿಂದವ ತಾನೆ ಕಾಣಿರೋ
ಅತ್ತಲೆ ಹೋದ ಇತ್ತಲಿ ಬಾರನೆಂದೆನ್ನಬೇಡ ಕಾಣಿರೋ ಆತ
ಸತ್ತು ಚಿತ್ತಾನಂದನಿತ್ಯದಿ ಪರಿಪೂರ್ಣವಸ್ತುವ ಕಾಣಿರೋ ೨

ಬಸವನನರಿದು ಭಜಿಸೆ ಬಂಧನವಿಲ್ಲ ಕಾಣಿರೋ ನಮ್ಮ
ಬಸವ ದೂರದಲಿಲ್ಲ ನಿಮ್ಮೊಳಗುಂಟೆಂದು ತಿಳಿದು ನೋಡಿರೋ
ಬಸವನ ಖಂಡನಖಂಡಿತನೆಂದೆನಬೇಡ ಕಾಣಿರೋ ಘನ
ಬಸವನೆ ಗುರುನೀಲಗ್ರೀವನೆಂಬುದ ನೀವು ಕಂಡು ಬಾಳಿರೋ ೩

೫೬

ರಾಗ : ಶಂಕರಾಭರಣ

ಮಱಿದು ಮುಂದಱಿಯದೆ ಮಾಡಿಕೊಂಡದ ಕುಣ್ಣಿಯೆನ್ನ ಮನವೇ
ನರಗುಱಿಗಳ ಕೂಡಾಡಿ ತೃಣಕಣೆಯಾದುದು ಬಹಳ ಘನವೇ ॥ ಪಲ್ಲ ॥

ಶಿಲೆವಣೆಯೊಳಗಾಣಿ ಜಲವಣೆಯನು ಸುರಗಯ್ಕಲಿಂದು ಲೋಕ
ನೆಲೆದಿಳಿಯದೆ ಹೋಗವೆಲೆ ಹೆಚ್ಚು ಕುಂದೆಂದು ನುಡಿವರಿಂದು
ಮಲವಾಣವಮಾಯ ಕಾಲ್ಮಿಶತ್ರಯದೊಳು ಬಿರ್ದ ಜೀವರಿಂದಂ ನಿನ್ನ
ಛಲವನಳಿಸಿ ಛಂದಗೆಡಿಪರನಿಪ ಬುದ್ಧಿ ತಿಳಿಯದೆಂದು ೧

ವಾರಿಯೆಡೆಯ ಮಧುಸಾರಿರಲತಿಶಯವಾಗಲಹುದೆ ಮಹ
ಕ್ರೂರವ್ಯಾಘ್ರನ ಸಾರಿ ಕಪಟವಿಲ್ಲದ ಪಶು ಬಾಳಬಹುದೆ
ನೀರಿನೊಳಗೆ ಕಿಚ್ಚು ವಾರಣದಿಂದೊಪ್ಪಿ ಉರಿಯಬಹುದೆ ಹೀಗೆ
ಮೋಱಿಯ ಮಾಱಿದ ಮನುಜರೆಡೆಯ ನಿಜವರಸಬಹದೆ ೨

ಬಚ್ಚಿಟ್ಟುಕೊಂಡುಣ್ಣ ಬಳಸಬೇಡಿದನೆಂದು ಪೇಳ್ದುದೇನು ನಿನ್ನ
ಇಚ್ಚೆಗೆ ಹರಿದಾಡಿ ಈಗ ಅಱಸಿ ಬಟ್ಟೆಬಾಹುದೇನು
ಹುಚ್ಚ ಮನವೆ ಹುರುಳರಿಯದ ಖೂಳರೊಳಾಡಲೇನು ಇನ್ನು
ಎಚ್ಚರಾಗಿರು ನೀಲಗ್ರೀವನೊಳೈಕ್ಯವಾಗು ನೀನು ೩

೫೭

ರಾಗ : ?

ಗಂಡನ ಕಾಣದೆ ಘಾಸಿಯಾ[1][ಗ][1]ಲಿದೆ ಲೋಕವೆಲ್ಲಾ– ಎಡ
ಪುಂಡರುಗಳ ಮಚ್ಚಿ ಪುರಪತಿಯನು ಒಡವೆರೆದರಲ್ಲಾ ॥ ಪಲ್ಲ ॥

ಕಾಳಗತ್ತಲೆ ಹೆಚ್ಚಿ ಕಮಲಸಖನ ಮುಚ್ಚಿಕೊಂಡಿತಲ್ಲಾ– ಬಿರು
ಗಾಳಿ ಮನೆಯ ತುಂಬಿ ಉರಿವ ಜ್ಯೋತಿಗೆ ಕೇಡ ತಂದಿರಲ್ಲಾ
ಖೂಳರುಗಳು ಕೂಡಿ ಭವದ ಬೀಜವ ಬೆಳೆದರಲ್ಲಾ– ಇಂಥಾ
ಬೇಳುವೆಯನೆ ನಚ್ಚಿ ಬೇಗೆಯೊಳಗೆ ಸಿಕ್ಕಿ ನೊಂದರಲ್ಲಾ ೧

ಅಡಿಯಾಕಾಶದ ಕಡೆ ಬಂಡವರಿಯದ ಕರ್ಮಿರೆಲ್ಲಾ– ದೊಡ್ಡ
ಹಿಡಿಮುಡಿಯೊಳಗಾಡಿ ಹೀನ ಜನ್ಮಕೆ ಸಲೆ ಸಂದರಲ್ಲಾ
ಒಡೆಯನ ಮುಲೊಳಗಿಪ(?) ಕಪಿ ಹೊಡೆದು ಕೆಡಹುವದ ಮರದಲ್ಲಾ– ಜಗ
ದೊಡೆಯನ ಮುಖಗಾಣದಡವಿಯ ಪಾಲಾಗಿ ಹೋದರಲ್ಲಾ ೨

[1] ಗು (ಮೂ)

ಸತಿ ಪತಿಗಳ ಭಾವದತಿಶಯವರಿಯದೆ ಜಾಣರೆಲ್ಲಾ- ತಾವು
ಮತಿಹೀನತನದಿಂದ ಮಾಯಬಲೆಗೆ ಸಿಕ್ಕಿ ಬಿದ್ದರೆಲ್ಲಾ
ಗತಿಪಥಮುಕ್ತಿಗೆ ಗುರುನೀಲಗ್ರೀವನನರಿಯದೆಲ್ಲಾ- ದು
ರ್ಗತಿಗಳಿಗೀಡಾಗಿ ದುರುಳರೆಲ್ಲರು ಕೆಟ್ಟು ಹೋದರೆಲ್ಲಾ ೩

೫೮

ರಾಗ: ಆಹರಿ

ಎಂಥಾ ದಯಾಳ್ವ ನಮ್ಮ ಎನ್ನ
ಅಂತಸ್ಥದವಗುಣವರಿದು ಮಱಿದ ದೇವಾ ॥ ಪಲ್ಲ ॥

ಮಾಡಬಾರದೊಂದು ಮಾಟದ ಮಾಡಿದರದ
ಪಾಡು ಕಿಡಿಸದೆ ಪಾಲಿಸಿ ಪರಾಂಬರಿಸಿ
ನೋಡಿ ನೀನಲ್ಲ ನಾನೆಂದು ಇದಕೆ ಚಿಂತೆ
ಮಾಡಬೇಡೆಂದು ಮಾಣಿಸಿದ ಕೃಪಾಳು ೧

ಬೈದರೆ ವೇದವಾಕ್ಯಗಳೆಂದು ಕೈಕೊಂಡು
ಪೊಯ್ದರೆ ದಿವ್ಯಾಭರಣವೆಂದು ಧರಿಸಿ ತಾ
ಮೈದೆಗೆಯದೆ ಮನ್ನಿಸಿದ ಮಹಾದೇವಾ* ೨

ಉಪಮಿಸಲರಿದೆನಗೆ ನೋಡೆ
ಅಪರಿಮಿತದ ರೂಪ ಅನಂತ ನಿಶ್ಚಿಂತ
ವಿಪುಳ ನಿರ್ಲೇಪ ಕಾಣೆ ಎನ್ನ ತಂದೆ
ಕೃಪೆಯಿಂದ ಸಲಹು ಗುರುನೀಲಗ್ರೀವಾ ೩

೫೯

ರಾಗ: ?

ಆರೆ ಹಾದಿಯು ಬೇಡವಿನ್ನು ಮನವೇ
ಮಾರಾರಿ ಅಡಿವಿಡಿದು ಮರಳದಿದು ಚೆನ್ನು ॥ ಪಲ್ಲ ॥

ಸಂತೆ ಸಾರಿಗೆಯ ಸಂಗಡಗೂಡಿ ಹೋಗುವರೇ
ಭ್ರಾಂತು ಜೀವರ ನೆರವ ಬಯಸಿ ಬಾತಿರುತಿಹರೇ
ಚಿಂತೆಯೊಳಗಾ[1][ಡಿ][1] ಮುಳುಗುವರೇ ಬೇಡ
ನಿಂತು ನೀರ್ಗುಡಿ ಕಂಡ ನಿಜವ ಸಾರುವರೆ ೧

* ಈ ಪದದಲ್ಲಿ ಒಂದು ಪಾದ ಕಡಮೆಯಾಗಿದೆ.
[1] ೪ (ಮೂ)

ಕೇಳುವರು ಶಿವನ ವಾಕುಗಳೆಂದು ಸಲೆ ಸಂದು
ಹೇಳುವ°ರು[1] ತನುಮನದ ಆಸೆ ಹಿಂಗಿದವೆಂದು
ಬಾಳ ಬಗೆಯಲಿ ತಿಳಿದವೆಂದು ಮೋಕ್ಷ
ದಾಲೋಚನೆಗೆ ಬೆಚ್ಚಿಬೆದರುತಿಹರೆಂದು ೨

ಬೆಲ್ಲವನು ಮೆಲಿಸೆ ಚೀವೆಂದಾಡುವರ ಕೂಡೆ
ಪುಲ್ಲಸರವನು ಹಾಕೆ ಉರಗನೆಂಬರ ಕೂಡೆ
ಬಲ್ಲತನವಳಿಸುವದು ಪಾಡೆ ಅವರತ್ತ
ನಿಲ್ಲದಿರು ನೀಲಗ್ರೀವನೊಡಗೂಡು ೩

೩೦

ರಾಗ : ?

ಅಱಿವನೆವ್ಮಿರೆ ಶಿವಯೋಗಿ ಮರಹಿಂದ
ಬೆರತಹಂಕರಿಸಿ ಬಾಳ್ವ ಭವರೋಗೀ ॥ ಪಲ್ಲ ॥

ಆದಿಯ ತಿಳಿದನಾದಿಯ ಪಿಡಿದು ಆದಱೊಳು
ನಾದವಿಡಿದು ನಿಲ್ಲಲವ ಹಠಯೋಗಿ ಈ
ಭೇದವರಿಯದೆ ಹೋಗಿ ಲೋಕದ
ಗಾದೆಗೆ ಸಿಕ್ಕಿಬಿದ್ದವ ಭವರೋಗಿ ೧

ಗುರುರೂಪು ಲಿಂಗರೂಪು ಎರಡಕೆ
ವರಕಳೆಚರಗಾಣಲವ ಹಠಯೋಗೀ
ಇರಪರಸ್ಥಿರವ ತಾ ತಿಳಿಯದೆ ಮಾಯೆಯ
ನೆರವಿಗೆ ಸಿಕ್ಕಿಬಿದ್ದವ ಭವರೋಗೀ ೨

ಸಕಲ ಪ್ರಪಂಚನಳಿದು ತನ್ನ ಆಳ್ದಂಗೆ
ಭಕತಿವಿಡಿದು ಭಜಿಸುವನೆ ನಿರ್ಮೋಹಿ
ಯುಕುತಿಯಲಿ ಗುರುನೀಲಗ್ರೀವನ
ಮುಖ ತಿಳಿಯದೆ ಪೂಜಿಸುವನೆ ಗುರುದ್ರೋಹೀ ೩

೩೧

ರಾಗ : ?

ಶರಣರ ಸಂಗಸೇವೆಗಳಿಲ್ಲದೆ ಬಯಲ ಮಾತಿ
ನಿರುವಿಗೆ ಮುಕ್ತಿಯಾಗದು ಕಾಣಿರಣ್ಣಾ ॥ ಪಲ್ಲ ॥

---

[1] ರು ಹೇಳುವರು (ಮೂ)

ಕಿಚ್ಚಿನ ಬಾಯಿ ಬೇವದೆ ನೋಡೆ ಕನಸಿನಲಿ
ವೃಶ್ಚಿಕನೂಱಿ ವೇದನೆಯಹಾಗಲುಂಟೆ
ತುಚ್ಛಕ ನರರು ಕಪಟದಿಂದ ವಾಗ್ಬ್ರಹ್ಮವ
ಮುಚ್ಚಿ ಬೆರೆದರೆ ಮೋಕ್ಷಕೆ ದೂರವಣ್ಣಾ ೧

ಆರ್ತಾಭಿಮಾನ ಪ್ರಾಣದದೊಂದು ವಾಂಛೆಯು
ವತ್ತಿವೊಲ್ಗುಡಿಸಿ ಕೆಡಿಸಿ ಕಡೆಮಾಡಿ .
ಸತ್ಯಸಹಜವು ನೆಲೆಗೊಳ್ಳದೆ ಬರಿದೆ ಶಿವ
ಭಕ್ತರ ಸಮರಸ ದೊರೆವುದೇನಣ್ಣಾ ೨

ಹಲವು ಜನ್ಮದಿ ತಿರುಗುವ ನಡೆಯು ಅಱಿದಿನ್ನು
ನಿಲಿಸಿ ನಿರ್ಮಳದ ಗತಿಯುನಂಗೀಕರಿಸಿ
ಸಲೆ ಸಂದು ಗುರುನೀಲಗ್ರೀವನನೊಚ್ಚತ
ಛಲದಂಕರಡಿವಿಡಿವಂತೆ ನಿತ್ಯವಣ್ಣಾ ೩

೩೨

ರಾಗ : ?

ಈ ದೇಹವಿಡಿದಾಗಲೆ ಈ ಭವದ ಪ
ಯೋಧಿಯು ನೀಗಿ ನಿತ್ಯವ ಸಾರಿರಣ್ಣಾ ॥ ಪಲ್ಲ ॥

ಕಾಯುವೆನಿಪದೊಂದು ಕರ್ಮದ ಹರುಗೋಲ
ಆಯುತವಿಡಿದಾತ್ಮನೆಂಬ ಅಂಬಿಗನಾ
ಸಾಯುಸದಿಂದ ಸಾಧಿಸಿಕೊಂಡು ಕಡೆಗತ್ತ
ಹಾಯ್ದುದು ಸಂಸಾರಪರದಿಯುನಣ್ಣಾ ೧

ಅಱುಹೆಂಬದೊಂದು ಜಾಲವ ಬೀಸಿ
ಮಱಹೆಂಬ ಕೆಱೆಯೊಳು ಕರಣಾದಿ ಗುಣ ಜಲಚರವಾ
ಸೆರೆಗೈದು ಸಕಲವೆಲ್ಲವ ಬಡಿದು ಮೋಕ್ಷದ
ನಿಱುಗೆಗೆ ನಿಂತು ನಿತ್ಯವ ಕಾಬುದಣ್ಣಾ ೨

ಉರವಣಿಸುವ ತಾಪತ್ರಯವೆಂಬ ತೆರೆಗಳ
ನಿರದೊತ್ತಿ ಇಹಪರವನು ಮೆಟ್ಟಿ ನಿಂದು ಸಲೆ ಸಂದು
ಗುರುನೀಲಗ್ರೀವನ ಅಡಿವಿಡಿ
ದಿರುವದು ನಿಜಗತಿ ನೆಱೆ ನಂಬಿರಣ್ಣಾ ೩

೬೩

ರಾಗ : ಕಲ್ಯಾಣಿ

ದೇವರ ದೇವ ಭೀತಿಯಾಗುತದೆನಗೆ
ಪಾತಕ ನರರದೊಂದಾತಂಕವನು ಕಂಡು ॥ ಪಲ್ಲ ॥

ನೀತಿಹೀನರ ನುಡಿ ಚಾರಿತ್ರ್ಯವ ಕೇಳಿ
ಮಾತನಾಡುವರೆ ಮೊದಲೆ ಬಾರದು
ಭೂತಪ್ರಾಣಿಗಳಲೆಯೊಳಗೆನ್ನ ನಿಲಿಸುವ
ದೇತರ ಗಾಡಿ ಇದನೆ ಸಾಕು ಮಾಡಿ ೧

ನಿನ್ನ ಮಱೆದು ನಿಟ್ಟುಗೆಟ್ಟ ಜೀವಿಗಳೊಳು
ಸನ್ಮತ ಸತ್ಯ ಸಹಜವೆಂಬುದ
ಮುನ್ನಱಿಯದ ಮೂಢರಡೆಗೆನ್ನನಿದಿರೆಡೆ
ತಿನ್ನದೆ ಬಿಡುವರೆ ತಿಳಿದು ನೋಡಿದನು ೨

ಮೋಸಹೋಗಿವರು ಮೊದಲುಗೆಟ್ಟು ಲಾಭದ
ವೇಷ ನೀಗಿದರು ನೀಚರು ಭವದ
ರಾಶಿಯೊಳಗೆ ಬಿದ್ದು ರಾಜಿಪರೊಳ್ ನಾನು
ಈಸಲಾರೆ ಕಾಯೋ ಗುರುನೀಲಗ್ರೀವಾ ೩

೬೪

ರಾಗ : ನಾಟಿ

ಭಕ್ತಿಮಾಡದೆ ಬರಿದೆ ಯುಕ್ತಿಯಲಿ ನುಡಿಗಲಿತು
ಮುಕ್ತಿಯಹಾಯಿತ್ತು ಎಂಬರೆಂತಹುದೊ ದೇವಾ ॥ ಪಲ್ಲ ॥

ತನು ಮನ ಧನವೀವರ ತವಕ ತಕ್ಕೆಯ ತಿಳಿದು
ಗುರು ಲಿಂಗ ಜಂಗಮಕ್ಕೆ ಸವೆದು
ನೆನಹು ನಿಷ್ಪತಿಯಹಾಗಿ ನಿಜವ ನೆಮ್ಮದ ನೀಚ
ಜನರಿಗಾವುದು ಮುಕ್ತಿಯಱುಹೆನಗೆ ದೇವಾ ೧

ಬಂದು ಬೋಧಿಪ ಮೂಱು ಮಲವ ಮಾಣದೆ ಮೆಚ್ಚಿ
ಹೊಂದಿ ಹೊರಳುತಲವನೆ ತಿಂದು ಸಲೈಸಂದು
ಹಂದಿಯಂದದಿ ತನ್ನ ಒಡಲ ತಾ ಹೊರೆವುತಿಹ
ಹಂದೆ ನರರಿಗೆ ಮೋಕ್ಷವೆಂದಹುದೊ ದೇವಾ ೨

ನಿಚ್ಚ ಶಿವಶರಣರಿಗೆ ನೀಡಿ ಮಾಡದೆ ಬಱಿದೆ
ಮುಚ್ಚಿ ವಾಗ್ಬ್ರಹ್ಮವನು ಬೆಱೆತು ನೆಱೆ ಬೀಗಿ
ಹುಚ್ಚುಹಿಡಿದೀ ಯಮನ ರೆಚ್ಚೆಗೀಡಾದವರಿ
ಗೆಚ್ಚ ಸುಖವೆಲ್ಲಿಯದೊ ಗುರುನೀಲಗ್ರೀವಾ ೩

೬೫

ರಾಗ : ?

ಸಾಕುಮಾಡದೆ ಸುಮ್ಮನಿದ್ದೆ ನಾನೀ
ಲೋಕದೊಳಲೆ ಬಡುವುದೆ ನೋಡುತಿರ್ದೆ ॥ ಪಲ್ಲ ॥

ಈ ತನುವ ತೊಟ್ಟಪರಾಧಕಾಗಿ
ಹೀನ ಜನನದೊಳಗೆ ಬಿದ್ದೆ
ಮತಿ ಮಂದವಾಗಿ ಘನವ ಕಾಣದೆ ಘಾಸಿಯಾಗಿ ಬಂದೆ
ನೆನಗಾರು ಗತಿ ಬೇರೆ ಕಡೆಗಿದ ನೀನು* ೧

ಬೇಸಱಾಯಿತು ಸಾಕು ಬೇಡ ಎನ್ನ
ಮೋಸದಿ ತಂದು ನೋಯಿಸುವಂತ ಕೇಡ
ಓಸರಿಸಿದನಿತ್ತಾ ಗಾಢ ನಿನ್ನ
ವೇಶಿನ ಶಿಶುವನೊಪ್ಪುಗೊ ಚಂದ್ರಚೂಡಾ ೨

ನಿನ್ನಿಂದ ನಾ ಬಂದೆ ನೋಡೆ ಈಗ
ಗನ್ನಗಾತಕಕಿದಿರಿಡುವದು ಪಾಡೆ
ಭಿನ್ನವಾಗಿರೆ ನಿನ್ನ ಕೂಡೆ ಹೀಗೆ
ನಿನ್ನಾಣೆ ಗುರುನೀಲಗ್ರೀವ ನಾನಾಡೆ ೩

೬೬

ರಾಗ : ಆಹರಿ

ಹರನ ಪೂಜೆಯು ಮಾಡಿರಣ್ಣಾ ಕಷ್ಟ
ದುರಿತಕಾಲನ ಬೇಕಾದರಣ್ಣಾ ॥ ಪಲ್ಲ ॥

ಗುರುವಿಂದ ಲಿಂಗವ ಪಡೆದು ಮಚ್ಚಿ
ಮರಳದೆ ಚರಲಿಂಗದೊಳೊಡವೆರದು
ಎರವುಗಾಣದೆ ಎರಡಳಿದು ಮೂಱಿ
ರಿರವೊಂದೆ ಎಂಬ ಭೇದವ ನೀವು ತಿಳಿದು ೧

[1] ಈ ಪದದಲ್ಲಿ ಪ್ರಾಸ ತಪ್ಪಾಗಿದೆ.

ಕಪಟಕಾಯವ ಕಡೆಮಾಡಿ ದೊಡ್ಡ
ವಿಪರೀತ ಮನವಯಿತ್ತಲೆ ಹೋಗಾಡಿ
ಸುಪಥಮಾರ್ಗವ ಸಲೆ ನೋಡಿ ನೀವು
ಉಪಮೆಗಾಣದೆ ಭಕ್ತಿವಿಡಿದೊಡಗೂಡಿ ೨

ಕರ್ಮವ ಕಡೆಗಾಣಾಗ ಮುಕ್ತಿ
ಮರ್ಮವನರಿದೊಳಗನು ತಿಳಿ ಬೇಗಾ
ನಿರ್ಮಲನಿಜವಿರಲಾಗ ನಂಬಿ
ಗಮ್ಮನೆ ಗುರುನೀಲಗ್ರೀವ ತಾನೀಗಾ ೩

೩೭

ರಾಗ : ಮೇಚ ಬಹುಳಿ

ದೇವಾಲಯದೊಳಗಿಹ ದೇವನನರಿಯದ
ಗಾವಿಲ ನರರ ಕರ್ಮವ ನೋಡುವ ದೇವಾ ॥ ಪಲ್ಲ ॥

ತನುವೆಂಬುದೊಂದು ದೇಗುಲದೊಳಗಿರುತಿಹ
ಮನವೆಂಬ ಲಿಂಗವ ಮಚ್ಚಿ ಮನ್ನಿಸದೆ
ಕಾತುರದಿಂದ ಕಡೆಯಲುಂಟೆಂದೆಂಬಾ*
ಮನುಜರ ಮರುಳುತನವನು ನೋಡು ದೇವಾ ೧

ಒಡಲೆಂಬ ಗವಿಯೊಳಡಗಿಕೊಂಡಿರುತಿಹ
ಒಡೆಯನ ಮುಖವ ಮೂರ್ಖರು ಕಾಣದೆ
ಕಡುನೊಂದು ಬಳಲಿ ಕಂಡಡವಿಯ ಪಾಲಾಗಿ
ಜಡಜೀವಗಳು ದುಃಖಬಡುತಿದೆ ದೇವಾ ೨

ದೂರ ಹೋಗರಸಿ ದುಃಖವನುಂಬುವದರಿಂದ
ಸಾರಿ ತನ್ನೊಳಗಿಹ ಸರ್ವೇಶನಾ
ಸೇರಿ ಸೇವೆಯ ಮಾಡಿ ಸುಖಬಟ್ಟು ಮೋಕ್ಷದ
ದಾರಿಯ ಹಿಡಿಯರು ಗುರುನೀಲಗ್ರೀವಾ ೩

೩೮

ರಾಗ : ?

ಅಯ್ಯಯ್ಯೋ ಈ ಲೋಕ ಪ್ರಕೃತಿಗೆ ತಂದೆನ್ನ
ಕಯ್ಯ ಬಿಡದೆ ಮಾತೆನ್ನ ತಂದೇ ॥ ಪಲ್ಲ ॥

---

* ಈ ಪಾದದಲ್ಲಿ ಪ್ರಾಸ ತಪ್ಪಾಗಿದೆ.

ಅಲೆಬಟ್ಟೆನಾಗು ಹೋಗಿನ ಅಂಗದೊಳು ಸಿಕ್ಕಿ
ನೆಲೆಗೆಟ್ಟೆ ಹಲವು ಜನ್ಮ ಹಾವಸೆಯಲ್ಲಿ
ಸಲೆ ಜಾರಿಬಿದ್ದು ಕೆಡೆದು ಬಡುವದ
ಆಲಸದೆ ನೋಡಿ ನೋಯಿಸುವರೆ ದೇವಾ ೧

ಹದಿನೆಂಟು ತೆಱನೆಂಬ ಯುಗಜುಗದೊಳು ಬಿದ್ದು
ಮುಂದುಗೆಟ್ಟು ನೊಂದೆ ಮೂವಿಧಿಯಿಂದಲಿಂದು
ಎದೆಗುದಿಗೊಳಲಾರೆ ಇದಕಾರು ಗತಿ ಬೇಱೆ ಈ
ಒದಗಿದ ದುಃಖ ನಿನ್ನವೆ ಕಂಡ ದೇವಾ ೨

ಒಡೆಯನುಳ್ಳ ವನವಾಸಿಯಲಾಳ್ದಗೆಂತೆಂಬ
ಬೆಡಗ ನೀನರಿದು ಬೇಗದಿ ಬಂದು ನೆರೆದು
ಕಡೆಮಾಡು ಕಪಟ ಮಾಯೆಯ ಕಾಮಕಾಲರ
ತೊಡಕ ಬಿಡಿಸಿ ಕಾಯೋ ಗುರುನೀಲಗ್ರೀವಾ ೩

೬೯

ರಾಗ: ದೇಶಿ

ನಿನ್ನ ಲೀಲೆಯ ನಿಜವಱಿದ ಮಹಾತ್ಮರ
ನಿನ್ನ ಮಱಿದ ನೀಚರಿಗಿಡಬಹುದೇ ॥ ಪಲ್ಲ ॥

ರೂಪಿಲ್ಲದವರನೊಯಿದು ಮಾಯರೂಪಿನ
ಪಾಪಿಗಳೆಡೆಯೊಳಗಿಟ್ಟು ನೀನಿಷ್ಟು
ತಾಪಗೊಳಿಸಿ ಭಂಗಿತರ ಮಾಡಿಸುವದಿದು
ಉಮಾಪತಿ ತರವೆ ಮಾಣಿಸಲೊಲ್ಲದಿರವೆ ೧

ಸತ್ಯವೆ ದೇಹ ನಿತ್ಯವೆ ಪ್ರಾಣವಾಗಿಹ
ಭಕ್ತರನೊಯ್ದು ಭವಬಾಧೆಗೆ
ತುತ್ತಾಗಿ ಕೆಡಹುತಿಹ ಮರ್ತ್ಯರಲೆಯೊಳೀ
ತಥ್ಯ ನೋಡು ತಿಳಿದು ಕಡೆಮಾಡು ೨

ಮಾಟವಳಿದ ಮಹಿಮರ
ಕೋಟಲೆಯನು ಕೊಂಡು ಕೊನರುತಲಿ
ಪಾಟಬಿದ್ದವರ ಪಂಕ್ತಿಗೆ ತೋಱಿಸದೆ ಸಸಿ
ಜೂಟ ಬಚ್ಚಿಟ್ಟುಕೋ ಗುರುನೀಲಗ್ರೀವಾ ೩

೭೦

ರಾಗ: ?

ಹುಟ್ಟೇನು ಫಲ ಹುರುಳಿಲ್ಲದ ತನುವಿನ
ನಷ್ಟ ಲಾಭವ ಕಾಣದಧಮ ಜೀವರು ದೇವಾ ॥ ಪಲ್ಲ ॥

ಬಂದುದನಱಿತು ಬಾರದ ಬಟ್ಟೆಯನು ತಿಳಿ
ವಂದಾವೆ ಲಾಭಯಿದರ ಗಾಡಿಯು
ಮುಂದುಣಗಾಣದಲಿದೆ ಛಂದವೆಂಬುದೆ ನಷ್ಟ
ವೆಂದಱಿಯು ಮೂಢ ನರರೆಲೆ ದೇವಾ ೧

ಕಾಯುವೆ ಕಪಟ ಮಾಯೆಯ ಸೊಮ್ಮು ಇದರದೊಂ
ದಾಯತಗೆಡಿಸಿ ಸದ್ಗುರುವಿನ ಮಱದಿ
ಸಾಯುದ ಪಂಚಗಾಣ್ಬುದೆ ಲಾಭ ಉಳಿದ ಉ
ಪಾಯುವೆ ನಷ್ಟವೆನ್ನದ ನೀಚರೆಲೆ ದೇವಾ ೨

ಜಾತಿಸೂತಕವಳಿದ ಜಾತನಾಹದೆ ಲಾಭ
ಪಾತಕ ಜನ್ಮವ ಪಡೆವದೇ ನಷ್ಟ
ಭೂತ ಪ್ರಾಣಿಗಳಿದನಱಿಯದೆ ತೊಳಲುವ
ರೇತಕಿವರು ಬಾತಿ ಗುರುನೀಲಗ್ರೀವಾ ೩

೭೧

ರಾಗ: ಭೈರವಿ

ಆರಿಗೆ ಈ ಮಹದಾನಂದದಿರವು
ನಾರಿರನ್ನಳೆ ನಿನ್ನ ಸೊಬಗು ಶೃಂಗಾರವು ॥ ಪಲ್ಲ ॥

ವಾಸಿಪ ಗಂಧದ ಬಗೆ ಧಾರಾದಿರವು
ಈ ಸವೀ ರುಚಿ ರೂಪಿನವಧಾನದಿರವು
ಆ ಸೋಂಕು ಶಬ್ದವಱಿದ ಭೇದದಿರವು
ಈಶಗೊ ನಿನಗೊ ಪೇಳಿದರ ವಿಸ್ತರವು ೧

ಗಂದ ಗುಹ್ಯ ಪಾದ ಪಾಣಿಯು ಪರಿಣಾಮು
ಮೃದುವಾಕ್ಯವಿಡಿದಾಡುತಿರುವ ಸಂಪ್ರೇಮು
ಒದಗಿದ ಸುಖದ ಸುಗ್ಗಿಯಂದೊಂದು ಸ್ತೋಮು
ಮದನಹರದೋ ನಿನ್ನದೋ ಪೇಳಿ ನೇಮು ೨

ಅರತಳಿದಿರುವ ಏಕಾಂತದ ಲೇಸ
ಸರಸದಿ ಸವಿದುಂಬನೆನ್ನ ಪ್ರಾಣೇಶ
ಗುರುನೀಲಗ್ರೀವ ತಾನೆರೆದ ಸಂತೋಷ
ದಿರವಬ್ಬರಳವನೆ ಪರಮ ವಿಲಾಸ ೩

೭೨

ರಾಗ : ?

ನೀವುಳ್ಳಾಗಲೆ ನಿಮ್ಮಳಿವುಳಿವದನು
ಭಾವಿಸಿ ತಿಳಿಯಿರೊ ಇದಟಿ ಗಾದಿಯನು ॥ ಪಲ್ಲ ॥

ಸತ್ತು ಹುಟ್ಟುವರೆಂಬರಿದು ಪುಸಿ ನೋಡಿ
ಸತ್ತು ಹುಟ್ಟಿ ಹೋವಾಡಲ್ಲವಾರಿದ್ದರಾಡಿ (?)
ಸತ್ತುವ ಹುಟ್ಟು ಬಲ್ಲನೆ ಮರೆಮಾಡಿ
ಮೃತ್ಯುಂಜಯನಾಡಿಸುವ ಮದ್ದನೂಡಿ ೧

ಸಂಚಿ ಸಡಿಲಿಹೋಹದು ಜೀವ ತನ್ನಾ
ಮುಂಚಿನಿವಳಿಯದಕಿಂದ ತಾ ಮುನ್ನಾ
ಪಂಚಶರನು ಹಿಡಿಕೊಂಡ ತಾ ನಿನ್ನಾ
ಹಂಚುಹರಿಯ ಮಾಡಿ ತಿನುತಿಹಗನ್ನಾ ೨

ಒಂದು ಮೂಟಾಗಿರುವ ಹರಿ ನೀ ಚಂದ
ಸಂದು ಮರಳುವೆನೆಂಬರಿನಿದೆಯಿಂದ
ತಂದೆ ಸದ್ಗುರು ನೀಲಗ್ರೀವನಿಂತೆಂದ
ರಿಂದುಸುರಿದೆನು ಆತನ ಕೃಪೆಯಿಂದ ೩

೭೩

ರಾಗ : ಶಂಕರಾಭರಣ

ಕಾಣಬಾರದೆ ಮನುಜ ಕಾಣಬಾರದೆ
ಪ್ರಾಣನಾಥ ಮುಟಿಸಿ ನಿನ್ನ ಕ್ಷೀಣ ದೈವಕ್ಕುಟಿಗಿಸುವದ ॥ ಪಲ್ಲ ॥

೪ ನೀಲಗ್ರೀವನ ವಚನ

೧೭೭

ಉಂಡು ಉಟ್ಟು ತಾನು ನಿನ್ನ
ಭಂಡುಮಾಡಿ ಭವಕೆ ಕೆಡಹಿ
ಕಂಡ ಹಲವು ಜನ್ಮವೆಂಬ ಕೊಂಡದೊಳಗೆ ಮುಳುಗಿಸಿ
ದಂಡಧರನ ಕಾಲಿನಡೆಗೆ
ದಿಂಡುಗೆಡಹಿ ನೂಕಿ ಬೇಗ
ಲೆಂಡದೇವ ಹಿಂಗಿ ಹೋಗಿ ದಾಂಡುಗಲಿಗೆಳಗಿಸುವದ ೧

ಸೋತು ಮುಂದುವರಿದು ತಾನು
ನೀತಿಹೀನ ಸತಿಯರೊಡನೆ
ಪ್ರೀತಿಯಿಂದ ಕೂಡಿ ಕಡೆಗೆ ಜಾಳು ತೋಳು ಇನ್ನು
ಪಾತಕಗಳ ಹೊರಿಸಿ ಮೆಳಸಿ
ಸೋತ ಕಾಳಿಗೆ ಸರಿಯು ಮಾಡಿ
ತಾತ ತಪಿಸಿ ನಿನ್ನ ಪ್ರೇತದ್ಯೆವಕೆಳಗಿಸುವದ ೨

ನಿನ್ನ ಮಳಿದು ನಿಜವನಳಿದು
ಮುನ್ನ ಮುಚ್ಚಿದ ಕಣ್ಣ ತೆಳಿದು
ನಿನ್ನ ಮೂಲ ಸೂತ್ರವೆಂಬ ರನ್ನಗನ್ನಡಿವಿಡಿವುತ
ನಿನ್ನ ಮುಖವ ನೋಡಲೀಗ
ಲೆನ್ನ ಗುರು[ವು] ನೀಲಗ್ರೀವ
ತನ್ನ ತಾನೆ ನಡೆದು ಬಂದು ನಿನ್ನ ಕರದೊಳಿರುವದ ೩

೭೪

ರಾಗ : ಪಾಹಡಿ

ಎಂತೋ ಈ ಕಷ್ಟ ಸಂಸಾರದ
ಭ್ರಾಂತಳಿದೀ ಜನ ನಿಶ್ಚಿಂತರಾಗುವ ಪಥ ॥ ಪಲ್ಲ ॥

ಸತಿಯು ಲೋಲುಪ್ತಿ ಸಂತರ ವ್ಯಾಮೋಹದಿ
ಅತಿಶಯುವಡರಿ ಅರ್ಥವ ಗಳಿಸಿ
ಸತಿ ಮಾತೆ ಬಂಧು ಬಳಗಕೆಂದು ಚಿಂತಿಪ
ಮತಿಹೀನರ ನರರಿಗೆ ಸದ್ಗತಿಯಾಹದೆಂತೋ ೧

ಹುಸಿಯ ಪೂಜಿಸಿ ಹುರುಳಿಲ್ಲದ ಫಲವನು
ವಶಮಾಡಿಕೊಂಡುವಾಯದ ಲಾಭಕೆ
ಮುಸಿವಣ್ಣವಾಗಿ ಕಾಲನ ಬಾಧೆಯೊಳು ಬೀಳ್ವ
ಗಸಣಿಯು ನೀಗುವ ಘನವಿದಿನ್ನೆಂತೋ ೨

ಕಾಣದೆ ಕಪಟನಾಟಕ ನಿನ್ನ ಸೂತ್ರದ
ಜಾಣುವೆಯುನು ಜಡಜೀವಿಗಳು
ಮಾಣದೆ ಮುನಸಿಜನೆಳತಟದೊಳು ಸಿಕ್ಕಿಸಿ ನಿ
ತ್ರಾಣಿಗಳಾದರು ಗುರುನೀಲಗ್ರೀವಾ ೩

೭೫

ರಾಗ : ?

ಜಂಗಮುವೆ ಇಷ್ಟಲಿಂಗ ಕಾಣಿರೋ
ಜಂಗಮುವೆ ಪ್ರಾಣಲಿಂಗ ಕಾಣಿರೋ
ಜಂಗಮುವೆ ಮುಹಾಲಿಂಗ ಕಾಣಿರೋ ಮಿಕ್ಕ
ಜಂಗುಳಿದೈವದ ಸಂಗ ಭಂಗ ಕಾಣಿರೋ ॥ ಪಲ್ಲ ॥

ಸೃಷ್ಟಿಗೆ ಸ್ಥಿತಿಗೆ ಲಯುವೆ ಕಾರಣವ
ಮುಟ್ಟಿ ಪೂಜಿಸದಧಮುರನೆಲ್ಲರಾ
ಕಟ್ಟಿ ಬಾಧಿಪ ಕಾಲನಟ್ಟುಳಿಗಳನಿಕ್ಕಿ
ಕಷ್ಟಬಡಿಪ ಕರ್ಮುಹರ ಕಾಣಿರೋ ೧

ನಾಸಿಕ ಜಿಹ್ವೆ ನೇತ್ರವು ತ್ವಕ್ಕು ಕರ್ಣದ
ವಾಸದೊಳಿರ್ದು ವಂಚನೆಯಿಲ್ಲದೆ
ಮಿಾಸಲ ಶಬ್ದ ಸ್ಪರುಷ ರಸ ಗಂಧ
ಮೋಸಹೋಗದೆ ಮಹಾದೇವ ಕಾಣಿರೋ ೨

ಪಾದತೀರ್ಥದಲ್ಲಿ ಪವಿತ್ರಕಾಯುವ ಮಾಡಿ
ಆದಿಪ್ರಸಾದದ ಅನಾದಿಕ ಜನ್ಮದ
ಬಾಧೆಯು ನೀಗುವ ಗುರುನೀಲಗ್ರೀವ ಸರ್ವ
ಕ್ಕಾಧಾರ ಆನಂದಮಯು ಕಾಣಿರೋ ೩

೭೬

ರಾಗ : ಭೈರವಿ

ಬರಹವ ಬಲ್ಲೆವೆಂದೆಂಬರೀ ನರರು
ಬರಹವ ಬರೆವವ ನೀನಲ್ಲದಿವರು ‖ ಪಲ್ಲ ‖

ಆದಿಯಕ್ಕಱವೊಂದನಱಿಯದ ಜಡರು
ವೇದವ ಪಠಿಸಿಹೆವೆಂದಾಡುತಿಹರು
ವೇದವ ಕಲಿತು ಬಾಧೆಗೆ ಬೀಳುವವರು
ವೇದಕತೀತವಾಗಿಹುದ ತಿಳಿಯರು ೧

ಲಕ್ಷಸಂಖ್ಯೆಯು ಓದುಗಳಿವು ಮಾಯು
ಒಕ್ಕಣೆಯೊಳಗಾಳುತೇಳುವ ದಾಯು
ತಿಕ್ಕ ಮುಕ್ಕುವುದೀ ಮಾಡು ಉಪಾಯು
ಸಿಕ್ಕದೆ ನರಕದೊಳುರುಳ ವಿಡಾಯು ೨

ಬಾಳದ ಲಿಖಿತವನಱಿಯದಲಿಂದು
ಕೇಳಹೋದರು ಕರ್ಮದೊಳು ಸಲೆ ಸಂದು
ಭಾಳಾಕ್ಷ ಗುರುನೀಲಗ್ರೀವನದೊಂದು
ಮೇಳದ ಲಿಪಿಯ ಕಾಣದೆ ಬಲ್ಲೆವೆಂದು ೩

೭೭

ರಾಗ : ಶಂಕರಾಭರಣ

ಬೇಡ ಕಾಣಿರೋ ಮಱವೆ ಬೇಡ ಕಾಣಿರೋ
ರೂಢಿಗೀಶನೀಶನಡಿಯ ಪಿಡಿದು ಭವದ ನಾಡನೀಗಿ ಹೋಗಿರೋ ‖ ಪಲ್ಲ ‖

ಊರನೆಲ್ಲ ಬಡಿದು ತಿಂಬ ಮಾರಿಯೆಂಬ ಮಾಯು ನಂಬಿ
ಘೋರ ನರಕದೊಳಗೆ ನೀವು ಸಾರಿ ಹೊಂದಿ ಹೊರಳುವ
ಕ್ರೂರಮಾರ್ಗವಳಿದು ಸಲುವ ದಾರಿವಿಡಿದು ಮೋಕ್ಷವೆಂಬ
ನಾರಿಯನುವನಱಿದು ಕೂಡಿ ವೀರರಾಗಿ ಬಾಳಿರೋ ೧

ಹುಸಿಯ ಮಾಡಿ ಹುಟ್ಟಿದೆಡೆಯ ಒಸೆದು ಹೊಳಿವಳಗ ತಿಳಿದು
ಬೆಸುಗೆವಿಡಿದು ತೋಱುವಾಱು ಸ್ಥಳಗಳಾಱು ಮೂರ್ತಿಯ
ಸಸಿಯ ಪಿಡಿದು ಸತ್ಯವಿಡಿದು ಮುಸುಕುವರಿಗಳಾಱ ಬಡಿದು
ಸಸಿಯ ಸೂಡಿದವನ ಕೂಡಿ ಸಹಜಗತಿಯ ಪಡೆಯಿರೋ ೨

ತನುವ ಗುರುವಿಗಿಂತು ನೀವು ಮನವ ಲಿಂಗದಲ್ಲಿ ನಿಲಿಸಿ
ಧನವ ಜಂಗಮದೆಡೆಗೆ ಸವೆದು ಸಡಿಲದಂತೆ ಸಲಿಸುತ
ದಿನವು ಮೋಸಹೋಗದಂತೆ ಘನಗುರುವು ನೀಲಗ್ರೀವನ
ನೆನೆದು ನಿಜದಿ ಭಜಿಸಿ ಮುಕ್ತಿಮನೆಯ ಮಾಡಿಕೊಳ್ಳಿರೋ ೩

೭೮

ರಾಗ: ದೇಶಿ

ಇವರನೇತಕೆ ಪಡೆದೆ ಈ ಕಪಟ ಜೀವರನು
ಇವರಿಂದಲಹುದೇನುಳಿದುದೇ ನಿಂದು ॥ ಪಲ್ಲ ॥

ಸುಮ್ಮನಿರದೆ ನೀನು ಸುಖಬಡುವೆನೆಂದೆಂಬ
ಹೆಮ್ಮೆಗೆ ಹೇವರಿಸದೀ ಜಗವನು
ಉಮ್ಮಯದಿಂದ ಮಾಟವರಿಯದಿಹ
ಸಮ್ಮಗಾರರ ಸಭೆಯಲ್ಲಿ ಸಲುವ ಮುಖವುಂಟೇ ೧

ಹುಟ್ಟಿಸಿದ ತಂದೆಯನು ಗುರುಳನರಿಯದೆ ಹೋಗಿ
ಹುಟ್ಟಿ ಸಾವವರ ಹೆಸರನು ಹೇಳುವ
ಹುಟ್ಟುಗುರುಡರ ನೆರವಿ ಹುಟ್ಟದಿರೆ ನಿನ್ನ ರಥ
ಕಟ್ಟದೆಂದು ಮಾಡಿದೆಯ ಕಾಣೆನೆಲೆ ದೇವಾ ೨

ಸತ್ಯಸಹಾಯದ ತಾಯ ಸಲಹಿಕೊಳ್ಳದೆ ಬಿಟ್ಟು
ಮೃತ್ಯುವಾಗಿಹ ಮಾಯೆಗಿಂಬುಗೊಟ್ಟು
ಮುತ್ತಿ ಮುಸುಕಿಹ ಕರ್ಮಕತ್ತಲೆಯೊಳುರುಳುತಿಹ
ಹೊತ್ತು ಹೋಕರನುರುಹು ಗುರುನೀಲಗ್ರೀವಾ ೩

೭೯

ರಾಗ: ಶ್ರೀವರಾಳಿ

ನಂಬದೆನ್ನಯ ಮನ ನಿಮ್ಮನರಿತರಿಯದ
ಹೆಂಬೇಡಿಗಳ ಕಂಡು ಹೇಸಿತು ॥ ಪಲ್ಲ ॥

ಹಲವು ಬಗೆಯಲಿಂದ ಮರಿಸಿ ವಂಚನೆಯಲ್ಲಿ
ಮಲತು ನಿಮಗೆ ಒರೆಯಾಗುತಮೇಕುಂದೋಯುತ
ಮಲತ್ರಯದೊಳು ಬಿದ್ದು ಸಲೆ ಸತ್ತು ಹುಟ್ಟುವ
ಹೊಲೆಯರ ಹೊಲಬು ತಾ ಹೋಗದುದಯವಾಗದು ೧

ನುಡಿಯು ಸ್ವಾದವ ತೋಱಿಯೆಡೆಯಾಡುವದ ಕಂಡು
ಬಿಡದೆ ಬಾಯೆನೆ ಬಿಂಕದೋಱುತ ಬಿಗುಹೇಱುತ
ನಡೆಗೆಟ್ಟು ನಡೆದು ನಿಮ್ಮಡಿಗೆ ಕಂಟಕರಾದ
ಜಡಜೀವಿಗಳ ಹೊಂದಲೊಲ್ಲದು ಅಲ್ಲಿ ನಿಲ್ಲದು ೨

ಬೇಡಿಕೊಂಡೆನು ನಿಮ್ಮ ಪಾಡುಗೆಡಿಸಬೇಡ
ಮೂಢರಲೆಯಲತಿ ನೊಂದಿದೆ ಭಂಗಬಂದಿದೆ ನಾ
ನಾಡಿ ತೋಱದಲೇಕೆ ಆಱದಾ ಸುಖ ದುಃಖ
ನೋಡಿಕೊ ಗುರುನೀಲಗ್ರೀವನೆ ಮಹಾದೇವನೇ ೩

೮೦

ರಾಗ : ಸೌರಾಷ್ಟ್ರ

ಹೀಗೇಕೆ ನುಡಿವರೋ ಕಂಡ ಭಕ್ತರಾಗು
ಹೋಗಲಱಿಯದೆ ಅಧಮರಾ ತಂಡ ॥ ಪಲ್ಲ ॥

ಹಿಂದುಮುಂದಱಿಯದಲಿಂದು ಸಲೆ
ಸಂದ ಪುರಾತರ ನಡೆಗಾಣದಿಂದು ನುಡಿಗಾಣ
ದಿಂದು ಬಂದಿಲ್ಲವವರೀಗಲೆಂದು
ಅಂದಿನಂದೆ ಹೋದರು ತಮ್ಮ ತನು ಸ[ಲ]ಹಲೆಂದು ೧

ಅವನಿಯೊಳ್ಪುದುಗಿರಲರ್ಥ ಅದ
ಹವಣಿಸಿ ತೆಗೆವನ ಬಗೆಯ ಸುಚಿತ್ತಾ
ಶಿವನೊಡವೆರದಂತಸ್ಥದೊಂದು
ವಿವರಗಾಣದೆ ಬಗುಳುವರಸ್ತವ್ಯಸ್ತ ೨

ಲೀಲೆ ಕಾರಣಭೂತವೈದ ಅದ
ಸಾಲವ ತೆಗೆದು ತಿದ್ದುವರತ್ತವೈದ
ಶೀಲವವರಿಗತ್ತಲೊಯಿದ ಗುರು
ನೀಲಗ್ರೀವನೆ ನೋಡು ನೀಚರ ಸುಮ್ಮನಿರವಾ ೩

೮೧

ರಾಗ : ಪಾಹಡಿ

ಬಾಳಬಹುದೆ ಬ್ರಹ್ಮವವರಿತ್ತು ಇಂಥ
ಖೂಳರೆಡೆಯಲೊಂದು ನಿಮಿಷವಾದರು ದೇವಾ ॥ ಪಲ್ಲ ॥

ಅಲ್ಲವೆ ಅಕ್ಷವೈಕ್ಯವಾಗಲಿ ಬೇಕು
ಇಲ್ಲವೆ ಈ ಮರ್ತ್ಯರೆಳತಟವ
ನಿಲ್ಲದೆಲ್ಲವನೊದ್ದು ನಿಜದಿ ನಿಲ್ಲಲಿ ಬೇಕು ಅ
ದಲ್ಲದೆ ಕಪಟರೊಳು ಬದುಕಲಾಗದು ದೇವಾ ೧

ಕಂಟಣಿಸದೆ ಕಾಡೊಳೊಳಾಗಿರುವದೊಮ್ಮೆಗೆ ಲೇಸು
ತೋಂಟ ವ್ಯಾಘ್ರನ ಕೂಟಣಾಟ ಲೇಸು
ಕಂಠಗರಳ ಸರ್ಪನ ನಂಟುತನ ಲೇಸು
ಕಂಟಕರಿದಿರಲಿ ಇಹದು ಕಷ್ಟವೆಲೆ ದೇವಾ ೨

ನಿನ್ನಿಂದಲುದಿಸಿ ಇವರು ನಿನ್ನ ಕಾಣರು
ನಿನ್ನವರೆಂದರಿವರು ಬಲ್ಲರೆ
ಗನ್ನಗಾತಕರ ನೆರವಿಗೆನ್ನ ತೋಱಿದೆ
ನಿನ್ನತ್ತಲೊಯಿ ಬೇಗ ಗುರುನೀಲಗ್ರೀವಾ ೩

೧+ ಅಂತು ಪದ್ಧತಿ ಪ್ರಕರಣ ೪ಕ್ಕಂ ಪದ ೮೧ಕ್ಕಂ ಸಂಪೂರ್ಣಂ
ಮಂಗಳ ಮಹಾಶ್ರೀ

೧+ ಇಂತೀ ನೀಲಗ್ರೀವನ ವಚನ ಪ್ರಕರಣ ೩ಕ್ಕಂ ಜೋಡು ೨೧೮ಕ್ಕಂ ಗುರುನೀಲಗ್ರೀವನ ವಚನದ ಜೋಡು ೮೧ಕ್ಕಂ ಅಂತು ಜೋಡು ೨೯೯ ಉಭಯಂ ೮೫೬ಕ್ಕಂ ಮಂಗಲ ಮಹಾ ಶ್ರೀ (ಮೂ).

ಅನುಬಂಧ

ನೀಲಗ್ರೀವನ ವಚನಗಳಲ್ಲಿ ಬರುವ ಪಲ್ಲವಿಗಳ ಅಕಾರಾದಿ

(ಮೊದಲ ಸಂಖ್ಯೆ ಪದ್ಧತಿಯನ್ನೂ ಎರಡನೆಯದು ಆಯಾ ಪದ್ಧತಿಯ ಸ್ವರವಚನ ಸಂಖ್ಯೆಯನ್ನೂ ಸೂಚಿಸುತ್ತವೆ)

ಸುತ್ತೂರು ಶ್ರೀ ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನಮಠ, ನಾಡಿನ ಒಂದು ಪ್ರಾಚೀನ ಧರ್ಮಪೀಠ. ಚೋಳಚಕ್ರೇಶ್ವರನ ಪ್ರಾರ್ಥನೆಯ ಸುಮಧುರ ರಸಾಮೃತ ಫಲ. ಸಂಸ್ಥಾಪನಾಚಾರ್ಯರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು. ಆ ಮಹಾಶಿವಯೋಗಿಗಳು ನಿತ್ಯನಿಜಾನಂದದಲ್ಲಿ ಸದಾ ನೆಲೆಸಿರುವ ಶಿವಯೋಗಸಮಾಧಿ—ಅದುವೆ ಶ್ರೀಕರ್ತೃಗದ್ದುಗೆ. ಅದು ನಿಶ್ಚಿಂತ ನಿಜನಿವಾಸ, ಬೆಳಕಿನ ಪ್ರಶಾಂತ ಆವಾಸ. ಅಲ್ಲಿಂದ ಹೊರಹೊಮ್ಮುವ ಶಿವಬೆಳಗು ಸರ್ವವ್ಯಾಪಿಯಾಗಿ ಹರಹಿದೆ. ನಡೆದು ಬರುತ್ತಿದೆ ಮನುಕುಲದ ಕಲ್ಯಾಣ ಅಸದೃಶವಾಗಿ. ಉಜ್ವಲವಾದ ಅ[illegible]ರುಪರ[illegible]ಪರೆಯಲ್ಲಿ ಬಂದ ಮಹಾನುಭಾವರೆಲ್ಲರೂ ಕಾರುಣ್ಯಸಿಂಧುಗಳು, ಲೋಕೈಕಬಂ[illegible]ಗಳು.

ನಾಡಿನ ಧಾರ್ಮಿಕ–ಸಾಮಾಜಿಕ, ಶೈಕ್ಷಣಿಕ—ಸಾಂಸ್ಕೃತಿಕ ಕ್ಷೇತ್ರಗಳ [illegible]ಗ್ರ [illegible]ವೃದ್ಧಿಗೆ ಶ್ರೀಮಠದ ಸೇವೆ ಅಮೋಘ ಹಾಗೂ ಅದ್ವಿತೀಯ. ಸಾ[illegible]ತ್ಯ–ಸ[illegible]ೀತ–ಕಲೆಗಳಿಗೆ ನೀಡುತ್ತಿರುವ ಕೊಡುಗೆ ಅಸಂಖ್ಯ ಹಾಗೂ ಗಣನೀಯ. ‘ಪರಮ[illegible]ವಾಧಿಕ್ಯ ಚೂಡಾಮಣಿ’ ಗ್ರಂಥವನ್ನು ರಚಿಸಿ ಶ್ರೀ ಮಲೆಯಮಾದೇಶ್ವರರಿಗೆ ಆಶ್ರಯ ನೀಡಿದ ಸಿದ್ಧನಂಜದೇಶಿಕೇಂದ್ರರು; ‘ಅಮುಗಿದೇವಯ್ಯಗಳಸಾಂಗತ್ಯ’ವನ್ನು ಬರೆದ ಕವಿ ಶಿವಲಿಂಗದೇವನಿಗೆ ಪ್ರೇರಕ—ಪೋಷಕರಾದ ಕಟ್ಟೀನಂಜುಂಡದೇಶಿಕೇಂದ್ರರು; ತೋಂಟದ ಸಿದ್ಧಲಿಂಗಯತಿಗಳ ಶಿಷ್ಯಪ್ರಮುಖರಲ್ಲಿ ಒಬ್ಬರಾಗಿ ಸ್ವತಂತ್ರವಚನಕಾರರೆಂದು ಪ್ರಸಿದ್ಧರಾದ ಘನಲಿಂಗಿಶಿವಯೋಗಿಗಳು; ‘ಮಂತ್ರಮಹರ್ಷಿ’ಗಳೆನಿಸಿ ‘ಶಿವಮಂತ್ರಮಹಿಮೆ’ ಗ್ರಂಥವನ್ನು ನೀಡಿದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು; ‘ಘನಲಿಂಗಿದೇವರ ವಚನಗಳು’ ಮತ್ತು ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ‘ಅಕ್ಕಮಹಾದೇವಿ’ ಚಂಪೂಕಾವ್ಯ—ಇವುಗಳನ್ನು ಸಂಪಾದಿಸಿಕೊಟ್ಟ ‘ಶ್ರೀಮನ್ಮಹಾರಾಜ ರಾಜಗುರುತಿಲಕ’ ಜಗದ್ಗುರು ಡಾ. ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು; ‘ಮುಪ್ಪಿನ ಷಡಕ್ಷರಿಗಳ ಕೈವಲ್ಯಪದ’ವನ್ನು ಸಂಪಾದಿಸಿಕೊಟ್ಟು ಗ್ರಂಥ ಪ್ರಕಾಶನಕ್ಕೆ ಪ್ರೋತ್ಸಾಹವೀಯುತ್ತಿರುವ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳು—ಇವರೇ ಮೊದಲಾದ ಗುರುವರೇಣ್ಯರು ಕೈಕೊಂಡ ಧರ್ಮಸಂರಕ್ಷಣೆ—ಸಾಹಿತ್ಯಪರಿಪೋಷಣೆ ಗಮನಾರ್ಹ ಹಾಗೂ ಸ್ಮರಣಾರ್ಹ. ಮನುಕುಲದ ಏಳಿಗೆಗಾಗಿ ಶ್ರೀಪೀಠದಿಂದ ಸಲ್ಲುತ್ತಿರುವ ಮಹತ್ಸೇವೆ ಅಭಿನಂದನೀಯ ಹಾಗೂ ಸದಾ ಸಂಸ್ಮರಣೀಯ!

ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ : ಮೈಸೂರು